ಶ್ರೀ ಆಂಡಾಳ್

# ತಿರುಪ್ಪಾವೈ ಸಂದೇಶ

[illegible]



[illegible]

1999

ಶ್ರೀ ಆಂಡಾಳ್

# ತಿರುಪ್ಪಾವೈ ಸಂದೇಶ

(ತಿರುಪ್ಪಾವೈಯಲ್ಲಿ ಗೋದಾದೇವಿಯ ಸರ್ವೋದಯ ಸಂದೇಶ)
ಪಾಶುರಗಳು - ಅವುಗಳ ವಾಕ್ಯಾರ್ಥ ಮತ್ತು ವಿಶೇಷಾರ್ಥ ಸಹಿತ
ಪೂರ್ವಾಚಾರ್ಯರುಗಳ ವ್ಯಾಖ್ಯಾನಗಳನ್ನನುಸರಿಸಿ ಬರೆಯಲ್ಪಟ್ಟಿದೆ.

*

ಪ್ರಕಾಶಕರು

**ಡಾ॥ ಎಂ.ಡಿ. ಶ್ರೀನಿವಾಸ್**

141/ಬಿ, 13ನೇ ಮುಖ್ಯ ರಸ್ತೆ
3ನೇ ಬ್ಲಾಕ್ ಪೂರ್ವ, ಜಯನಗರ
ಬೆಂಗಳೂರು - 560 011

1999

PLACED ON THE SHELF
Date..........................

S.V. VENKATESWARA
CENTRAL LIBRARY &
RESEARCH CENTRE,
ACC 47135
Date..........................
TIRUPATI.

ಪ್ರಥಮ ಮುದ್ರಣ : 1999

ಪ್ರತಿಗಳು : 1000

ಲೇಖಕರು : ಶ್ರೀಮತಿ ಎಂ.ಡಿ. ವೇದವಲ್ಲಿ

ಬೆಲೆ : ಇಪ್ಪತ್ತು ರೂಪಾಯಿಗಳು

ಮುದ್ರಕರು : ಶ್ರೀರಾಮ ಪ್ರಿಂಟರ್ಸ್
ಶ್ರೀನಿಧಿ ಲೇಔಟ್
ಬೆಂಗಳೂರು - 62

## ಪುಸ್ತಕ ದೊರೆಯುವ ಸ್ಥಳ

ಶ್ರೀ ಎಂ.ಡಿ. ರಂಗನಾಥ
ನಂ. 966 (43) 65ನೇ ಕ್ರಾಸ್
5ನೇ ಬ್ಲಾಕು, ರಾಜಾಜಿನಗರ
ಬೆಂಗಳೂರು - 560 010
ದೂರವಾಣಿ : 3358726

ಶ್ರೀ ಎಂ.ಡಿ. ಜಯಸಿಂಹ
ನಂ. 40/10 - 13ನೇ ಕ್ರಾಸ್
6ನೇ ಮೈನ್ ಹತ್ತಿರ, ಮಲ್ಲೇಶ್ವರ
ಬೆಂಗಳೂರು - 560 003
ದೂರವಾಣಿ : 3445252

ಶ್ರೀ ಸತ್ಯನಾರಾಯಣ
ನಂ. 25, 15ನೇ ಕ್ರಾಸ್
5ನೇ ಮುಖ್ಯ ರಸ್ತೆ, ಶ್ರೀನಿಧಿ ಲೇಔಟ್
ಬೆಂಗಳೂರು - 560 002
ದೂರವಾಣಿ : 6348267

*Published with the Financial Assistance*

of

**Thirumala Tirupati Devasthanams**

under the Scheme

**'Aid to Publish Religious Works'**

# ವಿಷಯ ಸೂಚಿಕೆ


| | |
|---|---|
| ಮೊದಲ ಮಾತು | v |
| ಮುನ್ನುಡಿ | xi |
| ಆಂಡಾಳ್ ದೇವಿಯ ವೈಭವ | xv |
| 1. ಉಪೋದ್ಘಾತ | 1 - 22 |
| 2. ತಿರುಪ್ಪಾವೈ 1ನೇ ವಿಭಾಗ (ಪಾಶುರಗಳು 1 ರಿಂದ 5) | 22 - 70 |
| 3 2ನೆಯ ವಿಭಾಗ (ಪಾಶುರಗಳು 6 ರಿಂದ 15) | 71 - 129 |
| 4. 3ನೆಯ ವಿಭಾಗ (ಪಾಶುರಗಳು 16 ರಿಂದ 20) | 130 - 162 |
| 5. 4ನೆಯ ವಿಭಾಗ (ಪಾಶುರಗಳು 21 ರಿಂದ 29) | 163 - 249 |
| 6. ತಿರುಪ್ಪಾವೈ ಫಲಶ್ರುತಿ (ಪಾಶುರ 30) | 250 - 255 |
| 7. ಉಪಸಂಹಾರ | 256 - 261 |
| ತಿರುಪ್ಪಾವೈ - ಪಾಶುರಗಳು | 262 - 271 |
| ಗ್ರಂಥಸೂಚಿ | 273 |

# ಮೊದಲ ಮಾತು

ಸಹಸ್ರಾರುವರ್ಷಗಳಿಗಿಂತ ಹಿಂದೆ, ಪರಮಾತ್ಮನ ಅನುಗ್ರಹದಿಂದ ಆಳ್ವಾರ್ರುಗಳೆಂಬ ಭಗವದ್ಭಕ್ತರು ಭಾರತದೇಶದಲ್ಲಿ ಅವತರಿಸಿದ್ದರೆಂದೂ, ಅವರು ಭಗವದ್ಭಕ್ತಿಯ ಹಿರಿಮೆಯನ್ನು ತಮ್ಮ ದಿವ್ಯ ಪ್ರಬಂಧಗಳ ಮೂಲಕ ಜನರಿಗೆ ಉಪದೇಶಮಾಡಿ ಪ್ರಚಾರ ಪಡಿಸಿದ್ದಾರೆಂದೂ ಶ್ರೀವೈಷ್ಣವಸಿದ್ಧಾಂತದ ಪ್ರಾಚೀನ ಗ್ರಂಥಗಳಲ್ಲಿ ತಿಳಿಸಲ್ಪಟ್ಟಿದೆ. ಹತ್ತು ಆಳ್ವಾರ್ರುಗಳು ಪ್ರಸಿದ್ಧಿಪಡೆದಿದ್ದಾರೆ. ಅವರು ದಿವ್ಯ ಪ್ರಬಂಧಗಳನ್ನು ರಚಿಸಿ ನಮಗೆ ಅನುಗ್ರಹಿಸಿದ್ದಾರೆ. ಅವರುಗಳಲ್ಲಿ ಪೆರಿಯಾಳ್ವಾರ್ರೆಂದು ಪ್ರಸಿದ್ಧಿ ಪಡೆದ ವಿಷ್ಣುಚಿತ್ತರ ಸಾಕುಮಗಳೇ ಶ್ರೀ ಗೋದಾದೇವಿಯು. ಇವಳು ಭೂದೇವಿಯ ಅಂಶ ಭೂತಳಾಗಿ ಜನಿಸಿದ್ದರಿಂದ ಇವಳಿಗೆ ಆಂಡಾಳ್ ಎಂದೂ ಹೆಸರುಂಟು. ಇವಳು ರಚಿಸಿ, ಹಾಡಿ, ಅನುಗ್ರಹಿಸಿರುವ ದಿವ್ಯ ಪ್ರಬಂಧವೇ 'ತಿರುಪ್ಪಾವೈ' - ಇದರಲ್ಲಿ ಕೇವಲ 30 ಪಾಶುರಗಳಲ್ಲಿ ಗೋದಾದೇವಿಯು ಶ್ರೀ ಕೃಷ್ಣಪರಮಾತ್ಮನು ಭಗವದ್ಗೀತೆಯಲ್ಲಿ ಉಪದೇಶ ನೀಡಿರುವಂತೆ ಸರ್ವದೇಶ, ಸರ್ವಕಾಲದ, ಸರ್ವಮಾನವರಿಗೂ ಉಪದೇಶ ನೀಡಿದ್ದಾಳೆ.

ಆದರೆ ಭಗವದ್ಗೀತೆ, ಸಂಸ್ಕೃತ ಭಾಷೆಯಲ್ಲಿದೆ; ಅದರಲ್ಲಿ ಸುಮಾರು 700 ಶ್ಲೋಕಗಳಿವೆ ಮತ್ತು ಅದಕ್ಕೆ ಬೇರೆ ಬೇರೆ ಆಚಾರ್ಯರುಗಳು ಅವರವರ ಸಿದ್ಧಾಂತಗಳಿಗೆ ಅನುಸಾರವಾಗಿ ಅರ್ಥವಿಶೇಷಾರ್ಥಗಳನ್ನು ಹೇಳಿರುವುದರಿಂದ, ಗೀತೆಯನ್ನು ಅದರ ಭಾಷ್ಯಗಳೊಂದಿಗೆ ಓದಿ ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಆದರೆ ತಿರುಪ್ಪಾವೈ, ತಮಿಳು ಭಾಷೆಯಲ್ಲಿ ಬಹಳ ಸುಲಭವಾಗಿ ಅರ್ಥವಾಗುವಹಾಗೆ ಇದೆ. ಇದರಲ್ಲಿ ಕೇವಲ 30 ಪಾಶುರಗಳಿವೆ ಮತ್ತು ಇದಕ್ಕೆ ಅನೇಕರು ವ್ಯಾಖ್ಯಾನಗಳನ್ನು ರಚಿಸಿದ್ದರೂ ಅವುಗಳಲ್ಲಿ ಹೆಚ್ಚಾಗಿ ಅಭಿಪ್ರಾಯ ಭೇದಗಳಿಲ್ಲ. ಪರಮಾತ್ಮನೇ ಸರ್ವರಿಗೂ ಸ್ವಾಮಿ, ಅವನ ಕೃಪೆಯೇ ನಮ್ಮ ರಕ್ಷಣೆಗೆ ಉಪಾಯ, ಅವನಿಗೆ ಕೈಂಕರ್ಯ ಮಾಡುವುದೇ ಪುರುಷಾರ್ಥ ಮತ್ತು ಭಗವತ್ ಕೈಂಕರ್ಯವಾಗಿ ಕರ್ತವ್ಯಕರ್ಮಗಳನ್ನು ಸಂತೋಷವಾಗಿ ಮಾಡುವುದೇ ಮತ್ತು ಭಗವಂತನ ಕಲ್ಯಾಣಗುಣಗಳನ್ನು ಹಾಡಿ ಭಗವದ್ಗುಣಸಾಗರದಲ್ಲಿ ಮುಳುಗಿ ಭಗವದನುಭವ ಪಡೆಯುವುದೇ ಸರ್ವರೂ ಆಚರಿಸಬೇಕಾದ ಉಪಾಯ

ಎಂದು ಹೇಳಿರುವುದರಿಂದ ಉಪಾಯ, ಉಪೇಯಗಳಲ್ಲಿ ಯಾರಲ್ಲೂ ಅಭಿಪ್ರಾಯಭೇದವಿಲ್ಲ. ಅಷ್ಟುಮಾತ್ರವಲ್ಲದೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನು ''ಯತ್ಕರೋಷಿ ಯದಶ್ನಾಸಿಯಜ್ಜುಹೋಷಿ ದದಾಸಿಯತ್ । ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ''। - ಅಂದರೆ ನೀನು ಮಾಡುವ ಕರ್ಮಗಳನ್ನೂ, ನೀನು ಭುಜಿಸುವುದನ್ನೂ, ನೀನು ಮಾಡುವ ಹೋಮ, ದಾನ, ತಪಸ್ಸುಗಳನ್ನೂ ಅವೆಲ್ಲವನ್ನೂ ನನಗೆ ಅರ್ಪಿತವೆಂದು ನನ್ನ ಕೈಂಕರ್ಯವಾಗಿ ಮಾಡು ಎಂದೂ 'ಮಾಂ ಏಕಂ ಶರಣಂವ್ರಜ' - ಅಂದರೆ ನನ್ನಲ್ಲಿ ಶರಣಾಗತಿ ಮಾಡು ಎಂದೂ ಉಪದೇಶ ನೀಡಿದ್ದಾನೆ. ಆದರೆ ತಿರುಪ್ಪಾವೈಯಲ್ಲಿ ಗೋದಾ ದೇವಿಯು ''ಕುತ್ತೇವಲ್ ಎಂಗಳ್ಳೈ ಕೊಳ್ಳಾಮಲ್ ಪೋಹಾದ್ - ಎತ್ತೈಕ್ಕುಂ ಏಳೇಳ್ ಪಿರವಿಕ್ಕುಂ ಉನ್‌ತನ್ನೋಡು ಉತ್ತೋಮೇಯಾವೋಂ ಉನಕ್ಕೇ ನಾಂ ಆಳ್‌ಚ್ಚೈವೊಂ ಮತ್ತೈನಂ ಕಾಮಂಗಳ್ ಮಾತ್ತು'' - ''ಇರೈವಾ ನೀತಾರಾಯ್ ಪರೈ'' ಅಂದರೆ ಎಂದೆಂದಿಗೂ ಏಳೇಳು ತಲೆಮಾರುಗಳ ಜನ್ಮಪರಂಪರೆಗಳಲ್ಲಿಯೂ ನಾವು ನಿನಗೇ ದಾಸರಾಗಿ, ನಿನ್ನ ಕೈಂಕರ್ಯಮಾಡುವವರಾಗುವಂತೆ ನೀನೇ ನಮ್ಮ ಇತರ ಆಸೆ ಆಕಾಂಕ್ಷೆಗಳನ್ನೆಲ್ಲಾ ಮಾರ್ಪಡಿಸಿ, ನಮ್ಮಿಂದ ನಿನ್ನ ಕೈಂಕರ್ಯಮಾಡಿಸಿ, ಅದನ್ನು ನೀನು ಸ್ವೀಕರಿಸಬೇಕು'' - ''ಸ್ವಾಮಿಯೇ ನಮಗೆ ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸು'' - ಎಂದು ಕೃಷ್ಣ ಪರಮಾತ್ಮನನ್ನು ಪ್ರಾರ್ಥಿಸಿ ಅವನಲ್ಲಿ ಶರಣಾಗತಿ ಮಾಡಿದ್ದಾಳೆ. ಆದ್ದರಿಂದ ಭಗವದ್ಗೀತೆಯು ಶ್ರೀ ಕೃಷ್ಣಪರಮಾತ್ಮನು ಅರ್ಜುನನನ್ನು ವ್ಯಾಜವಾಗಿ ಹೊಂದಿ ಸಮಸ್ತ ಮಾನವರಿಗೂ ನೀಡಿರುವ ಉಪದೇಶವಾಗಿ ಎಲ್ಲರೂ ಅರಿತು ಅನುಸಂಧಾನ ಮಾಡಿ ಆಚರಿಸಬೇಕಾದ ತತ್ತ್ವ ವಚನವಾಗಿ ಉಪದೇಶ ಪರವಾದ ದಿವ್ಯ ಗ್ರಂಥವಾಗಿದೆ. ಅದರಲ್ಲಿ ತಿಳಿಸಿರುವ ತತ್ತ್ವಹಿತ ಪುರುಷಾರ್ಥಗಳನ್ನೆಲ್ಲಾ ತಿರುಪ್ಪಾವೈಯಲ್ಲಿ ಗೋದಾದೇವಿಯು ಸುಲಭವಾಗಿ ತಿಳಿಸಿರುವುದರಿಂದಲೂ, ಮತ್ತು ತಿರುಪ್ಪಾವೈಯು ಭಗವಂತನಲ್ಲಿ ಪ್ರಾರ್ಥನೆ ಮಾಡುವ ಪ್ರಾಥನಾ ಪರವಾದ ಮತ್ತು ಪರಮಾತ್ಮನಲ್ಲಿ ಶರಣಾಗತಿ ಮಾಡುವ ದಿವ್ಯ ಪಾಶುರವಾಗಿರುವುದರಿಂದಲೂ, ಇದನ್ನು ಸುಮ್ಮನೆ ಅರಿತರೆ ಸಾಲದು, ಇದು ಸರ್ವರೂ ಅನುಸಂಧಾನ ಮಾಡುತ್ತಾ ಪರಮಾತ್ಮನಲ್ಲಿ

ಪ್ರಾರ್ಥನೆ ಸಲ್ಲಿಸಿ ಶರಣಾಗತಿ ಮಾಡಬೇಕಾದ ದಿವ್ಯ ಪ್ರಬಂಧವಾಗಿದೆ. ಗೋದಾ ದೇವಿಯು ಪರಮಾತ್ಮನಲ್ಲಿ ಶರಣಾಗತಿ ಮಾಡುವ ರೀತಿ ನೀತಿಗಳನ್ನೆಲ್ಲಾ ತಿರುಪ್ಪಾವೈಯ ಪಾಶುರಗಳಲ್ಲಿ ವಿವರಿಸಿ ತಿಳಿಸಿದ್ದಾಳೆ.

ತಿರುಪ್ಪಾವೈ ಪಾಶುರಗಳನ್ನು ಪ್ರತಿದಿನವೂ ಶ್ರೀವೈಷ್ಣವ ದೇವಸ್ಥಾನಗಳಲ್ಲಿ ಹೇಳಬೇಕೆಂಬ ನಿಯಮವನ್ನು ಶ್ರೀರಾಮಾನುಜಾಚಾರ್ಯರು ಜಾರಿಗೆ ತಂದಿದ್ದಾರೆ. ಅದು ಇಂದಿಗೂ ನಡೆದು ಬರುತ್ತಿದೆ. ಧನುರ್ಮಾಸ (ಮಾರ್ಗಳಿಮಾಸ)ದಲ್ಲಂತೂ ತಿರುಪ್ಪಾವೈ 30 ಪಾಶುರಗಳನ್ನು ದೇವಸ್ಥಾನಗಳಲ್ಲೂ, ಮನೆಗಳಲ್ಲೂ ಅನುಸಂಧಾನ ಮಾಡುವ ಪದ್ಧತಿ ಇದೆ ಮತ್ತು ದಿನಕ್ಕೆ ಒಂದು ಪಾಶುರದಂತೆ 30 ದಿನವೂ ತಿರುಪ್ಪಾವೈ ಕಾಲಕ್ಷೇಪಗಳು ಅನೇಕ ಕಡೆಗಳಲ್ಲಿ ನಡೆಯುತ್ತಿವೆ. ನನ್ನ ಅತ್ತೆ, ನನ್ನ ಅಜ್ಜಿ, ನನ್ನ ತಂದೆ ತಾಯಿ, ನನ್ನ ಯಜಮಾನರು ಮುಂತಾಗಿ ನನ್ನ ಪೂರ್ವಿಕರು ತಿರುಪ್ಪಾವೈ ಪಾಶುರಗಳನ್ನೂ ದಿವ್ಯ ಪ್ರಬಂಧಗಳನ್ನೂ ಅನುಸಂಧಾನ ಮಾಡುತ್ತಿದ್ದುದರಿಂದ ಮತ್ತು ನನ್ನ ಅಜ್ಜಿ ಕಂಚಿ ವೇದಮ್ಮನವರು ದಿವ್ಯ ಪ್ರಬಂಧಗಳನ್ನೆಲ್ಲಾ ವ್ಯಾಖ್ಯಾನಸಹಿತ ವ್ಯಾಸಂಗ ಮಾಡಿದ್ದು ಅವುಗಳ ಅರ್ಥವನ್ನು ನನಗೆ ಆಗಾಗ ತಿಳಿಸುತ್ತಿದ್ದುದರಿಂದ ನನಗೆ ಅದರಲ್ಲಿ ಅಭಿರುಚಿ ಹುಟ್ಟಿತು. ಅದರೊಂದಿಗೆ ತಿರುಪ್ಪಾವೈ ವಿಷಯವಾಗಿ ನಡೆಯುತ್ತಿದ್ದ ಧನುರ್ಮಾಸದ ಕಾಲಕ್ಷೇಪಗಳಿಗೆ ನನ್ನ ಯಜಮಾನರು ಶ್ರೀ ಎಂ.ಡಿ. ರಾಮಸ್ವಾಮಿ ಐಯ್ಯಂಗಾರ್‌ರವರು ಹೋಗುತ್ತಿದ್ದುದರಿಂದ ಅವರೊಂದಿಗೆ ಹೋಗಿ ಅದನ್ನು ಕೇಳುವ ಸುಯೋಗವೂ ನನಗೆ ಲಭಿಸಿತು.

ತಿರುಪ್ಪಾವೈಗೆ ನಮ್ಮ ಪೂರ್ವಾಚಾರ್ಯರುಗಳು ವಿಸ್ತಾರವಾದ ಅನೇಕ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮೇಲುಕೋಟೆ ಐನನ್ ಆಚಾರ್ಯರ ಈರಾಯಿರಪ್ಪಡಿ, ಮತ್ತು ನಾಲಾಯಿರಪ್ಪಡಿ, ಪೆರಿಯವಾಚ್ಚಾನ್‌ಪಿಳ್ಳೈಯವರ ಮೂವಾಯಿರಪ್ಪಡಿ ಮತ್ತು ಅಳಹಿಯಪ್ಪೆರುಮಾಳ್‌ನಾಯನಾರ್ರವರ ಆರಾಯಿರಪ್ಪಡಿ ಮುಂತಾದ ಪೂರ್ವಾಚಾರ್ಯರುಗಳ ವ್ಯಾಖ್ಯಾನಗಳನ್ನು ವ್ಯಾಸಂಗಮಾಡಿ ಅವುಗಳ ಸಾರಾರ್ಥವನ್ನೆಲ್ಲಾ ನಮ್ಮ ಹಿರಿಯರು ತಮ್ಮ ಧನುರ್ಮಾಸದ ತಿರುಪ್ಪಾವೈಕಾಲಕ್ಷೇಪಗಳಲ್ಲೂ, ತಾವು ರಚಿಸಿರುವ ತಿರುಪ್ಪಾವೈ ಪುಸ್ತಕಗಳಲ್ಲೂ ವಿವರಿಸಿ

ತಿಳಿಸಿದ್ದಾರೆ. ಶ್ರೀ ಕಾರ್ಪಂಕಾಡು ವೇಂಕಟಾಚಾರ್‌ಸ್ವಾಮಿಗಳವರ, ಶ್ರೀಪ್ರತಿವಾದಿ ಭಯಂಕರಂ ಅಣ್ಣಂಗರಾಚಾರ್ ಸ್ವಾಮಿಗಳವರ, ಶ್ರೀವೇಲಂಕುಡಿ ವರದಾಚಾರ್‌ಸ್ವಾಮಿಗಳವರ, ತಿರುಪ್ಪಾವೈ ವಿದ್ವಾನ್ ಶ್ರೀ ದೊರೆಸ್ವಾಮಿ ಐಯ್ಯಂಗಾರ್‌ರವರ, ಶ್ರೀಶತಾಭಿಷೇಕಂ ಗೋವಿಂದ ನರಸಿಂಹಾಚಾರ್ ಸ್ವಾಮಿಗಳವರ ಮತ್ತು ಶ್ರೀ ಡಾ|| ಎಂ.ಎ. ವೇಂಕಟಕೃಷ್ಣನ್‌ರವರ ಧನುರ್ಮಾಸದ ತಿರುಪ್ಪಾವೈಕಾಲಕ್ಷೇಪಗಳನ್ನು ಆಗಾಗ ಕೇಳುವ ಸುಯೋಗವು ನನಗೆ ಲಭಿಸಿತು. ಅವರುಗಳು, ಪೂರ್ವಾಚಾರ್ಯರುಗಳ ವ್ಯಾಖ್ಯಾನಗಳನ್ನೆಲ್ಲಾ ಅನುಸರಿಸಿ ತಿಳಿಸುತ್ತಿದ್ದ ಅರ್ಥವಿಶೇಷಾರ್ಥಗಳನ್ನೆಲ್ಲಾ ಸಂಗ್ರಹಿಸಿ, ಮುಂದೆ ಗ್ರಂಥ ಸೂಚಿಯಲ್ಲಿ ತಿಳಿಸಿರುವ ಪುಸ್ತಕಗಳ ಸಹಾಯವನ್ನು ಪಡೆದು, ತಿರುಪ್ಪಾವೈ ಸಂದೇಶ ಎಂಬ ಹೆಸರಿನಲ್ಲಿ, ಗೋದಾದೇವಿಯು ಸರ್ವದೇಶ ಸರ್ವಕಾಲದ ಸರ್ವಮಾನವರಿಗೂ ತಿರುಪ್ಪಾವೈಯಲ್ಲಿ ನೀಡಿರುವ ಸಂದೇಶದ ಸಾರವನ್ನು ಸಂಗ್ರಹವಾಗಿಯೂ, ಆದಷ್ಟು ಸರಳವಾಗಿಯೂ ತಿಳಿಸುವ ಪ್ರಯತ್ನ ಮಾಡಿದ್ದೇನೆ.

ತಮ್ಮ ಬಿಡುವಿಲ್ಲದ ಅಪಾರ ಕಾರ್ಯಕ್ರಮಗಳ ಮಧ್ಯದಲ್ಲಿ ಸಮಯ ಮಾಡಿಕೊಂಡು ಇದಕ್ಕೆ ಮುನ್ನುಡಿಯನ್ನು ಬರೆದು ಅನುಗ್ರಹಿಸಿರುವ, ನನ್ನ ಆಚಾರ್ಯರಾದ ಶ್ರೀ ಉ. ಆಳ್ವಾರ್ ತಿರುಮಲೈಯ್ಯಂಗಾರ್ ಸ್ವಾಮಿಯವರ ಪುತ್ರರೂ ಮೇಲುಕೋಟೆ ಸಂಸ್ಕೃತ ಸಂಶೋಧನಾ ಪರಿಷತ್ತಿನ ಡೈರಕ್ಟರ್‌ರವರೂ ಆದ ಶ್ರೀಮಾನ್ ಲಕ್ಷ್ಮೀ ತಾತಾಚಾರ್‌ಸ್ವಾಮಿಗಳವರಿಗೆ ನನ್ನ ಅನಂತ ಪ್ರಣಾಮಗಳನ್ನು ಸಮರ್ಪಿಸುತ್ತೇನೆ.

ಈ ಪುಸ್ತಕವನ್ನು ಪ್ರಕಟಿಸಲು ತಿರುಮಲೆ ತಿರುಪತಿ ದೇವಸ್ಥಾನದವರು ದ್ರವ್ಯ ಸಹಾಯ ಮಾಡಿದ್ದಾರೆ. ಅವರಿಗೆ ನನ್ನ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

ತಿರುಪ್ಪಾವೈ ಸಂದೇಶವೆಂಬ ನನ್ನ ಲೇಖನಗಳನ್ನು ಬೆಂಗಳೂರು ಉಭಯವೇದಾಂ ಸಭೆಯವರು ಅವರ 'ಉಭಯವೇದ' ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಿದ್ದಾ ಅದನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಅವರು ನನಗೆ ಅನುಮತಿ ಪತ್ರವನ್ನು ನೀಡಿದ್ದಾರೆ. ಉಭಯವೇದಾಂತಸಭೆಯವರಿಗೆ ನನ್ನ ಅನಂತ ವಂದನೆಗಳನ್ನು ಅರ್ಪಿಸುತ್ತೇನೆ.

ಈ ಪುಸ್ತಕವನ್ನು ಬರೆಯಲು ನನಗೆ ಸಹಾಯ ಮಾಡಿ ಪ್ರೋತ್ಸಾಹ ನೀಡಿದ ಮತ್ತು 'ಆಂಡಾಳ್‌ದೇವಿಯ ವೈಭವ' ಎಂಬ ಲೇಖನವನ್ನು ಬರೆದುಕೊಟ್ಟಿರುವ ನನ್ನ ಅಕ್ಕ ಶ್ರೀಮತಿ ಎಂ.ಎ. ಸಿಂಗಮ್ಮನವರಿಗೆ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ನನ್ನ ಮಗ ಡಾ|| ಶ್ರೀ ಎಂ.ಡಿ. ಶ್ರೀನಿವಾಸ್‌ರವರು ನನ್ನ ಹಸ್ತಲಿಖಿತ ಪ್ರತಿಗಳನ್ನೆಲ್ಲಾ ಓದಿ ಪರಿಷ್ಕರಿಸಿಕೊಟ್ಟು ನನಗೆ ಸಹಾಯ ಮಾಡಿದ್ದಾರೆ.

ಈ ಪುಸ್ತಕವನ್ನು ಸಕಾಲಕ್ಕೆ ಅಂದವಾಗಿ ಅಚ್ಚುಹಾಕಿಸಿಕೊಟ್ಟು ಸಹಾಯ ಮಾಡಿದ ಶ್ರೀರಾಮ ಪ್ರಿಂಟರ್ಸ್‌ರವರಿಗೂ, ಈ ಕೃತಿ ಹೊರಬರಲು ಸಹಕರಿಸಿದ ಶ್ರೀ ಸತ್ಯನಾರಾಯಣರವರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ತಿರುಪ್ಪಾವೈ, ತಮಿಳು ಭಾಷೆಯ ಪ್ರಬಂಧವಾಗಿದ್ದು, ಕೆಲವು ತಮಿಳು ಅಕ್ಷರಗಳು ಕನ್ನಡದಲ್ಲಿ ಇಲ್ಲದೇ ಇರುವುದರಿಂದ, ಅಲ್ಲಲ್ಲಿ ಪಾಶುರಗಳಲ್ಲಿ ಕಂಡು ಬರುವ ಅಕ್ಷರ ವ್ಯತ್ಯಾಸಗಳನ್ನು ಓದುಗರು ಸರಿಪಡಿಸಿಕೊಂಡು ಪಾಶುರಗಳನ್ನು ಸರಿಯಾಗಿ ಅನುಸಂಧಾನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಗೋದಾದೇವಿಯು ತಿರುಪ್ಪಾವೈಯಲ್ಲಿ ಉಪದೇಶಿಸಿರುವ ತತ್ವೋಪದೇಶಗಳ ಆಚರಣೆಯಲ್ಲಿ ನಾನು ಅಶಕ್ತಳಾಗಿದ್ದರೂ, ಇದು ಒಂದು ಭಗವತ್‌ಕೈಂಕರ್ಯವೆಂಬ ಭಾವನೆ ಹೊಂದಿ, ಹಿರಿಯರ ಕಾಲಕ್ಷೇಪಗಳನ್ನು ಕೇಳಿ, ಹಿರಿಯರ ಪುಸ್ತಗಳನ್ನು ಓದಿ ನಾನು ಅರಿತ ಅರ್ಥವಿಶೇಷಾರ್ಥಗಳನ್ನು ಸಾಧ್ಯವಾದಷ್ಟು ಸಂಗ್ರಹವಾಗಿಯೂ, ಸರಳವಾಗಿಯೂ ಬರೆದು ಪ್ರಕಟಿಸಿದ್ದೇನೆ. ಇದರ ರಚನೆಗೂ ಪ್ರಕಟಣೆಗೂ ಮೂಲ ಸೂತ್ರಧಾರನಾಗಿ ಕಾರಣನಾದ ಪರಮಾತ್ಮನ ಪಾದಾರವಿಂದಗಳಲ್ಲಿ ಈ ಗ್ರಂಥಪುಷ್ಪವನ್ನು ಸಮರ್ಪಿಸುತ್ತೇನೆ.

**ಶ್ರೀ ಕೃಷ್ಣಾರ್ಪಣಮಸ್ತು**

**ಶ್ರೀ ಆಂಡಾಳ್ ತಿರುವಡಿಹಳೇ ಶರಣಂ**

**ಶ್ರಿಯೈನಮಃ ಶ್ರೀನಿವಾಸಾಯನಮಃ**

**3-9-1999** **ಎಂ.ಡಿ. ವೇದವಲ್ಲಿ**

# ಮುನ್ನುಡಿ

ಪ್ರಾಕೃತ ಪ್ರಪಂಚದಲ್ಲಿ ಮನುಷ್ಯನಾಗಿ ಹುಟ್ಟುವುದು ಪುಣ್ಯದ ಫಲ. ಪರಮಾತ್ಮನಿಗೆ ಸಕಲ ವಿಧವಾದ ಸೇವೆಗಳನ್ನು ಸಲ್ಲಿಸಲು ನಮಗೆ ಈ ಕರಣ ಕಳೇಬರಗಳನ್ನು ಕೊಟ್ಟಿದ್ದಾನೆ. ಆದರೆ ಮನುಷ್ಯನು ಪರಮಾತ್ಮನ ಸೇವೆಗೆ ಮುಡುಪಾಗಿರುವ ಈ ಕರಣಕಳೇಬರಗಳನ್ನು ದುರುಪಯೋಗ ಪಡಿಸಿ ಸಂಸಾರದ ವಿಷವರ್ತುಲದಲ್ಲಿ ಸಿಲುಕುತ್ತಾನೆ. ಸಾಮಾನ್ಯವಾಗಿ ಜನರೆಲ್ಲರೂ ಇಂತಹ ವಿಷವರ್ತುಲದಲ್ಲಿ ಸಿಕ್ಕಿಕೊಂಡಿದ್ದರೂ, ಕೆಲವರು ಮಾತ್ರ ಸಂಸಾರದಲ್ಲಿದ್ದೂ ಇಲ್ಲದಂತೆ, ಕಮಲದ ಎಲೆಯ ಮೇಲಿನ ನೀರಿನಂತೆ ವರ್ತಿಸುತ್ತಾರೆ. ಈ ಮನುಷ್ಯಜನ್ಮ ಪರಬ್ರಹ್ಮನ ಸಾನ್ನಿಧ್ಯದಲ್ಲಿ ಶಾಶ್ವತವಾಗಿ ಹೋಗಿ ಸೇರಲು ಒಂದು ಅದ್ಭುತವಾದ ಸಾಧನ; ಅಲ್ಪ ಸುಖಗಳಿಗೆ ಆಸೆಪಟ್ಟು, ಈ ಮನುಷ್ಯಜನ್ಮವನ್ನು ವ್ಯರ್ಥಮಾಡಿಕೊಳ್ಳಬಾರದು ಎಂಬ ಭಾವನೆಯಿಂದ ಅಧ್ಯಾತ್ಮದಲ್ಲಿಯೇ ತಲ್ಲೀನರಾಗಿರುತ್ತಾರೆ. ಇಂತಹ ವ್ಯಕ್ತಿಗಳಲ್ಲಿ ಶ್ರೀಮತಿ ಎಂ.ಡಿ. ವೇದವಲ್ಲಿ ಅವರು ಒಬ್ಬರು.

ಇವರ ಪೂಜ್ಯ ಪಿತೃವರ್ಯರಾದ ಮಂಡ್ಯಂ ಆಜಿ ನಾರಾಯಣಯ್ಯಂಗಾರರು ಸಹಾ ಮಹಾವಿದ್ವಾಂಸರು. ಚಿಕ್ಕಂದಿನಿಂದಲೇ ತಮ್ಮನ್ನು ಆಧ್ಯಾತ್ಮದಲ್ಲಿ ತೊಡಗಿಸಿಕೊಂಡವರು. ತಮ್ಮ ಮಕ್ಕಳನ್ನೂ ಸಹಾ ಅಧ್ಯಾತ್ಮಮಾರ್ಗದಲ್ಲಿಯೇ ಬೆಳೆಸಿದವರು. ತುಳಸಿ, ಮೊಳಕೆಯಲ್ಲಿಯೇ ಸುವಾಸನೆಯಿಂದ ಕೂಡಿರುತ್ತದೆ. ಅದರಂತೆ ಶ್ರೀಮತಿ ವೇದವಲ್ಲಿಯವರು ಸಹಾ ಅಧ್ಯಾತ್ಮದ ಜೊತೆ ಜೊತೆಯಲ್ಲಿಯೇ ಬೆಳೆದವರು. ಇವರು ರಚಿಸಿರುವ ''ತಿರುಪ್ಪಾವೈ'' ಕನ್ನಡ ವ್ಯಾಖ್ಯಾನಕ್ಕೆ ಮುನ್ನುಡಿಯನ್ನು ಬರೆಯಲು ಅತ್ಯಂತ ಸಂತೋಷವೆನಿಸುತ್ತದೆ.

ಭಗವತ್ ಭಕ್ತಿಯಲ್ಲಿಯೇ ಮುಳುಗಿ ತಮ್ಮ ತನುಮನವನ್ನೆಲ್ಲಾ ಭಗವಂತನಿಗೆ ಅರ್ಪಿಸಿದ ಮಹಾನುಭಾವರು ಆಳ್ವಾರುಗಳು. ಅಂತಹ ಆಳ್ವಾರುಗಳಲ್ಲಿ

ಜ್ಞಾನಭಕ್ತಿವೈರಾಗ್ಯಗಳಿಂದ ಬಾಲ್ಯದಲ್ಲಿಯೇ ಪಕ್ವವಾದವಳು ಆಂಡಾಳ್ ಅಥವಾ ಗೋದಾದೇವಿ. ಇವಳು ಪ್ರಸನ್ನ ಕುಲವೆಂಬ ನಂದನವನದ ಕಲ್ಪವಲ್ಲಿ, ಪರಮಾತ್ಮನ ಭಕ್ತಿಯೇ ಮೂರ್ತಿಭಾವ ಹೊಂದಿದೆಯೋ ಎಂಬಂತೆ ಇದ್ದಳು. ಚಿಕ್ಕಂದಿನಿಂದಲೇ ತನ್ನ ಪಿತೃವರ್ಯರಾದ ವಿಷ್ಣುಚಿತ್ತರಿಂದ ಭಾಗವತ ಮೊದಲಾದ ಪುಣ್ಯಕಥೆಗಳನ್ನು ಕೇಳಿ ಒಳ್ಳೆಯ ಸಂಸ್ಕಾರ ಪಡೆದವಳು.

ಜ್ಞಾನಿಗಳಲ್ಲಿ ಅಗ್ರಗಣ್ಯರು, ಜ್ಞಾನವು ಪರಿಪಕ್ವವಾಗಿ ಭಕ್ತಿಯ ಪರಾಕಾಷ್ಠೆಯನ್ನು ಹೊಂದಿದಾಗ ಪರಮಾತ್ಮನನ್ನು ಒಂದು ನಿಮಿಷವೂ ಬಿಟ್ಟು ಅಗಲಲಾರದೆ ಪರಿತಪಿಸುವರು. ಪರಮಾತ್ಮನ ಅಗಲಿಕೆಯಿಂದ ಉಂಟಾದ ದುಃಖದಿಂದ ಪ್ರಾಣವೇ ಹೋಗುವ ಸ್ಥಿತಿ ಬಂದಾಗ ಹೇಗಾದರೂ ಅವನ ಸಾನ್ನಿಧ್ಯವನ್ನು ಪಡೆದು ಬದುಕಬೇಕೆಂಬ ಹಂಬಲ ಅವರದು. ಅವರಂತೆ ತಾನೂ ವ್ರಜಭೂಮಿಯಲ್ಲಿರುವ ಗೋಪಿಕೆಯರ ಭಾವವನ್ನು ತಳೆದು ಶ್ರೀಕೃಷ್ಣಪರಮಾತ್ಮನ ಸಾನ್ನಿಧ್ಯಕ್ಕೆ ಹೋಗಿ, ಅಲ್ಲಿಯ ಸುಖವನ್ನು ಅನುಭವಿಸಬೇಕೆಂದು ಆಸೆಪಟ್ಟವಳು ಈ ಗೋದಾದೇವಿ. ಅಂತೆಯೇ ಗೋಪಿಕಾಭಾವವನ್ನು ತಳೆದು ವ್ರಜಭೂಮಿಯಲ್ಲಿರುವ ಗೋಪಿಕೆಯರಂತೆಯೇ, ಕೃಷ್ಣನ ಸಾನ್ನಿಧ್ಯವನ್ನು ಪಡೆದಳು ಈ ಗೋದಾದೇವಿ.

ಗೋದಾದೇವಿಯು ಹಿರಿಯ ಜ್ಞಾನಿಗಳ ತಾದಾತ್ಮ್ಯವನ್ನು ಪಡೆದು, ಪರಮಾತ್ಮನ ಸಾನ್ನಿಧ್ಯವನ್ನು ಪಡೆಯಲು ಸಾಧ್ಯವಿದ್ದರೂ, ಗೋಪಿಕಾಭಾವವನ್ನು ತಳೆದುದೇಕೆ ? ಪ್ರಾಯಶಃ ಇದಕ್ಕೆ ಕಾರಣ, ಆ ಗೋಪಿಕೆಯರಲ್ಲಿ ಇದ್ದಂತಹ ಮುಗ್ಧತೆಯೇ ಇರಬೇಕು. ಪರಮಾತ್ಮನು ಕೇವಲ ಜ್ಞಾನಕ್ಕಾಗಲೀ, ಕೃತಕವಾದ ಭಕ್ತಿಗಾಗಲೀ, ಪಾಂಡಿತ್ಯಕ್ಕಾಗಲೀ, ಅಥವಾ ವೇಷ ಭೂಷಣಗಳಿಗಾಗಲೀ ಮಾರುಹೋಗುವವನಲ್ಲ. ಮುಗ್ಧಹೃದಯದಿಂದ ಪರಮಾತ್ಮನನ್ನು ಆರಾಧಿಸಿದರೆ ಮಾತ್ರ ಅವನು ಒಲಿಯುತ್ತಾನೆ. ಗೋಪಿಕಾಸ್ತ್ರೀಯರಾದರೋ ಎಡಗೈ ಬಲಗೈ ಅರಿಯದವರು, ಆಚಾರ ವ್ಯವಹಾರ ಜ್ಞಾನವಿಲ್ಲದವರು. ಇವರು ಪರಮಾತ್ಮನಲ್ಲಿ ತಮ್ಮ ಅಳಲನ್ನು ತೋಡಿಕೊಂಡಾಗ ಶ್ರೀಕೃಷ್ಣಪರಮಾತ್ಮನು ಅವರನ್ನು ಒಡನೆಯೇ ಅನುಗ್ರಹಿಸಿದ. ಆದುದರಿಂದ

ಗೋದಾದೇವಿಯೂ ಕೂಡ ಗೋಪಿಕಾಭಾವವನ್ನು ತಳೆದು ಪರಮಾತ್ಮನ ಸಂಶ್ಲೇಷ ಸುಖವನ್ನು ಅನುಭವಿಸಲು ಅಪೇಕ್ಷಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಗೋದಾದೇವಿಗೆ ಮತ್ತೊಂದು ಮಹತ್ವವುಂಟು. ಚೇತನಾಚೇತನಾತ್ಮಕವಾದ ಸಮಸ್ತ ಪ್ರಪಂಚವೂ ಪರಮಾತ್ಮನ ಸೊತ್ತಲ್ಲವೇ ? ಚೇತನರಾದ ಈ ಜೀವಾತ್ಮರು ತಮ್ಮ ಕರ್ತವ್ಯವನ್ನು ಮರೆತು ನಿರರ್ಥಕವಾದ ಜೀವನವನ್ನು ನಡೆಸಿ ಆತ್ಮನಾಶದ ಹಾದಿಯನ್ನು ಹಿಡಿದಿದ್ದಾರೆ. ಈ ಸಂದರ್ಭದಲ್ಲೂ ತನಗೆ ಸೊತ್ತಾಗಿರುವ ಚೇತನರ ನಾಶವನ್ನು ಅರಿಯದೇ ನಿದ್ರಿಸುತ್ತಿರುವನು ಆ ಶ್ರೀಕೃಷ್ಣಪರಮಾತ್ಮ. ಪರಮಾತ್ಮನು ಋಷಿಮುನಿಗಳಿಗೆ ಜ್ಞಾನವನ್ನಿತ್ತು ಎಚ್ಚರಿಸಿದವನು. ಆದರೆ ತನ್ನ ಸೊತ್ತಾಗಿರುವ ಈ ಸಾಮಾನ್ಯ ಚೇತನರನ್ನು ಕಾಪಾಡದೇ ನಿದ್ರಿಸುತ್ತಿರುವನು. ಅವನನ್ನೇ ಎಚ್ಚರಿಸಿ ನಿನ್ನ ಸೊತ್ತನ್ನು ನೀನು ರಕ್ಷಿಸುವುದು ನಿನ್ನ ಧರ್ಮವಲ್ಲವೇ ಎಂದು ಉಪದೇಶ ಮಾಡಿ ಪರಮಾತ್ಮನನ್ನೇ ಎಚ್ಚರಿಸಿದವಳು ಗೋದಾದೇವಿ. ಈ ಗೋದಾದೇವಿಯು ಧರಿಸಿದ ಹೂಮಾಲೆಯನ್ನು ತಾನು ಧರಿಸಿ ಧನ್ಯತಾಭಾವವನ್ನು ತಳೆದವನು ಪರಮಾತ್ಮ.

ಗೋದಾದೇವಿಯು ರಚಿಸಿರುವ 'ತಿರುಪ್ಪಾವೈ' ಗ್ರಂಥವು ಅಂದು, ಇಂದು ಮತ್ತು ಮುಂದು ಕೂಡಾ ಎಲ್ಲರಿಗೂ ಮಾರ್ಗದರ್ಶನ ಕೊಡುವ ಕೈದೀವಿಗೆ; ಸಕಲ ವೇದಗಳ ಸಾರ; ಯೋಗೇಶ್ವರರ ತತ್ತ್ವವಿಚಾರ. ಮೃದು ಮಧುರ ಮುಗ್ಧಹೃದಯದಿಂದ ಹೊರಹೊಮ್ಮಿದ ಕವಿತಾಸಾರ. ಪರಮಾತ್ಮನ ಸಾನ್ನಿಧ್ಯದಲ್ಲಿಸರ್ವವಿಧವಾದ ಕೈಂಕರ್ಯವನ್ನೂ ಸ್ವಾರ್ಥದ ಸೋಲ್ಲು ಇಲ್ಲದೇ ಸಲ್ಲಿಸುವುದೇ ಭಕ್ತಿಯಸಾರ ಎಂದು ಸಾರುತ್ತದೆ ಈ ತಿರುಪ್ಪಾವೈ. ಅತಿ ಕಿರಿದಾದರೂ, ಅತಿ ಹಿರಿದಾದ ಗ್ರಂಥ. ಇಂತಹ ಶ್ರೇಷ್ಠ ಕೃತಿಯ ಕನ್ನಡ ಅನುವಾದವನ್ನು ಪೆರಿಯವಾಚ್ಚಾನ್ ಪಿಳ್ಳೈಯವರ ವ್ಯಾಖ್ಯಾನವನ್ನು ಅನುಸರಿಸಿ ರಚಿಸುವುದು ಸುಲಭ ಸಾಧ್ಯವಲ್ಲ. ಈ ಮಹತ್ಕಾರ್ಯವನ್ನು ಸಾಧಿಸಿ ಶ್ರೀಮತಿ ವೇದವಲ್ಲಿಯವರು ಪರಮಾತ್ಮನ ಮತ್ತು ಗುರುಹಿರಿಯರ ಕೃಪೆಗೆ ಪಾತ್ರರಾಗಿದ್ದಾರೆ. ಈ ಕೃತಿಗೆ ಮುನ್ನುಡಿ ಬರೆಯುವಂತಹ ಯೋಗ್ಯತೆ ನನಗಂತೂ ಇಲ್ಲ.

ಕೇವಲ ಆಚಾರ್ಯಪುತ್ರನೆಂಬ ಗೌರವದಿಂದ ನನ್ನನ್ನು ನಿರ್ಬಂಧಿಸಿ ಇದನ್ನು ಬರೆಸಿದ್ದಾರೆ. ಲೇಖನಿಯನ್ನು ಹಿಡಿಯಲು ಹಿಂಜರಿಯುವ ನನ್ನಿಂದ ಈ ನಾಲ್ಕುಮಾತುಗಳನ್ನು ಬರೆಯಲು ಪ್ರೇರೇಪಿಸಿದ ಅವರ ಶಕ್ತಿ ಅಪಾರ.

ಅಧ್ಯಾತ್ಮಪಥದಲ್ಲಿ ಜಿಜ್ಞಾಸುಗಳಿಗೂ, ಭಕ್ತರಿಗೂ ಈ ಕೃತಿಯು ದಾರಿದೀಪವಾಗಲಿ. ಇವರಿಂದ ಇಂತಹ ಇನ್ನೂ ಅನೇಕ ಕೃತಿಗಳು ಹೊರಬೀಳಲಿ ಎಂದು ಹಾರೈಸುತ್ತೇನೆ.

ಇತಿ

**ಚರಮಾವಧಿದಾಸದಾಸಃ**

**ಮಂ.ಆ. ಲಕ್ಷ್ಮೀತಾತಾಚಾರ್ಯಃ**

# ಆಂಡಾಳ್ ದೇವಿಯ ವೈಭವ

ಭೂದೇವಿಯ ಅಂಶಭೂತಳಾಗಿ ಅವತರಿಸಿದ ಆಂಡಾಳ್ ದೇವಿಯು ಶ್ರೀ ವೈಷ್ಣವ ಸಿದ್ಧಾಂತದಲ್ಲಿ ಪ್ರಾಮುಖ್ಯತೆ ಪಡೆದಿರುವ 'ತಿರುಪ್ಪಾವೈ' ಮತ್ತು 'ನಾಚ್ಚಿಯಾರ್ ತಿರುಮೊಳಿ' ಎಂಬ ಎರಡು ದಿವ್ಯ ಪ್ರಬಂಧಗಳನ್ನು ರಚಿಸಿ, ಎಲ್ಲರೊಂದಿಗೂ ಸೇರಿ ಹಾಡಿ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾಳೆ. ಆ ದಿವ್ಯಪದ್ಯಮಾಲೆಯು ಇಂದಿಗೂ ನಮಗೆಲ್ಲಾ ಲಭಿಸುವಂತೆ ಮಾಡಿ ಅನುಗ್ರಹಿಸಿದ್ದಾಳೆ.

ಇವಳು ವಿಷ್ಣುಚಿತ್ತರೆಂದು ಹೆಸರು ಪಡೆದ ಪೆರಿಯಾಳ್ವಾರ್ರವರ ಸಾಕುಮಗಳು. ಶ್ರೀ ವಿಷ್ಣುಚಿತ್ತರು ತಮ್ಮ ತಿರುವನಂದ ವನದಲ್ಲಿ ತುಳಸೀಗಿಡಗಳನ್ನು ನೆಡಲು ಭೂಮಿಯನ್ನು ಅಗೆಯುತ್ತಿರುವಾಗ ಜನಕಮಹಾರಾಜರಿಗೆ ಸೀತಾದೇವಿಯು ಕಂಡು ಬಂದಂತೆ ಇವರಿಗೆ ಭೂದೇವಿಯು ಆಂಡಾಳ್ ರೂಪದಲ್ಲಿ ಕಂಡುಬಂದಳು. ಕಲಿಯುಗದ ಆದಿಯಲ್ಲಿ ನಳವರ್ಷ ಕಟಕಮಾಸ ಪುಬ್ಬಾ ನಕ್ಷತ್ರದಿಂದ ಕೂಡಿದ ಶುಕ್ಲಪಕ್ಷದ ಚತುರ್ದಶೀ ಮಂಗಳವಾರ ಇವಳ ಅವತಾರವಾಯಿತು. ವಿಷ್ಣುಚಿತ್ತರು ಈ ಹೆಣ್ಣುಮಗಳನ್ನು ಅತ್ಯಂತ ಪ್ರೀತಿಯಿಂದ ಇವಳಿಗೆ ಗೋದಾ ಎಂಬ ಹೆಸರನ್ನಿಟ್ಟು, ಬೆಳೆಸಿದರು. ಭೂದೇವಿಯ ಅಂಶಭೂತಳಾಗಿ ಅವತರಿಸಿದ ಇವಳಿಗೆ 'ಆಂಡಾಳ್' ಎಂಬ ತಿರುನಾಮವೂ ಉಂಟಾಯಿತು.

ಪ್ರತಿದಿವಸವೂ ತಾವೇ ತೋಟದಲ್ಲಿ ಬೆಳೆಸಿದ ಹೂಗಳನ್ನು, ತುಳಸಿಯನ್ನೂ ಭಗವಂತನಿಗೆ ಅರ್ಪಿಸುವುದೇ ಪೆರಿಯಾಳ್ವಾರ್ರವರಿಗೆ ಅವರ ಜೀವನದಲ್ಲಿ ಆನಂದಕರವಾದ ಕೈಂಕರ್ಯವಾಗಿದ್ದಿತು. ಅವರ ಮುದ್ದುಕುವರಿಯಾದ ಆಂಡಾಳ್ ಸಹಜವಾದ ಸೌಂದರ್ಯದಿಂದ ಕೂಡಿದ್ದಳು. ಕಪಟವನ್ನೇ ಅರಿಯದ ಇವಳಿಗೆ ಎಳೆಯ ತಿಳಿಮನಸ್ಸಿದ್ದಿತು ಮತ್ತು ಪ್ರೇಮದಿಂದ ತುಂಬಿದ ಹೃದಯವಿದ್ದಿತು. ದೈವಾಂಶಸಂಭೂತೆಯಾಗಿ ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ಅಭಿವೃದ್ಧಿಹೊಂದಿ ಪರಮಭಾಗವತೋತ್ತಮರಾದ ಪೆರಿಯಾಳ್ವಾರ್ರವರ ಬಳಿ ಬೆಳೆದಳು. ಕಾಲಕ್ರಮದಲ್ಲಿ

ಅವರ ಬಳಿ ವಿದ್ಯಾಭ್ಯಾಸ ಮಾಡಿ ಇತಿಹಾಸ ಪುರಣಗಳನ್ನೆಲ್ಲಾ ಅಭ್ಯಾಸ ಮಾಡಿ ತನ್ನ ತಂದೆಯಂತೆಯೇ ದೈವಭಕ್ತಿಯನ್ನು ಪಡೆದಿದ್ದಳು. ಪೆರಿಯಾಳ್ವಾರ್‌ರವರು ಆಂಡಾಳನ್ನು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಭಗವಂತನ ಕಲ್ಯಾಣಗುಣಗಳನ್ನೆಲ್ಲಾ ಅವಳಿಗೆ ವಿಧವಿಧವಾಗಿ ವರ್ಣಿಸುತ್ತಿದ್ದರು. ಇದನ್ನು ಕೇಳುತ್ತಾ ಗೋದಾದೇವಿಗೆ ಪರಮಾತ್ಮನಲ್ಲಿ ಭಕ್ತಿಯು ಬೆಳೆಯುತ್ತಾ ಬಂದಿತು. ಆ ಭಕ್ತಿಯು ಪರಮಾತ್ಮನಲ್ಲಿ ಅತ್ಯಂತ ಪ್ರೇಮರೂಪವಾಗಿ ಬೆಳೆದು ಪರಮಭಕ್ತಿಯಾಗಿ ಮಾರ್ಪಟ್ಟಿತು ಮತ್ತು ಇವಳು ಪರಮಾತ್ಮನನ್ನೇ ವಿವಾಹವಾಗಬೇಕೆಂಬ ನಿರ್ಧಾರವನ್ನು ಕೈಕೊಂಡಳು.

ಅವಳು ತಂದೆಯವರ ಜೊತೆಯಲ್ಲಿ ಅವರ ತೋಟದ ಕೈಂಕರ್ಯದಲ್ಲೂ, ಅವರ ಭಗವಂತನ ಆರಾಧನ ಕೈಂಕರ್ಯದಲ್ಲೂ ಭಾಗಿಯಾದಳು. ಪೆರಿಯಾಳ್ವಾರ್‌ರವರಂತೆ ಅವರ ಮಗಳಾದ ಗೋದಾದೇವಿಗೂ ಹೂವುಗಳೆಂದರೆ ಬಹಳ ಆಸೆಯಿದ್ದುದರಿಂದ ಅವುಗಳನ್ನು ಮುಡಿಯುವುದೆಂದರೆ ಅವಳಿಗೆ ಬ್ರಹ್ಮಾನಂದವಾಗಿದ್ದಿತು. ಅವಳ ತಂದೆಯವರು ಮುಂಜಾನೆ ಎದ್ದು ಹೂತೋಟದಿಂದ ಮಂಜಿನ ತುಂತುರಗಳಿಂದ ಕೂಡಿದ ಮಲ್ಲಿಗೆ, ಜಾಜಿ, ಸಂಪಿಗೆ ಮುಂತಾದ ಪುಷ್ಪಗಳನ್ನೂ, ತುಳಸೀದಳಗಳನ್ನೂ ಕಿತ್ತು ಮನೆಗೆ ತರುತ್ತಿದ್ದರು. ಅವುಗಳನ್ನು ಹೂಮಾಲೆಗಳಾಗಿ ಕಟ್ಟಿ ಬುಟ್ಟಿಯಲ್ಲಿ ಇಟ್ಟು ತಮ್ಮ ಇತರ ಕೆಲಸಗಳಿಗಾಗಿ ಹೊರಗೆ ಹೋಗುತ್ತಿದ್ದರು. ಅವರು ಭಗವಂತನಿಗಾಗಿ ಕಟ್ಟಿ ಇಟ್ಟಿದ್ದ ಅಂದವಾದ ಹೂಮಾಲೆಗಳನ್ನು ಗೋದಾದೇವಿಯು ತಾನೇ ಧರಿಸಿಕೊಂಡು ತಾನು ಪರಮಾತ್ಮನನ್ನು ವರಿಸಲು ಯೋಗ್ಯಳಾಗಿರುವೆನೇ ಎಂದು ಕನ್ನಡಿಯಲ್ಲಿ ತನ್ನ ಸೌಂದರ್ಯವನ್ನು ನೋಡಿಕೊಳ್ಳುತ್ತಿದ್ದಳು. ಅಲ್ಲದೆ ತನಗೆ ಇಷ್ಟವಾದ ಹೂಗಳು ತನ್ನ ಸ್ವಾಮಿಯಾದ ಪರಮಾತ್ಮನಿಗೂ ಒಪ್ಪಿಗೆಯಾಗಬಹುದೆಂಬ ಭರವಸೆಯನ್ನೂ ಹೊಂದಿದ್ದಳು. ತನ್ನ ತಂದೆಯವರು ಮನೆಗೆ ಹಿಂತಿರುಗಿ ಬರುವುದರೊಳಗೆ ತಾನು ಧರಿಸಿದ್ದ ಹೂಮಾಲೆಗಳನ್ನು ಸ್ವಲ್ಪವೂ ಬಾಡದಂತೆ ಮೊದಲಿನಂತೆಯೇ ಸುತ್ತಿ ಬುಟ್ಟಿಯಲ್ಲಿ ಇಟ್ಟುಬಿಡುತ್ತಿದ್ದಳು. ಈ ವಿದ್ಯಮಾನವನ್ನೆಲ್ಲಾ ಸ್ವಲ್ಪವೂ ಅರಿಯದ ಪೆರಿಯಾಳ್ವಾರ್‌ರವರು ಮನೆಗೆ ಬಂದು ಹೂಮಾಲೆಗಳನ್ನೆಲ್ಲಾ ದೇವಸ್ಥಾನಕ್ಕೆ ತೆಗೆದುಕೊಂಡುಹೋಗಿ ಭಗವಂತನಿಗೆ ಅರ್ಪಿಸಿ ಮನೆಗೆ ಬರುತ್ತಿದ್ದರು. ಹೀಗೆ ಬಹಳ ಕಾಲ ನಡೆಯಿತು.

ಒಂದು ದಿವಸ ಕಾರ್ಯವಶಾತ್ ಪೆರಿಯಾಳ್ವಾರ್‍ರವರು ಮುಂಚಿತವಾಗಿ ಮನೆಗೆ ಬಂದರು. ಆಗ ತಮ್ಮ ಮಗಳಾದ ಗೋದಾದೇವಿಯು ಭಗವಂತನಿಗೆ ಮೀಸಲಾಗಿಟ್ಟಿದ್ದ ಹೂಮಾಲೆಗಳನ್ನು ಮೊದಲು ಧರಿಸುತ್ತಿದ್ದ ಅಪಚಾರವನ್ನು ಕಂಡುಬಿಟ್ಟರು. ಇದರಿಂದ ಅವರಿಗೆ ಬಹಳ ಕೋಪವುಂಟಾಗಿ ಮಗಳು ಈರೀತಿಯಾದ ಅಪಚಾರವನ್ನು ಮಾಡಿದುದಕ್ಕಾಗಿ ಅವಳನ್ನು ಖಂಡಿಸಿದರು. ಅನಂತರ ಅವಳನ್ನು ವಿಚಾರಿಸಿದುದರಲ್ಲಿ ಅವಳು ಪ್ರತಿನಿತ್ಯವೂ ಹೀಗೆಯೇ ಮಾಡುತ್ತಿರುವಳೆಂಬ ವಿಷಯವು ಅವರಿಗೆ ತಿಳಿಯಿತು. ಆಳ್ವಾರ್‍ರವರು ಅಷ್ಟು ದಿವಸವೂ ಅವಳು ಮೊದಲು ಧರಿಸಿದ ಹೂ ಮಾಲೆಗಳನ್ನು ಭಗವಂತನಿಗೆ ಅರ್ಪಿಸುತ್ತಿದ್ದ ಅಪಚಾರಕ್ಕಾಗಿ ಬಹಳ ಖಿನ್ನರಾಗಿ ಆ ದಿವಸವೆಲ್ಲಾ ದೇವಸ್ಥಾನಕ್ಕೆ ಹೋಗಲೇ ಇಲ್ಲ. ಇದರಿಂದ ಗೋದಾದೇವಿಗೂ ಮನಸ್ಸಿಗೆ ಬಹಳ ಬೇಜಾರಾಗಿ, ಅವಳೂ ಪೆರಿಯಾಳ್ವಾರ್‍ರವರೂ ಇಬ್ಬರೂ ಆ ದಿವಸವೆಲ್ಲಾ ಉಪವಾಸಮಾಡಿ ರಾತ್ರಿ ಮಲಗಿಬಿಟ್ಟರು. ಪೆರಿಯಾಳ್ವಾರ್‍ರವರಿಗೆ ಅರ್ಚಾಮೂರ್ತಿಯಾದ ಪರಮಾತ್ಮನು ಆ ರಾತ್ರಿ ಕನಸ್ಸಿನಲ್ಲಿ ಕಾಣಿಸಿಕೊಂಡು, ಆ ದಿವಸ ತನಗೆ ಯಾವ ಕಾರಣದಿಂದ ಅವರು ಹೂಮಾಲೆಗಳನ್ನು ಅರ್ಪಿಸಲಿಲ್ಲವೆಂದು ವಿಚಾರಿಸಿದನು. ಅದಕ್ಕೆ ಆಳ್ವಾರ್‍ರವರು ತಮ್ಮ ಮಗಳಾದ ಗೋದಾದೇವಿಯು ಭಗವಂತನಿಗೆ ಮೀಸಲಾಗಿ ತಾವು ಇಟ್ಟಿದ್ದ ಹೂಮಾಲೆಗಳನ್ನು ಮೊದಲೇ ಧರಿಸಿಕೊಂಡಿದ್ದರಿಂದ ತಾವು ಆ ದಿವಸ ಹೂಮಾಲೆಗಳನ್ನು ಅರ್ಪಿಸಲು ಆಗಲಿಲ್ಲವೆಂದು ಭಗವಂತನಲ್ಲಿ ವಿಜ್ಞಾಪಿಸಿಕೊಂಡರು. ಅದಕ್ಕೆ ಪರಮಾತ್ಮನು, ಅವರ ಮಗಳಾದ ಗೋದಾದೇವಿಯು ಪರಮಭಕ್ತಳೆಂದೂ, ಅವಳು ಅವರ ಮನೆಯಲ್ಲಿ ಅವತರಿಸಿದುದು ಅವರ ಸುಯೋಗವೆಂದೂ ತಿಳಿಸಿ, ಅವಳು ತನ್ನ ಪ್ರೇರಣೆಯಿಂದಲೇ ಈ ರೀತಿ ಮಾಡುತ್ತಿದ್ದುದರಿಂದ ಅವಳು ಧರಿಸಿದ ಹೂಮಾಲೆಗಳನ್ನೇ ತನಗೆ ಸಮರ್ಪಿಸಬೇಕೆಂದು ಹೇಳಿ ಅಂತರ್ಧಾನನಾದನು. ಇದರಿಂದ ಪೆರಿಯಾಳ್ವಾರ್‍ರವರಿಗೆ ಬಹಳ ಸಂತೋಷವಾಗಿ ತಮ್ಮ ಮಗಳಾದ ಗೋದಾದೇವಿಯಲ್ಲಿ ಬಹಳ ಪ್ರೀತಿಯನ್ನೂ, ಗೌರವವನ್ನೂ, ತಳೆದು ಅವಳನ್ನು "ಶೂಡಿಕೊಡುತ್ತ ನಾಚ್ಚಿಯಾರ್" ಎಂದು ಪ್ರೀತಿಯಿಂದ ಕರೆದರು. ಅನಂತರ ಆಳ್ವಾರ್‍ರವರಿಗೂ, ಗೋದಾದೇವಿಗೂ ಅವರ

ಮನಸ್ಸಿನಲ್ಲಿದ್ದ ಬಿಕ್ಕಟ್ಟು ಪರಿಹಾರವಾಗಿ, ಕಾಲಕ್ರಮದಲ್ಲಿ ಗೋದಾದೇವಿಗೆ ಕೃಷ್ಣನಮೇಲೆ ಇದ್ದ ಭಕ್ತಿಯು ಪರಮಪ್ರೇಮರೂಪವನ್ನು ತಾಳಿತು.

ನಾರದ ಭಕ್ತಿಸೂತ್ರದಲ್ಲಿ ಭಕ್ತಿಯವಿಷಯವು ಈ ರೀತಿ ವಿವರಿಸಲ್ಪಟ್ಟಿದೆ. ಭಕ್ತಿ ಎನ್ನುವುದು ಪರಮಾತ್ಮನಲ್ಲಿ ಪ್ರೇಮಸ್ವರೂಪವಾದುದು ಮತ್ತು ಅಮೃತಸ್ವರೂಪವಾದುದು. ಅದನ್ನು ಪಡೆದ ಮಾನವನು ಸಿದ್ಧನಾಗುವನು. ಅಮೃತನಾಗುವನು, ತೃಪ್ತನಾಗುವನು ಮತ್ತು ಅವನು ಇನ್ನೇನನ್ನೂ ಬಯಸುವುದಿಲ್ಲ. ಭಕ್ತನಿಗೆ ಯಾರಲ್ಲಿಯೂ ದ್ವೇಷವಾಗಲೀ, ಶೋಕವಾಗಲೀ ಇರದೆ ಅವನು ಯಾವಾಗಲೂ ಪರಮಾತ್ಮನ ಚಿಂತನೆಯಲ್ಲಿಯೇ ಮಗ್ನನಾಗಿರುವನು. ಅವನ ಮನಸ್ಸಿಗೆ ಪರಮಾತ್ಮನ ಹೊರತು ಬೇರೆಯಾವ ವಿಷಯಗಳಲ್ಲಿಯೂ ಆಸೆಯಾಗಲೀ, ಉತ್ಸಾಹವಾಗಲೀ ಉಂಟಾಗುವುದಿಲ್ಲ. ಭಕ್ತನು ಪರಮಾತ್ಮನಲ್ಲಿ ಅನುರಾಗಜನಿತವಾದ ಅನುಭವದಿಂದ ಸ್ತಬ್ಧನಾಗುವನು ಮತ್ತು ಆತ್ಮಾರಾಮನಾಗುವನು. ಈ ವಿವರಣೆಗಳು ಎಲ್ಲಾ ಆಳ್ವಾರ್ರವರುಗಳಿಗೂ ಅನ್ವಯಿಸುವಂತಹುದಾಗಿದ್ದರೂ ಗೋದಾದೇವಿಗಂತೂ ಇದು ವಿಶೇಷರೀತಿಯಲ್ಲಿ ಅನ್ವಯಿಸುತ್ತದೆ.

ಭಗವಂತನಿಗೆ ತನ್ನ ಮೇಲೆ ಉಂಟಾದ ಅನುಗ್ರಹದಿಂದ ಗೋದಾದೇವಿಗೆ ಪರಮಾತ್ಮನು ತನ್ನ ಕೋರಿಕೆಗಳನ್ನೆಲ್ಲಾ ಈಡೇರಿಸಬಹುದೆಂಬ ಭರವಸೆಯು ಉಂಟಾಯಿತು. ಇವಳಿಗೆ ಉಂಟಾದುದು ಗೋಪಿಯರಿಗೆ ಶ್ರೀಕೃಷ್ಣನಲ್ಲಿ ಉಂಟಾದ ಪ್ರೀತಿಯಿಂದ ಕೂಡಿದ ಭಕ್ತಿಯು. ಶ್ರೀಕೃಷ್ಣನ ವಿರಹವನ್ನು ತಾಳಲಾರದ ಗೋಪಕನ್ಯೆಯರಂತೆ ಗೋದಾದೇವಿಗೂ ಭಗವಂತನ ಮೇಲಿನ ಹಂಬಲವು ಹೆಚ್ಚಾಯಿತು ಮತ್ತು ಇವಳ ಭಕ್ತಿಯು ಪರಮಭಕ್ತಿಯ ರೂಪವನ್ನು ತಾಳಿತು. ಇವಳು ಪರಮಾತ್ಮನ ದರ್ಶನವನ್ನು ಕೋರಿ ಪರವಶಳಾಗಿ ಧ್ಯಾನ ಮಾಡುತ್ತಾ, ದ್ವಾಪರಯುಗದಲ್ಲಿ ಗೋಪಿಗಳು ಶ್ರೀಕೃಷ್ಣನ ಅನುಗ್ರಹಕ್ಕಾಗಿ ನಡೆಸಿದ ಕಾತ್ಯಾಯಿನೀ ವ್ರತದ ಕ್ರಮವನ್ನು ಅನುಸರಿಸಿ ತಾನೂ ಮಾರ್ಗಳಿ ನೀರಾಟ್ಟವೆಂಬ ಒಂದು ವ್ರತವನ್ನು ಮಾರ್ಗಶಿರಮಾಸದಲ್ಲಿ ಆಚರಿಸಿದಳು. ಅಲ್ಲದೆ ತಾನೇ ಗೋಪಿ ಎಂದು ಭಾವಿಸಿಕೊಂಡು ''ತಿರುಪ್ಪಾವೈ'' ಎಂಬ ಹೆಸರುಳ್ಳ ಮೂವತ್ತು ಪಾಶುರಗಳನ್ನು

ಶ್ರೀಕೃಷ್ಣಪರಮಾತ್ಮನ ಪರವಾಗಿ ಹಾಡಿ ಅವನಲ್ಲಿ ಶರಣಾಗತಿ ಮಾಡಿದಳು. ಅನಂತರ ''ನಾಚ್ಚಿಯಾರ್ ತಿರುವೊಳಿ'' ಎಂಬ ಪರಮಾತ್ಮನಲ್ಲಿ ಭಕ್ತಿರೂಪವಾದ ನೂರನಲವತ್ತುಮೂರು ಪಾಶುರಗಳನ್ನೂ ಹಾಡಿದಳು.

ಪ್ರಾಪ್ತವಯಸ್ಕಳಾದ ತಮ್ಮ ಮಗಳಿಗೆ ಯೋಗ್ಯನಾದ ವರನನ್ನು ಹುಡುಕಿ ವಿವಾಹವನ್ನು ಮಾಡಬೇಕೆಂದು ಪೆರಿಯಾಳ್ವಾರ್ರವರಿಗೆ ಆತುರವಾಗಿದ್ದಿತು. ಆದರೆ ಅವರ ಮಗಳಾದ ಗೋದಾದೇವಿಯು ತಾನು ಮನುಷ್ಯ ಮಾತ್ರದವರನ್ನು ಮದುವೆಯಾಗುವುದಿಲ್ಲವೆಂಬುದನ್ನೂ , ಪರಮಾತ್ಮನನ್ನೇ ತಾನು ವರಿಸಬೇಕೆಂದು ಮೊದಲಿನಿಂದಲೂ ತೀರ್ಮಾನಿಸಿರುವ ತನ್ನ ದೃಢವಾದ ನಿರ್ಧಾರವನ್ನೂ ತನ್ನ ತಂದೆಯವರಾದ ಪೆರಿಯಾಳ್ವಾರ್ರವರಿಗೆ ತಿಳಿಸಿದಳು. ಅನಂತರ ಆಳ್ವಾರ್ರವರು ಶ್ರೀವಿಲ್ಲಿಪುತ್ತೂರಿನ ವಟಪತ್ರಶಾಯಿಯ ವೈಭವದಿಂದ ಪ್ರಾರಂಭಿಸಿ 108 ದಿವ್ಯ ದೇಶಗಳಲ್ಲಿರುವ ಅರ್ಚಾಮೂರ್ತಿಗಳ ವೈಭವಗಳನ್ನೆಲ್ಲಾ ಅವಳಿಗೆ ವಿವರಿಸಿ ತಿಳಿಸಿದರು. ಆದನ್ನೆಲ್ಲಾ ಕೇಳಿ ಅವಳು ಶ್ರೀರಂಗದ ಶ್ರೀರಂಗನಾಥಸ್ವಾಮಿಯ ವೈಭವವನ್ನೂ, ಅವನ ಮಹಾತ್ಮೆಯನ್ನೂ ಅರಿತು ತಾನು ಅವನನ್ನೇ ವರಿಸುವುದಾಗಿ ತೀರ್ಮಾನಿಸಿರುವ ವಿಷಯವನ್ನು ಅವಳ ತಂದೆಯವರಿಗೆ ತಿಳಿಸಿದಳು. ಅವರು ಇದು ಹೇಗೆ ಸಾಧ್ಯ; ಇದನ್ನು ಹೇಗೆ ಕಾರ್ಯತಃ ಸಾಧಿಸುವುದು ಎಂದು ವ್ಯಾಕುಲಚಿತ್ತರಾದರು. ಆಗ ಪೆರಿಯಾಳ್ವಾರ್ರವರಿಗೆ ಶ್ರೀರಂಗನಾಥನು ಕನಸ್ಸಿನಲ್ಲಿ ಪ್ರತ್ಯಕ್ಷನಾಗಿ ಅವರು ಗೋದಾದೇವಿಯನ್ನು ಶ್ರೀರಂಗಕ್ಕೆ ಕರೆದುಕೊಂಡು ಬಂದರೆ ತಾನು ಅವಳನ್ನು ಪಾಣಿಗ್ರಹಣಮಾಡಿಕೊಳ್ಳುವುದಾಗಿ ತಿಳಿಸಿ ಅಂತರ್ಧಾನನಾದನು. ಅನಂತರ ಪೆರಿಯಾಳ್ವಾರ್ರವರು ಸ್ವಾಮಿಯ ನೇಮನವನ್ನು ಶಿರಸಾವಹಿಸಿ ಅಲಂಕೃತಳಾದ ತಮ್ಮ ಮಗಳು ಗೋದಾದೇವಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಪರಿಜನರೊಂದಿಗೆ ಶ್ರೀರಂಗಕ್ಕೆ ಕರೆದುಕೊಂಡು ಹೋಗಿ ಶ್ರೀರಂಗನಾಥಸ್ವಾಮಿಯ ಎದುರಿನಲ್ಲಿ ನಿಲ್ಲಿಸಿದರು. ಆಗ ಗೋದಾದೇವಿಯು ಶ್ರೀರಂಗನಾಥಸ್ವಾಮಿಯ ದಿವ್ಯಮಂಗಳ ವಿಗ್ರಹವನ್ನು ಕಂಡು ಸಂಪ್ರದಾಯರೀತ್ಯಾ ಪ್ರದಕ್ಷಿಣೆಯನ್ನು ಮಾಡಿ ನಮಸ್ಕರಿಸಿ ಭಕ್ತಿಪರವಶಳಾಗಿ, ತದೇಕಧ್ಯಾನಪರಳಾಗಿ, ಶ್ರೀರಂಗನಾಥನ ಪಾದಾರವಿಂದಗಳನ್ನು ಭದ್ರವಾಗಿ

ಹಿಡಿದುಕೊಂಡು ಆ ಪಾದಗಳಲ್ಲಿಯೇ ಐಕ್ಯವಾಗಿ ಹೋಗಿ ಅದೃಶ್ಯಳಾಗಿ ಸ್ವಾಮಿಯಲ್ಲೇ ಅಂತರ್ಧಾನವನ್ನು ಹೊಂದಿದಳು.

ಶ್ರೀರಂಗನಾಥಸ್ವಾಮಿಯು ಪೆರಿಯಾಳ್ವಾರ್‌ರವರಿಗೆ ಅರ್ಚಕಮುಖೇನ ಸಕಲ ಮರ್ಯಾದೆಗಳನ್ನು ಮಾಡಿಸಿ, ತೀರ್ಥಪ್ರಸಾದಗಳನ್ನು ಅನುಗ್ರಹಿಸಿ, ಅವರ ಮಗಳನ್ನು ತಾನು ಪಾಣಿಗ್ರಹಣ ಮಾಡಿಕೊಂಡಿದ್ದರಿಂದ ತನಗೆ ಉಂಟಾದ ಆನಂದವನ್ನೂ ಅವರಿಗೆ ತಿಳಿಸಿದನು. ಮತ್ತು ಅವರು ಮೊದಲಿನ ಹಾಗೆಯೇ ಶ್ರೀವಿಲ್ಲಿಪುತ್ತೂರಿನಲ್ಲಿ ತನಗೆ ಪುಷ್ಪಕೈಂಕರ್ಯವನ್ನು ಸಲ್ಲಿಸಬೇಕೆಂದು ನಿಯಮಿಸಿದನು. ಅನಂತರ ಆಳ್ವಾರ್‌ರವರು ದೇವಸ್ಥಾನದಿಂದ ತೀರ್ಥ, ತಿರುಮಾಲೆ, ತಿರುಪರಿವಟ್ಟಂ, ಶ್ರೀಶಠಹೋಪಂ ಮುಂತಾದ ಮರ್ಯಾದೆಗಳಿಂದ ಸತ್ಕರಿಸಲ್ಪಟ್ಟವರಾಗಿ ಸಂತೋಷದಿಂದ ಶ್ರೀವಿಲ್ಲಿಪುತ್ತೂರಿಗೆ ಹಿಂದಿರುಗಿ ಬಂದರು. ಮೊದಲಿನಂತೆಯೇ ತುಳಸೀ ಪುಷ್ಪ ಕೈಂಕರ್ಯಗಳನ್ನು ಮಾಡುತ್ತಿದ್ದು ಕಾಲಕ್ರಮದಲ್ಲಿ ತಮ್ಮ 80ನೆಯ ವಯಸ್ಸಿನಲ್ಲಿ ಭಗವಂತನ ಪಾದಾರವಿಂದವನ್ನು ಸೇರಿದರು.

ಆಂಡಾಳ್ ಹಾಡಿರುವ ಪಾಶುರಗಳಲ್ಲಿ ''ತಿರುಪ್ಪಾವೈ'' ಎಂಬುದು 30 ಪಾಶುರಗಳಿಂದ ಕೂಡಿದ ಒಂದು ದಿವ್ಯಪ್ರಬಂಧವಾಗಿರುತ್ತದೆ. ಈ ಪ್ರಬಂಧವು ಕಾವ್ಯಾಂಶದಿಂದ ಬಹಳ ಸುಂದರವಾಗಿ ಇರುವಂತೆ ಸ್ವಾಪದೇಶಾರ್ಥದಿಂದ ಕೂಡಿ ಬಹಳ ಅರ್ಥಗರ್ಭಿತವಾಗಿಯೂ ಇದೆ. ಭಗವತ್ಪ್ರೇಮದಿಂದ ತುಂಬಿದ ನಾರೀಹೃದಯದಿಂದ ಹೊರಹೊಮ್ಮಿದ ಪಾಶುರಗಳೇ ''ತಿರುಪ್ಪಾವೈ'' ಎಂಬುದು. ಧನುರ್ಮಾಸದ 30 ದಿನಗಳೂ ದೇವರಿಗೆ ಪೊಂಗಲನ್ನು ಮಾಡಿ ನಿವೇದನೆ ಮಾಡಿ, ದಿನಕ್ಕೆ ಒಂದು ಪಾಶುರದಂತೆ ಹೇಳುತ್ತಾ ಮುಂಜಾನೆಯಲ್ಲಿ ಊರಿನ ದಾರಿಗಳಲ್ಲಿ ಭಕ್ತಾದಿಗಳು ಭಜನೆಮಾಡಿಕೊಂಡು ದೇವಸ್ಥಾನಕ್ಕೆ ಹೋಗಿ ತಲುಪುವ ಪದ್ಧತಿಯನ್ನು ಈಗಲೂ ತಮಿಳುನಾಡಿನಲ್ಲಿ ನಾವು ಕಾಣಬಹುದು. ''ತಿರುಪ್ಪಾವೈ''ಯಲ್ಲಿ ಆಂಡಾಳ್ ತಾನು ಒಬ್ಬ ಗೋಪಿಕಾ ಸ್ತ್ರೀ ಎಂದು ಭಾವಿಸಿಕೊಂಡು, ತನ್ನ ಸಖಿಯರನ್ನು ಒಬ್ಬೊಬ್ಬರನ್ನಾಗಿ ನಿದ್ರೆಯಿಂದ ಎಬ್ಬಿಸಿ ತನ್ನ ಜೊತೆಯಲ್ಲಿ ಕರೆದುಕೊಂಡುಹೋಗಿ

ವಟಪತ್ರ ಶಾಯಿಯಾಗಿ ಶಯನಿಸುತ್ತಿರುವ ಶ್ರೀಕೃಷ್ಣನ ಮಂದಿರಕ್ಕೆ ಹೋಗಿ ಅವನನ್ನು ಎಬ್ಬಿಸಿ ''ಪರೈ'' ಅಂದರೆ ಅವನಲ್ಲಿ ಪ್ರೀತಿಯಿಂದ ಕೂಡಿದ ಕೈಂಕರ್ಯವನ್ನು ತಮಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾಳೆ. ''ತಿರುಪ್ಪಾವೈ'' ಎಂಬುದು ಮುಮುಕ್ಷುವಾದ ಚೇತನನಿಗೆ ನಿತ್ಯಾನುಸಂಧೇಯಗಳಾದ ಅಂಶಗಳನ್ನೂ, ಕರ್ತವ್ಯಾಂಶಗಳನ್ನೂ ಬೋಧಿಸುವುದಲ್ಲದೆ, ಪರಮ ಪುರುಷಾರ್ಥವಾದ ಭಗವತ್ಕೈಂಕರ್ಯದ ಸ್ವರೂಪವನ್ನು ಖಚಿತವಾಗಿ ತಿಳಿಸತಕ್ಕ ಮತ್ತು ಭಗವಂತನಲ್ಲಿ ಶರಣಾಗತಿ ಮಾಡುವ ಒಂದು ದಿವ್ಯಪ್ರಬಂಧವಾಗಿದೆ.

ಗೋದಾದೇವಿಯು ರಚಿಸಿರುವ ಇನ್ನೊಂದು ದಿವ್ಯಪ್ರಬಂಧವು 143 ಪಾಶುರಗಳುಳ್ಳ ''ನಾಚ್ಚಿಯಾರ್ ತಿರುಮೊಳಿ'' ಎಂಬುದು. ಇದರಲ್ಲಿ ಅವಳು ಶ್ರೀಕೃಷ್ಣನಿಗಾಗಿ ಪ್ರೇಮಾತಿಶಯದಿಂದ ಕೊರಗುತ್ತಿರುವ ತನ್ನ ಮನಸ್ಸಿನ ವಿಧವಿಧವಾದ ಸ್ಥಿತಿಗಳನ್ನೂ, ಮನಸ್ಸಿನಲ್ಲಿ ಮೂಡಿಬರುತ್ತಿರುವ ಸಂಕಲ್ಪಗಳ ವಿವಿಧ ರೀತಿಗಳನ್ನೂ ಕಣ್ಣಮುಂದೆ ಚಿತ್ರಿಸುತ್ತಾಳೆ. ಹೀಗೆ ಪ್ರೇಮಾತಿಶಯದಿಂದ ಪ್ರಕೃತಿಯಲ್ಲಿ ಎಲ್ಲೆಲ್ಲಿಯೂ ಶ್ರೀಕೃಷ್ಣನ ಸೌಂದರ್ಯವನ್ನು ಕಾಣುತ್ತಾ, ಅವಳ ಭಕ್ತಿಪ್ರೇಮಗಳು ಎಲ್ಲೆಲ್ಲಿಯೂ ಪ್ರವಹಿಸುತ್ತಿರಲು, ಗೋದಾದೇವಿಯು ತನ್ನನ್ನು ನಾಯಕಿಯನ್ನಾಗಿ ನೆನೆದು ಪರಮಾತ್ಮನ ವಿಷಯದಲ್ಲಿ ಭಕ್ತಿಭರಿತವಾಗಿ ಹಾಡಿರುವ ಈ ''ನಾಚ್ಚಿಯಾರ್‌ತಿರುಮೊಳಿ'' ಎಂಬ ದಿವ್ಯಪ್ರಬಂಧವು ಒಂದು ಉನ್ನತವಾದ ಕೃತಿಯಾಗಿದೆ.

ಈ ''ತಿರುಪ್ಪಾವೈ'' ಮತ್ತು ''ನಾಚ್ಚಿಯಾರ್ ತಿರುಮೊಳಿ'' ಎಂಬ ಈ ಎರಡು ದಿವ್ಯಪ್ರಬಂಧಗಳಿಂದಲೂ ಗೋದಾದೇವಿಯು ಪರಭಕ್ತಿ, ಪರಜ್ಞಾನಗಳಿಂದ ಕೂಡಿ ತಾನು ಶ್ರೀಕೃಷ್ಣಪರಮಾತ್ಮನನ್ನು ಅನುಭವಿಸಿದ ಪ್ರಕಾರವನ್ನು ಜಗತ್ತಿಗೆ ತಿಳಿಸಿದ್ದಾಳೆ ಮತ್ತು ಸರ್ವದಾ ಭಗವನ್ನಾಮಸಂಕೀರ್ತನೆ ಮಾಡಿ ಭಗವದನುಭವ ಪಡೆಯುವಂತೆ ಎಲ್ಲರಿಗೂ ಉಪದೇಶ ನೀಡಿದ್ದಾಳೆ.

ಶ್ರೀಯೈನಮಃ ಶ್ರೀನಿವಾಸಾಯ ನಮಃ

ಶ್ರೀಮತೇ ರಾಮಾನುಜಾಯ ನಮಃ

# ಶ್ರೀ ಆಂಡಾಳ್ ತಿರುಪ್ಪಾವೈ ತನಿಯನ್‌ಗಳು

(ಶ್ರೀ ಪರಾಶರ ಭಟ್ಟರು ಅನುಗ್ರಹಿಸಿದುದು)

ನೀಳಾತುಂಗಸ್ತನಗಿರಿತಟೀ ಸುಪ್ತಮುದ್ಬೋಧ್ಯ ಕೃಷ್ಣಂ
ಪಾರಾರ್ಥ್ಯಂ ಸ್ವಂ ಶ್ರುತಿಶತಶಿರಸ್ಸಿದ್ಧ ಮಧ್ಯಾಪಯಂತೀ
ಸ್ವೋಚ್ಛಿಷ್ಟಾಯಾಂ ಸ್ರಜಿ ನಿಗಳಿತಂ ಯಾ ಬಲಾತ್ಕೃತ್ಯ ಭುಂಕ್ತೇ
ಗೋದಾ ತಸ್ಯೈ ನಮ ಇದಮಿದಂ ಭೂಯ ಏವಾಸ್ತು ಭೂಯಃ ।

(ಶ್ರೀ ಉಯ್ಯಕ್ಕೊಂಡಾರ್ ಅನುಗ್ರಹಿಸಿದುದು)

ಅನ್ನವಯಲ್ ಪುದುವೈಯಾಂಡಾಳ್ ! ಅರಂಗರ್ಕು
ಪನ್ನು ತಿರುಪ್ಪಾವೈ ಪಲ್‌ಪದಿಯಮ್ - ಇನ್ನಿಶೈಯಾಲ್
ಪಾಡಿಕ್ಕೊಡುತ್ತಾಳ್ ನರ್ಪಾಮಲೈ ಪೂಮಾಲೈ
ಶೂಡಿಕ್ಕೊಡುತ್ತಾಳೈ ಚೊಲ್ಲು.

ಶೂಡಿಕ್ಕೊಡುತ್ತ ಶುಡರ್ ಕೊಡಿಯೇ ತೊಲ್‌ಪಾವೈ
ಪಾಡಿಯರುಳವಲ್ಲ ಪಲ್‌ವಳೈಯಾಯ್ - ನಾಡಿ ನೀ
ವೇಂಗಡವರ್ಕೆನ್ನೈ ವಿದಿಯೆನ್ರ ವಿಮ್ಮಾತ್ತಮ್
ನಾಂ ಕಡವಾ ವಣ್ಣಮೇ ನಲ್‌ಹು.

ಆಂಡಾಳ್ ತಿರುವಡಿಹಳೇಶರಣಂ

# ಉಪೋದ್ಘಾತ

ತಿರುಪ್ಪಾವೈ ಗೋದಾದೇವಿಯು ರಚಿಸಿರುವ ಒಂದು ಉತ್ತಮವಾದ ಕೃತಿ. ಇವಳು, ವಿಷ್ಣುಚಿತ್ತರೆಂದು ಹೆಸರು ಪಡೆದ ಪೆರಿಯಾಳ್ವಾರ್ರವರ ಸಾಕುಮಗಳು. ಇವಳಿಗೆ ಬಾಲ್ಯದಿಂದಲೇ ಭಗವಂತನಲ್ಲಿ ಅಪಾರವಾದ ಭಕ್ತಿಯಿದ್ದಿತು. ಪ್ರಾಪ್ತವಯಸ್ಕಳಾದಮೇಲೆ ಪೆರಿಯಾಳ್ವಾರ್ರಿಗೆ ಇವಳ ವಿವಾಹದ ಚಿಂತೆ ತಲೆದೋರಿತು. ಆದರೆ ಇವಳು ಯಾವ ಮಾನವನನ್ನೂ ಮದುವೆಯಾಗಲು ಒಪ್ಪಲಿಲ್ಲ. ಭಗವಂತನಲ್ಲೇ ನೆಟ್ಟ ಮನಸ್ಸುಳ್ಳವಳಾಗಿದ್ದುದರಿಂದ ಅವನೇ ತನಗೆ ಪತಿ ಎಂದು ಹೇಳುತ್ತಿದ್ದಳು. ಕೊನೆಗೆ ಶ್ರೀ ರಂಗನಾಥನನ್ನುವರಿಸಿದಳೆಂದು ಪುರಾಣ ಗ್ರಂಥಗಳು ತಿಳಿಸುತ್ತವೆ. ಇವಳು ತಮಿಳಿನಲ್ಲಿ 'ತಿರುಪ್ಪಾವೈ' ಮತ್ತು 'ನಾಚ್ಚಿಯಾರ್‌ತಿರುಮೊಳಿ' ಎಂಬ ಎರಡು ದಿವ್ಯ ಪ್ರಬಂಧಗಳನ್ನು ರಚಿಸಿದ್ದಾಳೆ. ತಿರುಪ್ಪಾವೈಯಲ್ಲಿ ಮೂವತ್ತು ಪಾಶುರಗಳಿವೆ. ಇದರಲ್ಲಿ ಗೋದಾದೇವಿಯು ಭಗವಂತನಲ್ಲಿ ಶರಣಾಗತಿ ಮಾಡಿ ಅವನನ್ನು ಹೊಂದುವಂತೆ ಎಲ್ಲರಿಗೂ ಉಪದೇಶ ನೀಡಿದ್ದಾಳೆ.. ಈ ಮೂವತ್ತು ಪಾಶುರಗಳಲ್ಲಿ ಸಕಲಶಾಸ್ತ್ರಾರ್ಥಗಳನ್ನೂ, ಮುಖ್ಯವಾಗಿ ಪ್ರಪತ್ತಿಶಾಸ್ತ್ರವನ್ನೂ ಪ್ರತಿಪಾದಿಸಿದ್ದಾಳೆ.

**ಗೋಪಿಗಳ ಅನುಕಾರ**

ತಿರುಪ್ಪಾವೈಯ ಅರ್ಥವಿಶೇಷಾರ್ಥಗಳನ್ನು ತಿಳಿಯುವುದಕ್ಕೆ ಹಿನ್ನೆಲೆಯಾಗಿ ಭಾಗವತದ ಒಂದು ಪ್ರಸಂಗವನ್ನು ಸ್ವಲ್ಪಮಟ್ಟಿಗೆ ಅರಿಯಬೇಕು. ಕೃಷ್ಣಾವತಾರದ ಕಾಲದಲ್ಲಿ ಮಳೆ ಬರುವಂತೆಮಾಡುವ ವ್ಯಾಜದಲ್ಲಿ ಗೋಪಿಯರೆಲ್ಲರೂ ಸೇರಿ ಒಂದು ವ್ರತವನ್ನು ಆಚರಿಸಿದರೆಂದೂ, ಕೊನೆಗೆ ಅವರು ಶ್ರೀ ಕೃಷ್ಣಪರಮಾತ್ಮನನ್ನೇ ಹೊಂದಿದರೆಂದೂ ಭಾಗವತದಲ್ಲಿ ವರ್ಣನೆ ಇದೆ. ಅದನ್ನು ಅರಿತ ಗೋದಾದೇವಿಯು ಗೋಪಿಯರನ್ನು ಅನುಕಾರ ಮಾಡಿ, ಮಾರ್ಗಳಿ

ನೀರಾಟ್ಟವೆಂಬ ಒಂದು ವ್ರತವನ್ನು ಆಚರಿಸಿದಳು. ಗೋಪಿಯರ ಕಾಲದಲ್ಲಿ ಶ್ರೀ ಕೃಷ್ಣಪರಮಾತ್ಮನು ಅವತರಿಸಿದ್ದುದರಿಂದ, ಅವರಿಗೆ ಅವನು ಸುಲಭವಾಗಿ ಲಭಿಸಿದನು. ಆದರೆ ಶ್ರೀ ಕೃಷ್ಣಾವತಾರವಾದಮೇಲೆ ಜನಿಸಿದ ಗೋದಾದೇವಿಗೆ ಅವನನ್ನು ಹೊಂದುವುದು ದುರ್ಲಭವಾಗಿದ್ದಿತು. ಆದ್ದರಿಂದ ಅವಳು ಗೋಪಿಯರನ್ನು ಅನುಕಾರ ಮಾಡಿ, ನೀರಾಟ್ಟವೆಂಬ ಭಗವನ್ನಾಮ ಸಂಕೀರ್ತನೆ ಮಾಡುವ ಉತ್ಸವವನ್ನು ಪ್ರಾರಂಭಿಸಿದಳು. ತನ್ನನ್ನು ಗೋಪಿಯರ ಸ್ಥಾನದಲ್ಲಿ ಇರಿಸಿ, ಶ್ರೀವಿಲ್ಲಿಪುತ್ತೂರನ್ನೇ ಆಯರ್‌ಪ್ಪಾಡಿಯಾಗಿ (ನಂದಗೋಕುಲ ವನ್ನಾಗಿ)ಯೂ, ಅಲ್ಲಿಯ ದೇವಸ್ಥಾನವನ್ನೇ ಶ್ರೀ ಕೃಷ್ಣನ ಅರಮನೆಯನ್ನಾಗಿಯೂ, ಅಲ್ಲಿನ ವಟಪತ್ರಶಾಯಿಯ ಮೂರ್ತಿಯನ್ನೇ ಶ್ರೀ ಕೃಷ್ಣಪರಮಾತ್ಮನನ್ನಾಗಿಯೂ ಭಾವಿಸಿ, ಮಾನಸಿಕವಾಗಿ ಭಗವಂತನನ್ನೇ ಆಶ್ರಯಿಸಿ ಮೂವತ್ತು ದಿವಸ ಭಗವನ್ನಾಮ ಸಂಕೀರ್ತನೆಯನ್ನೂ ಭಗವದ್ಗುಣಾನುಭವರೂಪವಾದ ಈ ವ್ರತವನ್ನೂ ಆಚರಿಸಿದಳು. ಭಗವನ್ನಾಮ ಸಂಕೀರ್ತನೆಯನ್ನೂ ಭಗವತ್ ಕೈಂಕರ್ಯವನ್ನೂ ಉದ್ದೇಶವಾಗಿ ಇಟ್ಟುಕೊಂಡು ಆಚರಿಸಿದ ಈ ವ್ರತವೇ ತಿರುಪ್ಪಾವೈಯ ರಚನೆಗೆ ಕಾರಣವಾಗಿದೆ. ತಿರುಪ್ಪಾವೈಯಲ್ಲಿ ಗೋದಾದೇವಿಯು ಎಲ್ಲರನ್ನೂ ಈ ವ್ರತದಲ್ಲಿ ಭಾಗಿಗಳಾಗುವಂತೆ ಕರೆಯುತ್ತಾಳೆ, ಎಲ್ಲರೊಂದಿಗೂ ವಟಪತ್ರಶಾಯಿಯ ದೇವಸ್ಥಾನಕ್ಕೆ ಹೋಗಿ, ಪರಮಾತ್ಮನ ನಾಮ, ರೂಪ, ಗುಣ, ವಿಭವಾದಿಗಳನ್ನು ವರ್ಣಿಸಿ ಪರಮಾತ್ಮನಿಗೆ ಮಂಗಳ ಹಾಡಿದ್ದಾಳೆ, ತಾನು ಆಚರಿಸುವ ವ್ರತದ ನೀತಿ ನಿಯಮಗಳನ್ನು ವರ್ಣಿಸಿದ್ದಾಳೆ ಮತ್ತು ಪರಮ ಪುರುಷಾರ್ಥವಾದ ಭಗವತ್‌ಕೈಂಕರ್ಯ ಪ್ರಾಪ್ತಿಗಾಗಿ ಭಗವಂತನನ್ನೇ ಪ್ರಾರ್ಥಿಸಿ ಅವನಲ್ಲಿ ಶರಣಾಗತಿ ಮಾಡಿದ್ದಾಳೆ.

ಗೋಪಿಯರಾದರೋ ಪರಮಭಕ್ತರಾಗಿದ್ದರು. ಅವರು ಕೇವಲ ಭಕ್ತಿಯೋಗ ನಿಷ್ಠರಾಗಿ ಮಾತ್ರ ಇರಲಿಲ್ಲ. ಕರ್ಮಯೋಗ ನಿರತರೂ ಆಗಿದ್ದರು. ಮುರಾರಿ ಪಾದಾರ್ಪಿತಚಿತ್ತವೃತ್ತಿ ಉಳ್ಳವರಾಗಿದ್ದರು. ಅಂದರೆ ''ಮನ್ಮನಾಭವ'' ಎಂದು

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಹೇಳಿರುವಂತೆ ಭಗವಂತನಲ್ಲೇ ನೆಟ್ಟ ಮನಸ್ಸುಳ್ಳವರಾಗಿದ್ದರು. ಅದರೊಂದಿಗೆ ಸತತವಾಗಿ ಕರ್ಮಮಾಡುತ್ತಲೇ ಇದ್ದರು. ಕೈಯಲ್ಲಿ ಹಾಲು ಕರೆಯುವುದು, ಮೊಸರು ಕಡೆಯುವುದು ಮುಂತಾದ ಅವರ ದಿನ ನಿತ್ಯದ ಕರ್ತವ್ಯ ಕರ್ಮಗಳನ್ನು ಮಾಡುತ್ತಲೇ ಇದ್ದರು. ಆದರೆ ಅವರ ಮನಸ್ಸು ಪರಮಾತ್ಮನ ಚಿಂತನೆಯಲ್ಲಿ ಇರುತ್ತಿತ್ತು. ಒಬ್ಬ ಗೋಪಿಯು ಮೊಸರು ಮಾರುವಾಗ ಗೋವಿಂದ, ದಾಮೋದರ, ಮಾಧವ ಎಂದು ಕೂಗುತ್ತಾ ಮೊಸರು ಮಾರುತ್ತಿದ್ದಳಂತೆ. ಅವಳ ಮನಸ್ಸು ಭಗವಂತನ ಚಿಂತನೆಯಲ್ಲಿದ್ದರೂ, ಅವಳ ಕೈ ಮೊಸರು ಪಾತ್ರೆಯನ್ನು ಹಿಡಿದಿತ್ತು. ಅವಳು ಮೊಸರು ಮಾರುವ ಕರ್ಮ ಮಾಡುತ್ತಲೇ ಇದ್ದಳು. ಹೀಗೆ ಗೋಪಿಯರೆಲ್ಲರೂ ವೈರಾಗ್ಯದಿಂದಲೂ, ಭಕ್ತಿಯಿಂದಲೂ, ಕರ್ಮ ಮಾಡುತ್ತಿದ್ದರು. ಅವರ ಅನುಕಾರ ಮಾಡಿದ ಗೋದಾದೇವಿಯು ಪ್ರತಿ ದಿನವೂ ಶ್ರೀವಿಲ್ಲಿಪುತ್ತೂರಿನ ವಟಪತ್ರಶಾಯಿ ದೇವರಿಗೆ ಪುಷ್ಪಮಾಲೆಗಳನ್ನು ಕಟ್ಟಿ ಸಮರ್ಪಿಸುತ್ತಿದ್ದಳು ಮತ್ತು ಅದರೊಂದಿಗೆ ಭಗವಂತನಲ್ಲಿ ಭಕ್ತಿಯುತ ಪ್ರಾರ್ಥನೆಯಾಗಿ ರೂಪುಗೊಂಡ ತನ್ನ ಕವಿತೆಗಳನ್ನೂ ಸಮರ್ಪಿಸುತ್ತಿದ್ದಳು. ಹೀಗೆ ಪೂಮಾಲೆ ಮತ್ತು ಪಾಮಾಲೆ ಕೈಂಕರ್ಯಮಾಡಿ, ಕರ್ಮ ಜ್ಞಾನ ಭಕ್ತಿಯೋಗಗಳನ್ನು ಆಚರಿಸುತ್ತಾ ಕೊನೆಗೆ ಪರಮಾತ್ಮನಲ್ಲಿ ಸಂಪೂರ್ಣವಾಗಿ ಶರಣಾಗತಿ ಮಾಡಿದ್ದಾಳೆ. ಇದನ್ನೆಲ್ಲಾ ತಿರುಪ್ಪಾವೈಯಲ್ಲಿ ವರ್ಣಿಸಿದ್ದಾಳೆ ಮತ್ತು ಜಗತ್ತಿನ ಮಾನವರಿಗೆ ಶರಣಾಗತಿ ತತ್ವವನ್ನು ಉಪದೇಶ ಮಾಡಿದ್ದಾಳೆ.

**ತಿರುಪ್ಪಾವೈಯ ವಿಶೇಷಾರ್ಥ :**

ನಮ್ಮ ಪೂರ್ವಾಚಾರ್ಯರುಗಳು ತಿರುಪ್ಪಾವೈಗೆ ಅನೇಕ ವ್ಯಾಖ್ಯಾನಗಳನ್ನು ರಚಿಸಿ ಇದರ ವಾಕ್ಯಾರ್ಥ ಮತ್ತು ವಿಶೇಷಾರ್ಥಗಳನ್ನು ಬಹಳ ಸ್ವಾರಸ್ಯವಾಗಿ ಪ್ರಕಾಶ ಪಡಿಸಿದ್ದಾರೆ. ಇದರೊಳಗೆ ಅಡಗಿರುವ ತತ್ವಾರ್ಥಗಳನ್ನು ಸ್ವಾಪದೇಶಾರ್ಥವೆಂದು ಕರೆದಿದ್ದಾರೆ. ತಿರುಪ್ಪಾವೈಯ ಪ್ರತಿಯೊಂದು ಪಾಶುರದಲ್ಲೂ ಎರಡು ವಿಧವಾದ ಅರ್ಥಗಳು ತಿಳಿದು ಬರುತ್ತವೆ. ಪಾಶುರಗಳಲ್ಲಿ ಸ್ಪಷ್ಟವಾಗಿ ಕಾಣುವ ವಾಕ್ಯಾರ್ಥ

ಒಂದು ಮತ್ತು ಅದರೊಳಗೆ ಅಡಗಿಕೊಂಡಿರುವ ವಿಶೇಷಾರ್ಥ ಮತ್ತೊಂದು. ತಿರುಪ್ಪಾವೈಯ ಸರ್ವೋದಯ ಸಂದೇಶ ಈ ತತ್ವಾರ್ಥದಲ್ಲಿ ಅಡಗಿದೆ. ತಿರುಪ್ಪಾವೈಯ ಪಾಶುರಗಳಲ್ಲಿ ಅನೇಕ ಕಡೆ ಬರುವ ''ನೀರಾಟ್ಟ'' ಮತ್ತು ''ಪರೈ'' ಎಂಬ ಪದಗಳ ಅರ್ಥ ವಿಶೇಷಾರ್ಥಗಳನ್ನು ಚೆನ್ನಾಗಿ ಪರಿಶೀಲಿಸಿದರೆ ಅದು ವ್ಯಕ್ತವಾಗುತ್ತದೆ.

''ನೀರಾಟ್ಟ'' -

''ನೀರಾಟ್ಟ'' ಎಂಬ ಪದಕ್ಕೆ ಸ್ನಾನ ಮಾಡುವುದು ಎಂಬುದು ಸಾಮಾನ್ಯವಾದ ಅರ್ಥ. ಗೋದಾದೇವಿಯು ''ನೀರಾಡ ಪ್ಪೋದುವೀರ್ ಪೋದುಮಿನೋ'' ಎಂದು ಮೊಟ್ಟಮೊದಲನೆಯ ಪಾಶುರದಲ್ಲಿ ಸ್ನಾನ ಮಾಡಲು ಇಚ್ಛೆ ಉಳ್ಳವರೆಲ್ಲರೂ ಬನ್ನಿರಿ ಎಂದು ಕರೆಯುತ್ತಾಳೆ. ಅನಂತರ ಮೂರನೆಯ ಪಾಶುರದಲ್ಲಿ 'ನಾಂಗಳ್ ನಂ ಪಾವೈಕ್ಕು ಶಾತ್ತಿ ನೀರಾಡಿನಾಲ್'' ಎಂದೂ; ನಾಲ್ಕನೆಯ ಪಾಶರದಲ್ಲಿ 'ನಾಂಗಳುಂ ಮಾರ್ಹಳಿ ನೀರಾಡ ಪೆಯ್‌ದಿಡಾಯ್' - ಎಂದೂ ತಾವೆಲ್ಲರೂ ಸ್ನಾನ ಮಾಡಲು ಮಳೆ ಸುರಿಸುವಂತೆ ವರುಣ ದೇವನನ್ನು ಪ್ರಾರ್ಥಿಸಿದ್ದಾಳೆ. ಇದನ್ನೆಲ್ಲಾ ನೋಡಿದರೆ ಗೋದಾ ದೇವಿಯು ಕೇವಲ ಸ್ನಾನ ಮಾಡುವುದಕ್ಕಾಗಿಯೇ ಎಲ್ಲರನ್ನೂ ಎಬ್ಬಿಸಿ ಕರೆದುಕೊಂಡು ಹೋಗುವಂತೆ ಸ್ಪಷ್ಟವಾಗಿ ಕಾಣುತ್ತದೆ. ಇದೇ ಅವಳ ಮುಖ್ಯ ಗುರಿಯಾಗಿದ್ದರೆ ಅವರೆಲ್ಲರೂ ಒಂದು ತಟಾಕಕ್ಕೆ ಹೋಗಿ ಸ್ನಾನ ಮಾಡಿರಬೇಕಲ್ಲವೇ ! ಆದರೆ ಅವರೆಲ್ಲರೂ ಯಾವ ತಟಾಕಕ್ಕೂ ಹೋಗಿ ಸೇರಿ ಸ್ನಾನಮಾಡಿದುದಾಗಿ ಯಾವ ಪಾಶುರದಲ್ಲೂ ಹೇಳಿಲ್ಲ. ಎಲ್ಲರೂ ಸೇರಿ ಭಗವನ್ನಾಮವನ್ನು ಹಾಡುತ್ತಾ ನಂದಗೋಪಾಲನ ಅರಮನೆಗೆ ಹೋದುದಾಗಿಯೂ, ಅಲ್ಲಿ ಬಾಗಿಲು ಕಾಯುವವರನ್ನೂ, ನಂದ ಗೋಪಾಲನನ್ನೂ, ಯಶೋದೆಯನ್ನೂ, ಶ್ರೀ ಕೃಷ್ಣನನ್ನೂ, ಬಲರಾಮನನ್ನೂ ಎಬ್ಬಿಸಿ, ನಪ್ಪಿನ್ನೈಯನ್ನೂ ಶ್ರೀ ಕೃಷ್ಣನನ್ನೂ ದರ್ಶನ ಮಾಡಿದುದಾಗಿಯೂ; ತಮಗೆ ಬೇಕಾದದ್ದು ಭಗವತ್ಕೈಂಕರ್ಯವೇ ಹೊರತು ಮತ್ತೆ ಯಾವುದೂ ಅಲ್ಲವೆಂದೂ,

ಅದನ್ನು ತಮಗೆ ಅನುಗ್ರಹಿಸಬೇಕೆಂದು ಶ್ರೀ ಕೃಷ್ಣಪರಮಾತ್ಮನನ್ನು ಪ್ರಾರ್ಥಿಸಿರುವುದಾಗಿಯೂ ಈ ಪಾಶುರಗಳು ಸ್ಪಷ್ಟವಾಗಿ ತಿಳಿಸುತ್ತವೆ.

ಆದ್ದರಿಂದ 'ನೀರಾಡ ಪೋದುವೀರ್'' - 'ಮಾರ್ಹಳಿ ನೀರಾಡ' 'ಕುಳ್ಳಿಕ್ಕುಳಿರಕ್ಕುಡೈಂದ್ ನೀರಾಡಾದೆ' - ಎಮ್ಮೈನೀರಾಟ್ಟು' - 'ಮಾರ್ಹಳಿ ನೀರಾಡುವಾನ್'' ಎಂದೆಲ್ಲಾ ತಿರುಪ್ಪಾವೈಯಲ್ಲಿ ಗೋದಾದೇವಿಯು ಹೇಳಿರುವ 'ನೀರಾಟ್ಟ' ಎಂಬ ಪದಕ್ಕೆ ಭಗವತ್‌ಕಲ್ಯಾಣಗುಣ ಸಾಗರದಲ್ಲಿ ಮುಳುಗಿ ಭಗವದನುಭವ ಪಡೆಯುವುದು ಎಂಬುದೇ ವಿಶೇಷಾರ್ಥ. ಹೇಗೆ ಬಿಸಿಲು ತಾಪದಲ್ಲಿ ಬೆಂದಿರುವವನು ನದಿಯಲ್ಲಿ ಮುಳುಗಿ ಸ್ನಾನಮಾಡಿ ಶಾರೀರಿಕ ತಾಪವನ್ನು ಕಳೆದುಕೊಳ್ಳುತ್ತಾನೆಯೋ, ಅದೇ ರೀತಿ ಸಾಂಸಾರಿಕ ತಾಪದಲ್ಲಿ ಬೆಂದಿರುವ ಚೇತನರು ಭಗವತ್ ಕಲ್ಯಾಣಗುಣ ಸಾಗರದಲ್ಲಿ ಮುಳುಗಿ ಸಕಲ ಪಾಪಗಳನ್ನೂ ತಾಪತ್ರಯಗಳನ್ನೂ ಕಳೆದುಕೊಂಡು, ಭಗವದನುಭವವೆಂಬ ಮೋಕ್ಷಾನಂದವನ್ನು ಪಡೆಯಲಿ ಎಂದು ಗೋದಾದೇವಿಯು ಎಲ್ಲರನ್ನೂ ಕರೆಯುತ್ತಾಳೆ. ಶ್ರೀ ಕುಲಶೇಖರ ಆಳ್ವಾರ್ರವರು 'ಹರಿಸರಸಿ ವಿಗಾಹ್ಯ' - ಅಂದರೆ ನಾರಾಯಣನೆಂಬ ಸರೋವರದಲ್ಲಿ ಮುಳುಗಿ ನಿಮ್ಮ ತಾಪತ್ರಯಗಳನ್ನೆಲ್ಲಾ ನಿವಾರಣೆ ಮಾಡಿಕೊಳ್ಳಿರಿ ಎಂದು ಉಪದೇಶ ಮಾಡಿದ್ದಾರೆ. ಭಗವನ್ನಾಮ ಸಂಕೀರ್ತನೆ ಮಾಡಿ, ಭಗವತ್ ಕಲ್ಯಾಣ ಗುಣಸಾಗರದಲ್ಲಿ ಮುಳುಗಿ, ಮಾನಸಿಕ ಮಲಗಳನ್ನೆಲ್ಲಾ ಕಳೆದುಕೊಂಡು, ಮಾನಸಿಕವಾಗಿ ಭಗವದನುಭವ ಪಡೆಯುವುದೇ ನೀರಾಟ್ಟವು ಅದು ಕೇವಲ ಶಾರೀರಿಕ ಸ್ನಾನವಲ್ಲ, ಮಾನಸಿಕ ಸ್ನಾನವೆನ್ನಬಹುದು.

**''ಪರೈ'' -**

''ಪರೈ'' ಎಂಬ ಪದಕ್ಕೆ ಗೋಕುಲದ ಗೋಪಿಗಳು ತಮ್ಮ ವ್ರತಕ್ಕೆ ಉಪಯೋಗಿಸುವ ಒಂದು ವಾದ್ಯ ಎಂಬುದು ಸಾಮಾನ್ಯವಾದ ಅರ್ಥ. 'ನಮಕ್ಕೇ ಪರೈ ತರುವಾನ್'' 'ಪಾಡಿಪರೈಗೊಂಡು' - 'ಇರೈವಾ ನೀತಾರಾಯ್ ಪರೈ' -

ಎಂದು ಗೋದಾದೇವಿಯು ತನ್ನ ಮಾರ್ಹಳಿ ನೀರಾಟ್ಟವೆಂಬ ವ್ರತಕ್ಕೆ 'ಪರೈ' ಎಂಬ ವಾದ್ಯಬೇಕೆಂದು ಮೊದಲ ಪಾಶುರಗಳಲ್ಲೆಲ್ಲಾ ಪ್ರಾರ್ಥಿಸಿದ್ದಾಳೆ. ಆದರೆ ಕೊನೆಗೆ 29ನೇ ಪಾಶುರದಲ್ಲಿ 'ಇತ್ತೈ ಪರೈಕೊಳ್ವಾನ್ ಅನ್ರುಕಾಣ್ ಗೋವಿಂದ' -ಅಂದರೆ ತಮಗೆ ಬೇಕಾದುದು ಈ ಪರೈ ಎಂಬ ವಾದ್ಯವಲ್ಲ; 'ಎತ್ತೈಕ್ಕುಂ ಏಳೇಳು ಪಿರವಿಕ್ಕುಂ ಉನ್‌ತನ್ನೋಡು ಉತ್ತೋಮೇಯಾವೋಂ ಉನಕ್ಕೇ ನಾಂ ಆಳ್‌ಚ್ಚೆಯ್‌ವೋಂ' - ಅಂದರೆ ಎಂದೆಂದಿಗೂ ಏಳೇಳು ಜನ್ಮದಲ್ಲೂ ಭಗವಂತನ ದಿವ್ಯ ಸಂಬಂಧ ಜ್ಞಾನ ಹೊಂದಿ ಅವನಿಗೆ ಕೈಂಕರ್ಯ ಮಾಡುವುದೇ ತಮಗೆ ಬೇಕಾದ ಪುರುಷಾರ್ಥವು, ಅದನ್ನು ಅನುಗ್ರಹಿಸಬೇಕೆಂದೂ; ಮತ್ತು 'ಮತ್ತೈ ನಂಕಾಮಂಗಳ್ ಮಾತ್ತ್' - ಅಂದರೆ ಅದಕ್ಕೆ ವಿರೋಧಿಯಾದ ತಮ್ಮ ಇತರ ಸ್ವಾರ್ಥ ಆಸೆ ಆಕಾಂಕ್ಷೆಗಳನ್ನೆಲ್ಲಾ ಪರಿವರ್ತಿಸಬೇಕೆಂದೂ ಸ್ಪಷ್ಟವಾಗಿ ಪ್ರಾರ್ಥಿಸಿದ್ದಾಳೆ. ಆದ್ದರಿಂದ ಪರೈ - ಎಂಬ ಪದಕ್ಕೆ ಭಗವದನುಭವ ದಿಂದುಂಟಾದ ಪ್ರೀತಿಯುತ ಕೈಂಕರ್ಯ ಎಂಬುದೇ ವಿಶೇಷಾರ್ಥ. ಇದನ್ನು ಗೋದಾದೇವಿಯೇ ತಿರುಪ್ಪಾವೈಯಲ್ಲಿ ಸ್ಪಷ್ಟವಾಗಿ ವಿವರಿಸಿ ತಿಳಿಸಿದ್ದಾಳೆ. ಭಗವದನುಭವವೇ ನೀರಾಟ್ಟವು ಮತ್ತು ಭಗವದನುಭವಜನಿತ ಪ್ರೀತಿಕಾರಿತ ಕೈಂಕರ್ಯವೇ ಪರೈ ಎಂಬ ಪುರುಷಾರ್ಥವು.

**ನೀರಾಟ್ಟ =**

1. ಸ್ನಾನ ಮಾಡುವುದು - ಶಾರೀರಿಕ ತಾಪಗಳನ್ನೂ ಕೊಳೆಗಳನ್ನೂ ಹೋಗಲಾಡಿಸಿಕೊಳ್ಳುವುದು ಎಂಬುದು ಸಾಮಾನ್ಯ ಅರ್ಥ -

2. ಮಾನಸಿಕ ಸ್ನಾನ - ಭಗವನ್ನಾಮ ಸಂಕೀರ್ತನೆ ಮಾಡುತ್ತಾ ಭಗವಂತನ ಕಲ್ಯಾಣ ಗುಣ ಸಾಗರದಲ್ಲಿ ಮುಳುಗಿ, ಮಾನಸಿಕ ಕೊಳೆಗಳನ್ನೂ ತಾಪಗಳನ್ನೂ ಕಳೆದುಕೊಂಡು ಭಗವದನುಭವ ಪಡೆಯುವುದು - ಎಂಬುದು ವಿಶೇಷಾರ್ಥ.

**ಪರೈ =**

1. ಒಂದು ವಾದ್ಯ - ಎಂಬುದು ಸಾಮಾನ್ಯ ಅರ್ಥ

2. ಭಗವತ್‌ಕೈಂಕರ್ಯಪುರುಷಾರ್ಥ - ಎಂಬುದು ವಿಶೇಷಾರ್ಥ. ಭಗವಂತನ ಸಂಬಂಧದ ದಿವ್ಯಜ್ಞಾನ ಹೊಂದಿದವರಾಗಿ ಇತರ ಲೌಕಿಕ ಆಸೆ ಆಕಾಂಕ್ಷೆಗಳನ್ನೆಲ್ಲಾ ಅವನ ಕಡೆಗೆ ತಿರುಗಿಸಿ, ಅವನಿಗೆ ಪ್ರೀತಿಯಿಂದಲೂ ಸಂತೋಷದಿಂದಲೂ ಕೈಂಕರ್ಯ ಮಾಡುವುದು - ಅಂದರೆ ಭಗವದನುಭವಜನಿತ ಪ್ರೀತಿಕಾರಿತ ಕೈಂಕರ್ಯ ಎಂಬುದು ವಿಶೇಷಾರ್ಥ.

**ತಿರುಪ್ಪಾವೈಯಲ್ಲಿ ಗೋದಾದೇವಿಯು ಸರ್ವರಿಗೂ ನೀಡಿರುವ ಸಂದೇಶ**

'ನೀರಾಟ್ಟ' ಮತ್ತು 'ಪರೈ' ಎಂಬ ಪದಗಳ ವಿಶೇಷಾರ್ಥವನ್ನು ಪ್ರಧಾನ ಆಧಾರವಾಗಿ ಇಟ್ಟುಕೊಂಡು ತಿರುಪ್ಪಾವೈಯ ಮೂವತ್ತು ಪಾಶುರಗಳ ಅರ್ಥವನ್ನು ಅನುಸಂಧಾನ ಮಾಡಿದರೆ, ಆಗ ಅದರಲ್ಲಿ ಅಡಗಿರುವ ತತ್ವಾರ್ಥಗಳು ಪ್ರಕಾಶವಾಗಿ ಅದರ ಸರ್ವೋದಯ ಸಂದೇಶದ ಅರಿವಾಗುತ್ತದೆ.

ಒಟ್ಟಿನಲ್ಲಿ ತಿರುಪ್ಪಾವೈಯಲ್ಲಿ ಗೋದಾದೇವಿಯು ಸರ್ವಮಾನವರನ್ನೂ ಅಜ್ಞಾನ ನಿದ್ರೆಯಿಂದ ಎಚ್ಚರಗೊಳಿಸಿ, ಮಾರ್ಹಳಿ ನೀರಾಟ್ಟ ಎಂಬ ತನ್ನ ವ್ರತಾಚರಣೆಗೆ ಕರೆಯುತ್ತಾಳೆ. ಭಗವನ್ನಾಮ ಸಂಕೀರ್ತನೆಯ ಮೂಲಕ ಭಗವಂತನ ಕಲ್ಯಾಣಗುಣಸಾಗರದಲ್ಲಿ ಮುಳುಗಿ ಭಗವದನುಭವ ಪಡೆಯೋಣ; ಮತ್ತು ಭಗವತ್ ಕೈಂಕರ್ಯ ಪ್ರಾಪ್ತಿಗಾಗಿ ಭಗವಂತನನ್ನೇ ಪ್ರಾರ್ಥಿಸಿ ಅವನಲ್ಲಿ ಶರಣಾಗತಿ ಮಾಡೋಣ ಬನ್ನಿರಿ ಎಂದು ಕರೆಯುತ್ತಾಳೆ. ಗೋಪಿಗಳ ಕಾಲದಲ್ಲಿ ಶ್ರೀ ಕೃಷ್ಣ ಪರಮಾತ್ಮನು ಅವತರಿಸಿ ಗೋಕುಲದಲ್ಲಿ ಪ್ರತ್ಯಕ್ಷವಾಗಿ ಇದ್ದುದರಿಂದ ಗೋಪಿಗಳೆಲ್ಲರೂ ನಂದಗೋಪಾಲನ ಅರಮನೆಗೆ ಹೋಗಿ ಶ್ರೀಕೃಷ್ಣನನ್ನು ಪಡೆದರು. ಪರಮಭಕ್ತಳಾದ ಗೋದಾದೇವಿಯಾದರೋ ಗೋಪಿಯರ ಅನುಕಾರಮಾಡಿ ಪರಮಾತ್ಮನನ್ನು ಪಡೆದಳು. ಆದರೆ ಇಂದು ನಾವು ಹೋಗುವುದಾದರೂ ಎಲ್ಲಿಗೆ ? ಶ್ರೀಕೃಷ್ಣ ಪರಮಾತ್ಮನು ಇಂದು ಎಲ್ಲಿದ್ದಾನೆ ? ನಮ್ಮ ಇಂದ್ರಿಯಗಳ ಅನುಭವಕ್ಕೆ ನಿಲುಕದ ಅವನನ್ನು ಹೊಂದುವುದು ಹೇಗೆ?

ಅವನೇ ನಮಗೆ ಲಭಿಸದ ಮೇಲೆ ಅವನಿಗೆ ನಾವು ಪ್ರೀತಿಯುತ ಕೈಂಕರ್ಯ ಮಾಡುವುದಾದರೂ ಹೇಗೆ? ಭಕ್ತಿಶಿರೋಮಣಿಯಾದ ಗೋದಾದೇವಿಯ ಹಾಗೆ ಗೋಪಿಯರ ಅನುಕಾರ ಮಾಡುವುದು ನಮಗೆ ಸಾಧ್ಯವೇ ? ಅಂದಮೇಲೆ ಈ ತಿರುಪ್ಪಾವೈಯ ಉಪದೇಶಗಳು ಇಂದಿನ ಮಾನವ ಜನಾಂಗಕ್ಕೆ ಹೇಗೆ ಅನ್ವಯಿಸುತ್ತವೆ ? ಅದು ಸರ್ವೋದಯ ಸಂದೇಶ ಎಂದರೆ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಯ ಸಮಸ್ತ ಮಾನವರಿಗೂ ನೀಡಿದ ಉಪದೇಶ ಹೇಗಾದೀತು ? - ಎಂದು ಕೇಳಬಹುದು. ಆದರೆ ಗೋದಾ ದೇವಿಯು ಇದಕ್ಕೆ ಉತ್ತರವನ್ನು ತಿರುಪ್ಪಾವೈಯಲ್ಲಿಯೇ ವ್ಯಕ್ತವಾಗಿ ಹೇಳಿದ್ದಾಳೆ. ಪ್ರಾರಂಭದಲ್ಲಿಯೇ 'ವೈಯತ್ತುವಾಳ್ವೀರ್ ಹಾಳ್' - ಎಂದು ಜಗತ್ತಿನ ಜನರೆಲ್ಲರನ್ನೂ ಕುರಿತು ಉಪದೇಶ ಪ್ರಾರಂಭಿಸುತ್ತಾಳೆ. ಆದ್ದರಿಂದ ತಿರುಪ್ಪಾವೈಯು ಜಗತ್ತಿನಲ್ಲಿರುವ ನಮ್ಮಂತಹ ಸಾಮಾನ್ಯ ಮಾನವರಿಗೆ ನೀಡಿರುವ ಉಪದೇಶವಲ್ಲದೆ ಬೇರೆಯಲ್ಲ. ಅವಳ ಉಪದೇಶದ ಸಾರಾಂಶವೇನೆಂದರೆ -

(1) ಭಗವಂತನಿಗೂ ನಮಗೂ ಅತ್ಯಂತ ನಿಕಟವಾದ ಸಂಬಂಧವಿದೆ - ಎಂಬ ಅವನ ನಿತ್ಯಸಂಬಂಧ ಜ್ಞಾನ ಪಡೆಯಿರಿ -

ಭಗವಂತನು ಜಗತ್ತಿನ ಮಾನವರ ಇಂದ್ರಿಯಗಳ ಅನುಭವಕ್ಕೆ ನಿಲುಕದಿದ್ದರೂ ಜಗತ್ತಿನ ಸರ್ವ ಮಾನವರೂ ಅವನ ಸಂಬಂಧ ಪಡೆದಿದ್ದಾರೆ. ಆದ್ದರಿಂದ ಅವನ ಸಂಬಂಧ ಪಡೆಯಲು ಯಾರೂ ಎಲ್ಲಿಯೂ ಹೋಗಬೇಕಾಗಿಲ್ಲ. ಪ್ರತಿಯೊಬ್ಬರ ಹೃದಯದಲ್ಲಿ ಅವನು ಅಂತರ್ಯಾಮಿಯಾಗಿ ಇದ್ದಾನೆ. ಇದನ್ನು ಗೋದಾದೇವಿಯು ತಿರುಪ್ಪಾವೈಯ ಮೊದಲನೆಯ ಪಾಶುರದಲ್ಲೇ - 'ನಾರಾಯಣನೇ' ಎಂದು ಪರಮಾತ್ಮನ ಸರ್ವ ಅಂತರ್ಯಾಮಿತ್ವವನ್ನು ತಿಳಿಸಿದ್ದಾಳೆ. ನಾರಾಯಣ ಎಂಬ ಪದಕ್ಕೆ 'ನಾರಾಣಾಂ ಅಯನಂ ಯಃ ಸಃ ನಾರಾಯಣಃ' - ಅಂದರೆ ಜಗತ್ತಿನ ಚೇತನಾಚೇತನ ಪದಾರ್ಥಗಳಿಗೆ ಆಶ್ರಯನಾಗಿರುವವನು ನಾರಾಯಣನು ಎಂದೂ; ''ನಾರಾಃ ಅಯನಂ ಯಸ್ಯ

ಸಃ ನಾರಾಯಣಃ'' - ಅಂದರೆ ಜಗತ್ತಿನ ಸಮಸ್ತ ಚೇತನಾ ಚೇತನ ಪದಾರ್ಥಗಳು ಯಾರಿಗೆ ಆಶ್ರಯವಾಗಿವೆಯೋ ಅವನು ನಾರಾಯಣನು ಅಂದರೆ ಸಕಲ ಚಿದ ಚಿದ್ವಸ್ತುಗಳಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿ ಇದ್ದಾನೆ ಎಂದೂ ಅರ್ಥ, ಅವನು ಸಮಸ್ತ ಮಾನವರಿಗೂ ಅಂತರ್ಯಾಮಿಯಾಗಿ ಇದ್ದುಕೊಂಡು ಅವರನ್ನು ನಿಯಮಿಸುತ್ತಲೂ, ರಕ್ಷಿಸುತ್ತಲೂ, ಇದ್ದಾನೆ. ಅಂದರೇನು ಅವನು ಸ್ವಾಮಿ ನಾವು ದಾಸರು; ಅವನು ತಂದೆ ನಾವು ಮಕ್ಕಳು; ಅವನು ರಕ್ಷಕ ನಾವು ರಕ್ಷಿಸಲ್ಪಡುವವರು - ಹೀಗೆ ಪರಮಾತ್ಮನಿಗೂ ಸಕಲ ಮಾನವರಿಗೂ ಇರುವ ತಂದೆ ಮಕ್ಕಳು, ರಕ್ಷಕ ರಕ್ಷ್ಯ, ಆಧಾರ ಆಧೇಯ, ಶೇಷೀಶೇಷ (ಸ್ವಾಮಿದಾಸ), ಶರೀರೀ (ಆತ್ಮ) ಶರೀರ, ಭೋಕ್ತೃಭೋಗ್ಯ; ಭರ್ತೃ ಭಾರ್ಯಾ; ಜ್ಞೇಯ ಜ್ಞಾತೃ, ಮುಂತಾದ ಅನೇಕ ವಿಧವಾದ ಸಂಬಂಧಗಳನ್ನು ಯಾರೂ ಬೇರ್ಪಡಿಸಲಾಗುವುದಿಲ್ಲ. ಇದು ನಿತ್ಯವಾದ ಎಂದೆಂದಿಗೂ ಇರುವ ಸಂಬಂಧ. 'ಉನ್‌ತನ್ನೋಡು ಉರವೇಲ್ ನಮಕ್ಕಿಂಗೊಳಿಕ್ಕ ಒಳಿಯಾದ್' - ಅಂದರೆ ನಿನ್ನೊಂದಿಗೆ ಇರುವ ಈ ಸಂಬಂಧವನ್ನು ಸರ್ವಶಕ್ತನಾದ ನಿನ್ನಿಂದಲೂ, ನಮ್ಮಿಂದಲೂ ಬೇರ್ಪಡಿಸಲಾಗುವುದಿಲ್ಲ ಎಂದು ತಿರುಪ್ಪಾವೈಯಲ್ಲಿ ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ಪರಮಾತ್ಮನಿಗೂ ನಮಗೂ ಅತ್ಯಂತ ನಿಕಟವಾದ ಸಂಬಂಧವಿದೆ. ಅವನು ನಮಗೆ ಅತ್ಯಂತ ಸಮೀಪದಲ್ಲಿ ನಮ್ಮ ಹೃದಯದಲ್ಲಿಯೇ ಇದ್ದಾನೆ ಎಂಬುದು ಸಿದ್ಧವಾಯಿತು.

ಆದರೆ ಈ ಸಂಬಂಧಜ್ಞಾನ ನಮ್ಮ ಹೃದಯದಲ್ಲಿ ಇಲ್ಲ. ನಮಗೆ ಭಗವಂತ ಅತ್ಯಂತ ಹತ್ತಿರದ ಬಂಧು ಎಂಬ ಜ್ಞಾನವಿಲ್ಲ. ಏಕೆಂದರೆ ನಮ್ಮ ಪ್ರಾಚೀನ ಕರ್ಮ ವಾಸನೆಗಳು ಅದಕ್ಕೆ ಅಡ್ಡಿಯಾಗಿವೆ. ಅವು ನಮ್ಮ ಜ್ಞಾನವನ್ನು ಸಂಕುಚಿತಗೊಳಿಸಿವೆ. ಈ ಕರ್ಮವಾಸನೆಗಳು ನಾಶವಾಗಿ ಪರಮಾತ್ಮನಿಗೂ ನಮಗೂ ಇರುವ ಈ ನಿತ್ಯ ಸಂಬಂಧಜ್ಞಾನ ನಮಗೆ ಉಂಟಾಗಬೇಕು. ಕೇವಲ ಬುದ್ಧಿಪೂರ್ವಕವಾದ ಜ್ಞಾನ ನಮಗೆ ಉಂಟಾದರೆ ಸಾಲದು, ಅದು ನಮ್ಮ ಹೃದಯಕ್ಕೆ ನಾಟಬೇಕು ಮತ್ತು ನಮ್ಮ

ಅನುಭವಕ್ಕೆ ಬರಬೇಕು. ಆದರೆ ಇದು ಸಾಧ್ಯವೇ ಎಂದರೆ ಸಾಧ್ಯ; ನಮ್ಮ ಪ್ರಾಚೀನ ಕೃತ ಪಾಪಗಳನ್ನು ನಾಶಗೊಳಿಸಲು ಒಂದು ಸುಲಭವಾದ ಮಾರ್ಗವುಂಟು ಎಂದು ಗೋದಾದೇವಿಯು ತಿರುಪ್ಪಾವೈಯಲ್ಲಿ ಒತ್ತಿ ಒತ್ತಿ ಹೇಳಿದ್ದಾಳೆ. ಅದೇನೆಂದರೆ ಭಗವನ್ನಾಮ ಸಂಕೀರ್ತನೆ ಮಾಡುವುದು. ಅವನ ಅಡಿದಾವರೆಗಳನ್ನು ಸ್ತೋತ್ರಮಾಡಿ ಹಾಡುತ್ತಿದ್ದರೆ ಅವನ ಕೃಪೆಯಿಂದ ನಮ್ಮ ಹೃದಯದಲ್ಲಿ ಅಜ್ಞಾನವು ನಾಶವಾಗಿ, ಭಗವಂತನ ಶೇಷಿತ್ವಜ್ಞಾನ ಹುಟ್ಟಿ, ನಾವು ಭಗವದ್ಭಕ್ತರಾಗಬಲ್ಲೆವು. ಆದ್ದರಿಂದ ಎಲ್ಲರೂ ಮೊದಲು ಅವನ ನಾಮ ಸಂಕೀರ್ತನೆ ಮಾಡಿರಿ ಎಂದು ಉಪದೇಶ ನೀಡಿದ್ದಾಳೆ.

(2) ಭಗವಂತನ ನಾಮ

ಇದು ತಿರುಪ್ಪಾವೈಯಲ್ಲಿ ಪ್ರಾರಂಭದಿಂದಲೂ ಮತ್ತೆ ಮತ್ತೆ ಒತ್ತಿ ಒತ್ತಿ ಹೇಳಿರುವ ಮುಖ್ಯವಾದ ಉಪದೇಶ. ಎರಡನೆಯ ಪಾಶುರದಲ್ಲಿ 'ಪರಮನಡಿಪಾಡಿ' ಎಂದು ಪ್ರಾರಂಭಿಸಿ, ಮುಂದಿನ ಪಾಶುರಗಳಲ್ಲಿ 'ಉತ್ತಮನ್ ಪೇರ್ ಪಾಡಿ' - 'ವಾಯಿನಾಲ್ ಪಾಡಿ ಮನತ್ತಿನಾಲ್ ಶಿಂದಿಕ್ಕ' - 'ಹರಿ ಎನ್ರ ಪೇರರವಂ ಉಳ್ಳಂಪುಹುಂದ್ ಕುಳಿರ್‌ನ್ದ್' - 'ಕೇಶವನ್ನೈಪ್ಪಾಡ' 'ಪಾಡಿಪರೈಗೊಂಡು' - 'ಮಾಮಾಯನ್ ಮಾದವನ್ ವೈಹುಂದನನ್ನೆನ್ರು ನಾಮಂ ಪಲವುಂ ನವಿನ್ರು' - 'ನಾರಾಯಣರ್ ನಮ್ಮಾಲ್ ಪೋತ್ತಪರೈತರುಂ' - 'ಮುಹಿಲ್‌ವಣ್ಣರ್ ಪೇರ್‌ಪಾಡ' - 'ಮನತ್ತುಕ್ಕಿನಿಯಾನ್ನೈಪಾಡ' - 'ಕೀರ್ತಿಮ್ಮೈಪ್ಪಾಡಿಪ್ಪೋಯ್ ಪಿಳ್ಳೈಹಳೆಲ್ಲಾರುಂ ಪಾವೈಕ್ಕಳಂಪುಕ್ಕಾರ್' - ''ಪಂಗಯಕ್ಕಣ್ಣಾನ್ನೈಪಾಡ'' - ''ವಲ್ಲಾನ್ನೈಕೊನ್ರಾನ್ನೈ ಮಾತ್ತಾರೈಮಾತ್ತಳಿಕ್ಕವಲ್ಲಾನ್ನೈ ಮಾಯನ್ನೈ ಪ್ಪಾಡೇಲೋರೆಂಬಾವಾಯ್'' - ತುಯಿಲೆಳಪ್ಪಾಡುವಾನ್'' - '' ಉನ್‌ಮೈತ್ತುನನ್‌ಪೇರ್‌ಪಾಡ' - 'ಪೋತ್ತಿಯಾಂವನ್ದೋಂ' - 'ಉರ್‌ಶೇವಹಮೇಎತ್ತಿ ಪ್ಪರೈಕೊಳ್ವಾನ್' - ತಿರುತ್ತಕ್ಕ ಶೆಲ್ವಮುಂ ಶೇವಹ ಮುಂಯಾಂಪಾಡಿ' - 'ಪಲ್ಲಾಂಡ್ ಇಶೈಪ್ಪಾರೈ ಅರುಳ್' - 'ಉನ್‌ತನ್ನೈಪ್ಪಾಡಿ

ಪರೈಗೊಂಡು' - 'ಉನ್‌ಪೊತ್ತಾಮರೈ ಅಡಿಯೇ ಪೋತ್ತುಂ' - ಎಂದೆಲ್ಲಾ ಹೇಳಿ ಕೊನೆಗೆ 30ನೇ ಪಾಶುರದಲ್ಲಿ ''ಶೆಂಗತ್ತಮಿಳ್ ಮಾಲೈ ಮುಪ್ಪದುಂತಪ್ಪಾಮೆ ಇಂಗು ಇಪ್ಪರಿಶುರೈಪ್ಪಾರ್ ತಿರುಮಾಲಾಲ್ ಎಂಗುಂ ತಿರುವರುಳ್ ಪೆತ್ತು ಇನ್ಬುರುವರ್'' - ಎಂದು ಭಗವನ್ನಾಮ ಸಂಕೀರ್ತನೆ ಮಾಡಿ ಅವನ ಅನುಗ್ರಹ ಪಡೆಯಿರಿ ಎಂದು ಉಪದೇಶ ನೀಡಿ ತಿರುಪ್ಪಾವೈಯ ಸಂದೇಶವನ್ನು ಮುಕ್ತಾಯಗೊಳಿಸಿದ್ದಾಳೆ.

ಒಟ್ಟಿನಲ್ಲಿ ನಾಮ ಸಂಕೀರ್ತನೆ ಮಾಡುವುದು ನಮಗೆ ಉಪಾಯ ಮತ್ತು ಉಪೇಯ (ಫಲ) ಎರಡೂ ಆಗಿದೆ ಎಂದು ತಿರುಪ್ಪಾವೈಯಲ್ಲಿ ತಿಳಿಸಿದೆ. ಅಂದರೆ ಅದು ಭಗವಂತನನ್ನು ಹೊಂದಲು ಉಪಾಯವಾಗಿದೆ ಮತ್ತು ಅದೇ ನಮಗೆ ಪರಮ ಪುರುಷಾರ್ಥವೂ ಆಗಿದೆ. ಹೇಗೆಂದರೆ (1) ಭಗವಂತನ ಕಲ್ಯಾಣ ಗುಣಗಳನ್ನು ಬಾಯಿನಿಂದ ಹಾಡುತ್ತಾ, ಮನಸ್ಸಿನಿಂದ ಚಿಂತನೆ ಮಾಡುತ್ತಿದ್ದರೆ ''ಪೋಯಪಿಳ್ಳೈಯುಂಪುಹುದರುವಾನ್ನಿನ್ರನವುಂ ತೀಯಿನಿಲ್ ತೂಶಾಹುಂ'' - ಅಂದರೆ ನಮ್ಮ ಹಿಂದಿನ ಇಂದಿನ ಮತ್ತು ಮುಂದಿನ ಪಾಪಗಳೆಲ್ಲಾ ಬೆಂಕಿಯಲ್ಲಿ ಸುಟ್ಟ ಹತ್ತಿಯಂತೆ ಬೆಂದು ಸಂಪೂರ್ಣವಾಗಿ ನಾಶವಾಗುತ್ತವೆ. ಆದರಿಂದ ನಮ್ಮ ಹೃದಯವು ಪವಿತ್ರವಾಗಿ, ಭಗವದ್ಭಕ್ತಿ ಉಂಟಾಗಿ ನಾವು ಅವನ ಕೃಪೆಗೆ ಪಾತ್ರರಾಗಿ ಅವನನ್ನು ಹೊಂದಬಲ್ಲೆವು. ಹೀಗೆ ಭಗವಂತನನ್ನು ಹೊಂದಲು ಅದು ಉಪಾಯವಾಗಿದೆ ಮತ್ತು 'ನೀಂಗಾದ ಶೆಲ್ವಂನಿರೈಂದ್' ಅಂದರೆ ಭಗವನ್ನಾಮ ಹಾಡುವವರಿಗೆ ಸಕಲ ಸಂಪತ್ತು ಲಭಿಸುತ್ತದೆ ಮತ್ತು ಅವರು ವಾಸಿಸುವ ದೇಶವೂ ಸುಭಿಕ್ಷವಾಗಿ ಅಭಿವೃದ್ಧಿ ಹೊಂದುತ್ತದೆ ಎಂದು ತಿರುಪ್ಪಾವೈಯಲ್ಲಿ ವ್ಯಕ್ತವಾಗಿ ತಿಳಿಸಿದೆ.

(2) ಅಷ್ಟುಮಾತ್ರವಲ್ಲದೆ ಭಗವನ್ನಾಮ ಸಂಕೀರ್ತನೆಯು ನಮಗೆ ಉಪೇಯ ಅಂದರೆ ಪುರುಷಾರ್ಥವೂ ಆಗಿದೆ. ನಾಮ ಸಂಕೀರ್ತನೆ ಮಾಡುವುದರಲ್ಲೇ ಮನಸ್ಸಿಗೆ ಆನಂದವುಂಟಾಗುತ್ತದೆ. ಭಗವಂತನ ಕಲ್ಯಾಣ ಗುಣಗಳನ್ನು

ಹಾಡುವುದೂ ಮತ್ತು ಅವನಿಗೆ ಮಂಗಳಾಶಾಸನ ಮಾಡುವುದೂ, ನಾವು ಅವನಿಗೆ ಮಾಡುವ ಕೈಂಕರ್ಯವಾಗಿದೆ. ಅದೇ ನಮಗೆ ಪುರುಷಾರ್ಥವು. ''ಪಾಡಿಪ್ಪರೈಗೊಂಡು'' - ಅಂದರೆ ನಿನ್ನನ್ನು ಹಾಡುವ ಪುರುಷಾರ್ಥವನ್ನು ಪಡೆದವರಾಗಿ - ಎಂದೂ ''ಉನ್‌ಶೇವಹಮೇ ಏತ್ತಿಪ್ಪರೈಕೊಳ್ವಾನ್'' - ಅಂದರೆ ನಿನ್ನ ಕಲ್ಯಾಣ ಗುಣಗಳಿಗೆ ಮಂಗಳಾಶಾಸನ ಮಾಡುವುದೇ ನಮಗೆ ಪುರುಷಾರ್ಥ ಎಂದೂ ತಿರುಪ್ಪಾವೈಯಲ್ಲಿ ಹೇಳಿದೆ. ಹೀಗೆ ನಾಮ ಸಂಕೀರ್ತನೆ ನಮಗೆ ಉಪಾಯ ಮತ್ತು ಉಪೇಯ (ಸಾಧನೆ ಮತ್ತು ಫಲ) ಎರಡೂ ಆಗಿರುವುದರಿಂದ - 'ಶೆಪ್ಪೇಲೋರೆಂಬಾವಾಯ್' - 'ಪಾಡೇಲೋರೆಂಬಾವಾಯ್' ಅಂದರೆ ಭಗವನ್ನಾಮವನ್ನು ಉಚ್ಚರಿಸು, ಹಾಡು ಎಂದು ಅನೇಕಸಲ ಉಪದೇಶ ಮಾಡಿದ್ದಾಳೆ.

ಭಗವನ್ನಾಮ ಸಂಕೀರ್ತನೆಗೆ ಯಾವ ವಿಧಿ ನಿಯಮಗಳೂ ಬೇಕಾಗಿಲ್ಲ. ಯಾರು, ಎಲ್ಲಿ, ಹೇಗೆ ಬೇಕಾದರೂ ಭಗವನ್ನಾಮಗಳನ್ನು ಹಾಡಬಹುದು. ಅದಕ್ಕೆ ಮುಖ್ಯವಾಗಿ ಬೇಕಾಗಿರುವುದು ನಾಮ ಸಂಕೀರ್ತನೆ ಮಾಡಬೇಕೆಂಬ ಇಚ್ಛೆ ನಮಗೆ ಉಂಟಾಗಬೇಕು ಅಷ್ಟೇ. ಆದ್ದರಿಂದ 'ನೀರಾಡಪ್ಪೋದುವೀರ್ ಪೋದುಮಿನೋ' ಅಂದರೆ ಭಗವದ್ಗುಣ ಸಾಗರದಲ್ಲಿ ಮುಳುಗಿ ಆನಂದಪಡಬೇಕೆಂಬ ಇಚ್ಛೆಯುಳ್ಳವರೆಲ್ಲರೂ ಬನ್ನಿರಿ ಎಂದು ಎಲ್ಲರನ್ನೂ ಕರೆಯುತ್ತಾಳೆ.

ಭಗವಂತನು ಎಲ್ಲೋ ದೂರದಲ್ಲಿದ್ದರೂ ಕೂಡ ಅವನ ನಾಮವು ಎಲ್ಲರಿಗೂ ಲಭಿಸುವಂತೆ ಎಲ್ಲರ ಹತ್ತಿರವೂ ಇದೆ. ''ಪಾರ್ಕಡಲಿಲ್ ಪೈಯ್ಯತ್ತುಯಿನ್ರ ಪರಮನಡಿಪಾಡಿ'' - ಅಂದರೆ ಅವನು ಕ್ಷೀರಾಬ್ಧಿ ಶಯನನಾಗಿ ನಮಗೆ ಚಿಂತಿಸಲಸದಳವಾದಷ್ಟು ದೂರದಲ್ಲಿದ್ದಾಗ್ಯೂ ಅವನ ಪಾದಗಳಿಗೆ ಸುಲಭವಾಗಿ ಮಂಗಳ ಹಾಡುವೆವು ಎಂದೂ, ''ಓಂಗಿ ಉಲಹಳನ್ದ ಉತ್ತಮನ್ ಪೇರ್‌ಪಾಡಿ'' - ಅಂದರೆ ಎಂದೋ ವಾಮನನಾಗಿ ಅವತರಿಸಿ ತ್ರಿವಿಕ್ರಮನಾಗಿ ಬೆಳೆದು

ಭೂಮಿಯನ್ನು ಪಾದಗಳಿಂದ ಅಳೆದ ಮಹಾಪುರುಷನಾದ ಅವನ ನಾಮವನ್ನು, ಇಂದು ನಾವು ಸುಖವಾಗಿ ಹಾಡಿ ಪುರುಷಾರ್ಥವನ್ನು ಪಡೆಯುವೆವು ಎಂದೂ ತಿರುಪ್ಪಾವೈಯಲ್ಲಿ ತಿಳಿಸಿದೆ. ಇದನ್ನೇ 'ಅವನ್ ದೂರಸ್ಥನಾನಾಲುಂ ಇದು ಕಿಟ್ಟಿನಿನ್ರು ಉದವುಂ' - ಅಂದರೆ ಅವನು (ಪರಮಾತ್ಮನು) ದೂರದಲ್ಲಿ ಇದ್ದರೂ, ಅವನ ನಾಮವು ಸಮೀಪದಲ್ಲೇ ಇದ್ದು ರಕ್ಷಿಸುತ್ತದೆ ಎಂದು ಶ್ರೀ ಲೋಕಾಚಾರ್ಯರೂ ತಿಳಿಸಿದ್ದಾರೆ. ಆದ್ದರಿಂದ ಎಲ್ಲರೂ ನಾಮ ಸಂಕೀರ್ತನೆಮಾಡಿ ಭಗವದನುಗ್ರಹಕ್ಕೆ ಪಾತ್ರರಾಗಬೇಕೆಂಬುದೇ ತಿರುಪ್ಪಾವೈಯ ಮುಖ್ಯ ಸಂದೇಶ.

(3) ಕೃತ್ಯಾಕೃತ್ಯ ವಿವೇಕದ ಉಪದೇಶ -

ತಿರುಪ್ಪಾವೈಯ ಎರಡನೇ ಪಾಶುರದಲ್ಲಿ ಕೃತ್ಯಾಕೃತ್ಯವಿವೇಕದ ಉಪದೇಶವಿದೆ. ಅಂದರೆ ಈ ವ್ರತಾಚರಣೆಗೆ ಯಾವ ಯಾವ ಕೃತ್ಯಗಳನ್ನು ಆಚರಿಸಬೇಕು, ಯಾವ ಯಾವ ಕೃತ್ಯಗಳನ್ನು ಆಚರಿಸಕೂಡದು ಎಂಬುದನ್ನು ತಿಳಿಸುತ್ತದೆ. ಗೋದಾದೇವಿಯು 'ವೈಯ್ಯತ್ತು ವಾಳ್ವೀರ್‌ಹಾಳ್' - ಅಂದರೆ ಜಗತ್ತಿನಲ್ಲಿ ಉಜ್ಜೀವಿಸಲು ಆಸೆಯುಳ್ಳ ಮಾನವರೇ ಎಂದು ಸರ್ವ ಮಾನವರನ್ನೂ ಸಂಭೋಧಿಸಿ - 'ಕೇಳಿರೋ' - ಎಲ್ಲರೂ ಕಿವಿಗೊಟ್ಟು ಕೇಳಿರಿ ಎಂದು ಒತ್ತಾಯ ಪಡಿಸಿ ಉಪದೇಶ ನೀಡಿದ್ದಾಳೆ. ಆದ್ದರಿಂದ ಇಲ್ಲಿ ತಿಳಿಸಿರುವ ಉಪದೇಶಗಳು ಸಾರ್ವತ್ರಿಕ, ಸರ್ವೋದಯ ಸಂದೇಶಗಳೇ ಆಗಿವೆ. ಅಂದ್ರರೆ ಸರ್ವದೇಶ, ಸರ್ವಕಾಲದ ಜನರೆಲ್ಲರಿಗೂ ನೀಡಿರುವ ಉಪದೇಶವಾಗಿವೆ.

ಅವರು ಮಾಡಬಾರದ ಕಾರ್ಯಗಳು ಯಾವುವೆಂದರೆ - ನೆಯ್ಯುಣ್ಣೋಂ, ಪಾಲುಣ್ಣೋಂ, - ಅಂದರೆ ಶರೀರ ಪೋಷಣೆ, ಬಾಹ್ಯ ಅಲಂಕಾರಾದಿಗಳ ವಿಷಯದಲ್ಲಿ ವಿರಕ್ತಿ ಹೊಂದಿರುವುದು; ಶೈಯ್ಯಾದನಶೈಯ್ಯೋಂ - ಮಾಡಬಾರದ ಹೀನ ಕಾರ್ಯಗಳನ್ನು ಮಾಡದಿರುವುದು; ತೀಕ್ಕುರಳೈ ಶೆನ್ರು ಓದೋಂ. ಕೆಟ್ಟ ಮಾತುಗಳನ್ನು ಅಲ್ಲಲ್ಲಿ ಹೋಗಿ ಹೇಳದಿರುವುದು - ಅವರು ಮಾಡಬೇಕಾದ

ಕಾರ್ಯಗಳು ಯಾವುವೆಂದರೆ - ಪರಮನಡಿಪಾಡಿ - ಅಂದರೆ ಪರಮಾತ್ಮನ ಅಡಿದಾವರೆಗಳಿಗೆ ಮಂಗಳ ಹಾಡುವುದು; ನಾಟ್ಕಾಲೇ ನೀರಾಡಿ - ಅಂದರೆ ಪ್ರಾತಃ ಕಾಲದಲ್ಲಿ ಭಗವನ್ನಾಮ ಸಂಕೀರ್ತನೆ ಮಾಡಿ, ತಮ್ಮ ಪಾಪತಾಪಗಳನ್ನೆಲ್ಲಾ ಹೋಗಲಾಡಿಸಿಕೊಂಡು, ಅವನ ಕಲ್ಯಾಣ ಗುಣ ಸಾಗರದಲ್ಲಿ ಮುಳುಗಿ ಭಗವದನುಭವ ಪಡೆಯುವುದು; ಐಯ್ಯಮುಂ ಪಿಚ್ಚೈಯುಂ ಆಂದನೆಯುಂ ಕೈಕಾಟ್ಟಿ - ಅಂದರೆ ಅನ್ನ, ಧನ, ವಿದ್ಯಾದಿಗಳನ್ನು ತಮ್ಮ ಕೈಲಾದಷ್ಟು ನೀಡಿ, ಇತರರಿಗೆ ತಮ್ಮ ಕೈಲಾದಷ್ಟು ಸಹಾಯ ಮಾಡುವುದು. (ಇಲ್ಲಿ ಭಗವಂತನ ವಿಭೂತಿಗಳಾದ ಜಗತ್ತಿಗೂ, ಜಗತ್ತಿನ ಜೀವಿಗಳಿಗೂ ತಮ್ಮ ತಮ್ಮ ಶಕ್ತಿಗೆ ಅನುಗುಣವಾಗಿ ಸೇವೆ ಸಲ್ಲಿಸುವುದೂ ಭಗವಂತ್ಕೈಂಕರ್ಯವೆನ್ನಿಸಿಕೊಳ್ಳುತ್ತದೆ - ಅಂದರೆ ಭಗವಂತನನ್ನು ಅಂತರ್ಯಾಮಿಯಾಗಿ ಪಡೆದಿರುವ, ಅವನ ನಿತ್ಯಸಂಬಂಧ ಪಡೆದಿರುವ ಜೀವಿಗಳಿಗೆ ಸೇವೆ ಸಲ್ಲಿಸುವುದರ ಮೂಲಕ ನಮ್ಮ ಕಣ್ಣಿಗೆ ಗೋಚರಿಸದ, ನಮ್ಮ ಇಂದ್ರಿಯಗಳ ಅರಿವಿಗೆ ನಿಲುಕದ ಭಗವಂತನಿಗೆ ಸೇವೆ ಸಲ್ಲಿಸಿದಂತೆ ಆಗುತ್ತದೆ ಎಂದು ಅಭಿಪ್ರಾಯ)-

ಉಯ್ಯುಮಾರೆಣ್ಣಿ ಉಹಂದ್ ಶೈಯ್ಯುಂ ಕಿರಿಶೈಹಳ್ ಕೇಳೀರೋ ಆತ್ಮಶ್ರೇಯಸ್ಸಿನ ಮಾರ್ಗ ಚಿಂತನೆಯೊಂದಿಗೆ ನಾವು ಸಂತೋಷವಾಗಿ ಆಚರಿಸುವ ಕರ್ತವ್ಯ ಕರ್ಮಗಳನ್ನು ಕೇಳಿರಿ - ಎಂದು ಗೋದಾದೇವಿಯು ಕೃತ್ಯಾಕೃತ್ಯ ವಿವೇಕವನ್ನು ಎಲ್ಲರಿಗೂ ತಿಳಿಸಿದ್ದಾಳೆ.

ಹೀಗೆ ತಿರುಪ್ಪಾವೈಯಲ್ಲಿ ಜಗತ್ತಿನಲ್ಲಿ ಉಜ್ಜೀವಿಸಬೇಕೆಂದು ಆಸೆಯಿರುವವರು ಆಚರಿಸಬಾರದ ಮತ್ತು ಆಚರಿಸಬೇಕಾದ ಕರ್ಮಗಳನ್ನು ವ್ಯಕ್ತವಾಗಿ ತಿಳಿಸಿದೆ.

(4) ತ್ರಿಕರಣಗಳಿಂದಲೂ ಭಗವಂತನನ್ನು ಪೂಜಿಸಿ ಅವನಿಗೆ ಕೈಂಕರ್ಯ ಮಾಡಿರಿ :

ಶ್ರೀಕೃಷ್ಣಪರಮಾ [illegible]
ಯೋಗಗಳನ್ನೇ ಗೋದಾದೇವಿಯು ತಿರುಪ್ಪಾವೈಯಲ್ಲಿ ಉಪದೇಶ ಮಾಡಿದ್ದಾಳೆ.

ಗೀತೆಯಲ್ಲಿ 'ಮಯಿಸರ್ವಾಣಿ ಕರ್ಮಾಣಿ ಸನ್ನಸ್ಯ' - 'ಯತ್ಕರೋಷಿಯದಶ್ನಾಸಿ ಯಜ್ಜುಹೋಷಿ ದದಾಸಿಯತ್ ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ'-'ಮತ್ಕರ್ಮಕೃತ್' - ಅಂದರೆ ನೀವು ಮಾಡುವ ಪ್ರತಿ ಒಂದು ಕರ್ಮವನ್ನೂ, ಊಟ ಮಾಡುವುದು, ದಾನ ಮಾಡುವುದು ಮುಂತಾದ ಸಮಸ್ತ ಕರ್ಮಗಳನ್ನೂ ಭಗವಂತನ ಆರಾಧನೆ ಎಂಬ ಭಾವನೆಯಿಂದ ಮಾಡುತ್ತಾ ಅವನಿಗೆ ಅರ್ಪಿತವಾಗಿ ಸಂತೋಷದಿಂದ ಮಾಡಿರಿ ಎಂದೂ; 'ಮಯ್ಯೇವ ಮನ ಆಧತ್ಸ್ವ' - 'ಮನ್ಮನಾಭವ ಮದ್ಭಕ್ತ: ಮಧ್ಯಾಜೀ ಮಾಂ ನಮಸ್ಕುರು' - ಅಂದರೆ ನನ್ನಲ್ಲೇ ನೆಟ್ಟ ಮನಸ್ಸುಳ್ಳವನಾಗಿ, ನನ್ನ ಭಕ್ತನಾಗಿ, ನನ್ನನ್ನು ಪೂಜಿಸು, ನನಗೆ ನಮಸ್ಕಾರ ಮಾಡು - ಎಂದೂ; ಕೊನೆಗೆ ''ಸರ್ವಧರ್ಮಾನ್ ಪರಿತ್ಯಜ್ಯ ಮಾಂ ಏಕಂ ಶರಣಂ ವ್ರಜ । ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ॥'' - ಅಂದರೆ ಸಮಸ್ತ ಧರ್ಮಗಳನ್ನೂ ಬಿಟ್ಟು ನನ್ನೊಬ್ಬನನ್ನೇ ಶರಣುಹೊಂದು. ನಾನು ನಿನ್ನ ಪಾಪಗಳನ್ನೆಲ್ಲಾ ಹೋಗಲಾಡಿಸಿ ನಿನ್ನನ್ನು ಅನುಗ್ರಹಿಸುತ್ತೇನೆ; ವ್ಯಾಕುಲ ಪಡಬೇಡ'' - ಎಂದೂ ಪರಮಾತ್ಮನು ಉಪದೇಶ ಮಾಡಿದ್ದಾನೆ.

ಈ ಉಪದೇಶಗಳನ್ನೇ ಗೋದಾದೇವಿಯು ತಿರುಪ್ಪಾವೈಯ ಐದನೆ ಪಾಶುರದಲ್ಲಿಹೇಳಿದ್ದಾಳೆ - 'ತೂಯೋಮಾಯ್‌ವನ್ದ್'- ಅಂದರೆ ಶರೀರ ಮನಸ್ಸು ಎರಡನ್ನೂ ಪರಿಶುದ್ಧವಾಗಿ ಇಟ್ಟುಕೊಂಡು, ಶರೀರದ ಮಲಗಳನ್ನೂ ಮನಸ್ಸಿನಲ್ಲಿರುವ ಕಾಮ ಕ್ರೋಧಾದಿ ಮಲಗಳನ್ನೂ ನಿರ್ಮೂಲ ಮಾಡಿ ಪರಿಶುದ್ಧ ಮನಸ್ಸುಳ್ಳವರಾಗಿ - 'ತೂಮಲರ್‌ತೂವಿತ್ತೊಳುದು' - ಪರಮಾತ್ಮನಿಗೆ ಪುಷ್ಪಗಳನ್ನು ಸಮರ್ಪಿಸಿ ಅಂದರೆ ಇಂದ್ರಿಯಗಳ ಮೂಲಕ ಭಗವಂತನನ್ನು ಪೂಜಿಸಿ, ನಮಸ್ಕಾರ ಮಾಡಿ, ಕರ್ತವ್ಯಗಳನ್ನೆಲ್ಲಾ ಅವನ ಪೂಜಾರೂಪವಾಗಿ ಸಂತೋಷದಿಂದಲೂ, ಪ್ರೀತಿಯಿಂದಲೂ ಮಾಡುತ್ತಾ - 'ವಾಯಿನಾಲ್ ಪಾಡಿ' ವಾಕ್ಕಿನಿಂದ ಅವನ ನಾಮಗಳನ್ನು ಹಾಡುತ್ತಾ; 'ಮನತ್ತಿನಾಲ್ ಶಿನ್ದಿಕ್ಕ' - ಮನಸ್ಸಿನಲ್ಲಿ ಅವನ ಧ್ಯಾನ ಮಾಡುತ್ತಾ ಇದ್ದರೆ; 'ಪೋಯ ಪಿಳೈಯುಂ

ಪುಹುದರುವಾನ್ನಿನ್ರನವುಂ ತೀಯಿನಿಲ್ ತೂಶಾಹುಂ' - ಹಿಂದಿನ, ಇಂದಿನ ಮತ್ತು ಮುಂದಿನ ಪಾಪಗಳೆಲ್ಲಾ ಬೆಂಕಿಯಲ್ಲಿ ಇಟ್ಟ ಹತ್ತಿಯಂತೆ ಸುಟ್ಟು ಭಸ್ಮವಾಗುತ್ತವೆ.

ಆದ್ದರಿಂದ ''ಶೆಪ್ಪೇಲೋರೆಂಪಾವಾಯ್'' ಎಂದರೆ ಅವನ ನಾಮಗಳನ್ನು (ಹೇಳಿರಿ) ಉಚ್ಚರಿಸಿರಿ. ಹೀಗೆ ಕಾಯೇನ, ವಾಚಾ, ಮನಸಾ, ಅವನ ಉಪಾಸನೆ, ಸಂಕೀರ್ತನೆ, ಧ್ಯಾನಾದಿಗಳನ್ನೂ, ಸಮಸ್ತ ಕರ್ಮಗಳನ್ನೂ ಅವನ ಪೂಜಾರೂಪವಾಗಿ ಪ್ರೀತಿಯಿಂದ ಮಾಡುತ್ತಾ ಪಾಪಗಳನ್ನೆಲ್ಲಾ ಹೋಗಲಾಡಿಸಿಕೊಂಡು ಉಜ್ಜೀವಿಸಿರಿ ಎಂದು ಉಪದೇಶ ಮಾಡಿದ್ದಾಳೆ. ಎಲ್ಲಕ್ಕಿಂತ ಮೇಲಾಗಿ ಅವನ ನಾಮಗಳನ್ನು ಉಚ್ಚರಿಸಿರಿ 'ಶೆಪ್ಪ್' ಎಂದು ಒತ್ತಿ ಒತ್ತಿ ಹೇಳಿದ್ದಾಳೆ.

**5) ಭಗವತ್ ಕೆಂಕರ್ಯ ಪ್ರಾಪ್ತಿಗಾಗಿ ಭಗವಂತನಲ್ಲಿ ಶರಣಾಗತಿ ಮಾಡಿರಿ :**

ಭಗವತ್ ಕೆಂಕರ್ಯವೇ ಪರಮ ಪುರುಷಾರ್ಥ. ಅದನ್ನು ಅವನನ್ನೇ ಪ್ರಾರ್ಥಿಸಿ ಅವನಲ್ಲೇ ಶರಣಾಗತಿಮಾಡಿ ಪಡೆಯಬೇಕು ಎಂಬುದನ್ನು ಗೋದಾದೇವಿಯು ಮಾರ್ಹಳಿನೀರಾಟ್ಟವೆಂಬ ವ್ರತದ ಮೂಲಕ ಅನುಷ್ಠಿಸಿ ತೋರಿಸಿದ್ದಾಳೆ ಮತ್ತು ಶರಣಾಗತಿ ಶಾಸ್ತ್ರದ ಕ್ರಮವನ್ನೂ ತಿರುಪ್ಪಾವೈಯಲ್ಲಿ ವಿವರಿಸಿ ತಿಳಿಸಿದ್ದಾಳೆ. ಶರಣಾಗತಿಗೆ ಸರ್ವರೂ ಅಧಿಕಾರಿಗಳು; ಇದಕ್ಕೆ ಅಧಿಕಾರಿ ನಿಯಮವಾಗಲಿ, ಕಾಲ, ದೇಶ, ಅವಸ್ಥಾದಿ ಯಾವ ನಿಯಮಗಳೂ ಇಲ್ಲ; ಯಾರು, ಎಲ್ಲಿ , ಹೇಗೆ, ಯಾವಾಗ, ಯಾವ ಫಲಕ್ಕಾಗಿ ಬೇಕಾದರೂ ಶರಣಾಗತಿ ಮಾಡಬಹುದು; ಆದರೆ ಪರಮಾತ್ಮನಲ್ಲೇ ಶರಣಾಗತಿ ಮಾಡಬೇಕು - ಎಂಬುದೆಲ್ಲಾ ತಿರುಪ್ಪಾವೈಯಲ್ಲಿ ತಿಳಿಸಲ್ಪಟ್ಟಿದೆ.

**'ನೀರಾಡ ಪ್ಪೋದುವೀರ್ ಪೋದುಮಿನೋ'** - ಅಂದರೆ ಭಗವದನುಭವ ಪಡೆಯಲು ಇಚ್ಛೆ ಉಳ್ಳವರೆಲ್ಲರೂ ಬನ್ನಿರಿ ಎಂದು ಕರೆಯುವುದರಿಂದ ಇದಕ್ಕೆ ಇಚ್ಛೆ ಉಳ್ಳವರೆಲ್ಲರೂ ಅಧಿಕಾರಿಗಳು ಎಂಬುದು ಸಿದ್ಧವಾಯಿತು. 'ಮದಿನಿರೈಂದ

ನನ್ನಾಳಾಲ್ ಪೋದುಮಿನೋ' - 'ಹೃದಯಲ್ಲಿ ಭಕ್ತಿ ಹುಟ್ಟಿದ ದಿನವೇ ಒಳ್ಳೆಯ ದಿನ ಬನ್ನಿರಿ' - ಎಂದು ಹೇಳಿರುವುದರಿಂದ ಶರಣಾಗತಿ ಮಾಡಬೇಕೆಂಬ ಇಚ್ಛೆ ಹೃದಯದಲ್ಲಿ ಹುಟ್ಟಿದಾಗಲೇ ಶರಣಾಗತಿ ಮಾಡಬಹುದು. ಅದಕ್ಕೆ ಕಾಲ ನಿಯಮವಿಲ್ಲ ಎಂಬುದು ಸಿದ್ಧವಾಯಿತು. 'ವೈಯತ್ತುವಾಳ್ವೀರ್‌ಹಾಳ್ ಕೇಳಿರೋ' ಎಂದು ಈ ಜಗತ್ತಿನ ಜನರೆಲ್ಲರನ್ನು ಸಂಭೋಧಿಸಿ, ಕೇಳಿರಿ ಎಂದು ಹೇಳಿರುವುದರಿಂದ ಜಗತ್ತಿನಲ್ಲಿರುವ ಜನರೆಲ್ಲರೂ ಇದಕ್ಕೆ ಅಧಿಕಾರಿಗಳಾಗಬಲ್ಲರು ಮತ್ತು ಅವರು ಆಯಾ ಸ್ಥಳಗಳಲ್ಲೇ ಶರಣಾಗತಿ ಮಾಡಬಹುದು ಎಂದು ಅಭಿಪ್ರಾಯವಾಗುತ್ತದೆ. ಇದರಿಂದ ಶರಣಾಗತಿಗೆ ದೇಶ, ಕಾಲ ಅಧಿಕಾರಿ ನಿಯಮವೇನೂ ಇಲ್ಲವೆಂಬುದು ಸಿದ್ಧವಾಯಿತು. 'ಪರೈ ತರುವಾನ್' - ಅಂದರೆ ನಮಗೆ ಪರೈಯನ್ನು ಅನಗ್ರಹಿಸುವನು ಎಂದು ಅರ್ಥ. 'ಪರೈ' ಎಂಬ ಪದಕ್ಕೆ ಒಂದು ವಾದ್ಯವೆಂದೂ, ಕೈಂಕರ್ಯ ಪುರುಷಾರ್ಥವೆಂದೂ ಎರಡು ವಿಧವಾದ ಅರ್ಥಗಳನ್ನು ತಿರುಪ್ಪಾವೈಯಲ್ಲೇ ಹೇಳಿರುವುದರಿಂದ ವಾದ್ಯ ಮುಂತಾದ ಸಾಮಾನ್ಯ ಲೌಕಿಕ ಫಲಪ್ರಾಪ್ತಿಗಾಗಿಯೂ, ಭಗವತ್ ಕೈಂಕರ್ಯವೆಂಬ ಪರಮ ಪುರುಷಾರ್ಥ ಪ್ರಾಪ್ತಿಗಾಗಿಯೂ ಶರಣಾಗತಿ ಮಾಡಿರುವುದರಿಂದ ಫಲ ನಿಯಮವೇನೂ ಇಲ್ಲ ಎಂಬುದು ಸಿದ್ಧವಾಯಿತು.

ಆದರೆ 'ನಾರಾಯಣನೇ ಪರೈತರುವಾನ್' ಅಂದರೆ ಭಗವಂತನೇ ನಮ್ಮ ಇಷ್ಟಾರ್ಥಗಳನ್ನು ಪೂರ್ತಿಗೊಳಿಸುತ್ತಾನೆ ಎಂದೂ; 'ಯಾಂವಂದ ಕಾರ್ಯಂ ನೀ ಅರಾಯ್‌ನ್ದ್ ಅರುಳ್'- ಅಂದರೆ ನಮ್ಮ ಇಷ್ಟಾರ್ಥಗಳನ್ನು ನೀನು ಕೇಳಿ ಕೃಪೆ ಮಾಡು ಎಂದೂ; 'ಇರೈವಾನೀತಾರಾಯ್‌ಪರೈ' - ಅಂದರೆ ಭಗವಂತನೇ ! ನೀನೇ ನಮ್ಮ ಇಷ್ಟಾರ್ಥಗಳನ್ನು ಅನುಗ್ರಹಿಸು ಎಂದೂ ಹೇಳಿರುವುದರಿಂದ ಭಗವಂತನಲ್ಲೇ ಶರಣಾಗತಿ ಮಾಡಬೇಕೆಂಬುದನ್ನೂ; 'ಉನಕ್ಕೇ ನಾಂ ಆಳ್ ಶೆಯ್‌ವೋಂ' - ನಿನಗೇ ನಾವು ಕೈಂಕರ್ಯ ಮಾಡುತ್ತೇವೆ ಎಂದು ಹೇಳಿರುವುದರಿಂದ ಭಗವಂತನಿಗೇ ಕೈಂಕರ್ಯ ಮಾಡಬೇಕು ಎಂಬುದನ್ನೂ ಸ್ಪಷ್ಟವಾಗಿ

ತಿರುಪ್ಪಾವೈಯಲ್ಲಿ ತಿಳಿಸಿದೆ. ಆದ್ದರಿಂದ ಯಾರಲ್ಲಿ ಶರಣಾಗತಿ ಮಾಡಬೇಕು ಎಂಬ ವಿಷಯಕ್ಕೆ ನಿಯಮವುಂಟು. ಪರಮಾತ್ಮನಲ್ಲೇ ಶರಣಾಗತಿ ಮಾಡಬೇಕು ಮತ್ತು ಪರಮಾತ್ಮನಿಗೇ ಕೈಂಕರ್ಯ ಮಾಡಬೇಕು ಎಂಬುದೂ ಸಿದ್ಧವಾಯಿತು.

ತಿರುಪ್ಪಾವೈಯಲ್ಲಿ ಗೋದಾದೇವಿಯು ಭಾಗವತರನ್ನೂ ಆಚಾರ್ಯರುಗಳನ್ನೂ ಮೊದಲು ಪ್ರಾರ್ಥಿಸಿ ಅವರ ಅನುಗ್ರಹ ಪಡೆದು, ಅವರನ್ನು ಮುಂದಿಟ್ಟುಕೊಂಡು ಅವರೊಂದಿಗೆ ಶ್ರೀದೇವಿಯ ಪುರುಷಕಾರವನ್ನು ಪ್ರಾರ್ಥಿಸಿ, ಅನಂತರ ಪರಮಾತ್ಮನಲ್ಲಿ ಶರಣಾಗತಿ ಮಾಡಿ, ಪರಮ ಪುರುಷಾರ್ಥವಾದ ಭಗವತ್ ಕೈಂಕರ್ಯವನ್ನು ತಮಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದ್ದಾಳೆ. ಆದ್ದರಿಂದ ಪರಮಾತ್ಮನಲ್ಲಿ ಶರಣಾಗತಿ ಮಾಡುವುದಕ್ಕೆ ಮೊದಲು ಭಾಗವತರ, ಆಚಾರ್ಯರುಗಳ ಸಹಕಾರವೂ, ಶ್ರೀ ದೇವಿಯ ಪುರುಷಕಾರವೂ ಅಗತ್ಯವೆಂಬುದು ಸಿದ್ಧವಾಯಿತು. ಹೀಗೆ ತಿರುಪ್ಪಾವೈಯಲ್ಲಿ ಭಗವಂತನೇ ಪರತತ್ವವು. ಅವನೇ ಜಗತ್ತಿಗೆಲ್ಲಾ ಸ್ವಾಮಿಯು ಮತ್ತು ರಕ್ಷಕನು, ಅವನ ಕೈಂಕರ್ಯವೇ ಪರಮ ಪುರುಷಾರ್ಥವು ಮತ್ತು ಅದನ್ನು ಪಡೆಯಲು ಅವನಲ್ಲಿ ಶರಣಾಗತಿಯೇ ಉಪಾಯವು ಎಂಬ ತತ್ವಹಿತ ಪುರುಷಾರ್ಥಗಳ ವಿವರಣೆಯೂ ಮತ್ತು ಚರಮೋಪಾಯವಾದ ಶರಣಾಗತಿಯ ವಿವರಣೆಯೂ ಇದೆ.

ಒಟ್ಟಿನಲ್ಲಿ ಗೋದಾದೇವಿಯು ತಿರುಪ್ಪಾವೈಯಲ್ಲಿ ಸರ್ವ ಮಾನವರನ್ನೂ ಅಜ್ಞಾನ ನಿದ್ರೆಯಿಂದ ಎಚ್ಚರಿಸಿ ಭಗವನ್ನಾಮ ಸಂಕೀರ್ತನೆ ಮಾಡುವಂತೆಯೂ, ಕೆಟ್ಟ ಕೆಲಸಗಳನ್ನು ಮಾಡದೆ, ಕೆಟ್ಟ ಮಾತುಗಳನ್ನಾಡದೆ, ಮನಸ್ಸನ್ನು ಪರಿಶುದ್ಧವಾಗಿ (ಅಂದರೆ ಕಾಮಕ್ರೋಧಾದಿ ಅರಿಷಡ್ವರ್ಗರಹಿತವಾಗಿ) ಇಟ್ಟುಕೊಂಡು, ಶಾಂತಚಿತ್ತರಾಗಿ, ವೈರಾಗ್ಯದಿಂದ ಬಾಳುವಂತೆಯೂ; ಭಗವಂತನ ದಿವ್ಯಸಂಬಂಧಜ್ಞಾನ ಹೊಂದಿ ಉಜ್ಜೀವಿಸುವ ಮಾರ್ಗಚಿಂತನೆ ಮಾಡುತ್ತಾ, ಕರ್ತವ್ಯ ಕರ್ಮಗಳನ್ನು ಅವನ ಆರಾಧನೆ ಎಂಬ ಭಾವನೆಯೊಂದಿಗೆ ಪ್ರೀತಿ ಸಂತೋಷಗಳಿಂದ ಮಾಡುತ್ತ ಅವನನ್ನು ಭಜಿಸಿ ಅವನಲ್ಲಿ ಶರಣಾಗತರಾಗಿ ಅವನ

ಅನುಗ್ರಹ ಪಡೆಯುವಂತೆಯೂ ಜಗತ್ತಿನ ಜನರಿಗೆಲ್ಲಾ ಉಪದೇಶ ನೀಡಿದ್ದಾಳೆ. ಇದೇ ತಿರುಪ್ಪಾವೈಯ ಸಾರವಾದ ಸರ್ವೋದಯ ಸಂದೇಶ.

**(6) ತಿರುಪ್ಪಾವೈಯಲ್ಲಿ ಗೋದಾದೇವಿಯು ಭಗವಂತನಿಗೆ ಪ್ರಾರ್ಥನಾರೂಪವಾಗಿ ನೀಡಿರುವ ಸಂದೇಶ.**

ಗೋದಾದೇವಿಯು ತಿರುಪ್ಪಾವೈಯಲ್ಲಿ ಮಾನವರನ್ನು ಅಜ್ಞಾನ ನಿದ್ರೆಯಿಂದ ಎಬ್ಬಿಸಿ ಅವರಿಗೆ ತನ್ನ ಸಂದೇಶವನ್ನು ನೀಡಿರುವುದು ಮಾತ್ರವಲ್ಲದೆ, ಪರಮಾತ್ಮನನ್ನು ಅವನ ಯೋಗನಿದ್ರೆಯಿಂದ ಎಬ್ಬಿಸಿ, ವೇದಾಂತ ಸಿದ್ಧವಾದ ತಮ್ಮ ಪಾರತಂತ್ರ್ಯವನ್ನು ತಿಳಿಸಿ, ತಮ್ಮೆಲ್ಲರಿಗೂ ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸಿ ಸಲಹುವಂತೆ ಅವನನ್ನು ಪ್ರಾರ್ಥಿಸಿದ್ದಾಳೆ ಮತ್ತು ಅದಕ್ಕೆ ಪುರುಷಕಾರ ಮಾಡಿ ಸಹಾಯ ಮಾಡುವಂತೆ ಶ್ರೀದೇವಿಯನ್ನೂ ಪ್ರಾರ್ಥಿಸಿದ್ದಾಳೆ. ಆದ್ದರಿಂದಲೇ ಶ್ರೀ ಪರಾಶರರು 'ನೀಳಾತುಂಗ' ಎಂಬ ಶ್ಲೋಕದಲ್ಲಿ ''ಸುಪ್ತಂ ಕೃಷ್ಣಂ ಉದ್ಬೋಧ್ಯ ಪಾರಾರ್ಥ್ಯಂಸ್ವಂ ಶ್ರುತಿ ಶತಶಿರಃ ಸಿದ್ಧಂ ಅಧ್ಯಾಪಯಂತೀ'' - ಎಂದು ಹೇಳಿದ್ದಾರೆ. ಹೀಗೆ ತಿರುಪ್ಪಾವೈಯಲ್ಲಿ ಗೋದಾದೇವಿಯು ಒಂದು ಕಡೆ ಭಗವಂತನಲ್ಲಿ ಶರಣಾಗತಿ ಮಾಡುವಂತೆ ಸರ್ವಮಾನವರಿಗೂ ಉಪದೇಶ ಮಾಡಿದ್ದಾಳೆ; ಮತ್ತೊಂದು ಕಡೆ ಪರಮಾತ್ಮನನ್ನು ಯೋಗನಿದ್ರೆಯಿಂದ ಎಬ್ಬಿಸಿ ಎಲ್ಲರನ್ನೂ ಅನುಗ್ರಹಿಸುವಂತೆ ಪ್ರಾರ್ಥಿಸಿ ಅವನಲ್ಲಿ ಶರಣಾಗತಿ ಮಾಡಿದ್ದಾಳೆ. ಹೀಗೆ ಮಾನವರನ್ನು ಅಜ್ಞಾನ ನಿದ್ರೆಯಿಂದಲೂ, ಪರಮಾತ್ಮನನ್ನು ಯೋಗ ನಿದ್ರೆಯಿಂದಲೂ, ಎಬ್ಬಿಸಿ, ಉಪದೇಶ ಪರವಾದ ಸಂದೇಶವನ್ನು ನೀಡಿದ್ದಾಳೆ. 'ಪಾರಾರ್ಥ್ಯಂಸ್ವಂ' ತನ್ನ ಪಾರಾರ್ಥ್ಯವನ್ನು ಅಂದರೆ ತಾನು ಪರಮಾತ್ಮನಿಗಾಗಿಯೇ ಇರುವವಳು ಎಂಬುದನ್ನು, ಪರಮಾತ್ಮನನ್ನು ಯೋಗ ನಿದ್ರೆಯಿಂದ ಎಚ್ಚರಗೊಳಿಸಿ, ಅವನಿಗೆ ಉಪದೇಶಿಸಿ ಅವನ ಅನುಗ್ರಹವನ್ನು ಪ್ರಾರ್ಥಿಸಿದ್ದಾಳೆ.

### ತಿರುಪ್ಪಾವೈಯ ಮೂವತ್ತು ಪಾಶುರಗಳ ವಿಶೇಷಾರ್ಥದ ಸಾರಾಂಶ

ತಿರುಪ್ಪಾವೈಯ ಪಾಶುರಗಳಿಗೆ ಸಾಮನ್ಯವಾದ ವಾಕ್ಯಾರ್ಥ ಮತ್ತು ಅದರೊಳಗೆ ಅಡಗಿರುವ ತತ್ವಗಳನ್ನು ತಿಳಿಸುವ ವಿಶೇಷಾರ್ಥ ಎಂದು ಎರಡು ವಿಧವಾದ ಅರ್ಥಗಳಿವೆ ಎಂಬುದನ್ನು ಮೊದಲೇ ತಿಳಿಸಿದೆ. ಈ ಎರಡು ವಿಧವಾದ ಅರ್ಥಗಳನ್ನು ನಮ್ಮ ಪೂರ್ವಾಚಾರ್ಯರುಗಳು ವಿವರಿಸಿ ತಿಳಿಸಿದ್ದಾರೆ ಮತ್ತು ಶರಣಾಗತಿ ಮಾರ್ಗದ ವಿವರಣೆಯನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಮುಂದೆ ಮುಖ್ಯವಾಗಿ ತಿರುಪ್ಪಾವೈಯ ಪ್ರತಿ ಒಂದು ಪಾಶುರದ ವಿಶೇಷಾರ್ಥವನ್ನು ಸ್ವಲ್ಪಮಟ್ಟಿಗೆ ತಿಳಿಸುವ ಪ್ರಯತ್ನ ಮಾಡಿದೆ. ತಿರುಪ್ಪಾವೈಯ ಪಾಶುರಗಳ ಸಾಮಾನ್ಯ ಅರ್ಥವನ್ನು ಇಲ್ಲಿ ಹೆಚ್ಚಾಗಿ ವಿವರಿಸಿ ತಿಳಿಸುವ ಪ್ರಯತ್ನ ಮಾಡಿಲ್ಲ. ತಿರುಪ್ಪಾವೈಯ ಪಾಶುರಗಳಲ್ಲಿ ಬರುವ 'ನೀರಾಟ್ಟ' - ಮತ್ತು 'ಪರೈ' ಎಂಬ ಪದಗಳಿಗೆ ಅವುಗಳ ವಿಶೇಷಾರ್ಥವನ್ನು ತಿಳಿಸಿ - ನೀರಾಟ್ಟ ಎಂಬುದು ಭಗವನ್ನಾಮ ಸಂಕೀರ್ತನೆ ಮಾಡಿ, ಭಗವದನಂತ ಕಲ್ಯಾಣಗುಣ ಸಾಗರದಲ್ಲಿ ಮುಳುಗಿ, ಪಾಪತಾಪಗಳನ್ನೆಲ್ಲಾ ಪರಿಹರಿಸಿಕೊಂಡು, ಭಗವದನುಭವ ಪಡೆಯುವುದು ಎಂಬ ಮತ್ತು ಪರೈ - ಎಂಬುದು ಬರಿಯ ಒಂದು ವಾದ್ಯವಲ್ಲ. ಭಗವತ್ ಕೈಂಕರ್ಯ ಪುರುಷಾರ್ಥ - ಎಂಬ ವಿಶೇಷಾರ್ಥಗಳನ್ನು ಅನುಸಂಧಾನ ಮಾಡಿಕೊಂಡು ಪಾಶುರಗಳ ತತ್ವಾರ್ಥವನ್ನು ಅನುಭವಿಸುವ ಪ್ರಯತ್ನ ಮಾಡಿದೆ. ತಿರುಪ್ಪಾವೈಯ 30 ಪಾಶುರಗಳನ್ನು ನಾಲ್ಕು ಭಾಗವಾಗಿ ವಿಂಗಡಿಸಿ ಅರ್ಥವು ವಿವರಿಸಿ ತಿಳಿಸಲ್ಪಟ್ಟಿದೆ.

**1ನೆಯ ವಿಭಾಗ** - ಪಾಶುರಗಳು 1 ರಿಂದ 5 - ಇದು ತಿರುಪ್ಪಾವೈಗೆ ಪೀಠಿಕೆಯಾಗಿದೆ.

**2ನೆಯ ವಿಭಾಗ** - ಪಾಶುರಗಳು 6 ರಿಂದ 15 - ಭಗವದ್ಭಕ್ತರನ್ನೆಲ್ಲಾ ಎಬ್ಬಿಸಿ ಭಗವನ್ನಾಮ ಸಂಕೀರ್ತನೆ ಮಾಡುವ ತಮ್ಮ ಮಾರ್ಗಳಿ ನೀರಾಟ್ಟವೆಂಬ ವ್ರತದಲ್ಲಿ ಕಲೆತುಕೊಳ್ಳುವಂತೆ ಕರೆಯುವ ಪಾಶುರಗಳಾಗಿವೆ.

**3ನೆಯ ವಿಭಾಗ** - ಪಾಶುರಗಳು 16 ರಿಂದ 20 - ಭಗವತ್ ಕೈಂಕರ್ಯಪರರ, ಮತ್ತು ಆಚಾರ್ಯರ ಸಹಕಾರವನ್ನು ಮೊದಲು ಪ್ರಾರ್ಥಿಸಿ, ಎಲ್ಲರೊಂದಿಗೂ ಸೇರಿ ಶ್ರೀದೇವಿಯ ಪುರುಷಕಾರವನ್ನೂ, ಪರಮಾತ್ಮನ ಅನುಗ್ರಹವನ್ನೂ ಪ್ರಾರ್ಥಿಸುವ ಪಾಶುರಗಳಾಗಿವೆ.

**4ನೆಯ ವಿಭಾಗ** - ಪಾಶುರಗಳು 21 ರಿಂದ 29 - ಎಲ್ಲರೂ ಒಟ್ಟಿಗೆ ಸೇರಿ ಶ್ರೀ ಸಹಿತನಾದ ಪರಮಾತ್ಮನಲ್ಲಿ ಶರಣಾಗತಿಮಾಡಿ ತಮಗೆ ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸುವಂತೆ ಪ್ರಾರ್ಥಿಸುವ ಪಾಶುರಗಳಾಗಿವೆ.

**30ನೆಯ ಪಾಶುರವು** - ತಿರುಪ್ಪಾವೈಯ ಫಲಶ್ರುತಿಯಾಗಿದೆ.

47135

# 1ನೆಯ ವಿಭಾಗ

## ಪಾಶುರಗಳು 1 ರಿಂದ 5

## ಪಾಶುರ 1

ಈ ಮೊದಲನೆಯ ಪಾಶುರದಲ್ಲಿ ಗೋದಾದೇವಿಯು ಮಾರ್ಗಳಿ ನೀರಾಟ್ಟವೆಂಬ ಈ ವ್ರತವನ್ನು ಆಚರಿಸುವ ಕಾಲವನ್ನು ಮೊದಲು ಕೊಂಡಾಡಿದ್ದಾಳೆ ಮತ್ತು ಶ್ರೀಕೃಷ್ಣ ಪರಮಾತ್ಮನನ್ನು ಹೊಂದುವುದೇ ತಮಗೆ ಪರಮ ಪುರುಷಾರ್ಥವೆಂದೂ, ಅವನನ್ನು ಹೊಂದುವಂತೆ ಅನುಗ್ರಹಿಸುವವನು ಅವನೇ ಎಂದೂ ತಿಳಿಸಿದ್ದಾಳೆ.

**ಮಾರ್‌ಗಳಿ ತ್ತಿಂಗಳ್ ಮದಿನಿರೈನ್ದ ನನ್ನಾಳಾಲ್**
**ನೀರಾಡ ಪ್ಪೋದುವೀರ್ ಪೋದುಮಿನೋ ನೇರಿಳೈಯೀರ್ !**
**ಶೀರ್‌ಮಲ್‌ಹು ಮಾಯ್‌ಪ್ಪಾಡಿ ಶೆಲ್ವ ಚ್ಚಿರುಮೀರ್‌ಹಾಳ್ !**
**ಕೂರ್ವೇಲ್ ಕೊಡುನ್ದೊಳಿಲನ್ ನನ್ದಗೋಪನ್ ಕುಮರನ್**
**ಏರಾರ್‌ನ್ದ ಕಣ್ಣಿ ಯಶೋದೈ ಯಿಳಂಶಿಂಗಮ್**
**ಕಾರ್‌ಮೇನಿ ಚ್ಚೆಙ್ಗಣ್ ಕದಿರ್ ಮದಿಯಂಪೋಲ್ ಮುಗತ್ತಾನ್**
**ನಾರಾಯಣನೇ ನಮಕ್ಕೇ ಪರೈತರುವಾನ್**
**ಪಾರೋರ್ ಪುಗಳ ಪ್ಪಡಿನ್ದೇಲೋರೆಮ್ಬಾವಾಯ್ ।**

"ಐಶ್ವರ್ಯವು ತುಂಬಿರುವ ತಿರುವಾಯ್‌ಪ್ಪಾಡಿಯಲ್ಲಿರುವ (ನಂದಗೋಕುಲದಲ್ಲಿರುವ) ಸುಂದರವಾದ ಆಭರಣಗಳನ್ನು ಧರಿಸಿರುವ ಯುವತಿಯರೇ ! ತಿಂಗಳುಗಳಲೆಲ್ಲಾ ಶ್ರೇಷ್ಠವಾದ ಮಾರ್ಗಳಿ ಮಾಸವೂ, ಪೂರ್ಣಚಂದ್ರೋದಯದಿಂದ ಕೂಡಿರುವ ಶುಕ್ಲಪಕ್ಷದ ಒಳ್ಳೆಯದಿನವೂ

ಲಭಿಸಿದೆ. ಸ್ನಾನಮಾಡಲು ಇಚ್ಛೆಯುಳ್ಳವರೆಲ್ಲರೂ ಬನ್ನಿರಿ. ಹರಿತವಾಗಿರುವ ವೇಲಾಯುಧವನ್ನು ಧರಿಸಿರುವ ನಂದಗೋಪನಿಗೆ ಕುಮಾರನಾಗಿರುವವನೂ, ಸುಂದರವಾದ ಕಣ್ಣುಗಳನ್ನು ಪಡೆದಿರುವ ಯಶೋದೆಗೆ ಸಿಂಹದ ಮರಿಯಂತೆ ತೋರುವವನೂ ಮತ್ತು ಕಾಳಮೇಘದಂತೆ ನೀಲಮೇಘಶ್ಯಾಮ ವರ್ಣವುಳ್ಳವನೂ, ಕೆಂದಾವರೆ ಪುಷ್ಪಗಳಂತೆ ಕಣ್ಣುಗಳನ್ನು ಪಡೆದಿರುವವನೂ, ಸೂರ್ಯಚಂದ್ರರಂತೆ ಮುಖವುಳ್ಳವನೂ ಆದ ಶ್ರೀಮನ್ನಾರಾಯಣನೇ ನಮಗೆ ನಮ್ಮ ವ್ರತಾನುಷ್ಠಾನಕ್ಕೆ ಬೇಕಾದ ಪರೈ ಎಂಬ ವಾದ್ಯವನ್ನು ಕೊಡುವನು. ಈ ವ್ರತಾನುಷ್ಠಾನದಲ್ಲಿ ನಮ್ಮೊಂದಿಗೆ ಕಲೆತುಕೊಳ್ಳಲು ಇಚ್ಛೆಯುಳ್ಳವರೆಲ್ಲರೂ ಬನ್ನಿರಿ. ಜಗತ್ತಿನಲ್ಲಿರುವವರೆಲ್ಲರೂ ಕೊಂಡಾಡುವಂತೆ ನಮ್ಮ ವ್ರತವು ಶುಭವಾಗಿ ನೆರವೇರುವುದು'' - ಎಂದು ಈ ಪಾಶುರದಲ್ಲಿ ಗೋದಾದೇವಿಯು ಊರಿನ ಹೆಣ್ಣುಮಕ್ಕಳನ್ನೆಲ್ಲಾ ಮಾರ್ಹಳಿನೀರಾಟ್ಟವೆಂಬ ವ್ರತಾಚರಣೆಯಲ್ಲಿ ಅನ್ವಯಿಸಿ ಭಗವತ್‌ಕೃಪೆಗೆ ಪಾತ್ರರಾಗುವಂತೆ ಕರೆಯುತ್ತಾಳೆ ಎಂಬುದು ಸಾಮಾನ್ಯವಾದ ಅರ್ಥ.

ಆದರೆ ಮಾನವನು ಅರಿಯಬೇಕಾದ ತತ್ವ, ಆಚರಿಸಬೇಕಾದ ಹಿತ (ಉಪಾಯ) ಮತ್ತು ಪಡೆಯಬೇಕಾದ ಪುರುಷಾರ್ಥಗಳೆಲ್ಲವೂ ಈ ಒಂದು ಪಾಶುರದಲ್ಲಿ ತಿಳಿಸಿವೆ ಎಂಬುದು ವಿಶೇಷಾರ್ಥ. ಶ್ರೀಮನ್ನಾರಾಯಣನೇ ಪರತತ್ವವು; ಅವನಿಗೆ ಕೈಂಕರ್ಯ ಮಾಡುವುದೇ ಪರಮ ಪುರುಷಾರ್ಥವು ಮತ್ತು ಅದನ್ನು ಪಡೆಯಲು ಅವನೇ ಉಪಾಯವು. ಆದ್ದರಿಂದ ಭಗವನ್ನಾಮ ಸಂಕೀರ್ತನೆ ಮಾಡುತ್ತಾ ಅವನಲ್ಲಿ ಶರಣಾಗಿ ಅವನ ಕೃಪೆಗೆ ಪಾತ್ರರಾಗೋಣ ಬನ್ನಿರಿ ಎಂದು ಮೊದಲನೆಯ ಪಾಶುರದಲ್ಲಿ ಗೋದಾದೇವಿಯು ಭಗವತ್ ಕಲ್ಯಾಣಗುಣ ಸಾಗರದಲ್ಲಿ ಮುಳುಗುವುದೆಂಬ ನೀರಾಟ್ಟಕ್ಕೆ ಎಲ್ಲರನ್ನೂ ಕರೆಯುತ್ತಾಳೆ. ಇದಕ್ಕೆ ಭಗವನ್ನಾಮ ಸಂಕೀರ್ತನೆ ಮಾಡಿ ಭಗವದನುಭವ ಪಡೆಯಬೇಕೆಂಬ ಇಚ್ಛೆ

ಉಳ್ಳವರೆಲ್ಲರೂ ಅಧಿಕಾರಿಗಳು; ಆ ಇಚ್ಛೆ ಹೃದಯದಲ್ಲಿ ತುಂಬಿದ ಕಾಲವೇ ಸರಿಯಾದಕಾಲವು ಎಂದು ಹೇಳಿದ್ದಾಳೆ.

**ಮಾರ್ಗಳಿತ್ತಿಂಗಳ್** - ಮಾರ್ಗಶಿರ ಮಾಸದಲ್ಲಿ - ಅಂದರೆ ಸತ್ತ್ವಗುಣ ತಲೆ ಎತ್ತುವ ಕಾಲದಲ್ಲಿ - ಮಾಸಾನಾಂ ಮಾರ್ಗ ಶೀರ್ಷೋऽಸ್ಮಿ' ಅಂದರೆ ಮಾಸಗಳಲ್ಲಿ ತಾನು ಮಾರ್ಗಶೀರ್ಷ ಮಾಸವೆಂದು ಶ್ರೀ ಕೃಷ್ಣಪರಮಾತ್ಮನು ಗೀತೆಯಲ್ಲಿ ತಿಳಿಸಿರುವ ಮಾಸದಲ್ಲಿ -

**ಮದಿನಿರೈಂದನನ್ನಾಳಾಲ್** - ಪೂರ್ಣಚಂದ್ರನಿಂದ ಕೂಡಿರುವ ಶುಭ ದಿನದಲ್ಲಿ - ಅಂದರೆ ಮದಿ = ಬುದ್ಧಿ = ಭಕ್ತಿ - ಸತ್ವಗುಣವು ತಲೆ ಎತ್ತಿ ಹೃದಯವು ಭಕ್ತಿಯಿಂದ ತುಂಬಿ ಭಗವನ್ನಾಮ ಸಂಕೀರ್ತನೆ ಮಾಡಬೇಕೆಂಬ ಇಚ್ಛೆ ಹುಟ್ಟಿದ ದಿನವೇ ಶುಭ ದಿನ - ಅಂತಹ ಶುಭ ದಿನದಲ್ಲಿ - ಎಂಬುದು ವಿಶೇಷಾರ್ಥ.

**ನೀರಾಡ ಪೋದುವೀರ್ ಪೋದುಮಿನೋ** - ಸ್ನಾನ ಮಾಡಲು ಇಚ್ಛೆ ಇರುವವರೆಲ್ಲರೂ ಬನ್ನಿರಿ - ಅಂದರೆ ಭಗವದನುಭವ ಪಡೆಯಬೇಕೆಂಬ ಇಚ್ಛೆ ಉಳ್ಳವರೆಲ್ಲರೂ ಬನ್ನಿರಿ ಎಂಬುದು ವಿಶೇಷಾರ್ಥ. ಸ್ವರ್ಗಾದಿ ಇತರ ಅಲ್ಪ ಫಲಗಳನ್ನು ಪಡೆಯಲು ಕಷ್ಟ ಪಟ್ಟು ಪ್ರಯತ್ನ ಮಾಡಬೇಕು. ಆದರೆ ಭಗವದನುಭವ ಪಡೆಯಲು ಯಾವ ಕಷ್ಟವಾದ ಸಾಧನಾದಿಗಳನ್ನೂ ಮಾಡಬೇಕಾಗಿಲ್ಲ. ಭಗವದನುಭವ ಪಡೆಯಬೇಕೆಂಬ ಇಚ್ಛೆ ಹೊಂದಿ ಭಗವನ್ನಾಮ ಸಂಕೀರ್ತನೆ ಮಾಡಿ ಭಗವದ್ಗುಣ ಸಾಗರದಲ್ಲಿ ಮುಳುಗಿದರೆ ಸಾಕು. ಬೇರೆಯಾವ ನಿಯಮವೂ ಬೇಕಾಗಿಲ್ಲ.

**ನೇರಿಳೈಯೀರ್** - ಆಭರಣಗಳನ್ನು ಧರಿಸಿರುವವರೇ - ಅಂದರೆ ಭಗವದ್ಭಕ್ತಿ ಮತ್ತು ಭಗವತ್ ಶೇಷತ್ವಜ್ಞಾನವೆಂಬ ಆಭರಣ ಉಳ್ಳವರೇ - ಎಂಬುದು ವಿಶೇಷಾರ್ಥ. ಜ್ಞಾನ ಭಕ್ತಿಗಳೇ ಆತ್ಮಕ್ಕೆ ಆಭರಣ.

**ಶೀರ್‌ಮಲ್ಗುಂ ಆಯ್‌ಪ್ಪಾಡಿ** - ಶ್ರೀಕೃಷ್ಣನ ಸಂಬಂಧ ಪಡೆದ ಗೋಕುಲದಲ್ಲಿರುವ - ಅಂದರೆ ಭಗವಂತನಿಂದ ಸೃಷ್ಟಿಸಲ್ಪಟ್ಟು, ರಕ್ಷಿಸಲ್ಪಟ್ಟು, ಅವನನ್ನು ಅಂತರ್ಯಾಮಿಯಾಗಿ ಪಡೆದು, ಅವನ ಸಂಬಂಧವೆಂಬ ಸಂಪತ್ತಿನಿಂದ ತುಂಬಿರುವ ಈ ಜಗತ್ತಿನಲ್ಲಿರುವ - ಎಂಬುದು ವಿಶೇಷಾರ್ಥ.

**ಶೆಲ್ವಚ್ಚಿರುಮೀರ್‌ಹಾಳ್** - ಸಂಪತ್ತನ್ನು ಪಡೆದಿರುವ ಹೆಣ್ಣುಮಕ್ಕಳೇ - ಅಂದರೆ ಭಗವತ್‌ಜ್ಞಾನ-ಭಕ್ತಿ ಎಂಬ ಸಂಪತ್ತನ್ನು ಪಡೆದು ಅವನಿಗೆ ಶೇಷ ಭೂತರಾಗಿ ಅಂದರೆ ದಾಸರಾಗಿರುವ ಭಗವತ್ ಶೇಷತ್ವಜ್ಞಾನ ಉಳ್ಳ ಹೆಣ್ಣುಮಕ್ಕಳೇ - ಎಂಬುದು ವಿಶೇಷಾರ್ಥ

ಈ ಪಾಶುರದಲ್ಲಿ ಹೆಣ್ಣುಮಕ್ಕಳೇ ಬನ್ನಿರಿ, ಎಂದು ಎಲ್ಲರನ್ನೂ ಗೋದಾದೇವಿಯು ಭಗವನ್ನಾಮ ಸಂಕೀರ್ತನೆ ಮಾಡಲು ಕರೆಯುತ್ತಾಳೆ.

ಈ ಪಾಶುರದಲ್ಲಿ ಪರಮಾತ್ಮನ ಪರ, ವ್ಯೂಹ, ವಿಭವ, ಅತರ್ಯಾಮಿ, ಅರ್ಚೆ ಎಂಬ ಐದು ರೂಪಗಳಲ್ಲಿ ಅವನ ಪರತ್ವವನ್ನು ಮುಂದೆ ಐದು ವಿಶೇಷಣಗಳ ಮೂಲಕ ತಿಳಿಸಿದ್ದಾಳೆ.

(1) **ಕೂರ್ವೇಲ್ ಕೊಡುಂತೊಳಿಲನ್ ನಂದಗೋಪನ್ ಕುಮರನ್** - ಚೂಪಾಗಿರುವ ವೇಲಾಯುಧವನ್ನು ಧರಿಸಿ ಕೃಷ್ಣನನ್ನು ರಕ್ಷಿಸುವ ಕಾರ್ಯದಲ್ಲಿ ನಿರತನಾದ ನಂದಗೋಪನಿಗೆ ಮಗನಾಗಿರುವವನು - ನಂದಗೋಪನಿಗೆ ಕೃಷ್ಣ ಪರಮಾತ್ಮನು ತನ್ನ ಮಗನೆಂಬ ಹೆಮ್ಮೆ. ಕೃಷ್ಣ ಅವನಿಗೆ ಅಧೀನನಾದ ಮಗ - ಇಲ್ಲಿ ಪರಮಾತ್ಮ ಭಕ್ತರಿಗೆ ಅಧೀನನಾಗಿದ್ದಾನೆ, ಅವನು ಭಕ್ತಿಪ್ರಾಪ್ಯ ಎಂಬ ಅರ್ಥವೂ ತೋರಿಬರುತ್ತದೆ.

(2) **ಏರ್ ಆರ್‌ನ್ದ ಕಣ್ಣೆಯಶೋದೈ ಇಳಂಶಿಂಗಂ** - ಕೃಷ್ಣನಲ್ಲಿ ಪ್ರೇಮಹೊಂದಿ ಅವನನ್ನು ಎವೆ ಇಕ್ಕದೆ ನೋಡುವ ಕಣ್ಣುಳ್ಳಯಶೋದೆಗೆ ಸಿಂಹದ ಮರಿಯಂತೆ ತೋರುವವನು. ಯಶೋಧೆಗೆ ಕೃಷ್ಣನಲ್ಲಿ ಅತ್ಯಂತ ಪ್ರೇಮ. ಅವಳ ಪ್ರೇಮ

ತ್ಯಾಗಾತ್ಮಕವಾದುದು, ಹೀಗೆ ತ್ಯಾಗಾತ್ಮಕವಾದ ಪ್ರೇಮವುಳ್ಳ ಭಕ್ತರಿಗೆ ಅವನು ರಕ್ಷಕನಾಗಿ ತೋರುವವನು. ಅವನು ಪ್ರಪತ್ತಿ-ಪ್ರಾಪ್ಯ ಎಂಬ ಅರ್ಥತೋರಿ ಬರುತ್ತದೆ.

(3) **ಕಾರ್ಮೇನಿಚ್ಚೆಂಗಣ್** - ನೀಲ ಮೇಘ ಶ್ಯಾಮ ವರ್ಣವುಳ್ಳವನು. ಪುಂಡರೀಕಾಕ್ಷನಾಗಿರುವವನು. ಇಲ್ಲಿ ಪರಮಾತ್ಮನ ದಿವ್ಯ ಮಂಗಳ ವಿಗ್ರಹದ ವರ್ಣನೆ ಹೇಳಿದೆ. ಅವನು ದಿವ್ಯಮಂಗಳ ವಿಶಿಷ್ಟನೆಂಬ ಅರ್ಥ ತೋರಿಬರುತ್ತದೆ.

(4) **ಕದಿರ್ ಮದಿಯಂ ಪೋಲ್ ಮುಹತ್ತಾನ್** - ಸೂರ್ಯನಂತೆಯೂ, ಚಂದ್ರನಂತೆಯೂ ಮುಖವುಳ್ಳವನಾದ - ಇಲ್ಲಿ ವಿರೋಧಿಗಳಿಗೆ ಸೂರ್ಯನಂತೆ ತಾಪವುಂಟುಮಾಡುವವನಾಗಿಯೂ ಆಶ್ರಿತರಾದ ಭಕ್ತರಿಗೆ ಚಂದ್ರನಂತೆ ಹಿತಕರನಾಗಿಯೂ ಇರುವವನೂ ಆದ - ಎಂಬುದು ವಿಶೇಷಾರ್ಥ.

(5) **ನಾರಾಯಣನೇ** - ವಾತ್ಸಲ್ಯಾದಿ ಸಕಲ ಕಲ್ಯಾಣ ಗುಣಗಳನ್ನೂ, ಜ್ಞಾನ ಶಕ್ತ್ಯಾದಿಗಳನ್ನೂ ಪಡೆದಿರುವ ನಾರಾಯಣನೇ - ಸಕಲ ಚೇತನಾಚೇತನ ವಸ್ತುಗಳಿಗೆ ತಾನು ಆಶ್ರಯನಾಗಿಯೂ ಅಂತರಾತ್ಮನಾಗಿಯೂ ಇರುವ ನಾರಾಯಣನೇ.

(ಈ ಐದು ವಿಶೇಷಣಗಳೂ ಪರಮಾತ್ಮನ ಪರತ್ವವನ್ನು ಸೂಚಿಸುತ್ತವೆ. ಈ ಅರ್ಥಗಳು ಶ್ರುತಿಯಲ್ಲಿಯೂ ಪ್ರತಿಪಾದಿಸಲ್ಪಟ್ಟಿವೆ) ಶ್ರೀ ಕೃಷ್ಣನೇ ನಾರಾಯಣನು ಎಂಬುದು ಇಲ್ಲಿ ತಿಳಿಸಲ್ಪಟ್ಟಿದೆ.

**ನಮಕ್ಕೇ** - ನಮಗೇ ಅಂದರೆ ಅಕಿಂಚನ, ಅನನ್ಯಗತಿಕರಾಗಿ; ಅಜ್ಞರೂ, ಅಶಕ್ತರೂ ಆಗಿ; ಅವನ ಪಾದಾರವಿಂದವನ್ನು ಆಶ್ರಯಿಸಿರುವ ನಮಗೇ ಎಂದು ಅರ್ಥ.

**ಪರೈತರುವಾನ್** - ಪರೈ ಎಂಬ ವಾದ್ಯವನ್ನು ಕೊಡುವನು ಅಂದರೆ ಕೈಂಕರ್ಯವೆಂಬ ಪುರುಷಾರ್ಥವನ್ನು ಕೊಡುವನು ಎಂಬುದು ವಿಶೇಷಾರ್ಥ.

**ಪಾರೋರ್ ಪುಹಳಪ್ಪಡಿಂದ್** - ಲೋಕದವರೆಲ್ಲಾ ಕೊಂಡಾಡುವಂತೆ ನಾವು ಅಕ್ಕರೆಯಿಂದ ಭಗವದ್ಗುಣಾನುಭವದಲ್ಲಿ ಮುಳುಗಿದರೆ.

**ಏಲ್ ಓರ್ ಎಂಪಾವಾಯ್** - ನಮ್ಮ ಅದ್ವಿತೀಯವಾದ ಭಗವತ್‌ಕ್ಕೈಂಕರ್ಯ ರೂಪವಾದ ಈ ವ್ರತವು ಶುಭವಾಗಿ ನೆರವೇರುವುದು.

ತಿರುಪ್ಪಾವೈಯ ಈ ಪಾಶುರದಲ್ಲಿ ಪ್ರಾಪ್ಯ, ಪ್ರಾಪಕಗಳು ಅಂದರೆ ಪುರುಷಾರ್ಥ, ಮತ್ತು ಉಪಾಯಗಳು ಸಂಗ್ರಹವಾಗಿ ತಿಳಿಸಲ್ಪಟ್ಟಿವೆ. ನೀರಾಟ್ಟ ಅಥವಾ ಭಗವದನುಭವವೇ ಪುರುಷಾರ್ಥ; ಅದನ್ನು ಪಡೆಯಲು ಭಗವಂತನೇ ಉಪಾಯ; ಭಗವದನುಭವ ಪಡೆಯಬೇಕೆಂಬ ಆಸೆ ಉಳ್ಳವರೆಲ್ಲರೂ ಅದಕ್ಕೆ ಅಧಿಕಾರಿಗಳು; ಆ ಆಸೆ ಹೃದಯದಲ್ಲಿ ಉಂಟಾದ ಕಾಲವೇ ಶುಭ ಕಾಲವು; ಪ್ರಾಪ್ಯ ಪ್ರಾಪಕಗಳೆರಡೂ ಭಗವಂತನೇ; ಅವನು ಭಕ್ತರಿಗೆ ಅತ್ಯಂತ ಸುಲಭನಾಗಿ, ದುಷ್ಟ ಶಿಕ್ಷಕ ಶಿಷ್ಟಪರಿಪಾಲಕನಾಗಿ, ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯಾದಿ ಅನಂತ ಕಲ್ಯಾಣ ಗುಣಭರಿತನಾಗಿ ಇದ್ದಾನೆ. 'ನಾರಾಯಣನೇ ನಮಕ್ಕೇ ಪರೈತರುವಾನ್' - ನಮಗೆ ಭಗವಂತನೇ ಉಪಾಯ. ಉಪಾಯಾಂತರಗಳಾಗಲಿ, ನಾವಾಗಲಿ, ನಾವು ಮಾಡುವ ಕರ್ಮಜ್ಞಾನಭಕ್ತಿ ಮುಂತಾದ ಸಾಧನಗಳಾಗಲಿ, ಶರಣಾಗತಿಯೇ ಆಗಲಿ ಯಾವುದೂ ಉಪಾಯವಲ್ಲ; ಭಗವದನುಭವವೇ ಪುರುಷಾರ್ಥ; ಭಗವಂತನೇ ಉಪಾಯ; ಅವನನ್ನೇ ಉಪಾಯವಾಗಿ ವರಿಸಿರುವ ನಮಗೆ ಅವನೇ ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಭಗವನ್ನಾಮ ಸಂಕೀರ್ತನೆ ಮಾಡಿ ಅವನಲ್ಲಿ ಶರಣಾಗತಿ ಮಾಡೋಣ ಬನ್ನಿರಿ ಎಂಬುದೇ ಮೊದಲನೆಯ ಪಾಶುರದ ಮುಖ್ಯ ತಾತ್ಪರ್ಯ. ಒಟ್ಟಿನಲ್ಲಿ ಪ್ರಾಪ್ಯ, ಪ್ರಾಪಕ, ಅಧಿಕಾರಿ, ಕಾಲ ಇವುಗಳೆಲ್ಲದರ ವಿಚಾರವು ಮೊದಲನೆಯ ಪಾಶುರದಲ್ಲಿ ಸಂಗ್ರಹವಾಗಿ ತಿಳಿಸಿದೆ.

# ಪಾಶುರ 2

ಈ ಎರಡನೆಯ ಪಾಶುರದಲ್ಲಿ ಕೃತ್ಯಾಕೃತ್ಯ ವಿವೇಕವು ವಿವರಿಸಲ್ಪಡುತ್ತದೆ. ಅಂದರೆ ಈ ವ್ರತವನ್ನು ಆಚರಿಸುವವರು ಮಾಡುವ ಮತ್ತು ತ್ಯಜಿಸುವ ಕರ್ಮಗಳನ್ನೆಲ್ಲಾ ಗೋದಾದೇವಿಯು ತಿಳಿಸಿದ್ದಾಳೆ.

**ವೈಯತ್ತು ವಾಳ್‌ವೀರ್‌ಹಾಳ್! ನಾಮುಮ್ ನಮ್ ಪಾವೈಕ್ಕು**
**ಶೆಯ್ಯುಂ ಕಿರಿಶೈಹಳ್ ಕೇಳೀರೋ, ಪಾರ್ಕಡಲುಳ್**
**ಪೈಯ ತ್ತುಯಿನ್ರ ಪರಮನಡಿ ಪಾಡಿ**
**ನೆಯ್ಯುಣ್ಣೋಂ ಪಾಲುಣ್ಣೋಂ ನಾಟ್ಕಾಲೇ ನೀರಾಡಿ**
**ಮೈಯಿಟ್ಟೆಳುದೋಂ ಮಲರಿಟ್ಟು ನಾಮುಡಿಯೋಂ**
**ಶೆಯ್ಯಾದನ ಶೆಯ್ಯೋಂ ತೀಕ್ಕುರಳೈ ಶೆನ್ರೋದೋಂ**
**ಐಯ್ಯಮುಂ ಪಿಚ್ಚೈಯುಂ ಆನ್ದನೈಯುಮ್ ಕೈಕಾಟ್ಟಿ**
**ಉಯ್ಯುಮಾರೆಣ್ಣಿ ಉಹನ್ದೇಲೋ ರೆಮ್ಪಾವಾಯ್ ।**

"ಈ ಭೂಲೋಕದಲ್ಲಿ ಉಜ್ಜೀವಿಸಬೇಕೆಂಬ ಆಸೆಯುಳ್ಳ ಭಾಗ್ಯವತಿಯರೇ ! ನಾವು ಈ ವ್ರತಕ್ಕೆ ಆಚರಿಸುವ ಕರ್ಮಗಳನ್ನು ಕೇಳಿರಿ. ಕ್ಷೀರಾಬ್ಧಿಯಲ್ಲಿ ಮೆಲ್ಲಗೆ ನಿದ್ರಿಸುತ್ತಿರುವ ಸರ್ವೇಶ್ವರನ ಪಾದಗಳನ್ನು ಸ್ತುತಿಸುತ್ತೇವೆ. ತುಪ್ಪವನ್ನು ಸೇವಿಸುವುದಿಲ್ಲ, ಹಾಲು ಕುಡಿಯುವುದಿಲ್ಲ. ಉಷಃಕಾಲದಲ್ಲಿ ಸ್ನಾನ ಮಾಡುತ್ತೇವೆ. ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುವುದಿಲ್ಲ. ಪುಷ್ಪಗಳನ್ನು ನಾವು ಮುಡಿದುಕೊಳ್ಳುವುದಿಲ್ಲ. ಮಾಡಬಾರದ ಕೆಲಸಗಳನ್ನು ಮಾಡುವುದಿಲ್ಲ. ಕೆಟ್ಟ ಮಾತುಗಳನ್ನು (ಚಾಡಿ ಮಾತುಗಳನ್ನು) ಅಲ್ಲಲ್ಲಿ ಹೋಗಿ ಹೇಳುವುದಿಲ್ಲ, ಅತಿಥಿ ಸತ್ಕಾರವನ್ನೂ ದೀನರಿಗೆ

ದಾನವನ್ನೂ ನಮ್ಮ ಕೈಲಾದಷ್ಟು ಮಾಡುತ್ತೇವೆ. ನಾವು ಉಜ್ಜೀವಿಸುವ ಪ್ರಕಾರವನ್ನು ಚಿಂತಿಸುತ್ತಾ ನಮ್ಮ ಈ ವ್ರತವನ್ನು ಸಂತೋಷದಿಂದ ಆಚರಿಸಿದರೆ ನಮ್ಮ ಅದ್ವಿತೀಯವಾದ ಈ ವ್ರತವು ಸಿದ್ಧಿಹೊಂದುವುದು''- ಎಂಬುದು ಈ ಪಾಶುರದ ವಾಕ್ಯಾರ್ಥ.

ನಂದಗೋಕುಲದಲ್ಲಿ ಪರಮಾತ್ಮನು ಕೃಷ್ಣನಾಗಿ ಅವತರಿಸಿ, ತಾನೂ ಗೋಕುಲದ ಜನಗಳಲ್ಲಿ ಒಬ್ಬನಾಗಿ, ಅವರೊಂದಿಗೆ ಕಲೆತು ಅವರಿಗೆಲ್ಲಾ ಉಜ್ಜೀವನವನ್ನು ಉಂಟುಮಾಡಿದ ಕಾಲದಲ್ಲಿ ಜನ್ಮಪಡೆದ ಗೋಕುಲದ ಭಾಗ್ಯವತಿಯರೇ - ಎಂದು ಗೋಪಿಯರನ್ನು ಸಂಬೋಧನೆ ಮಾಡಿ ಹೇಳುವ ಪಾಶುರವಿದು. ಈ ವ್ರತಾಚರಣೆ ಮಾಡುವವರು ಯಾವಯಾವ ಕೃತ್ಯಗಳನ್ನು ಆಚರಿಸುತ್ತಾರೆ ಮತ್ತು ಯಾವಯಾವ ಕೃತ್ಯಗಳನ್ನು ತ್ಯಜಿಸುತ್ತಾರೆ ಎಂಬುದು ಇದರಲ್ಲಿ ವಿವರಿಸಿದೆ. ಆದರೆ ಇದು ಕೇವಲ ಗೋಪಿಯರಿಗೆ ಮಾತ್ರ ಅನ್ವಯಿಸುವ ಪಾಶುರವಲ್ಲ. ಇದರಲ್ಲಿ ಜಗತ್ತಿನ ಮಾನವರೆಲ್ಲರಿಗೂ ಉಪದೇಶ ಅಡಗಿದೆ. ಗೋದಾದೇವಿಯು ಈ ಭೋಲೋಕದಲ್ಲಿ ಉಜ್ಜೀವಿಸಬೇಕೆಂದು ಆಸೆಯುಳ್ಳವರೆಲ್ಲರಿಗೂ ಇದರಲ್ಲಿ ಮಾರ್ಗದರ್ಶನವನ್ನು ಉಪದೇಶಮಾಡಿದ್ದಾಳೆ. ತಿರುಪ್ಪಾವೈಯ ಸರ್ವೋದಯ ಸಂದೇಶ ಈ ಒಂದು ಪಾಶುರದಲ್ಲಿ ಅಡಗಿದೆ ಎನ್ನಬಹುದು. ಇದರಲ್ಲಿ ಕೃತ್ಯಾಕೃತ್ಯ ವಿವೇಕವು ಹೇಳಲ್ಪಟ್ಟಿದೆ. ಅಲ್ಪವೂ, ಅಸ್ಥಿರವೂ, ಹೇಯವೂ ಆದ ವಿಷಯ ಚಿಂತನೆಯನ್ನು ಬಿಟ್ಟು ಸಮಸ್ತ ಕಲ್ಯಾಣ ಗುಣಾತ್ಮಕನಾದ ಪರಮಾತ್ಮನ ಚಿಂತನೆ ಮಾಡಿದರೆ ತ್ಯಾಜ್ಯ, ಉಪಾದೇಯಗಳೆರಡೂ ಸುಲಭಸಾಧ್ಯವಾದವುಗಳಾಗಿ ಸಂತೋಷವನ್ನು ಉಂಟುಮಾಡುವುವುಗಳಾಗಿ ಆಗುತ್ತವೆ. ಮೊದಲನೆ ಪಾಶುರದಲ್ಲಿ ಪ್ರಾಪ್ಯ, ಪ್ರಾಪಕ, ಅಧಿಕಾರಿ ಸ್ವರೂಪಗಳು ಹೇಳಲ್ಪಟ್ಟವು. ಈ ಪಾಶುರದಲ್ಲಿ ಆ ಅಧಿಕಾರಿಗೆ ಸಂಭಾವಿತವಾದ ಸ್ವಭಾವಗಳನ್ನು ತಿಳಿಸುತ್ತಾರೆ.

ವೈಯತ್ತ್ ವಾಳ್ವೀರ್‌ಹಾಳ್ -ವೈಯ್ಯಂ - ಎಂದರೆ ಪ್ರಪಂಚ ಎಂದು ಅರ್ಥ, ಈ ಭೂಲೋಕದಲ್ಲಿ ಬಾಳುತ್ತಿರುವವರೇ ಅಂದರೆ ಉಜ್ಜೀವಿಸಲು ಅಪೇಕ್ಷೆ ಉಳ್ಳವರೇ ಎಂದು ಎಲ್ಲರನ್ನೂ ಸಂಬೋಧಿಸಿ ಉಪದೇಶ ನೀಡಿದ್ದಾಳೆ. ಭಗವದನುಭವ ಹೊಂದುವುದೇ ಉಜ್ಜೀವನ. ಈ ಜಗತ್ತಿನಲ್ಲಿ ಭಗವದನುಭವ ಲಭಿಸುವುದು ಸುಲಭ ಸಾಧ್ಯವೇ ಎಂದರೆ ಅದು ಭಗವಂತನ ಕೃಪೆಯಿಂದ ಮಾತ್ರ ಸಾಧ್ಯವಾಗಬಲ್ಲದು. ಈಶಾವಾಸ್ಯೋಪನಿಷತ್ತಿನಲ್ಲಿ 'ಈಶಾವಾಸ್ಯಮಿದಂಸರ್ವಂ' ಎಂದು ಹೇಳಿರುವಂತೆ ಈ ಜಗತ್ತು ಅದರಲ್ಲಿ ಇರುವ ನಾವು ಎಲ್ಲವೂ ಪರಮಾತ್ಮನಿಗೆ ಸೇರಿದ್ದು. ಈ ಜಗತ್ತು ಪರಮಾತ್ಮನ ಅಪರಾ ಪ್ರಕೃತಿಯೆಂದೂ, ಜೀವತತ್ತ್ವವೇ ಅವನ ಪರಾಪ್ರಕೃತಿ ಎಂದೂ ಗೀತೆಯಲ್ಲಿಯೂ ಹೇಳಿದೆ. ಹೀಗೆ ಪರಮಾತ್ಮನ ಸ್ವತ್ತಾದ ಚೇತನರಿಗೆ, ಸ್ವಾಮಿಯಾದ ಪರಮಾತ್ಮನ ಅನುಭವ ಪಡೆದು ಅವನ ಕೈಂಕರ್ಯ ಮಾಡುವುದೇ ಉಜ್ಜೀವನ. ಆದರೆ ಇದು ಸುಲಭ ಸಾಧ್ಯವಲ್ಲ. ಏಕೆಂದರೆ 'ದೈವೀ ಹ್ಯೇಷಾಗುಣಮಯೀ ಮಮ ಮಾಯಾ ದುರತ್ಯಯಾ' ಎಂದು ಗೀತೆಯಲ್ಲಿ ಹೇಳಿರುವಂತೆ ಈ ಜಗತ್ತು ಸತ್ತ್ವರಜಸ್ತಮಸ್ಸುಗಳೆಂಬ ಮೂರು ಗುಣಗಳಿಂದ ಕೂಡಿದ್ದಾಗಿಯೂ, ಯಾರಿಂದಲೂ ದಾಟಲು ಅಶಕ್ಯವಾದುದಾಗಿಯೂ ಇರುವ ಒಂದು ಮಾಯಾ ಪ್ರಕೃತಿಯಾಗಿದೆ, ಮತ್ತು ಚೇತನನಿಗೆ ಪರಮಾತ್ಮನ ಸ್ವರೂಪವನ್ನು ಮರೆಸಿ, ತನ್ನ ಕಡೆಗೆ ಚೇತನನ ಮನಸ್ಸನ್ನು ಎಳೆದುಕೊಳ್ಳುವ ಒಂದು ಮಾಯಾಶಕ್ತಿಯನ್ನು ಪಡೆದಿದೆ. ಇದರಿಂದ ಬಂಧಿತನಾದ ಈ ಚೇತನನು ವಿಷಯಾಸಕ್ತಿಯಲ್ಲೇ ಮುಳುಗಿದವನಾಗಿ ಅಹಂಕಾರ, ಮಮಕಾರ, ಕಾಮಕ್ರೋಧಾದಿಗಳ ಬಲೆಗೆ ಸಿಕ್ಕಿ, ಕೊನೆಗೆ ಬುದ್ಧಿನಾಶ ಹೊಂದುತ್ತಾನೆ. ಇದನ್ನೇ ಗೀತೆಯಲ್ಲಿ 'ಬುದ್ಧಿನಾಶಾತ್ ಪ್ರಣಶ್ಯತಿ' ಎಂದು ಹೇಳಿದೆ. ಹೀಗೆ ವಿಷಯಾಸಕ್ತನಾದ ಚೇತನನು ಪರಮಾತ್ಮನಲ್ಲಿ ಭಕ್ತಿಹೊಂದಿ ಅವನ ಚಿಂತನೆ, ಕೀರ್ತನೆ, ಧ್ಯಾನಾದಿಗಳನ್ನು ಮಾಡಲು ಅಶಕ್ತನಾಗಿದ್ದಾನೆ. ಆದ್ದರಿಂದಲೇ

ಆಳ್ವಾರುಗಳು ''ಪಲನೀಕಾಟ್ಟಿಪ್ಪಡುಪ್ಪಾಯೋ'' ಎಂದೂ ''ಇನ್ನಂಕೆಡುಪ್ಪಾಯೋ'' ಎಂದೂ, 'ಆದಲಾಲ್ ಪಿರವಿವೇಂಡೇನ್' ಅಂದರೆ ನನ್ನನ್ನು ಏಕೆ ಈ ಜಗತ್ತಿನ ವಿಷಯಗಳಲ್ಲಿ ಮೋಹಿತನಾಗಿರುವಂತೆ ಮಾಡಿದ್ದೀಯೆ; ನನಗೆ ಈ ಜಗತ್ತಿನಲ್ಲಿ ಜನ್ಮವೇ ಬೇಡ ಎಂದೆಲ್ಲಾ ಪ್ರಾರ್ಥಿಸಿದ್ದಾರೆ.

ಆದರೆ 'ವೈಯ್ಯತ್ತುವಾಳ್ವೀರ್ ಹಾಳ್, ಕೇಳಿರೋ' ಅಂದರೆ ಇಂತಹ ಜಗತ್ತಿನಲ್ಲೂ ಉಜ್ಜೀವಿಸಲು ಮಾರ್ಗವುಂಟು, ಅದನ್ನು ತಿಳಿಸುತ್ತೇನೆ ಕೇಳಿರಿ ಎನ್ನುತ್ತಾಳೆ ಗೋದೆ. ಪ್ರಕೃತಿಯ ಮಾಯೆಯನ್ನು ದಾಟುವ ಮಾರ್ಗವುಂಟು. ''ಯಾರು ನನ್ನಲ್ಲಿ ಶರಣಾಗತಿ ಮಾಡುತ್ತಾರೆಯೋ ಅವರು ಸುಲಭವಾಗಿ ಪ್ರಕೃತಿಯ ಮಾಯೆಯನ್ನು ದಾಟಿ ಉಜ್ಜೀವನ ಪಡೆಯ ಬಲ್ಲರು 'ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿತೇ' - ಎಂದು ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಎಲ್ಲರಿಗೂ ಭರವಸೆ ನೀಡಿದ್ದಾನೆ, ಪರಮಾತ್ಮನಲ್ಲಿ ಶರಣಾಗತಿ ಮಾಡುವುದನ್ನೇ ಇಲ್ಲಿ 'ವೈಯ್ಯತ್ತ್‌ವಾಳ್ವು' ಅಂದರೆ ಈ ಭೂಲೋಕದಲ್ಲಿ ಉಜ್ಜೀವನ ಎಂದು ಹೇಳಿದೆ.

ಪರಮಪದ ಲಭಿಸದಿದ್ದರೆ ಬೇಡ , ಈ ಭೂಲೋಕದ ಬಾಳ್ವೆಯೇ ಮೇಲಾದುದು ಎಂದು ಭಕ್ತರೂ, ಆಳ್ವಾರುಗಳೂ ಹೇಳಿದ್ದಾರೆ, ಏಕೆಂದರೆ ಭಗವಂತನ ಕಲ್ಯಾಣ ಗುಣಗಳು ಪ್ರಕಾಶಿಸುವುದು ಈ ಭೂಲೋಕದಲ್ಲೇ. ಈ ಭೂಲೋಕದಲ್ಲೇ ಪರಮಾತ್ಮನ ಸೌಶೀಲ್ಯಾದಿ ಕಲ್ಯಾಣ ಗುಣಗಳು ಚೆನ್ನಾಗಿ ಪ್ರಕಾಶಿಸುತ್ತವೆ, ಅದರ ಪರಿಪೂರ್ಣ ಅನುಭವ ಹೊಂದಿ ಆನಂದಪಡುವ ಭಾಗ್ಯ ಈ ಭೂಲೋಕದಲ್ಲಿ ಹೆಚ್ಚಾಗಿ ಲಭಿಸುತ್ತದೆ. ಆದ್ದರಿಂದ ಈ ಭೂಲೋಕದಲ್ಲೇ ನಮಗೆ ಬಾಳ್ವೆ-ಅಂದರೆ ಉಜ್ಜೀವನ. ಆಳ್ವಾರುಗಳೂ ಈ ಭೂಲೋಕದ ಬಾಳ್ವೆಯನ್ನೇ ಬಹಳ ಮೇಲಾದುದಾಗಿ ಭಾವಿಸಿಕೊಂಡು ಹಾಡಿದ್ದಾರೆ. 'ಇಚ್ಚುವೈತವಿರ ಯಾನ್ ಪೋಯ್ ಇಂದಿರ ಲೋಕಮಾಳುಂ ಅಚ್ಚುವೈಪೆರಿನುಂ

ವೇಂಡೇನ್-ಅಂದರೆ 'ಈ ಭೂಲೋಕದಲ್ಲಿ ಇದ್ದುಕೊಂಡು ನಿನ್ನ ನಾಮಸಂಕೀರ್ತನೆ ಮಾಡುವ ಆನಂದವೇ ನನಗೆ ಸಾಕು; ಅದಕ್ಕಿಂತ ಸ್ವರ್ಗಲೋಕದ ಆನಂದವೂ ನನಗೆ ಬೇಡ' ಎಂದು ತೊಂಡರಡಿಪ್ಪೊಡಿ ಆಳ್ವಾರ್ರೂ; 'ಉಡಲೆನಕ್ಕುರುಹುಮಾಲೋ' - ಅಂದರೆ ಶ್ರೀ ರಂಗನಾಥನನ್ನು ದರ್ಶನ ಮಾಡಿ ನನ್ನ ಶರೀರ ಕರಗಿ ಹೋಗುತ್ತಿದೆ' ಎಂದೂ; ''ಅರಂಗನ್ನೈಕಂಡ ಕಣ್ಗಳ್ ಮತ್ತೊನ್ರಿನೈ ಕಾಣಾವೇ'' ಅಂದರೆ ಶ್ರೀ ರಂಗನಾಥನನ್ನು ಕಂಡ ನನ್ನ ಕಣ್ಣುಗಳು ಬೇರೆ ಏನನ್ನೂ ನೋಡಿ ಆನಂದಪಡಲಾರವು'' - ಎಂದೂ; 'ಪಡಿಯಾಯ್ ಕಿಡಂದ್ ಉನ್‌ಪವಳ ವಾಯ್‌ಕಾಣ್ಬೇನೆ' - ಅಂದರೆ ನಿನ್ನ ಭಕ್ತರುಗಳು ತುಳಿಯುವ ಮೆಟ್ಟಿಲಾಗಿ ಈ ತಿರುಪತಿಯಲ್ಲಿ ಇದ್ದು ಈ ನಿನ್ನ ಮುಖಮಂಡಲವನ್ನು ದರ್ಶಿಸಿ ಆನಂದ ಪಡುವೆನು ಎಂದೂ; 'ಏದೇನುಂ ಆವೇನೇ' - ಈ ತಿರುಮಲೆಯಲ್ಲಿ ಏನಾದರೂ ಆಗಿ ಇರುತ್ತೇನೆ. ಎಂದೆಲ್ಲಾ ಆಳ್ವಾರುಗಳು ಹಾಡಿದ್ದಾರೆ, ಅವರು ಶ್ರೀರಂಗನಾಥನನ್ನೂ ವೆಂಕಟೇಶ್ವರನನ್ನೂ ಸಾಕ್ಷಾತ್ಕರಿಸಿ ಆನಂದ ಪಟ್ಟಿದ್ದು ಈ ಭೂಲೋಕದಲ್ಲೇ ಅಲ್ಲವೆ. ಇದನ್ನೇ ಗೋದಾದೇವಿಯೂ ಸಹ ಇಲ್ಲಿ ಹೇಳುತ್ತಾಳೆ. ಈ ಭೂಲೋಕವೇ ಒಂದು ಕರ್ಮ ಕ್ಷೇತ್ರ, ಇದೇ ಕರ್ಮ ಭೂಮಿ, ಚೇತನನಿಗೆ ಕೈಂಕರ್ಯ ಮಾಡಲು ತಕ್ಕ ಸ್ಥಳ, ಆದರೆ ಚೇತನನು ಈ ಲೋಕದಲ್ಲಿ ಬಾಳ್ವೆ ನಡೆಸಲು ದಾರಿ ತಿಳಿಯದೆ ಪರಿತಪಿಸುತ್ತಿದ್ದಾನೆ. ಬೆಂಕಿಯ ಮೇಲಿಟ್ಟ ಮಡಕೆಯಲ್ಲಿರುವ ತಾವರೆ ಹೂವಿಗೆ ಅವನನ್ನು ಹೋಲಿಸಿದ್ದಾರೆ. ಆದರಂತೆ ಅವನು ಈ ಸಂಸಾರದ ತಾಪತ್ರಯಾಗ್ನಿಯಲ್ಲಿ ಸಿಕ್ಕಿ ಬೇಯುತ್ತಿದ್ದಾನೆ. ಅದರಿಂದ ತಪ್ಪಿಸಿಕೊಳ್ಳಲು ದಾರಿ ಕಾಣದೆ ಪರಿತಪಿಸುತ್ತಿದ್ದಾನೆ. ಆದರೆ ಅವನು ಭಗವನ್ನಾಮ ಸಂಕೀರ್ತನೆ ಮಾಡಿ, ಭಗವತ್ ಕೈಂಕರ್ಯಮಾಡಿ, ಆ ಬೆಂಕಿಯ ತಾಪವನ್ನು ಆರಿಸಿಕೊಂಡು ಉಜ್ಜೀವಿಸಬಲ್ಲನು, ಆದ್ದರಿಂದ ಈ ಲೋಕದ ಬಾಳ್ವೆಯನ್ನು ಬೇಡ ಎಂದು ತಿರಸ್ಕರಿಸದೆ, ವ್ಯರ್ಥಗೊಳಿಸದೆ, ಇಲ್ಲಿ ಇದ್ದುಕೊಂಡು ಭಗವನ್ನಾಮ ಸಂಕೀರ್ತನೆ, ಕೈಂಕರ್ಯಾದಿಗಳನ್ನು ಮಾಡಿ ಸಾಂಸಾರಿಕ

ಸಂಕೀರ್ತನೆ, ಕೈಂಕರ್ಯಾದಿಗಳನ್ನು ಮಾಡಿ ಸಾಂಸಾರಿಕ ತಾಪ ಆರಿಸಿಕೊಂಡು, ಉಜ್ಜೀವಿಸಿರಿ ಎಂದಿದ್ದಾಳೆ ಗೋದೆ. ಭಗವನ್ನಾಮ ಸಂಕೀರ್ತನೆ ಮಾಡಿ, ಭಗವದ್ಗುಣಾನುಭವ ಹೊಂದಿ, ಉಜ್ಜೀವಿಸಲು ಆಸೆ ಉಳ್ಳವರೆಲ್ಲರೂ, ನಾವು ಈ ವ್ರತಾಚರಣೆಗಾಗಿ ಆಚರಿಸುತ್ತಿರುವ ಮತ್ತು ತ್ಯಜಿಸುತ್ತಿರುವ ಕರ್ಮಗಳನ್ನು ಕಿವಿಗೊಟ್ಟು ಕೇಳಿರಿ ಎನ್ನುತ್ತಾಳೆ.

**ನಾಮುಂ ನಂ ಪಾವೈಕ್ಕ್ ಶೆಯ್ಯುಂ ಕಿರಿಶೈಹಳ್ ಕೇಳೀರೋ** - ನಾವೆಲ್ಲರೂ ನಮ್ಮ ವ್ರತಕ್ಕೆ ಮಾಡುವ ಕಾರ್ಯಗಳನ್ನು ಕೇಳಿರಿ. 'ನಾಮುಂ' - ನಾರಾಯಣನೇ ನಮಕ್ಕೇ ಪರೈತರುವಾನ್' ಎಂದು ಪರಮಾತ್ಮನೇ ಸಾಕ್ಷಾತ್ ಉಪಾಯ, ಅವನೇ ಪರಿಪೂರ್ಣ ಉಪಾಯ, ನಿರಪೇಕ್ಷ ಉಪಾಯ ಎಂದಿರುವ ನಾವೂ; 'ನಂಪಾವೈಕ್ಕ್' - ಭಗವತ್ ಪ್ರಾಪ್ತಿರೂಪವಾದ ಭಗವತ್ ಕೈಂಕರ್ಯವೆಂಬ ಈ ವ್ರತಕ್ಕೆ; 'ಶೆಯ್ಯುಂ ಕಿರಿಶೈಹಳ್' - ಮಾಡುವ ಕರ್ಮಗಳನ್ನು ಕೇಳಿರಿ.

''ನಾರಾಯಣನೇ ನಮಕ್ಕೇ ಪರೈತರುವಾನ್'' ಪರಮಾತ್ಮನೇ ಅವನಲ್ಲಿ ಶರಣಾಗತರಾದ ನಮಗೇ ಪುರುಷಾರ್ಥವನ್ನು ಅನುಗ್ರಹಿಸುತ್ತಾನೆ; ನಾವೇನೂ ಬೇರೆ ಸಾಧನೆ ಮಾಡಬೇಕಾಗಿಲ್ಲ; ಅವನೇ ಸಾಕ್ಷಾತ್ ಉಪಾಯ ಎಂದು ಮೊದಲನೆಯ ಪಾಶುರದಲ್ಲಿ ಹೇಳಿ, ಈಗ ಈ ಎರಡನೆಯ ಪಾಶುರದಲ್ಲಿ ನಾವು ನಮ್ಮ ವ್ರತಕ್ಕೆ ಮಾಡುವ ಕಾರ್ಯಗಳನ್ನು ಕೇಳಿರಿ ಎಂದು ಹೇಳಿರುವುದೇತಕ್ಕೆ ? ಅವನೇ ಉಪಾಯವೆಂದು ಹೇಳಿ ಪ್ರಾಪಕಾಂತರ ಅಂದರೆ ಬೇರೆ ಇತರ ಸಾಧನೆಗಳ ಪರಿತ್ಯಾಗ ಮಾಡಿದ ಇವರು ಈಗ ಹೀಗೆ ಮಾಡಿರಿ, ಹೀಗೆ ಮಾಡಬೇಡಿರಿ ಎಂದು ಉಪಾಯ ಹೇಳುವುದು ಸರಿಯೆ ? ಒಂದಕ್ಕೊಂದು ವಿರೋಧವಾಗುವುದಿಲ್ಲವೆ - ಎನ್ನಬಹುದು. ಇಲ್ಲಿ ಗೋದಾದೇವಿಯು ತಿಳಿಸುತ್ತಿರುವುದು ಭಕ್ತಿ ಮಾರ್ಗಕ್ಕಿಂತ ಸುಲಭವಾದ ಶರಣಾಗತಿ ಮಾರ್ಗ, ಇದರಲ್ಲಿ ಎಲ್ಲವನ್ನೂ ತ್ಯಜಿಸಿ, ಪರಮಾತ್ಮನಲ್ಲಿ ಶರಣಾಗತಿ ಮಾಡಿ, ಅವನನ್ನೇ ಉಪಾಯವಾಗಿ ಸ್ವೀಕರಿಸಬೇಕು. ಚೇತನನು ನಾರಾಯಣನೇ ನಮಕ್ಕೇ ಪರೈತರುವಾನ್ ಎಂದಿರಬೇಕು, ಆವನೇ ಉಪಾಯವೇ

ವಿನಃ ಬೇರೆ ಯಾರನ್ನೂ ಯಾವುದನ್ನೂ ಕೊನೆಗೆ ತಾನು ಮಾಡುವ ಶರಣಾಗತಿಯನ್ನೂ ಉಪಾಯವಾಗಿ ನೆನೆಸಕೂಡದು. ಪರೀಕ್ಷೆಯಲ್ಲಿ ಬಿ.ಎ., ಎಂ.ಎ., ಮುಂತಾದ ಡಿಗ್ರಿಗಳನ್ನು ಪಡೆಯುವುದು ಉದ್ಯೋಗಕ್ಕೆ ಸಾಧನವಾಗಲಾರದು. ಆದರೆ ಅದು ಉದ್ಯೋಗ ಪಡೆಯಲು ಯೋಗ್ಯತೆಯನ್ನುಂಟು ಮಾಡುತ್ತದೆ. ಅದು ಉಪಾಯವಾಗಲಾರದು. ಆದ್ದರಿಂದ 'ನಾರಾಯಣನೇ ನಮಕ್ಕೇ ಪರೈತರುವಾನ್' - ಅಂದರೆ ಪರಮಾತ್ಮನೇ, ಶರಣಾಗತಿ ಮಾಡಿ ಅರ್ಹತೆ ಪಡೆದಿರುವ ನಮಗೇ ಪುರುಷಾರ್ಥ ಕೊಡುತ್ತಾನೆ ಎಂದು ಸುಮ್ಮನೆ ಇರಬೇಕು. ಆದರೆ ಇವರಿಗೆ ''ಭಗವದನುಭವ ಪಡೆಯಬೇಕು, ಭಗವತ್ ಕೈಂಕರ್ಯ ಮಾಡಬೇಕು'' ಎಂಬ ಅತಿತ್ವರೆಯೂ ಆತುರವೂ ಇರುವುದರಿಂದ, ಅವನು ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸುವ ವರೆಗೂ ಕಾದಿರಲಾರದವರಾಗಿ, ಇವರು ತಾವಾಗಿಯೇ ವ್ರತಾನುಷ್ಠಾನಾದಿ ಗಳನ್ನೂ, ಕೃತ್ಯ ಅಕೃತ್ಯಾದಿಗಳನ್ನೂ ಅಂದರೆ ಮಾಡಬೇಕಾದ ಮತ್ತು ಮಾಡಬಾರದ ಕರ್ಮಗಳನ್ನೂ ಅರಿತು ಆಚರಿಸಿ ಭಗವನ್ನಾಮ ಸಂಕೀರ್ತನೆಮಾಡಿ ಅದರ ಆಚರಣೆಯಲ್ಲೇ ಭಗವದನುಭವ ಪಡೆದು ಆನಂದಪಡುತ್ತಾರೆ. ಆದ್ದರಿಂದ ಪ್ರಪನ್ನನು ಮಾಡುವ ಕೆಲಸಗಳೆಲ್ಲಾ 'ಉಹಂದ್ ಶೈಯ್ಯುಂಕಿರಿಶೈಹಳ್' - ಅಂದರೆ ಇಷ್ಟಪಟ್ಟು ಸಂತೋಷದಿಂದ ಮಾಡುವ ಕೆಲಸಗಳೇ ವಿನಹ ಉಪಾಯವಾಗಿ, ಸಾಧನವಾಗಿ ಮಾಡುವ ಕಾರ್ಯಗಳಲ್ಲ. ಸಮಸ್ತ ಕರ್ತವ್ಯಕರ್ಮಗಳನ್ನೂ ನಿಷ್ಕಾಮವಾಗಿ ಭಗವತ್ ಕೈಂಕರ್ಯವಾಗಿ 'ಉಹಂದ್' ಪ್ರೀತಿಪೂರ್ವಕವಾಗಿ, ಇಷ್ಟಪಟ್ಟು ಮಾಡುತ್ತಾರೆ.

**ಶೆಯ್ಯುಂಕಿರಿಶೈಹಳ್** - ಎಂದರೆ ಮಾಡಲೇಬೇಕಾದ ಕರ್ಮಗಳು ಎಂದು ಅರ್ಥಮಾಡಿದ್ದಾರೆ. ಕರ್ಮಯೋಗಿಯೂ, ಜ್ಞಾನಯೋಗಿಯೂ, ಭಕ್ತಿನಿಷ್ಠನೂ, ಪ್ರಪನ್ನನೂ ಎಲ್ಲರೂ ಕರ್ಮಮಾಡಲೇಬೇಕು. 'ಕರ್ಮಾಣಿಕುರ್ವನ್ನಪಿ' ಎಂದು ಗೀತೆಯಲ್ಲಿ ಶ್ರೀಕೃಷ್ಣನೂ, ತಿರುವಾಯ್ಮೊಳಿಯಲ್ಲಿ ''ಒಳಿವಿಲ್ ಕಾಲಮೆಲ್ಲಾಂ ಅಡಿವೈ ಶೆಯ್ಯವೇಂಡುಂ ನಾಂ'' - ಅಂದರೆ ಸರ್ವದೇಶ ಸರ್ವ ಕಾಲಗಳಲ್ಲೂ ಭಗವತ್

ಕೈಂಕರ್ಯಮಾಡುತ್ತಿರಬೇಕೆಂದು - ಶ್ರೀನಮ್ಮಾಳ್ವಾರ್ರವರೂ ಹೇಳಿರುವಂತೆ, ಸತ್ಕರ್ಮಾದಿಗಳನ್ನೂ ಕರ್ತವ್ಯಕರ್ಮಗಳನ್ನೂ ಎಲ್ಲರೂ ಮಾಡಲೇಬೇಕು.

ಆದರೆ ಇವರೆಲ್ಲರೂ ಮಾಡುವ ಕಾರ್ಯದ ಕರ್ಮಾಂಶದಲ್ಲಿ ವ್ಯತ್ಯಾಸವಿಲ್ಲ, ಕರ್ಮಾನುಷ್ಠಾನದಲ್ಲಿ ವ್ಯತ್ಯಾಸವಿಲ್ಲ; ಆದರೆ ಕರ್ಮಮಾಡುವ ಭಾವನೆಯಲ್ಲಿ ವ್ಯತ್ಯಾಸವಿದೆ. ಪ್ರಪನ್ನನು ಕರ್ಮಜ್ಞಾನಭಕ್ತಿಯೋಗಸಾಧನೆಗಳನ್ನೂ, ಕರ್ತವ್ಯ ಕರ್ಮಗಳನ್ನೂ ಎಲ್ಲವನ್ನೂ ಭಗವತ್ ಕೈಂಕರ್ಯ ಭಾವನೆಯಿಂದ, ಪ್ರೀತಿಯಿಂದ ಸಂತೋಷದಿಂದ ಮಾಡುತ್ತಾನೆ. ಆದ್ದರಿಂದ ಇಲ್ಲಿ ಗೋದಾದೇವಿಯು 'ಉಹಂದ್ ಶೆಯ್ಯುಂಕಿರಿಶೈಹಳ್-ಕೇಳೀರೋ' - ಅಂದರೆ ನಾವು ಭಗವತ್ ಕೈಂಕರ್ಯವೆಂಬ ಭಾವನೆಯಿಂದ ಪ್ರೀತಿಯಿಂದಲೂ, ಸಂತೋಷದಿಂದಲೂ ಮಾಡುವ ಮತ್ತು ತ್ಯಜಿಸುವ ಕರ್ಮಗಳನ್ನು ಕೇಳಿರಿ ಎಂದು ಹೇಳಿದ್ದಾಳೆ. ಇವು ಪ್ರಪನ್ನರಾದ ಅಧಿಕಾರಿಗಳ ಸ್ವಭಾವಗಳಾಗಿವೆ ಎಂದು ಅಭಿಪ್ರಾಯ.

**ಕೇಳೀರೋ** - ನೀವೆಲ್ಲರೂ ಶ್ರದ್ಧೆಯಿಂದ ಕೇಳಿರಿ - ಎನ್ನುತ್ತಾಳೆ. ಕೇಳುವುದೂ ಉಪಾಯ ಮತ್ತು ಪುರುಷಾರ್ಥ ಎರಡೂ ಆಗಿದೆ, ಕೇಳಿದಷ್ಟೂ ಅದು ಮನಸ್ಸಿಗೆ ನಾಟುತ್ತದೆ. ಶ್ರವಣ, ಮನನ, ನಿದಿಧ್ಯಾಸನ ಎಂಬ ಮೂರು ಸಾಧನೆಗಳಲ್ಲಿ ಶ್ರವಣವೇ ಅಂದರೆ ಕಿವಿಗೊಟ್ಟು ಶ್ರದ್ಧೆಯಿಂದ ಕೇಳುವುದೇ ಮೊದಲನೆಯ ಅಭ್ಯಾಸ. ಅದೂ ಅಲ್ಲದೆ "ಬೋಧಯಂತಃ ಪರಸ್ಪರಂ" ಎಂದು ಗೀತೆಯಲ್ಲಿ ಹೇಳಿರುವಂತೆ ಭಗವದ್ಭಕ್ತರು ತಮಗೆ ತಿಳಿದ ಭಗವದ್ವಿಷಯವನ್ನು ಇತರರಿಗೆ ಹೇಳಿ, ಅವರಿಗೆ ತಿಳಿದ ಭಗವದ್ವಿಷಯವನ್ನು ಅವರಿಂದ ಕೇಳಿ ಅನುಭವಿಸುತ್ತಾರೆ. ಹೀಗೆ ಒಬ್ಬರಿಗೊಬ್ಬರು ಪರಸ್ಪರ ಹೇಳಿ, ಕೇಳಿ ಆನಂದಪಡುತ್ತಾರೆ. ಹೇಳುವವರಿಗೂ ಕೇಳುವವರಿಗೂ ಇಬ್ಬರಿಗೂ ಆನಂದ. ಆದ್ದರಿಂದ ಭಗವನ್ನಾಮ ಕೇಳುವುದೂ, ಹಾಡುವುದೂ ಎರಡೂ ಪುರುಷಾರ್ಥವೇ. ಬಾಯಿಪಡೆದಿರುವುದಕ್ಕೆ ಭಗವನ್ನಾಮ ಹಾಡಿ ಸಂತೋಷಪಡಬೇಕು. ಕಿವಿ ಪಡೆದಿರುವುದಕ್ಕೆ ಭಗವನ್ನಾಮ ಕೇಳಿ

ಸಂತೋಷಪಡಬೇಕು. ಅಷ್ಟು ಮಾತ್ರವಲ್ಲದೆ ಭಗವನ್ನಾಮ ಸಂಕೀರ್ತನೆ ಕೇಳಿದರೂ ಸಾಕು ಅದು ಹೃದಯದಲ್ಲಿರುವ ಕಾಮಕ್ರೋಧಾದಿಗಳನ್ನು ಕರಗಿಸುತ್ತದೆ ಮತ್ತು ಮನಸ್ಸಿನಲ್ಲಿರುವ ವ್ಯಾಕುಲವನ್ನು ತೊಲಗಿಸಿ ಶಾಂತಿ ನೀಡುತ್ತದೆ. ಅಶೋಕವನದಲ್ಲಿ ಅತಿಯಾಗಿ ದುಃಖಿಸುತ್ತಿದ್ದ ಸೀತಾದೇವಿಯು ಆಂಜನೇಯನು ಹೇಳಿದ ಶ್ರೀರಾಮನಾಮವನ್ನು ಕೇಳಿ ಶಾಂತಿ ಹೊಂದಿದಳು. 'ಸಂಶ್ರವೇ ಮಧುರಂ ವಾಕ್ಯಂ' ಎಂದು ಶ್ರೀ ರಾಮಾಯಣದಲ್ಲಿ ಹೇಳಿದೆ. ಕೇಳೀರೋ - ನಾವು ಮಾಡುವ ಕಾರ್ಯಗಳನ್ನು ಕೇಳಿರಿ, ಅದನ್ನು ಕೇಳಿ ಕೇಳಿ ಅದರಲ್ಲಿ ಅಭಿರುಚಿ ಹುಟ್ಟಿ ಅದನ್ನು ಆಚರಿಸಲು ಕಾಲಕ್ರಮದಲ್ಲಿ ನೀವಾಗಿಯೇ ತ್ವರೆ ಹೊಂದುವಿರಿ; ಆದ್ದರಿಂದ ಈ ಭೂಲೋಕದ ಬಾಳ್ವೆಯನ್ನು ತಿರಸ್ಕರಿಸದೆ ಇಲ್ಲಿಯೇ ಉಜ್ಜೀವಿಸಿ ಜನ್ಮ ಸಾರ್ಥಕ ಮಾಡಿಕೊಳ್ಳುವ ಮಾರ್ಗವನ್ನು ತಿಳಿಸುತ್ತೇನೆ ಕೇಳಿರಿ ಎನ್ನುತ್ತಾಳೆ ಗೋದೆ.

**ಪಾರ್ಕಡಲುಳ್ ಪೈಯ್ಯ ತ್ತುಯಿನ್ರ ಪರಮನಡಿ ಪಾಡಿ** - ಕ್ಷೀರಾಬ್ಧಿಯಲ್ಲಿ ಮೆಲ್ಲಗೆ ಯೋಗ ನಿದ್ರೆ ಮಾಡುತ್ತಿರುವ ಪರಮಾತ್ಮನ ಪಾದಕಮಲಗಳನ್ನು ಹಾಡುತ್ತೇವೆ.

**ಪಾರ್ಕಡಲುಳ್ ಪೈಯ್ಯತ್ತುಯಿನ್ರ ಪರಮನ್** - ಪರಮಾತ್ಮನಿಗೆ ಪರ ವ್ಯೂಹ ವಿಭವ ಅಂತರ್ಯಾಮಿ ಮತ್ತು ಅರ್ಚೆ ಎಂಬ ಐದು ವಿಧವಾದ ಪ್ರಕಾರಗಳಿವೆ. ಪರಮಾತ್ಮನ ಈ ಐದು ರೂಪಗಳಿಗೂ ತಿರುಪ್ಪಾವೈಯ ಮೊದಲು ಐದು ಪಾಶುರಗಳಲ್ಲಿ ಮಂಗಳಾಶಾಸನ ಮಾಡಿದ್ದಾಳೆ. ಪರಮ ಪದದಲ್ಲಿ ಪರವಾಸುದೇವನಾಗಿ ಇರುವ ಅವನ ಪರರೂಪವನ್ನು ಮೊದಲನೆಯ ಪಾಶುರದಲ್ಲಿ ನಾರಾಯಣನೇ - ಎಂದು ಹಾಡಿದ್ದಾಳೆ. ಕ್ಷೀರಾಬ್ಧಿಯಲ್ಲಿ ಜಗದ್ರಕ್ಷಣ ಚಿಂತೆಯಲ್ಲಿ ಮುಳುಗಿ ಯೋಗ ನಿದ್ರೆಯಲ್ಲಿರುವ ಅವನ ವ್ಯೂಹರೂಪವನ್ನು ಈ ಎರಡನೆಯ ಪಾಶುರದಲ್ಲಿ 'ಪಾರ್ಕಡಲುಳ್ ಪೈಯ್ಯತ್ತುಯಿನ್ರ ಪರಮನ್' - ಎಂದು ಹಾಡಿದ್ದಾಳೆ.

**"ಏಷ ನಾರಾಯಣಃ ಶ್ರೀಮಾನ್ ಕ್ಷೀರಾರ್ಣವ ನಿಕೇತನಃ । ನಾಗಪರ್ಯಂಕಮುತ್ಸೃಜ್ಯ ಹ್ಯಾಗತೋ ಮಧುರಾಪುರೀಂ"** ಅಂದರೆ ಪರ ವಾಸುದೇವನಾದ

ಶ್ರೀಮನ್ನಾರಾಯಣನೇ ಕ್ಷೀರಾಬ್ಧಿಯಲ್ಲಿ ವ್ಯೂಹ ಮೂರ್ತಿಯಾಗಿದ್ದು, ಈಗ ಈ ಮಧುರಾಪುರಿಯಲ್ಲಿ ಕೃಷ್ಣನಾಗಿ ಅವತರಿಸಿದ್ದಾನೆ ಎಂದು ಹರಿವಂಶದಲ್ಲಿ ಹೇಳಿರುವಂತೆ ಪರಮಾತ್ಮನು ಕ್ಷೀರಾಬ್ಧಿಯಲ್ಲಿ ಶಯನಿಸಿಕೊಂಡಿದ್ದಾನೆ. ಎಲ್ಲರೂ ಪರಮಾತ್ಮನಲ್ಲಿ ಪ್ರಾರ್ಥನೆ ಸಲ್ಲಿಸುವ ಸ್ಥಳವೇ ಕ್ಷೀರಾಬ್ಧಿ - ಅಲ್ಲಿ ಅವನು ಆದಿ ಶೇಷನ ಮೇಲೆ ಮಲಗಿ ಯೋಗ ನಿದ್ರೆ ಮಾಡುತ್ತಿದ್ದಾನೆ. ತನ್ನ ಭಕ್ತರು ಯಾವಾಗ ಯಾವ ಹೊತ್ತಿನಲ್ಲಿ ಕೂಗುವರೋ, ಯಾರು ಯಾರಿಗೆ ತಾನು ಏನೇನು ಉಪಕಾರ ಮಾಡಬೇಕು ಎಂದೆಲ್ಲಾ ಯೋಚಿಸುತ್ತಾ ಭಕ್ತರ ಕೂಗನ್ನು ಕಿವಿಗೊಟ್ಟು ಕೇಳುತ್ತಾ ಕ್ಷೀರಾಬ್ಧಿಯಲ್ಲಿ ಪವಡಿಸಿದ್ದಾನೆ. ಇದೇ ಅವನ ವ್ಯೂಹ ರೂಪ.

**ಅಡಿಪಾಡಿ** - ಕ್ಷೀರಾಬ್ಧಿ ಶಯನನಾದ ಅವನ ಪಾದಾರವಿಂದವನ್ನು ಸ್ತೋತ್ರ ಮಾಡುತ್ತೇವೆ. ಪರಮಾತ್ಮನ ಪಾದಾರವಿಂದವೇ ಭಕ್ತನು ಆಶ್ರಯಿಸಬೇಕಾದ ಸ್ಥಳ. 'ತುಯರರು ಶುಡರಡಿತೊಳುದೆಳ್ನೆನನೇ' ಅಂದರೆ ದುಃಖವನ್ನು ಹೋಗಲಾಡಿಸುವ ಪರಮಾತ್ಮನ ಪಾದಾರವಿಂದಗಳನ್ನು ಸ್ತೋತ್ರಮಾಡು ಎಂಬುದೇ ಶ್ರೀನಮ್ಮಾಳ್ವಾರ್ರವರ ತಿರುವಾಯ್ಮೊಳಿಯ ಮೊಟ್ಟ ಮೊದಲನೆಯ ಉಪದೇಶ. ತಿರುವಾಯ್ಮೊಳಿಯಲ್ಲಿ ''ಕಣ್ಣನ್ ಕಳಲ್‌ಹಳ್ ನಿನ್ನೈಮಿನೋ' - 'ವಣ್‌ಪುಹಳ್ ನಾರಣನ್ ತಿಣ್‌ಕಳಲ್ ಶೇರೇ' - 'ಉನ್ನಡಿಕ್ಕೀಳ್ ಅಮರ್‌ನ್ದ್ ಪುಹುಂದೇನೆ'' ಎಂದು ಪರಮಾತ್ಮನ ಚರಣಾರವಿಂದವನ್ನೇ ಆಶ್ರಯಿಸಬೇಕೆಂದು ಅನೇಕ ಸಲ ಹೇಳಿದ್ದಾರೆ. ಅರ್ಜುನನು ಶ್ರೀಕೃಷ್ಣನ ಪಾದಾರವಿಂದಗಳನ್ನು ಆಶ್ರಯಿಸಿ ಜಯಗಳಿಸಿದನೆಂದೂ, ದುರ್ಯೋಧನನು ಅವನ ಮುಡಿ ಆಶ್ರಯಿಸಿ ಅಪಜಯ ಹೊಂದಿದನೆಂದೂ ಮಹಾಭಾರತದಲ್ಲಿ ಹೇಳಿದೆ. ''ತ್ವತ್ ಪಾದಾಂಭೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು'', ಅಂದರೆ ನಿನ್ನ ಪಾದಾರವಿಂದಗಳಲ್ಲಿ ನನಗೆ ನಿಶ್ಚಲವಾದ ಭಕ್ತಿ ಉಂಟಾಗಲಿ ಎಂದು ಕುಲಶೇಖರ ಆಳ್ವಾರ್ರವರು ಪ್ರಾರ್ಥಿಸಿದ್ದಾರೆ. ಶ್ರೀರಾಮಾನುಜಾಚಾರ್ಯರು ಶರಣಾಗತಿ ಗದ್ಯದಲ್ಲಿ 'ಶ್ರೀಮನ್ನಾರಾಯಣ, ತ್ವತ್ ಪಾದಾರವಿಂದಯುಗಳಂ ಶರಣಮಹಂ ಪ್ರಪದ್ಯೇ'

ಎಂದು ಪರಮಾತ್ಮನ ಅಡಿದಾವರೆಗಳಲ್ಲಿ ಶರಣಾಗತಿ ಮಾಡಿದ್ದಾರೆ. ಭಾಗವತರೊಂದಿಗೆ ಕಲೆತು ಪರಮಾತ್ಮನ ಅಡಿದಾವರೆಗಳಿಗೆ ಮಂಗಳ ಹಾಡಿ ಸ್ತೋತ್ರ ಮಾಡುವುದೇ ಪ್ರಯೋಜನ. ಅದೇ ಪುರುಷಾರ್ಥ, ಅದೇ ತಮ್ಮ ವ್ರತಕ್ಕೆ ಪ್ರಥಮ ಕರ್ತವ್ಯವೆಂದು, ಅದನ್ನು ಪರಮ ಉದ್ದೇಶವಾಗಿ, ಮೊದಲನೆಯ ಕರ್ತವ್ಯವಾಗಿ ಈ ಪಾಶುರದಲ್ಲಿ ತಿಳಿಸಿದೆ. ಮಿಕ್ಕ ಕರ್ತವ್ಯಗಳೆಲ್ಲ ಅದಕ್ಕೆ ಅಂಗರೂಪವಾದವುಗಳೆನ್ನಬಹುದು. ಪರಮಾತ್ಮನ ಪಾದಕ್ಕೇ ಹಿರಿಮೆ. ಅವನ ಚರಣ ಕಮಲಗಳಿಗೆ ಶರಣು ಹೋಗಬೇಕೆಂಬುದೇ ಪರಮ ಉದ್ದೇಶ. 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೆ' - ಎಂಬ ದ್ವಯ ಮಂತ್ರವನ್ನೇ ಇಲ್ಲಿ 'ಪರಮನಡಿ ಪಾಡಿ' - ಎಂದು ಹೇಳಿದೆ.

**ನೆಯ್ಯುಣ್ಣೋಂ ಪಾಲುಣ್ಣೋಂ** - ತುಪ್ಪವನ್ನು ಸೇವಿಸುವುದಿಲ್ಲ; ಹಾಲನ್ನು ಕುಡಿಯುವುದಿಲ್ಲ. ಪರಮಾತ್ಮನ ಅಡಿದಾವರೆಗಳನ್ನು ಹಾಡಿದ ಮೇಲೆ ಅವರಿಗೆ ಹಸಿವೇ ಇಲ್ಲ. ತುಪ್ಪ ಹಾಲುಗಳನ್ನು ಭುಜಿಸುವ ಅವಶ್ಯಕತೆಯೇ ಇಲ್ಲ ಎನ್ನುತ್ತಾರೆ. ''ವಾಸುದೇವಸ್ಸರ್ವಮಿತಿ''. ಅಂದರೆ ಮಹಾತ್ಮರುಗಳಿಗೆ ಪರಮಾತ್ಮನೇ ಸರ್ವಸ್ವ ಅಂದರೆ ಧಾರಕ ಪೋಷಕ ಭೋಗ್ಯ ವಸ್ತುಗಳೆಲ್ಲವೂ ಅವನೇ ಎಂದು ಗೀತೆಯಲ್ಲೂ, ''ಉಣ್ಣುಂಶೋರು-ಪರುಹುಂನೀರ್ ತಿನ್ನುಂವೆತ್ತಿಲ್ಲೈ ಎಲ್ಲಾಂಕಣ್ಣನ್'' - ಅಂದರೆ ತಿನ್ನುವ ಅನ್ನ, ಕುಡಿಯುವ ನೀರು, ಅಗಿಯುವ ಎಲೆ ಅಡಿಕೆ ಮುಂತಾಗಿ ಎಲ್ಲವೂ ತಮಗೆ ಪರಮಾತ್ಮನೇ ಎಂದು ತಿರುವಾಯ್ಮೊಳಿಯಲ್ಲೂ ಹೇಳಿದೆ. ಅದೇ ರೀತಿ ಪರಮಾತ್ಮನ ಅಡಿದಾವರೆಗಳನ್ನು ಹಾಡಿದ ಮೇಲೆ ತಮಗೆ ಅದನ್ನು ಬಿಟ್ಟು ಬೇರೆ ವಿಷಯಗಳಲ್ಲಿ ಅಭಿರುಚಿ ಇಲ್ಲವೆಂದೂ, ಬೇರೆ ಯಾವ ಭೋಗ್ಯ ವಸ್ತುಗಳ ಅನುಭವವೂ ಬೇಕಾಗಿಲ್ಲವೆಂದೂ ಅಭಿಪ್ರಾಯ. ಹಾಲು, ತುಪ್ಪ ಸಾತ್ವಿಕ ಧಾರಕ ಆಹಾರವಾಗಿದ್ದರೂ, ಅದನ್ನು ಭಗವಂತನಿಗೆ ನೈವೇದ್ಯ ಮಾಡಿ ಭಗವತ್ಪಸಾದವಾಗಿ ಸೇವಿಸುತ್ತೇವೆ ಎಂದು ಮುಂದೆ 27ನೇ ಪಾಶುರದಲ್ಲಿ ಹೇಳಿದ್ದಾರೆ. ಭಗವಂತನಿಗೆ ನೈವೇದ್ಯ ಮಾಡದೆ ಹಾಲು, ತುಪ್ಪವನ್ನು ಸೇವಿಸುವುದಿಲ್ಲ ಎಂದು ಅಭಿಪ್ರಾಯ.

**ನಾಟ್ಕಾಲೆ ನೀರಾಡಿ** - ಪ್ರಾತಃ ಕಾಲದಲ್ಲಿ ಸ್ನಾನಮಾಡಿ - ಅಂದರೆ ಉಷಃಕಾಲದಲ್ಲಿ ಮೊದಲು ಸ್ನಾನಮಾಡಿ ದೇಹಶುದ್ಧಿಮಾಡಿಕೊಂಡು, ಭಗವನ್ನಾಮ ಸಂಕೀರ್ತನೆ ಮಾಡಿ ಭಗವದ್ಗುಣ ಸಾಗರದಲ್ಲಿ ಮುಳುಗಿ ಮನೋ ಮಲಗಳನ್ನು ಹೋಗಲಾಡಿಸಿಕೊಳ್ಳುತ್ತೇವೆ. ಪ್ರಾತಃಕಾಲದಲ್ಲಿ ಸ್ನಾನಾದಿ ನಿತ್ಯ ಕರ್ಮಾಚರಣೆಯಿಂದ ಪ್ರಾರಂಭಿಸಿ, ನಮ್ಮ ಕರ್ತವ್ಯ ಕರ್ಮಗಳನ್ನು ಕರ್ಮಯೋಗವಾಗಿ ಅಂದರೆ ಭಗವನ್ನಾಮಸ್ಮರಣೆಯೊಂದಿಗೆ ಅವನ ಕೈಂಕರ್ಯವಾಗಿ ಆಚರಿಸುತ್ತೇವೆ, ಎಂದು ಅಭಿಪ್ರಾಯ.

**ಮೈಯಿಟ್ಟೆಳುದೋಂ ಮಲರಿಟ್ಟು ನಾಂ ಮುಡಿಯೋಂ** - ಕಣ್ಣಿಗೆ ಕಾಡಿಗೆ ಹಚ್ಚುವುದಿಲ್ಲ; ತಲೆಗೆ ನಾವು ಹೂ ಮುಡಿಯುವುದಿಲ್ಲ ಎಂದು ಅರ್ಥ. ಅಂದರೆ ಭಗವದ್ಗುಣ ಸಾಗರದಲ್ಲಿ ಮುಳುಗಿದ ಮೇಲೆ ತಮ್ಮ ಶರೀರಕ್ಕೆ ಬೇರೆ ಯಾವ ಭೋಗ ವಿಲಾಸ ವಸ್ತುಗಳ ಅವಶ್ಯಕತೆಯೂ ಇಲ್ಲ ಎನ್ನುತ್ತಾರೆ. ಭಗವದ್ಗುಣಾನುಭವವಲ್ಲದೆ ಇತರ ವಿಷಯಗಳಲ್ಲಿ ವೈರಾಗ್ಯದಿಂದಲೂ, ಆಹಾರ ವಿಹಾರಾದಿಗಳ ವಿಷಯದಲ್ಲೂ, ಶರೀರದ ಪೋಷಣೆ, ಬಾಹ್ಯ ಅಲಂಕಾರಾದಿಗಳ ವಿಷಯದಲ್ಲೂ ವಿರಕ್ತಿಯಿಂದ ಇರುವುದಾಗಿ ಹೇಳಿದ್ದಾರೆ. ಅಂದರೆ ಭಗವದ್ಗುಣಾನುಭವದಲ್ಲಿ ಮುಳುಗಿರುವವರಿಗೆ ಬೇರೆ ಯಾವುದರಲ್ಲೂ ಭೋಗ್ಯತಾ ಬುದ್ಧಿ ಹುಟ್ಟುವುದಿಲ್ಲ ಎಂದು ಅಭಿಪ್ರಾಯ. ಆದರೆ ಇಲ್ಲಿ ತ್ಯಾಜ್ಯವೆಂದು ಹೇಳಿರುವ ತುಪ್ಪ, ಹಾಲು, ಎಲ್ಲವನ್ನೂ ತಾವು ಭಗವಂತನೊಂದಿಗೆ ಸೇರಿದ ಮೇಲೆ, ಅವನ ಸಂಬಂಧ ಜ್ಞಾನಹೊಂದಿ ಭಗವದನುಭವ ಪಡೆದ ಮೇಲೆ, ಎಲ್ಲವೂ ಅವನ ಪ್ರಸಾದವೆಂದು ಸಂತೋಷವಾಗಿ ಸ್ವೀಕರಿಸುವುದಾಗಿ ಮುಂದೆ 'ಕೂಡಾರೈವೆಲ್ಲುಂ' ಎಂಬ 27ನೇ ಪಾಶುರದಲ್ಲಿ ತಿಳಿಸಿದ್ದಾರೆ. 'ಪಾಲ್‌ಶೋರು ಮೂಡನೆಯ್ ಪೆಯ್ದು' ಅಂದರೆ ಹಾಲು ಅನ್ನಕ್ಕೆ ತುಂಬ ತುಪ್ಪಹಾಕಿ ಭುಜಿಸುವುದಾಗಿಯೂ, ಒಳ್ಳೆ ವಸ್ತ್ರಗಳನ್ನೂ, ಆಭರಣಗಳನ್ನೂ ಧರಿಸುವುದಾಗಿಯೂ ಅಂದರೆ ಭಗವಂತನ ಪ್ರಸಾದವಾಗಿ ಎಲ್ಲವನ್ನೂ ಸ್ವೀಕರಿಸಿ ಸಂತೋಷಪಡುವುದಾಗಿಯೂ ಅಲ್ಲಿ ಹೇಳಿದ್ದಾರೆ. 'ಮೈಯಿಟ್ಟೆಳುದೋಂ ಮಲರಿಟ್ಟು

ನಾಂ ಮುಡಿಯೋಂ' - ಎಂಬುದಕ್ಕೆ ಭಗವತ್ಪ್ರಾಪ್ತಿಗೆ ಸಾಧಕಗಳಾದ, ಕಣ್ಣಿಗೆ ಪ್ರಕಾಶ ಕೊಡುವ ಜ್ಞಾನಯೋಗವನ್ನಾಗಲಿ, ನಮಗೆ ಯೋಗ್ಯವಾದುದಾಗಿ ಭಗವದನುಭವ ಕೊಡುವ ಭಕ್ತಿ ಯೋಗವನ್ನಾಗಲಿ ಸಾಧನ ಬುದ್ಧ್ಯಾ ಅಂದರೆ ಅವು ಭಗವತ್ಪ್ರಾಪ್ತಿಗೆ ಸಾಧನೆಗಳು ಎಂಬ ಬುದ್ಧಿಯಿಂದ ಆಚರಿಸುವುದಿಲ್ಲ, ಅವನ ಪ್ರೀತಿಗಾಗಿ, ಅವನ ಕೈಂಕರ್ಯವಾಗಿ ಅವುಗಳನ್ನು ಆಚರಿಸುತ್ತೇವೆ ಎಂದೂ ಆಚಾರ್ಯರುಗಳು ವಿಶೇಷಾರ್ಥ ಹೇಳಿದ್ದಾರೆ.

ಶೆಯ್ಯಾದನ ಶೆಯ್ಯೋಂ - ಮಾಡಬಾರದ ಕೆಟ್ಟ ಕಾರ್ಯಗಳನ್ನು ಮಾಡುವುದಿಲ್ಲ - ಅಂದರೆ ಮಹಾತ್ಮರು ಆಚರಿಸದ ಕಾರ್ಯಗಳನ್ನು ನಾವು ಆಚರಿಸುವುದಿಲ್ಲ. ಭಾಗವತರನ್ನೂ ಆಚಾರ್ಯರುಗಳನ್ನೂ ಮುಂದಿಟ್ಟುಕೊಂಡು ಭಗವಂತನಲ್ಲಿ ಶರಣಾಗತಿ ಮಾಡುತ್ತೇವೆ. 'ಯದ್ಯದಾಚರತಿ ಶ್ರೇಷ್ಠಃ' ಎನ್ನುವಂತೆ ಶಾಸ್ತ್ರ ವಿದಿತವಲ್ಲದ, ಮಹಾತ್ಮರು ಆಚರಿಸದ ಕೆಟ್ಟ ಕೆಲಸಗಳನ್ನು ಮಾಡುವುದಿಲ್ಲ.

ತೀಕ್ಕುರಳೈಶೆನ್ರು ಓದೋಂ - ಸುಳ್ಳುಚಾಡಿ ಮುಂತಾದ ಕೆಟ್ಟ ಮಾತುಗಳನ್ನು ಅಲ್ಲಲ್ಲಿ ಹೋಗಿ ಹೇಳುವುದಿಲ್ಲ. ಸೀತೆ ತನಗೆ ಹಿಂಸೆಕೊಟ್ಟ ರಾಕ್ಷಸಿಯರನ್ನು ಕೂಡ ಎಂದೂ ದೂಷಿಸಲಿಲ್ಲ. 'ನಕಶ್ಚಿತ್ ನಾಪರಾಧ್ಯತಿ' - ಅಂದರೆ ಯಾರು ತಾನೆ ತಪ್ಪು ಮಾಡುವುದಿಲ್ಲ. ಅವರು ತಮ್ಮ ಪ್ರಭುವಾದ ರಾವಣನ ಆಜ್ಞೆಯನ್ನು ಪಾಲಿಸಿದರೇ ವಿನಹ ಅವರದೇನೂ ತಪ್ಪಿಲ್ಲ ಎಂದು ಹನುಮಂತನೊಂದಿಗೆ ಅವರ ವಿಷಯವಾಗಿ ಒಳ್ಳೆಯ ಮಾತನ್ನೇ ಹೇಳುತ್ತಾಳೆ. ಹೀಗೆ ತನಗೆ ಹಿಂಸೆಮಾಡಿದವರ ವಿಷಯದಲ್ಲೇ ಕೆಟ್ಟ ಮಾತು ಹೇಳಬಾರದೆಂದಮೇಲೆ ಇತರರ ವಿಷಯದಲ್ಲಿ ಕೆಟ್ಟ ಮಾತು ಹೇಳುವ ಪ್ರಸಕ್ತಿಯೇ ಹುಟ್ಟುವುದಿಲ್ಲ. ಯಾರನ್ನೂ ದೂಷಿಸಬಾರದು ಎಂದು ಅರ್ಥ.

ಐಯ್ಯಮುಂ ಪಿಚ್ಚೈಯುಂ ಆಂದನೆಯುಂ ಕೈಕಾಟ್ಟಿ - ಜ್ಞಾನಿಗಳಿಗೆ ದಾನವನ್ನೂ ಭಿಕ್ಷುಕರಿಗೆ ಭಿಕ್ಷೆಯನ್ನೂ ನಮ್ಮ ಕೈಲಾದಷ್ಟು ನೀಡಿ ಸಹಾಯ ಮಾಡುತ್ತೇವೆ. ಭಗವಂತನ ಮತ್ತು ಭಾಗವತರ ವೈಭವವನ್ನು ನಮಗೆ ತಿಳಿದಷ್ಟು ಇತರರಿಗೆ ಉಪದೇಶ

ಮಾಡುತ್ತೇವೆ ಎಂದು ಅಭಿಪ್ರಾಯ. ಅಷ್ಟು ಮಾತ್ರವಲ್ಲದೆ ನಾವು ಕೊಟ್ಟೆವು, ನಾವು ದಾನ ನೀಡಿದೆವು, ನಾವು ಉಪದೇಶ ಮಾಡಿದೆವು ಎಂಬ ಅಹಂಕಾರ ಲೇಶ ಮಾತ್ರವೂ ಇಲ್ಲದವರಾಗಿ, ವಿನಯದಿಂದ ವರ್ತಿಸುತ್ತೇವೆ.

**ಉಯ್ಯುಮಾರು ಎಣ್ಣಿ ಉಹಂದ್** - ಉಜ್ಜೀವಿಸುವ ಪ್ರಕಾರವನ್ನು ಚಿಂತಿಸುತ್ತಾ - ಅಂದರೆ ನಮ್ಮ ಉಜ್ಜೀವನಕ್ಕೆ ಪರಮಾತ್ಮನೇ ಉಪಾಯವೆಂದು ಅರಿತು, ಸಂತೋಷದಿಂದ ಅವನಲ್ಲಿ ಶರಣಾಗತಿ ಮಾಡಿದರೆ,

**ಏಲ್ ಓರ್ ಎಂ ಪಾವಾಯ್** - ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು. ಇದನ್ನು ಉಯ್ಯುಂ ಆರು ಎಣ್ಣಿ - ಎಂದು ವಿಭಾಗಿಸಿ ಮುಂದೆ ತಿಳಿಸಿರುವಂತೆ ಮೂರು ವಿಧವಾದ ಅರ್ಥವನ್ನು ಹೇಳಿದ್ದಾರೆ. ಆದರೆ ಈ ಎಲ್ಲಾ ಅರ್ಥಗಳ ಸಾರಾಂಶವೂ ಒಂದೇ ಆಗಿದೆ.

**ಉಯ್ಯುಂ ಆರು ಎಣ್ಣಿ ಉಹಂದ್** - ಅಂದರೆ ಆರು ವಿಷಯಗಳು ಉಜ್ಜೀವನಕ್ಕೆ ಮುಖ್ಯವಾದವು ಎಂದು ಅರಿತು ಸಂತೋಷದಿಂದ ಅನುಸಂಧಾನ ಮಾಡಿದರೆ -

(1) ಉಜ್ಜೀವನಕ್ಕೆ ಬೇಕಾದ 'ಶ್ರೀಮನ್ನಾರಾಯಣಚರಣೌ, ಶರಣಂ, ಪ್ರಪದ್ಯೆ, ಶ್ರೀಮತೇ, ನಾರಾಯಣಾಯ, ನಮಃ' ಎಂಬ ಆರು ಪದಗಳಿಂದ ಕೂಡಿರುವ ದ್ವಯ ಮಂತ್ರಾನುಸಂಧಾನವನ್ನು ಸಂತೋಷದಿಂದ ಮಾಡುತ್ತಾ ಇದ್ದರೆ ನಮ್ಮ ವ್ರತವು ಶುಭವಾಗಿ ನೆರವೇರುತ್ತದೆ.

(2) ಉಜ್ಜೀವನಕ್ಕೆ ಬೇಕಾದ ಆನುಕೂಲ್ಯಸಂಕಲ್ಪಃ - ಪ್ರಾತಿಕೂಲ್ಯಸ್ಯ ವರ್ಜನಂ, ರಕ್ಷಿಷ್ಯತೀತಿ ವಿಶ್ವಾಸಃ, ಗೋಪ್ತೃತ್ವಾವರಣಂ, ಕಾರ್ಪಣ್ಯಂ, ಆತ್ಮನಿಕ್ಷೇಪಃ - ಎಂಬ ಷಡಂಗಗಳಿಂದ ಕೂಡಿರುವ ಪ್ರಪತ್ತಿಮಾಡಿ, ಸಂತೋಷದಿಂದ ಇದ್ದರೆ ನಮ್ಮ ವ್ರತವು ಶುಭವಾಗಿ ನೆರವೇರುವುದು.

(3) ಈ ಪಾಶುರದಲ್ಲಿ ಆರು ವಿಧವಾದ ತ್ಯಾಜ್ಯೋಪಾದೇಯಗಳು ಅಥವಾ

ಕೃತ್ಯಾಕೃತ್ಯಗಳು ಅಂದರೆ ಮಾಡಬೇಕಾದ ಮತ್ತು ಮಾಡಬಾರದ ಕಾರ್ಯಗಳು ತಿಳಿಸಲ್ಪಟ್ಟಿವೆ. ಅವು ಯಾವುವೆಂದರೆ -

(1) ಪರಮನಡಿ ಪಾಡಿ (2) ನಾಟ್ಕಾಲೆ ನೀರಾಡಿ (3) ಐಯ್ಯಮುಂಕೈಕಾಟ್ಟಿ (4) ಪಿಚ್ಚೈಯುಂ ಕೈಕಾಟ್ಟಿ (5) ಉಯ್ಯುಮಾರು ಎಣ್ಣಿ (6) ಉಹಂದ್ - ಇವು ಪ್ರಪನ್ನರಾದ ಗೋಪಿಯರು ಆಚರಿಸುವ ಆರು ಕೃತ್ಯಗಳು.

(1) ನೆಯ್ಯುಣ್ಣೋಂ (2) ಪಾಲುಣ್ಣೋಂ (3) ಮೈಯಿಟ್ಟೆಳುದೋಂ (4) ಮಲರಿಟ್ಟುನಾಮುಡಿಯೋಂ (5) ಶೆಯ್ಯಾದನ ಶೆಯ್ಯೋಂ (6) ತೀಕ್ಕುರಳೈ ಶೆನ್ರೋದೋಂ ಇವು ಪ್ರಪನ್ನರಾದ ಗೋಪಿಯರು ಆಚರಿಸದ ಆರು ಕೃತ್ಯಗಳು.

ಈ ಆರು ವಿಧವಾದ ಕೃತ್ಯಾಕೃತ್ಯಗಳನ್ನು ಅರಿತು ಸಂತೋಷದಿಂದ ಆಚರಿಸಿದರೆ ನಮ್ಮ ವ್ರತವು ಶುಭವಾಗಿ ನೆರವೇರುವುದು.

**ಉಹಂದ್** - ಕರ್ತವ್ಯ ಕರ್ಮಗಳನ್ನು ಭಗವತ್ ಕೈಂಕರ್ಯವೆಂದು ಸಂತೋಷವಾಗಿ ಮಾಡುತ್ತೇವೆ. ಭಗವಂತನಲ್ಲಿ ಭಕ್ತಿ ಅಂದರೆ ಪ್ರೀತಿ ಉಂಟಾದ ಮೇಲೆ ಅವನ ನಾಮ ಸಂಕೀರ್ತನಾದಿ ಕೈಂಕರ್ಯಗಳನ್ನು ಮಾಡುವುದರಲ್ಲಿ ಆನಂದವು ತಾನಾಗಿ ಲಭಿಸುತ್ತದೆ. ಈ ಜಗತ್ತಿನಲ್ಲಿ ನಾವು ನೆನೆಸುವ ವಸ್ತು ನಮಗೆ ಅತ್ಯಂತ ಪ್ರಿಯವಾಗಿದ್ದರೆ, ಅದರ ನೆನಪೇ ನಮಗೆ ಪ್ರಿಯವಾಗಿ ಸಂತೋಷಕರವಾಗಿ ಇರುತ್ತದೆಯಲ್ಲವೆ. ಅದೇ ರೀತಿ ನಮಗೆ ಭಗವಂತನಲ್ಲಿ ಪ್ರೀತಿ ಅಧಿಕವಾದರೆ ಅವನ ಸ್ಮರಣೆಯೇ ನಮಗೆ ಅತ್ಯಂತ ಸಂತೋಷವನ್ನು ಉಂಟು ಮಾಡುತ್ತದೆ. ಇದನ್ನೇ 'ಸುಸುಖಂಕರ್ತುಂ' ಎಂದು ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ. ಆದ್ದರಿಂದ ಭಗವನ್ನಾಮ ಸ್ಮರಣೆಯೊಂದಿಗೆ ಭಗವತ್‌ಕೈಂಕರ್ಯರೂಪವಾಗಿ ಕರ್ತವ್ಯ ಕರ್ಮಗಳನ್ನು ಮಾಡುವುದೇ ಸಂತೋಷಕರವಾಗಿರುತ್ತದೆ.

**ಏಲ್‌ಓರ್ ಎಂ ಪಾವಾಯ್** - ಮೇಲೆ ವಿವರಿಸಿರುವ ಕೃತ್ಯಾಕೃತ್ಯಗಳನ್ನು ಅರಿತು, ತ್ಯಜಿಸಬೇಕಾದವುಗಳನ್ನು ಸಂತೋಷದಿಂದ ತ್ಯಜಿಸಿ, ಮಾಡಬೇಕಾದವುಗಳನ್ನು

ಭಗವತ್ಕೈಂಕರ್ಯವೆಂದು ಸಂತೋಷದಿಂದ ಮಾಡಿದರೆ ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು.

ಒಟ್ಟಿನಲ್ಲಿ ಈ ಎರಡನೆಯ ಪಾಶುರದಲ್ಲಿ ಪರಮಾತ್ಮನ ಅಡಿದಾವರೆಗಳನ್ನು ಸ್ತೋತ್ರ ಮಾಡಿರಿ ಎಂಬುದೇ ಮುಖ್ಯವಾದ ಸಂದೇಶ. ಪ್ರಾತಃ ಕಾಲದಲ್ಲಿ ಸ್ನಾನಾದಿಗಳ ಮೂಲಕ ಶರೀರದ ಮಲಗಳನ್ನು ಕಳೆದುಕೊಂಡು ಪರಿಶುದ್ಧರಾಗಿ, ಪರಮಾತ್ಮನ ನಾಮ ಸಂಕೀರ್ತನಾದಿಗಳ ಮೂಲಕ ಮನಸ್ಸಿನಲ್ಲಿರುವ ಅಹಂಕಾರ ಮಮಕಾರಾದಿ ಮಾನಸಿಕ ಮಲಗಳನ್ನು ಹೋಗಲಾಡಿಸಿಕೊಂಡು, ಕೇವಲ ಶರೀರದ ಅಲಂಕಾರ, ಪೋಷಣಾದಿಗಳಲ್ಲೇ ಮಗ್ನರಾಗಿರದೆ. ಪರಮಾತ್ಮನ ಚಿಂತನೆ ಕೀರ್ತನಾದಿಗಳ ಮೂಲಕ ಅವನ ಕಲ್ಯಾಣಗುಣ ಸಾಗರದಲ್ಲಿ ಮುಳುಗಿ, ಹೀನ ಕಾರ್ಯಗಳನ್ನು ಮಾಡದೆ, ಕೆಟ್ಟ ಮಾತುಗಳನ್ನು ಆಡದೆ, ಶಕ್ತ್ಯಾನುಸಾರ ಕೈಲಾದಷ್ಟು ಧನ ವಿದ್ಯಾದಿಗಳನ್ನು ದಾನ ಮಾಡುತ್ತಾ, ಉಜ್ಜೀವಿಸುವ ಮಾರ್ಗವನ್ನು ಚಿಂತಿಸುತ್ತಾ, ಭಗವಂತನ ಕೈಂಕರ್ಯರೂಪವಾಗಿ ಕರ್ತವ್ಯ ಕರ್ಮಗಳನ್ನು ಸಂತೋಷವಾಗಿ ಆಚರಿಸುತ್ತಾ , ಅವನ ಅಡಿದಾವರೆಗಳಲ್ಲಿ ಶರಣಾಗತಿ ಮಾಡಿ ಸಂತೋಷವಾಗಿ ಬಾಳಿರಿ ಎಂದು ಈ ಜಗತ್ತಿನ ಜೀವಿಗಳಿಗೆಲ್ಲಾ ಗೋದಾದೇವಿಯು ಉಪದೇಶ ನೀಡಿದ್ದಾಳೆ.

## ಪಾಶುರ - 3

ಮೂರನೆಯ ಪಾಶುರದಲ್ಲಿ ಈ ವ್ರತಾಚರಣೆಯಿಂದ ಲಭಿಸುವ ಫಲಗಳನ್ನು ಗೋದಾದೇವಿಯು ತಿಳಿಸಿದ್ದಾಳೆ. ಈ ವ್ರತಾನುಷ್ಠಾನದಿಂದ ದೇಶದಲ್ಲಿ ಮೂರು ಬಾರಿ ಮಳೆ ಸುರಿದು, ದೇಶವು ಸುಭಿಕ್ಷವಾಗಿ, ಸಂಪತ್ಸಮೃದ್ಧವಾಗಿ ಆಗುತ್ತದೆ.

**ಓಂಗಿ ಉಲಹಳನ್ದ ಉತ್ತಮನ್ ಪೇರ್‌ಪಾಡಿ**
**ನಾಂಗಳ್ ನಂ ಪಾವೈಕ್ಕು ಶಾತ್ತಿ ನೀರಾಡಿನಾಲ್**
**ತೀಂಗಿನ್ರಿ ನಾಡೆಲ್ಲಾಂ ತಿಂಗಳ್ ಮುಮ್ಮಾರಿ ಪೆಯ್ದು**
**ಓಂಗು ಪೆರುಂಶೆನ್ನೆಲೂಡುಕಯಲುಗಳ**
**ಪೂಂಗುವಳೈಪ್ಪೋದಿಲ್ ಪೊರಿವಂಡು ಕಣ್ಪಡುಪ್ಪ**
**ತೇಂಗಾದೇ ಪುಕ್ಕಿರುಂದು ಶೀರ್ತ್ತ ಮುಲೈ ಪತ್ತಿ**
**ವಾಂಗ ಕುಡಂನಿರೈಕ್ಕುಂ ವಳ್ಳಲ್‌ಪೆರುಂಪಶುಕ್ಕಳ್**
**ನೀಂಗಾದ ಶೆಲ್ವಮ್ ನಿರೈಂದೇಲೋರೆಮ್ಬಾವಾಯ್.**

"ಬಹಳ ಎತ್ತರವಾಗಿ ಬೆಳೆದು ಲೋಕಗಳನ್ನು ಆಳೆದ ಪುರುಷೋತ್ತಮನಾದ ಪರಮಾತ್ಮನ ನಾಮವನ್ನು ಹಾಡಿ, ನಾವು ನಮ್ಮ ವ್ರತಕ್ಕಾಗಿ ಬಂದು ಸ್ನಾನಮಾಡಿದರೆ, ದೇಶದಲ್ಲೆಲ್ಲಾ ದೋಷನೀಗಿ (ಅತಿವೃಷ್ಟಿ, ಅನಾವೃಷ್ಟಿ ದುರ್ಭಿಕ್ಷಾದಿಗಳಿಲ್ಲದೆ), ತಿಂಗಳಿಗೆ ಮೂರು ಸಲ ಮಳೆ ಸುರಿದು, ಗದ್ದೆಗಳಲ್ಲಿ ಕೆಂಪು ಭತ್ತಗಳು ಚೆನ್ನಾಗಿ ದೊಡ್ಡದಾಗಿ ಬೆಳೆಯುತ್ತವೆ; ಅವುಗಳ ಪಾತಿಗಳ ಮಧ್ಯದಲ್ಲಿ ಮೀನುಗಳು ಉರುಳಿ ಆಟವಾಡುತ್ತಿರುತ್ತವೆ; ನೈದಿಲೆ ಪುಷ್ಪಗಳು ಅರಳುತ್ತವೆ. ಅವುಗಳ ಒಳಗೆ ಭ್ರಮರಗಳು ನಿದ್ರೆ ಮಾಡುತ್ತವೆ; ಶ್ರೇಷ್ಠವಾದ ದೊಡ್ಡ ಹಸುಗಳು, ಧೈರ್ಯದಿಂದ ದೃಢವಾಗಿ ಕುಳಿತು ಕ್ಷೀರಭರಿತವಾದ ಕೆಚ್ಚಲನ್ನು ಹಿಡಿದು ಹಾಲು

ಕರೆದಾಗ, ಕೊಡಗಳನ್ನು ಹಾಲಿನಿಂದ ತುಂಬುತ್ತವೆ; ನಾಶವಾಗದ ಐಶ್ವರ್ಯವು ಸಮೃದ್ಧವಾಗಿ ಇರುತ್ತದೆ ಮತ್ತು ನಮ್ಮ ಅದ್ವಿತೀಯವಾದ ವ್ರತವು ಸಿದ್ಧಿಯಾಗುತ್ತದೆ'' ಎಂಬುದು ಈ ಪಾಶುರದ ವಾಕ್ಯಾರ್ಥ. ಅಂದರೆ ಈ ವ್ರತಾಚರಣೆಗಾಗಿ ನಾವು ಪುರುಷೋತ್ತಮನಾದ ಪರಮಾತ್ಮನ ನಾಮ ಸಂಕೀರ್ತನೆ ಮಾಡಿದರೆ ಅದರ ಫಲವಾಗಿ ದೇಶದಲ್ಲಿ ಅತಿವೃಷ್ಟಿ, ಅನಾವೃಷ್ಟಿ, ದುರ್ಭಿಕ್ಷಾದಿಗಳಿಲ್ಲದೆ ತಿಂಗಳಿಗೆ ಮೂರು ಸಲ ಮಳೆ ಸುರಿದು, ಪೈರುಗಳು ಚೆನ್ನಾಗಿ ಬೆಳೆಯುತ್ತವೆ; ಹಸುಗಳು ಯಥೇಚ್ಚವಾಗಿ ಹಾಲು ಕರೆಯುತ್ತವೆ; ಮತ್ತು ದೇಶವು ಸುಭಿಕ್ಷವಾಗಿ ಸಂಪತ್ಸಮೃದ್ಧವಾಗಿ ಆಗುತ್ತದೆ. ದೇಶದಲ್ಲಿ ಧನ ಸಮೃದ್ಧಿ, ಗೋಸಮೃದ್ಧಿ ಮತ್ತು ಸಂಪತ್ಸಮೃದ್ಧಿ ಉಂಟಾಗುತ್ತದೆ ಎಂದು ತಾತ್ಪರ್ಯ. ಈ ವ್ರತಾಚರಣೆ ಮಾಡುವ ಅಂದರೆ ಭಗವದ್ಗುಣಾನುಭವರೂಪವಾಗಿ ಭಗನ್ನಾಮ ಸಂಕೀರ್ತನಾದಿಗಳನ್ನು ಮಾಡುವ ಮಾನವನ ಹೃದಯ ಕಮಲದಲ್ಲಿ ಅಂತರಾತ್ಮನಾಗಿ ನೆಲೆಸಿರುವ ಪರಮಾತ್ಮನು ಪ್ರಕಾಶವಾಗಿ ವಿರಾಜಿಸುತ್ತಾನೆ ಮತ್ತು ಅಂತಹ ಮಹಾನುಭಾವರಿರುವ ದೇಶವೂ ಕೂಡ ಸುಭಿಕ್ಷವಾಗಿ ಸಂಪತ್ಸಮೃದ್ಧವಾಗಿ ಇರುತ್ತದೆ ಎಂಬುದು ಈ ಪಾಶುರದ ವಿಶೇಷಾರ್ಥ.

**ಓಂಗಿ ಉಲಹಳನ್ದ ಉತ್ತಮನ್ ಪೇರ್‌ಪಾಡಿ** - ಅಂದರೆ ಉನ್ನತವಾಗಿ ಬೆಳೆದು ಲೋಕಗಳನ್ನೆಲ್ಲಾ ತನ್ನ ಪಾದಗಳಿಂದ ಅಳೆದ, ಪುರುಷೋತ್ತಮನಾದ ಪರಮಾತ್ಮನ ನಾಮ ಸಂಕೀರ್ತನೆ ಮಾಡಿ - ಎಂದು ಅರ್ಥ.

**ಓಂಗಿ ಉಲಹಳನ್ದ** - ಓಂಕಾರದಿಂದ ಈ ಪಾಶುರವನ್ನು ಗೋದಾದೇವಿಯು ಪ್ರಾರಂಭಿಸಿದ್ದಾಳೆ. ಮೊದಲನೆಯ ಪಾಶುರದಲ್ಲಿ 'ನಾರಾಯಣನೇ' ಎಂದು ಪರಮಾತ್ಮನ ಪರತ್ವವನ್ನು ಹಾಡಿ, ಎರಡನೆಯ ಪಾಶುರದಲ್ಲಿ ಅವನ ವ್ಯೂಹ ರೂಪವನ್ನೂ ಹಾಡಿ, ಈಗ ಈ ಮೂರನೆಯ ಪಾಶುರದಲ್ಲಿ ಅವನ ವಿಭವ ರೂಪವನ್ನು ವಾಮನ, ತ್ರಿವಿಕ್ರಮ ಅವತಾರಗಳನ್ನೂ ಹಾಡಿದ್ದಾಳೆ. ''ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ, ಶನ್ನೋ ವಿಷ್ಣುಃ

ಪ್ರಚೋದಯಾತ್''। ಎಂಬ ಶ್ರುತಿ ವಾಕ್ಯದಲ್ಲಿರುವಂತೆ 'ನಾರಾಯಣಾಯ' ಎಂಬುದನ್ನು ಮೊದಲನೆ ಪಾಶುರದಲ್ಲೂ 'ವಾಸುದೇವಾಯ' ಎಂಬ ವ್ಯೂಹ ರೂಪವನ್ನು ಎರಡನೆಯ ಪಾಶುರದಲ್ಲೂ 'ವಿಷ್ಣುಃ' - ಎಂಬುದನ್ನು ವಿಷ್ಣುವಿನ ಅವತಾರಗಳಾದ ವಾಮನ, ತ್ರಿವಿಕ್ರಮ ಅವತಾರಗಳನ್ನು ಮೂರನೆಯ ಪಾಶುರದಲ್ಲೂ ಹಾಡಿದ್ದಾಳೆ. ಕ್ಷೀರಾಬ್ಧಿಗೆ ಬಂದು ಜಗದ್ರಕ್ಷಣ ಚಿಂತೆಯಲ್ಲಿ ಯೋಗನಿದ್ರೆ ಮಾಡುತ್ತಾ ಮಲಗಿರುವ ಪರಮಾತ್ಮನನ್ನು ದೇವತೆಗಳು ಹೋಗಿ ಬೇಡಿಕೊಳ್ಳಲು ಅವರ ಆರ್ತಿಯನ್ನು ಹೋಗಲಾಡಿಸಿ, ಇಷ್ಟಪೂರ್ತಿ ಮಾಡುವ ಸಲುವಾಗಿ ವಾಮನನಾಗಿ ಅವತರಿಸಿ, ಬಲಿ ಚಕ್ರವರ್ತಿಯ ಬಳಿಗೆ ಹೋಗಿ, ಮೂರಡಿ ನೆಲವನ್ನು ಬೇಡಿ ತ್ರಿವಿಕ್ರಮನಾಗಿ ಬೆಳೆದು, ಪಾತಾಳಕ್ಕೆ ಒಂದು ಪಾದವನ್ನು ನೀಡಿ, ಮತ್ತೊಂದು ಪಾದವನ್ನು ಅಂತರಿಕ್ಷಕ್ಕೆ ನೀಡಿ, ಪಾತಾಳದಿಂದ ಅಂತರಿಕ್ಷದವರೆಗೆ ಇರುವ ಸಮಸ್ತ ಲೋಕಗಳನ್ನೂ ತನ್ನ ಪಾದಗಳಿಂದ ಅಳೆದು, ಅಲ್ಲಿರುವ ಸರ್ವ ಜಂತುಗಳನ್ನೂ ತನ್ನ ಪಾದಸ್ಪರ್ಶದಿಂದ ಉಜ್ಜೀವಿಸುವಂತೆ ಅನುಗ್ರಹಿಸಿದ ಪುರುಷೋತ್ತಮನಾದ ಪರಮಾತ್ಮನನ್ನು ಇಲ್ಲಿ ಹಾಡಿದ್ದಾಳೆ.

**ಉತ್ತಮನ್** - ಪರಮಾತ್ಮನ ಹೆಸರು ಹೇಳದೆ 'ಉತ್ತಮನ್' ಎಂದು ಹೇಳಿರುವುದೇತಕ್ಕೆ ಎಂದರೆ, ಇಲ್ಲಿ ಅವನ ಗುಣಾನುಭವ ಮಾಡಿದ್ದಾಳೆ, ಅವನ ಕಲ್ಯಾಣ ಗುಣಗಳನ್ನು ಅನುಭವಿಸಿ ಹಾಡಿದ್ದಾಳೆ. ''ನತೇರೂಪಂ ನಚಾಕಾರೋ ----- ಭಕ್ತಾನಾಂತ್ವಂ ಪ್ರಕಾಶಸೇ'' - ಎಂದು ಹೇಳಿರುವಂತೆ ಪರಮಾತ್ಮನು ರೂಪ ಆಕಾರಗಳನ್ನು ಭಕ್ತರಿಗಾಗಿ ಹೊಂದಿದ್ದಾನೆ, ಇತರರಿಗಾಗಿ ತಾನು ರೂಪ ಹೊಂದಿ ಅವರನ್ನು ಅನುಗ್ರಹಿಸುವುದರಿಂದ ಅವನು ಉತ್ತಮನು. ತನಗಾಗಿ ಇತರರನ್ನು ಹಿಂಸಿಸಿ ಬಾಳುವವನು ಅಧಮನು; ತನಗೂ ಒಳ್ಳೆಯದಾಗಲಿ ಇತರರಿಗೂ ಒಳ್ಳೆಯದಾಗಲಿ ಎಂದಿರುವವನು ಮಧ್ಯಮನು; ಇಲ್ಲಿ ಪರಮಾತ್ಮನು ಲೋಕದ ಜನರ ಉಜ್ಜೀವನಕ್ಕಾಗಿ ತನ್ನ ಸ್ವಾರ್ಥವನ್ನು ನೋಡದೆ ವಾಮನ ರೂಪತಾಳಿರುವುದರಿಂದ ಅವನು ಉತ್ತಮನು, ಅಷ್ಟು ಮಾತ್ರವಲ್ಲದೆ

ಗುಣಾವಗುಣ ನಿರೂಪಣೆ ಮಾಡದೆ, ಮೇಲು ಕೀಳೆಂಬ ವೈಷಮ್ಯಗಳ ತಾರತಮ್ಯವಿಲ್ಲದೆ, ಲೋಕದ ಸಮಸ್ತ ಜೀವಿಗಳ ಮೇಲೆ ತನ್ನ ಪಾದಸ್ಪರ್ಶ ಉಂಟುಮಾಡಿ ಎಲ್ಲರಿಗೂ ಸದ್ಗತಿ ಅನುಗ್ರಹಿಸಿರುವುದರಿಂದ ಅವನು ಉತ್ತಮನು. ''ಉತ್ತಮ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ'' - ಎಂದು ಗೀತೆಯಲ್ಲಿ ಹೇಳಿರುವಂತೆ ಅವನು ಉತ್ತಮ ಪುರುಷನಾಗಿದ್ದಾನೆ.

'ನಾರಾಯಣನ್' ಎಂದು ತಿರುಮಂತ್ರವನ್ನು ಮೊದಲನೇ ಪಾಶುರದಲ್ಲಿ ಹೇಳಿ, ನಾರಾಯಣ ಪದಾರ್ಥವಾದ ಸ್ವಾಮಿತ್ವವನ್ನೂ ಅವನ ಗುಣ ಪೂರ್ತಿಯನ್ನೂ - 'ಪರಮನ್' ಎಂದು ಎರಡನೆ ಪಾಶುರದಲ್ಲಿ ವಿವರಿಸಿ, ಆ ಸ್ವಾಮಿತ್ವವನ್ನೂ ಗುಣಪೂರ್ತಿಯನ್ನೂ ಪ್ರಕಾಶ ಪಡಿಸುವ ತ್ರಿವಿಕ್ರಮಾವತಾರ ವನ್ನು ಈ ಮೂರನೇ ಪಾಶುರದಲ್ಲಿ ಹೇಳಿದ್ದಾಳೆ. ಇದು ಅವನ ಶೇಷತ್ವ ಅಂದರೆ ಸ್ವಾಮಿತ್ವ ಪ್ರತಿಪಾದಕವಾದ ಅವತಾರ. ತ್ರಿವಿಕ್ರಮಾವತಾರ ಪರಮಾತ್ಮನ ವಿಗ್ರಹ ವ್ಯಾಪ್ತಿಯನ್ನು ತಿಳಿಸಿ ಅವನ ಶೇಷತ್ವವನ್ನು ಪ್ರಕಾಶ ಪಡಿಸುತ್ತದೆ ಮತ್ತು ತಿರುಮಂತ್ರಾರ್ಥವನ್ನು ವಿವರಿಸುತ್ತದೆ. ''ಮತ್ತಃ ಪರತರಂ ನಾನ್ಯತ್‌ಕಿಂಚಿದಸ್ತಿ ಧನಂಜಯ'' - 'ಶೇಷತ್ವದಲ್ಲೂ ಶರಣ್ಯತ್ವದಲ್ಲೂ ನನಗೆ ಸಮಾನರೂ, ಮೇಲಾದವರೂ ಯಾರೂ ಇಲ್ಲ' ಎಂದು ಪರಮಾತ್ಮನು ಗೀತೆಯಲ್ಲಿ ತಿಳಿಸಿರುವುದನ್ನು ತ್ರಿವಿಕ್ರಮಾವತಾರದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿ ತೋರಿಸಿದ್ದಾನೆ.

**ಉತ್ತಮನ್ ಪೇರ್‌ಪಾಡಿ** - ಪುರುಷೋತ್ತಮನ ನಾಮಸಂಕೀರ್ತನೆ ಮಾಡಿ-ಮೊದಲು ಎರಡು ಪಾಶುರಗಳಿಂದ ಭಗವದ್ಗುಣಸಾಗರದಲ್ಲಿ ಅವಗಾಹಿಸಲು, ಮುಳುಗಲು ಇಚ್ಛೆ ಉಳ್ಳವರೆಲ್ಲರೂ ಬನ್ನಿರಿ ಎಂದುಕರೆದು, ಈ ಭೂಮಿಯಲ್ಲಿ ಬಾಳುತ್ತಿರುವ ಭಾಗ್ಯವತಿಗಳೇ ಎಂದು ಅವರನ್ನು ಸಂಭೋದಿಸಿ - ಈಗ ಈ ಮೂರನೇ ಪಾಶುರದಲ್ಲಿ ಪುರುಷೋತ್ತಮನಾದ ಪರಮಾತ್ಮನ ನಾಮ ಸಂಕೀರ್ತನೆ ಮಾಡೋಣ ಎನ್ನುವುದರಿಂದ, ಭಗವನ್ನಾಮ ಸಂಕೀರ್ತನೆಯನ್ನು ಪ್ರೀತಿಯಿಂದ ಸಂತೋಷದಿಂದ ಹಾಡುವುದೇ ತಮ್ಮ ಬಾಳುವಿಕೆಗೆ

ಅನಾವೃಷ್ಟಿ,ಅಧಿಕವಾಗಿ ಮಳೆಯಾದರೆ ಅತಿವೃಷ್ಟಿ. ಇದೆಲ್ಲಾ ಇಲ್ಲದೆ ಮಳೆ ಒಂದು ಸಲ ಸುರಿದು ನಿಂತು ನೆಲ ಊರಿದ ಮೇಲೆ ಮತ್ತೆ ಮಳೆ ಸುರಿಯಬೇಕು. ಹೀಗೆ ತಿಂಗಳಿಗೆ ಮೂರುಸಲ ಮಳೆಯಾದರೆ ಗದ್ದೆಗಳಿಗೆ ಜಲ ಸಮೃದ್ಧಿ ಉಂಟಾಗಿ ಪೈರುಗಳು ಚೆನ್ನಾಗಿ ಬೆಳೆಯುತ್ತವೆ.

ಇಲ್ಲಿ 'ನಾಡೆಲ್ಲಾಂ' ಎಂಬ ಪದಕ್ಕೆ 'ದೇಶವೆಲ್ಲಾ' ಎಂಬುದು ವಾಕ್ಯಾರ್ಥ 'ಹೃದಯವೆಲ್ಲಾ' ಎಂಬುದು ವಿಶೇಷಾರ್ಥ, ವಿಶೇಷಾರ್ಥದ ಪ್ರಕಾರ ಇದರ ಅರ್ಥವೇನೆಂದರೆ - ನಾಮ ಸಂಕೀರ್ತನೆ ಮಾಡುವವರ ಹೃದಯದಲ್ಲಿ, ಆತ್ಮಾಪಹಾರವೆಂಬ ಚೌರ್ಯ, ಸ್ವಪ್ರಯತ್ನವೆಂಬ ದುರ್ಭಿಕ್ಷ, ವಿಷಯ ಸುಖಗಳಲ್ಲಿ ಅಧಿಕವಾದ ಆಸೆಯೆಂಬ ವ್ಯಾಧಿ ಮುಂತಾದ ದೋಷಗಳೆಲ್ಲಾ ನಾಶವಾಗುವುವು ಮತ್ತು ತಿರುಮಂತ್ರದ ಮೂರು ಪದಗಳ ಜ್ಞಾನಮಳೆ ಸುರಿದು ಹೃದಯದಲ್ಲಿ ಅದರ ಜ್ಞಾನವುಂಟಾಗುತ್ತದೆ. ಭಗವಂತನ ಸ್ವತ್ತಾದ ಆತ್ಮವಸ್ತುವನ್ನು ತನಗೇ ಸೇರಿದುದೆಂದು ತಿಳಿಯುವುದು ಆತ್ಮಾಪಹಾರವೆಂಬ ಚೌರ್ಯ-ಇದು ತೊಲಗಿದ ಮೇಲೆ ಪ್ರಣವದ ಅನನ್ಯಾರ್ಹ ಶೇಷತ್ವ ಜ್ಞಾನ - ಅಂದರೆ ನಾನು ಪರಮಾತ್ಮನಿಗೇ ಶೇಷಭೂತನು ಅಂದರೆ ದಾಸನು ಎಂಬ ಜ್ಞಾನವುಂಟಾಗುತ್ತದೆ; ತನ್ನನ್ನೂ ಸರ್ವರನ್ನೂ ರಕ್ಷಿಸಲು ಸರ್ವಶಕ್ತನಾದ ಪರಮಾತ್ಮನಿರುವಾಗ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತೇನೆ ಎಂದು ತಿಳಿದು ಸ್ವಪ್ರಯತ್ನದಲ್ಲಿ ಪ್ರವರ್ತಿಸುವುದೇ ದುರ್ಭಿಕ್ಷವು, ಇದು ತೊಲಗಿದ ಮೇಲೆ, 'ನಮಃ' ಎಂಬ ಪದದ ಅನನ್ಯ ಶರಣ್ಯತ್ವ ಜ್ಞಾನವು ಅಂದರೆ 'ಮಃನ' - ನನಗೆ ನಾನು ರಕ್ಷಕನಲ್ಲ, ಪರಮಾತ್ಮನೇ ನನಗೆ ರಕ್ಷಕನು; ಅವನಿಗೆ ನಾನು ಶರಣಾಗುತ್ತೇನೆ ಎಂಬ ಜ್ಞಾನವುಂಟಾಗುತ್ತದೆ; ವಿಷಯಾನ್ತರಗಳಲ್ಲಿ ಅಧಿಕವಾದ ಆಸೆ ಹೊಂದಿ ಅವುಗಳನ್ನು ಆಸೆಪಡುವುದೇ ವ್ಯಾಧಿಯು. ಇದು ತೊಲಗಿದಮೇಲೆ ನಾರಾಯಣ ಪದದ ಅನನ್ಯ ಭೋಗ್ಯತ್ವ ಅಂದರೆ ಪರಮಾತ್ಮನಿಗೆ ಕೈಂಕರ್ಯ ಮಾಡುವುದೇ ನಮಗೆ ಪರಮ ಪುರುಷಾರ್ಥವೆಂಬ ಜ್ಞಾನವು ಉಂಟಾಗುತ್ತದೆ. ಹೀಗೆ ಹೃದಯದಲ್ಲಿರುವ

ಆತ್ಮಾಪಹಾರ, ಸ್ವಪ್ರವೃತ್ತಿ ಮತ್ತು ವಿಷಯ ಸುಖಗಳಲ್ಲಿ ಅಧಿಕವಾದ ಆಸೆ ಇವುಗಳು ತೊಲಗಿ ಹೃದಯದಲ್ಲಿ ಅನನ್ಯ ಶೇಷತ್ವ, ಅನನ್ಯ ಶರಣ್ಯತ್ವ ಮತ್ತು ಅನನ್ಯಭೋಗ್ಯತ್ವಗಳೆಂಬ ಜ್ಞಾನವುಂಟಾಗುತ್ತದೆ ಎಂಬುದು ಇದರ ವಿಶೇಷಾರ್ಥ. - ಅಂದರೆ ಪರಮಾತ್ಮನೇ ನನಗೆ ಸ್ವಾಮಿ, ಅವನೇ ನನಗೆ ರಕ್ಷಕನು ಮತ್ತು ಅವನಿಗೆ ಕೈಂಕರ್ಯ ಮಾಡುವುದೇ ನನಗೆ ಪರಮ ಪುರುಷಾರ್ಥ ಎಂಬ ಜ್ಞಾನವುಂಟಾಗುತ್ತದೆ.

**ಓಂಗುಪೆರುಂಶೆನ್ನೆಲ್ ಊಡುಕಯಲುಹಳ** :- ದೇಶದಲ್ಲಿ ಕೆಂಪುಭತ್ತದ ಪೈರು ದೊಡ್ಡದಾಗಿ ಚೆನ್ನಾಗಿ ಬೆಳೆಯುತ್ತದೆ ಮತ್ತು ಅದರ ಪಾತಿಗಳಲ್ಲಿ ಮೀನುಗಳು ಹೊರಳಾಡಿ ಆಟವಾಡುತ್ತವೆ.

ನಾಮ ಸಂಕೀರ್ತನೆ ಮಾಡುವ ಭಕ್ತನ ಹೃದಯ ಪ್ರದೇಶದಲ್ಲಿ ಜ್ಞಾನ ಮಳೆ ಸುರಿದಮೇಲೆ ಭಗವದ್ಭಕ್ತಿ ಹೊರವಾಗಿ ಬೆಳೆಯುತ್ತದೆ ಮತ್ತು ಅದರ ಆಸರೆಯಲ್ಲಿ ಸತ್ತ್ವಗುಣಗಳೂ ಬೆಳೆಯುತ್ತವೆ. ಗೀತೆಯಲ್ಲಿ 12ನೇ ಅಧ್ಯಾಯದಲ್ಲಿ 'ಅದ್ವೇಷ್ಟಾಸರ್ವ ಭೂತಾನಾಂ' ಎಂಬ ಶ್ಲೋಕಗಳಲ್ಲಿ ತಿಳಿಸಿರುವ ಗುಣಗಳೆಲ್ಲಾ ಮೇಲೆಮೇಲೆ ಬೆಳೆಯುತ್ತವೆ. ಅವನು ಭಕ್ತಿಸಂಪನ್ನನಾಗುತ್ತಾನೆ ಮತ್ತು ಅವನ ಬಳಿ ಇರುವ ಇತರ ಚೇತನರೂ ತಮಗೆ ಪ್ರಾಪ್ತವಾದ ಈ ಸತ್ಸಂಗದಿಂದ ಸಂತೋಷ ಹೊಂದಿ ಅವನ ಬಳಿ ಓಡಾಡುವರು ಎಂಬುದು ಇದರ ವಿಶೇಷಾರ್ಥ.

**ಪೂಂಕುವಳೈಪ್ಪೋದಿಲ್ ಪೊರಿವಣ್ಣುಕ್ಕಣ್ಪಡುಪ್ಪ**: ಭತ್ತದ ಗಿಡದಲ್ಲಿ ನೈದಿಲೆ ಹೂವು ಅರಳಿದಾಗ, ದುಂಬಿಗಳು ಆ ನೈದಿಲೆ ಹೂವಿನಲ್ಲಿ ಮಲಗುತ್ತವೆ.

ಹೃದಯ ಪ್ರದೇಶದಲ್ಲಿ ಭಕ್ತಿಯು ಚೆನ್ನಾಗಿ ಬೆಳೆದು ಪ್ರಪತ್ತಿ ಪುಷ್ಪವಾಗಿ ಅರಳಿದಾಗ, ಅವನ ಹೃದಯದಲ್ಲಿ ಪರಮಾತ್ಮನು ಶ್ರೀಸಹಿತ ಯೋಗ ನಿದ್ರೆಯಲ್ಲಿರುವವನಾಗಿ ಪ್ರಕಾಶಿಸುವನು, ಎಂಬುದು ವಿಶೇಷಾರ್ಥ.

**ತೇಂಗಾದೆ ಪುಕ್ಕಿರುನ್ದು ಶೀರ್ತ್ತ ಮುಲೈಪತ್ತಿವಾಂಗ ಕುಡಂ ನಿರೈಕ್ಕುಂ ವಳ್ಳಲ್ ಪೆರುಂಪಶುಕ್ಕಳ್** :- ಧೈರ್ಯದಿಂದ ಒಳಹೊಕ್ಕು ಕುಳಿತು ಕ್ಷೀರದಿಂದ

VEDOPAVL 47135

ಕೆಚ್ಚಲನ್ನು ಹಿಡಿದು ಹಾಲು ಕರೆಯಲು, ಬಿಂದಿಗೆಯನ್ನು ಹಾಲಿನಿಂದ ತುಂಬುವ ಹಸುಗಳು ಹೆಚ್ಚುವುವು ಅಂದರೆ ಉದಾರಿಗಳೂ ಜ್ಞಾನಿಗಳೂ ಭಕ್ತರೂ ಆದ ಆಚಾರ್ಯರುಗಳು ಹೆಚ್ಚುವರು, ಎಂಬುದು ವಿಶೇಷಾರ್ಥ.

**ನೀಂಗಾದ ಶೆಲ್ವಮ್‌ನಿರೈಂದ್ :-** ದೇಶದಲ್ಲಿ ಅವಿಚ್ಛಿನ್ನವಾಗಿ ಅಂದರೆ ಎಂದಿಗೂ ಕಡಿಮೆಯಾಗದಂತಹ ಸಂಪತ್ಸಮೃದ್ಧಿಯಾಗುವುದು. ನಾಮಸಂಕೀರ್ತನೆ ಮಾಡುವವನ ಹೃದಯ ಪ್ರದೇಶದಲ್ಲಿ ಶಾಶ್ವತವಾದ ಜ್ಞಾನ ಸಂಪತ್ತು ಪ್ರಕಾಶವಾಗುವುದು. ಭಗವತ್ ಕೈಂಕರ್ಯವೆಂಬ ನೀಂಗಾದ ಶೆಲ್ವಂ ಲಭಿಸುವುದು ಎಂಬುದು ವಿಶೇಷಾರ್ಥ. ಇದು ಪಿರಾಟ್ಟಿಯ ಕಟಾಕ್ಷದಿಂದ ಬಂದ ಶೆಲ್ವ, ಶ್ರೀರಾಮನು ತನ್ನಲ್ಲಿ ಶರಣಾಗತರಾದ ಸುಗ್ರೀವ, ವಿಭೀಷಣ ಮುಂತಾದವರನ್ನು ರಕ್ಷಿಸಿದನು. ಆದರೆ ಸೀತೆ ತನ್ನನ್ನು ಅತಿಯಾಗಿ ಹಿಂಸಿಸಿದ ರಾಕ್ಷಸಿಯರನ್ನೇ ರಕ್ಷಿಸಿದ್ದಾಳೆ. 'ನಕಶ್ಚಿತ್‌ನಾಪರಾಧ್ಯತಿ' ಅಂದರೆ ಅವರು ತಮಗೆ ಯಜಮಾನನಾದ ರಾವಣನ ಕಟ್ಟಳೆಯನ್ನು ನಡೆಸಿದರೇ ವಿನಃ ಅವರದೇನೂ ತಪ್ಪಿಲ್ಲ. ಅದೂ ಅಲ್ಲದೆ ತಪ್ಪು ಮಾಡದವರು ಈ ಲೋಕದಲ್ಲಿ ಯಾರೂ ಇಲ್ಲ ಎಂದು ಹೇಳಿ ಅವರನ್ನೆಲ್ಲಾ ಕ್ಷಮಿಸಿ ರಕ್ಷಿಸಿದ್ದಾಳೆ. ಇಂತಹ ಜಗನ್ಮಾತೆಯ ಅನುಗ್ರಹದಿಂದ ಬಂದ ಐಶ್ವರ್ಯ ಇದು. ಇದು ಎಂದಿಗೂ ನಾಶಹೊಂದುವುದಿಲ್ಲ.

**ಏಲೋರ್ ಎಂಪಾವಾಯ್ :-** ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು.

ಮೂವತ್ತು ಪಾಶುರಗಳಿಂದ ಕೂಡಿರುವ ಈ ತಿರುಪ್ಪಾವೈಯಲ್ಲಿ ಎರಡು ಫಲಶ್ರುತಿಗಳು ಇವೆ. ಮೂರನೆಯ ಪಾಶುರ ಮತ್ತು ಮೂವತ್ತನೆಯ ಪಾಶುರ ಎರಡೂ ಫಲಶ್ರುತಿಗಳಾಗಿವೆ. ಅಂದರೆ ಅವುಗಳಲ್ಲಿ ವ್ರತಾಚರಣೆಯಿಂದ ಲಭಿಸುವ ಫಲ ಹೇಳಿದೆ. ಈ ಮೂರನೆಯ ಪಾಶುರದಲ್ಲಿ ಭಗವನ್ನಾಮ ಸಂಕೀರ್ತನೆಯೊಂದಿಗೆ ಈ ವ್ರತವನ್ನು ಅನುಷ್ಠಿಸಿದರೆ ದೇಶದಲ್ಲಿ ಮಳೆ, ಬೆಳೆಗಳಾಗಿ ಜಲಸಮೃದ್ಧಿ, ಧಾನ್ಯ ಸಮೃದ್ಧಿ, ಗೋಸಮೃದ್ಧಿ, ಕ್ಷೀರಸಮೃದ್ಧಿ ಮತ್ತು ಧನಸಮೃದ್ಧಿ

ಎಲ್ಲಾ ಲಭಿಸುತ್ತದೆ ಎಂಬ ವಿವರಣೆಯಿದೆ. ಆದರೆ ಗೋಪಿಗಳಿಗೆ ಭಗವತ್ ಕೈಂಕರ್ಯವೇ ಪುರುಷಾರ್ಥವಾಗಿದ್ದಿತು. ಅವರನ್ನು ಅನುಕರಣೆ ಮಾಡಿದ ಗೋದಾದೇವಿಗೂ ಅದೇ ಪುರುಷಾರ್ಥವಾಗಿರಬೇಕು. ಅಂದ ಮೇಲೆ 'ನೀಂಗಾದ ಶೆಲ್ವಂನಿರೈಂದ್' ಎಂದೂ ಎಂದಿಗೂ ಕಡಿಮೆಯಾಗದಂತಹ ಸಂಪತ್‌ಸಮೃದ್ಧಿ ಉಂಟಾಗುತ್ತದೆ ಎಂದು ಐಹಿಕಸಂಪತ್ತನ್ನು ಪುರುಷಾರ್ಥವಾಗಿ ಇಲ್ಲಿ ಹೇಳಿರುವುದು ಸರಿಯೇ ? ಪ್ರಪನ್ನರಾದ ಗೋಪಿಯರೂ, ಅವರ ಅನುಕರಣೆ ಮಾಡುವ ಗೋದಾದೇವಿಯೂ ಭಗವದನುಭವ ಒಂದನ್ನೇ ಪುರುಷಾರ್ಥವಾಗಿ ಆಸೆಪಡಬೇಕೇ ವಿನಹ ಈ ಜಲ, ಧನ, ಧಾನ್ಯ, ಗೋಸಮೃದ್ಧಿಗಳನ್ನೆಲ್ಲಾ ಪುರುಷಾರ್ಥವಾಗಿ ಇಲ್ಲಿ ಹೇಳಬಹುದೇ ಎಂಬ ಪ್ರಶ್ನೆ ಇಲ್ಲಿ ಹುಟ್ಟುತ್ತದೆ. ಇದಕ್ಕೆ ಉತ್ತರವಾಗಿ ನಮ್ಮ ಆಚಾರ್ಯರುಗಳು ಮೂರು ಅಭಿಪ್ರಾಯಗಳನ್ನು ತಿಳಿಸಿದ್ದಾರೆ :-

(1) ಮಾರ್ಗಳಿನೀರಾಟ್ಟವೆಂಬ ವ್ರತಾಚರಣೆ, ಭಗವದನುಭವಕ್ಕಾಗಿಯಾಗಿದ್ದರೂ, ಅವರು ಈ ಫಲಗಳನ್ನೆಲ್ಲಾ ಕೇಳುವುದು ತಮಗಾಗಿ ಅಲ್ಲ; ಗೋಕುಲದ ಗೊಲ್ಲರಿಗಾಗಿ ಇವುಗಳನ್ನು ಪ್ರಾರ್ಥಿಸುತ್ತಾರೆ; ಈ ವ್ರತವನ್ನು ಆಚರಿಸಲು ಅನುಮತಿಕೊಟ್ಟು ಸಹಕರಿಸಿರುವವರು ಅವರು. ಆದ್ದರಿಂದ ಅವರಿಗೆ ತಮ್ಮ ಕೃತಜ್ಞತೆಯನ್ನು ತೋರಿಸುವುದಕ್ಕಾಗಿ ಈ ಐಹಿಕ ಪುರುಷಾರ್ಥಗಳನ್ನು ಅವರಿಗಾಗಿ ದೇಶದ ಕ್ಷೇಮಕ್ಕಾಗಿ ಇವುಗಳನ್ನೆಲ್ಲಾ ಪ್ರಾರ್ಥಿಸುತ್ತಾರೆ ಎಂಬುದು ಒಂದು ಅಭಿಪ್ರಾಯ.

(2) ಶರಣಾಗತರಾದ ಭಕ್ತರು ಅನನ್ಯಪ್ರಯೋಜನಪರರಾಗಿ ಭಗವದನುಭವ ಒಂದನ್ನೇ ಪುರುಷಾರ್ಥವಾಗಿ ಪಡೆದವರಾಗಿದ್ದರೂ, ಭಕ್ತವತ್ಸಲನಾದ ಪರಮಾತ್ಮನು, ತನ್ನನ್ನು ದೃಢವಾಗಿ ನಂಬಿದ ಅವರಿಗೆ, ಅವರು ಕೇಳದಿದ್ದರೂ ಶರೀರಾರೋಗ್ಯ, ಐಶ್ವರ್ಯ ಭೋಗಾದಿಗಳನ್ನು ತಾನಾಗಿಯೇ ಅನುಗ್ರಹಿಸುತ್ತಾನೆ ಎಂದು ಹೇಳಿದ್ದಾರೆ. ವಿಭೀಷಣನು ಶ್ರೀರಾಮನಿಗೆ ಕೈಂಕರ್ಯ

ಮಾಡಬೇಕೆಂದು ಆಸೆ ಹೊಂದಿ ಅವನ ಬಳಿಬಂದು ಶರಣಾದನು. 'ಪರಿತ್ಯಕ್ತಾಮಯಾಲಂಕಾ ಮಿತ್ರಾಣಿಚ ಧನಾನಿಚ' - ಎಂದೆಲ್ಲಾ ಹೇಳಿದ್ದಾನೆ. ರಾಜ್ಯ ಐಶ್ವರ್ಯಾದಿಗಳಾವುದನ್ನೂ ಅವನು ಆಸೆಪಡದಿದ್ದರೂ ಅವನಿಗೆ ಲಂಕಾರಾಜ್ಯವನ್ನೇ ಭಗವಂತನು ಅನುಗ್ರಹಿಸಿದನು. ಅದೇ ರೀತಿ ಗೋಪಿಯರು ಕೃಷ್ಣಾನುಭವವನ್ನು ಪ್ರಾರ್ಥಿಸಿದರೂ, ಅವರಿಗೆ ಅದರೊಂದಿಗೆ ಇತರ ಧನಧಾನ್ಯ ಗೋಸಮೃದ್ಧಿಗಳನ್ನೆಲ್ಲಾ ಅನುಗ್ರಹಿಸಿದ್ದಾನೆ. ಭತ್ತ ಕುಟ್ಟಿದರೆ ಬೆವರು ತಾನಾಗಿ ಸುರಿಯುವಂತೆ ಭಗವನ್ನಾಮ ಸಂಕೀರ್ತನಾದಿ ಭಗವತ್‌ಕೈಂಕರ್ಯ ಮಾಡಿದರೆ ಅದರ ಸತ್ಫಲ ತಾನಾಗಿ ಲಭಿಸುತ್ತದೆ. ಅಷ್ಟಾಕ್ಷರ ಮಂತ್ರವನ್ನು ಅನುಸಂಧಾನ ಮಾಡಿ ಆಚರಿಸುವವನು ಒಬ್ಬನಿದ್ದರೂ ಸಾಕು, ಅವನು ವಾಸಿಸುವ ದೇಶದಲ್ಲಿ ವ್ಯಾಧಿ, ದುರ್ಭಿಕ್ಷ, ಕಳ್ಳತನಾದಿಗಳಿರುವುದಿಲ್ಲ ಎಂದು ಹೇಳಿದೆ. ಅಂದಮೇಲೆ ಗೋಪಿಯರೆಲ್ಲರೂ ಸೇರಿ ಈ ವ್ರತವನ್ನು ಅನುಷ್ಠಿಸಿ ಆಚರಿಸಿದರೆ ಅದಕ್ಕೆ ಫಲ ಲಭಿಸಿ ದೇಶ ಸಂಪತ್ಸಮೃದ್ಧಿಯಾಗದಿರಲು ಸಾಧ್ಯವೇ ? ಇವರ ದೇಶದಲ್ಲಿ ಜಲಸಮೃದ್ಧಿ , ಧನ, ಧಾನ್ಯ, ಗೋಸಮೃದ್ಧಿಗಳೆಲ್ಲವೂ ಇವರು ಆಸೆಪಟ್ಟು ಕೇಳದಿದ್ದರೂ ತಾನಾಗಿಯೇ ಲಭಿಸುತ್ತವೆ ಎಂಬುದು ಇನ್ನೊಂದು ಅಭಿಪ್ರಾಯ.

(3) ಸರ್ವರಿಗೂ ಹಿತಹೇಳುವ ವೇದವು ಕೇವಲ ಮೋಕ್ಷಫಲ ಒಂದನ್ನೇ ಹೇಳದೆ, ಐಶ್ವರ್ಯಾದಿ ಫಲವನ್ನು ಪಡೆಯುವ ಯಾಗಗಳನ್ನು ತಿಳಿಸುತ್ತದೆ. ಇದೇತಕ್ಕೆಂದರೆ ವೇದಪ್ರಮಾಣದಲ್ಲಿ ಅಭಿರುಚಿ ಇಲ್ಲದ ನಾಸ್ತಿಕರಿಗೆ ಅದರಲ್ಲಿ ಆಸೆ ಹುಟ್ಟಿಸುವುದಕ್ಕಾಗಿ ಎಂದು ಹೇಳಿದ್ದಾರೆ. ವೇದದಲ್ಲಿ ಅವನಿಗೆ ರುಚಿ ಹುಟ್ಟಿಸುವುದಕ್ಕಾಗಿ ಐಹಿಕ ಫಲಗಳನ್ನೂ ಅದರಲ್ಲಿ ಹೇಳಿದೆ. ಅದೇ ರೀತಿ ಗೋದಾದೇವಿಯು ಎಲ್ಲರೂ ಭಗವನ್ನಾಮ ಸಂಕೀರ್ತನೆ ಮಾಡಿ ಉಜ್ಜೀವಿಸಲಿ ಎಂದು ವ್ರತಾಚರಣೆಯ ಫಲವಾಗಿ ತಾನಾಗಿ ಲಭಿಸುವ ಗೋ, ಧನ, ಧಾನ್ಯ ಸಮೃದ್ಧಿಗಳೆಲ್ಲವನ್ನೂ ಚೆನ್ನಾಗಿ ವಿವರಿಸಿ ತಿಳಿಸಿದ್ದಾಳೆ ಎಂಬುದು ಮತ್ತೊಂದು ಅಭಿಪ್ರಾಯ.

ಈ ಪಾಶುರದ ಮುಖ್ಯ ತಾತ್ಪರ್ಯವೇನೆಂದರೆ - ಭಗವದ್ಗುಣಾನುಭವ ರೂಪವಾದ ಈ ವ್ರತಾಚರಣೆಗಾಗಿ ಭಗವನ್ನಾಮ ಸಂಕೀರ್ತನೆಮಾಡಿ, ಭಗವದ್ಗುಣ ಸಾಗರದಲ್ಲಿ ಅವಗಾಹಿಸುವವರು ವಾಸಿಸುವ ದೇಶದಲ್ಲಿ ಮಳೆ ಬೆಳೆಗಳು, ಧನ, ಧಾನ್ಯ, ಗೋಸಂಪತ್ತುಗಳೆಲ್ಲವೂ ವೃದ್ಧಿಯಾಗಿ ದೇಶವು ಸಂಪತ್ಸಮೃದ್ಧಿಯಾಗಿ ಆಗುತ್ತದೆ. ಅಷ್ಟು ಮಾತ್ರವಲ್ಲದೆ ವ್ರತಾನುಷ್ಠಾನ ಮಾಡುವವರ ಹೃದಯದಲ್ಲಿ ಸತ್ವ ಗುಣವು ತಲೆ ಎತ್ತಿ ಅನನ್ಯಾರ್ಹಶೇಷತ್ವ, ಅನನ್ಯಶರಣ್ಯತ್ವ, ಅನನ್ಯ ಭೋಗ್ಯತ್ವವೆಂಬ ಅಂದರೆ ಭಗವಂತನೇ ನಮಗೆ ಶೇಷಿ (ಸ್ವಾಮಿ), ಅವನೇ ರಕ್ಷಕ, ಅವನ ಕೈಂಕರ್ಯವೇ ನಮಗೆ ಪುರುಷಾರ್ಥವೆಂಬ ಜ್ಞಾನವು ಹುಟ್ಟಿ, ಅದು ಮೇಲೆ ಮೇಲೆ ವೃದ್ಧಿಯಾಗಿ ಭಕ್ತಿರೂಪವನ್ನು ತಳೆದು, ಭಕ್ತಿ ಪುಷ್ಪವು ಚೆನ್ನಾಗಿ ಅಲರಿದ ಮೇಲೆ ಪರಮಾತ್ಮನು ಶ್ರೀ ಸಹಿತ ಅವರ ಹೃದಯದಲ್ಲಿ ವಿರಾಜಿಸುತ್ತಾನೆ. ಅಂತಹ ಉತ್ತಮ ಭಕ್ತರ ಸುತ್ತಮುತ್ತಲೂ ಇರುವ ಚೇತನರೆಲ್ಲರೂ, ಅವರ ಬಳಿ ಧೈರ್ಯವಾಗಿ ಹೋಗಿ ಅವರಿಂದ ಸದುಪದೇಶ ಪಡೆದು ಭಗವದ್ಗುಣಾನುಭವದ ಆನಂದ ಪಡೆಯುವರು ಮತ್ತು ಎಂದೂ ಕಡಿಮೆಯಾಗದಂತಹ, ಸತ್ತ್ವಗುಣಭರಿತವಾದ ಭಕ್ತಿರೂಪಾಪನ್ನ ಜ್ಞಾನಸಂಪತ್ತು ಎಲ್ಲೆಲ್ಲೂ ವ್ಯಾಪಿಸುವುದು ಮತ್ತು ನಮ್ಮ ವ್ರತವು ಶುಭವಾಗಿ ನೆರವೇರುವುದು - ಎಂದು ಗೋದಾದೇವಿಯು ಈ ಪಾಶುರದಲ್ಲಿ ತಿಳಿಸಿದ್ದಾಳೆ.

# ಪಾಶುರ - 4

ಈ ಪಾಶುರದಲ್ಲಿ ಗೋದಾದೇವಿಯು ಮಾರ್ಗಳಿ ನೀರಾಟ್ಟವೆಂಬ ತಮ್ಮ ವ್ರತವು ಯಶಸ್ವಿಯಾಗಿ ನೆರವೇರುವುದಕ್ಕಾಗಿ ದೇಶದಲ್ಲೆಲ್ಲಾ ಚೆನ್ನಾಗಿ ಮಳೆ ಸುರಿಸುವಂತೆ ವರುಣ ದೇವನಿಗೆ ನಿಯಮಿಸುತ್ತಾಳೆ.

**ಆಳಿಮಳೈಕ್ಕಣ್ಣಾ! ಒನ್ರುನೀ ಕೈಕರವೇಲ್**
**ಆಳಿಯುಳ್‌ಪುಕ್ಕು ಮುಕನ್ದು ಕೊಡಾರ್‌ತ್ತೇರಿ**
**ಊಳಿಮುದಲ್ವನುರುವಂಪೋಲ್ ಮೆಯ್‌ಕರುತ್ತು**
**ಪಾಳಿಯನ್ತೋಳುಡೈ ಪರ್ಪ್ಪನಾಬನ್ ಕೈಯಿಲ್**
**ಆಳಿ ಪೋಲ್ ಮಿನ್ನಿ ವಲಮ್ಬುರಿಪೋಲ್ ನಿನ್ರದಿರ್‌ನ್ದು**
**ತಾಳಾದೇ ಶಾರ್ಙ್ಗಮುದೈತ್ತ ಶರಮಳೈಪೋಲ್**
**ವಾಳ ಉಲಹಿನಿಲ್ ಪೆಯ್‌ದಿಡಾಯ್ ನಾಙ್ಗಳುಮ್**
**ಮಾರ್ಗಳಿ ನೀರಾಡ ಮಹಿಳ್‌ನ್ದೇಲೋ ರೆಮ್ಬಾವಾಯ್.**

ಅಗಾಧವಾದ ಮಳೆಗೆ ನಿರ್ವಾಹಕನಾದ ಪರ್ಜನ್ಯ ದೇವನೇ, ನೀನು ಒಂದು ರೀತಿಯಲ್ಲೂ ನಿನ್ನ ಔದಾರ್ಯ ಗುಣವನ್ನು ಬಿಡದೆ ನಮಗೆ ಸಹಾಯಮಾಡಬೇಕು. ಸಮುದ್ರದ ಒಳಗೆ ಪ್ರವೇಶಿಸಿ, ನೀರನ್ನು ತುಂಬಿಕೊಂಡು, ಗರ್ಜಿಸುತ್ತಾ, ಆಕಾಶದ ಮೇಲಕ್ಕೆ ಏರಿ, ಆದಿಯಲ್ಲಿ ಜಗತ್ತನ್ನು ಸೃಷ್ಟಿಸಿದ ಜಗತ್ಕಾರಣ ವಸ್ತುವಾದ ಪರಮೇಶ್ವರನ ದಿವ್ಯಮಂಗಳ ಶರೀರದಂತೆ ನಿನ್ನ ಶರೀರವೂ ಕಪ್ಪುಬಣ್ಣ ಹೊಂದಿ, ಗಂಭೀರವೂ ಸುಂದರವೂ ಆದ ತೋಳುಗಳನ್ನು ಪಡೆದಿರುವ, ಪದ್ಮನಾಭನ ಕೈಯಲ್ಲಿರುವ ಚಕ್ರದಂತೆ ಹೊಳೆಯುತ್ತಾ ಮಿಂಚಿ; ಶಂಖದಂತೆ ನಿಂತು ಗರ್ಜಿಸಿ, ಶ್ರೀರಾಮನ ಶಾರ್ಙ್ಗವೆಂಬ ಧನುಸ್ಸಿನಿಂದ ಅವಿಚ್ಛಿನ್ನವಾಗಿ ಎಡೆಬಿಡದೆ ಹೊರಟ ಬಾಣಗಳ ವರ್ಷದಂತೆ ಮಳೆ ಸುರಿಸು; ಲೋಕವನ್ನೆಲ್ಲಾ ಉಜ್ಜೀವಿಸಿ

ಬಾಳುವಂತೆಯೂ, ನಾವುಗಳೆಲ್ಲರೂ ಸಂತೋಷದೊಡನೆ ಈ ಮಾರ್ಹಳಿ ನೀರಾಟ್ಟವೆಂಬ ವ್ರತ ಸ್ನಾನವನ್ನು ಮಾಡುವಂತೆಯೂ, ನೀನು ಮಳೆಯನ್ನು ಸುರಿಸುವವನಾಗು, ಹೀಗೆ ಮಾಡಿದರೆ ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

ಭಗವದ್ಗುಣಾನುಭವ ಮಾಡಿ ಅವನ ನಾಮ ಸಂಕೀರ್ತನೆ ಮಾಡುವ ಭಕ್ತರಿಗೆ ದೇವತೆಗಳೂ ಸಹಾಯ ಮಾಡುತ್ತಾರೆ. ಗೋಪಿಯರು ಭಗವಂತನಿಗೆ ಅಭಿಮತರಾದವರು. ಭಗವಂತನಿಗೆ ದಾಸರಾದವರೆಲ್ಲರೂ ಅವನ ಪತ್ನಿಯರಿಗೂ ಅವನಿಗೆ ಪ್ರಿಯರಾದವರಿಗೂ ದಾಸರಾಗಿ ವರ್ತಿಸುತ್ತಾರೆ. ಏಕೆಂದರೆ ಮಿಥುನಶೇಷತ್ವವೇ ಅಂದರೆ ಪರಮಾತ್ಮ, ಶ್ರೀದೇವಿ ಇಬ್ಬರಿಗೂ ದಾಸರಾಗಿರುವುದೇ ಸರ್ವರಿಗೂ ಸ್ವರೂಪವಾಗಿದೆ. ಆದ್ದರಿಂದ ಇಲ್ಲಿ ಗೋದಾದೇವಿಯು ವರುಣದೇವನಿಗೆ 'ಪೆಯ್‌ದಿಡಾಯ್' - ಎಂದು ಮಳೆ ಸುರಿಸುವಂತೆ ನಿಯಮಿಸುತ್ತಾಳೆ. ಅವನ ಹೆಸರು ಹೇಳದೆ ಅವನ ಉದ್ಯೋಗ, ಕೈಂಕರ್ಯವನ್ನು ಹೇಳಿ 'ಆಳಿಮಳೈಕ್ಕಣ್ಣಾ' - 'ಮಳೆಗೆ ನಿರ್ವಾಹಕನೇ' ! ಎಂದು ಸಂಬೋಧನೆ ಮಾಡುತ್ತಾಳೆ. ಏಕೆಂದರೆ ಭಗವದ್ಭಕ್ತರಿಗೆ ತಾವು ಭಗವಂತನ ದಾಸರು ಎಂದು ಹೇಳಿಕೊಳ್ಳುವುದೇ ಸಂತೋಷ ಮತ್ತು ಹಿರಿಮೆಯಾಗಿದೆ. ಈ ಅಭಿಪ್ರಾಯಗಳನ್ನೆಲ್ಲಾ ವಾಕ್ಯಾರ್ಥವು ತಿಳಿಸುತ್ತದೆ.

ಆಚಾರ್ಯರುಗಳನ್ನು ತಮ್ಮ ಮೇಲೆ ಜ್ಞಾನ ಮಳೆ ಸುರಿಸಿ ತಮ್ಮ ಹೃದಯವನ್ನು ಪವಿತ್ರಗೊಳಿಸಬೇಕೆಂದು ಗೋದಾದೇವಿಯು ಈ ಪಾಶುರದಲ್ಲಿ ಪ್ರಾರ್ಥಿಸಿದ್ದಾಳೆ ಎಂಬ ವಿಶೇಷಾರ್ಥವನ್ನು ನಮ್ಮ ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ. ಭಗವತ್ಕಲ್ಯಾಣ ಗುಣಸಾಗರದಲ್ಲಿ ಅವಗಾಹಿಸಿ, ಭಗವದನುಭವ ಪಡೆಯ ಬೇಕೆಂಬ, ಮಾರ್ಹಳಿ ನೀರಾಟ್ಟವೆಂಬ ಈ ವ್ರತವು ಯಶಸ್ವಿಯಾಗಿ ನೆರವೇರಲು ತಮ್ಮ ಮೇಲೆ ಜ್ಞಾನ ಮಳೆ ಸುರಿಸಬೇಕೆಂದು ಇಲ್ಲಿ ಆಚಾರ್ಯರುಗಳನ್ನು

ಪ್ರಾರ್ಥಿಸುತ್ತಾಳೆ. ಸಾಧಾರಣವಾಗಿ ಮಾನವರಿಗೆ ಭಗವನ್ನಾಮ ಸಂಕೀರ್ತನೆ ಮಾಡಿ, ಭಗವದ್ಗುಣಾನುಭವದಲ್ಲಿ ನಿರತರಾಗುವ ಮನಸ್ಸು ಉಂಟಾಗುವುದು ಬಹಳ ದುರ್ಲಭ. ಏತಕ್ಕೆಂದರೆ ಮಾನವನ ಪ್ರಾಚೀನಕೃತ ಪಾಪವಾಸನೆಗಳು ಅದಕ್ಕೆ ಅಡ್ಡಿಯಾಗುತ್ತವೆ. ಪಾಪವಾಸನೆಗಳು ನಾಶವಾಗಬೇಕಾದರೆ ಭಗವನ್ನಾಮ ಸಂಕೀರ್ತನೆಯೇ ಉಪಾಯ. ಅಂದರೇನು, ಭಗವನ್ನಾಮ ಹೇಳದೆ ಪಾಪ ವಾಸನೆಗಳು ನಾಶವಾಗುವುದಿಲ್ಲ ಮತ್ತು ಪಾಪ ವಾಸನೆಗಳು ನಾಶವಾಗದಿದ್ದರೆ ಭಗವನ್ನಾಮ ಹೇಳುವ ಮನಸ್ಸು ಉಂಟಾಗುವುದಿಲ್ಲ. ಹೀಗೆ ಅನ್ಯೋನ್ಯವಾಗಿ ಒಂದಕ್ಕೊಂದು ಆಶ್ರಯಿಸಿ ಕೊಂಡಿವೆ. ಆದ್ದರಿಂದ ಭಗವನ್ನಾಮ ಸ್ಮರಣೆ ಸಂಕೀರ್ತನಾದಿಗಳನ್ನು ಮಾಡುವುದೂ ಒಂದು ಅಸಾಧ್ಯವಾದ ಕಾರ್ಯವೇ ಆಗಿದೆ ಎನ್ನಬಹುದು. ಆದಾಗ್ಯೂ ಮಾನವರು ಉಜ್ಜೀವಿಸಲಿ ಎಂದು ಪರಮಾತ್ಮನು ಅನೇಕ ಶಾಸ್ತ್ರಗಳನ್ನೂ , ಅದನ್ನು ಉಪದೇಶಿಸಲು ಅನೇಕ ಮಹಾಪುರುಷರು ಗಳನ್ನೂ ಸೃಷ್ಟಿಸಿದ್ದಾನೆ. ಅವರ ಅನುಗ್ರಹ ಪಡೆದು, ಅವರಿಂದ ಶಾಸ್ತ್ರಾರ್ಥಗಳನ್ನು ಕೇಳಿ, ಮಾನವರ ಹೃದಯ ಪರಿವರ್ತನೆಯಾಗಿ, ಭಗವನ್ನಾಮ ಸ್ಮರಣೆ ಸಂಕೀರ್ತನಾದಿಗಳನ್ನು ಮಾಡುವ ಮನಸ್ಸು ಉಂಟಾಗುವ - ಸಂಭವವುಂಟು. ಆದ್ದರಿಂದ ತತ್ವ ಶಾಸ್ತ್ರಾಗರಗಳ ಒಳಗೆ ಪ್ರವೇಶಿಸಿ, ಅವುಗಳಲ್ಲಿ ಇರುವ ಅರ್ಥ ವಿಶೇಷಾರ್ಥಗಳನ್ನು ಮಥನ ಮಾಡಿ ಅರಿತು ಅವುಗಳ ಸಾರಾಂಶ ರೂಪವಾದ ಜ್ಞಾನ ಮಳೆಯನ್ನು ಮಾನವರ ಮೇಲೆ ಸುರಿಸಿ ಅನುಗ್ರಹಿಸಬೇಕೆಂದು ಆಚಾರ್ಯರುಗಳನ್ನೂ, ಗುರು ಹಿರಿಯರನ್ನೂ ಈ ನಾಲ್ಕನೇ ಪಾಶುರದಲ್ಲಿ ಪ್ರಾರ್ಥಿಸಿದ್ದಾಳೆ. ಈ ವಿಶೇಷಾರ್ಥದ ಪ್ರಕಾರ ಈ ಪಾಶುರದ ಅರ್ಥವನ್ನು ಮುಂದೆ ವಿವರಿಸಿದೆ.

**ಆಳಿಮಳೈಕ್ಕಣ್ಣಾ** - ಭಗವಂತನ ಕಲ್ಯಾಣ ಗುಣಾಮೃತವನ್ನು ವರ್ಷಿಸುವ ಗುರುವರ್ಯರೇ (ಆಚಾರ್ಯರೇ) -

ಒನ್ರು, ನೀ ಕೈಕರವೇಲ್ - ನೀವು ಸ್ವಲ್ಪವೂ ನಮ್ಮ ಕೈಬಿಡಬೇಡಿರಿ. ನಮಗೆ ಉಪದೇಶ ಮಾಡಲು ಸ್ವಲ್ಪವೂ ಹಿಂಜರಿಯ ಬೇಡಿರಿ.

**ಆಳಿ ಉಳ್ ಪುಕ್ಕು** : ಭಗವಂತನ ಕಲ್ಯಾಣಗುಣ ಸಾಗರದ ಮಧ್ಯದಲ್ಲಿ ಮುಳುಗಿ (ಪ್ರವೇಶಿಸಿ)

**ಮುಹಂದ್ ಕೊಡು ಆರ್ತ್ತ ಏರಿ** : ಪರಮಾತ್ಮನ ನೀಲವರ್ಣದ ಶರೀರದಂತೆ ಅವನ ಗುಣಾಮೃತ ಪಾನಮಾಡಿದ ನಿಮ್ಮ ಶರೀರದಲ್ಲೂ ಒಂದು ಕಾಂತಿ ವಿಶೇಷವುಂಟಾಗಲು,

**ಊಳಿ ಮುದಲ್ವನ್ ಉರುವಂಪೋಲ್ ಮೆಯ್‌ಕರತ್ತು** :- ಜಗತ್ತಿಗೆಲ್ಲಾ ಆದಿಕಾರಣನಾದ ಸರ್ವೇಶ್ವರನ ದಿವ್ಯಶರೀರದಂತೆ ನಿಮ್ಮ ಶರೀರವೂ ಕಪ್ಪುಬಣ್ಣವುಳ್ಳದ್ದಾಗಿ -

**ಪಾಳಿ ಯಂತೋಳುಡೈ ಪರ್ಪ್ಪನಾಬನ್‌ಕೈಯಿಲ್ ಆಳಿಪೋಲ್ ಮಿನ್ನಿ** :- ಗಂಭೀರವೂ ಸುಂದರವೂ ಆದ ಬಾಹುಗಳುಳ್ಳ ಪರಮಾತ್ಮನ ಕೈಯಲ್ಲಿರುವ ಚಕ್ರಾಯುಧದ ಹಾಗೆ ಹೊಳಪಿನಿಂದ ಮಿಂಚಿ ಅಂದರೆ ಪರಮಾತ್ಮನನ್ನು ಸಾಕ್ಷಾತ್ಕರಿಸಿದ ನಿಮಗೆ ಅವನ ಚಕ್ರಾಯುಧದಂತೆ ಪ್ರಜ್ವಲಿಸುವ ಕಾಂತಿ ಉಂಟಾಗಲು -

**ವಲುಮ್ಬು ರಿಪೋಲ್ ನಿನ್ರು, ಅದಿರ್‌ನ್ದು** - ಪರಮಾತ್ಮನ ಎಡ ಹಸ್ತದಲ್ಲಿರುವ ಪಾಂಚಜನ್ಯದಂತೆ (ಶಂಖದಂತೆ) ಧ್ವನಿ ಮಾಡಿ ಅಂದರೆ ಪ್ರಣವಾರ್ಥವನ್ನು ಎಲ್ಲರೂ ಅರಿಯುವಂತೆ ನಿಂತು ಘೋಷಿಸಿ

**ತಾಳಾದೇ ಶಾರ್ಙ್ಗಂ ಉದೈತ್ತ ಶರಮಳೈಪೋಲ್‌ವಾಳ ವುಲಹಿನಲ್ ಪೆಯ್ ದಿಡಾಯ್** - ಸಾವಕಾಶ ಮಾಡದೆ ಶಾರ್ಙ್ಗವೆಂಬ ಧನುಸ್ಸಿನಿಂದ ಅವಿಚಿನ್ನವಾಗಿ ಎಸೆಯಲ್ಪಟ್ಟ ಬಾಣ ವೃಷ್ಟಿಗಳಂತೆ, ಪ್ರಪಂಚದ ಮಾನವರೆಲ್ಲರೂ ಉಜ್ಜೀವಿಸುವ

ಹಾಗೆ (ಪ್ರಣವಾರ್ಥ ನಿರೂಪಣೆಯಿಂದ ಸ್ವರೂಪ ಯಾಥಾತ್ಮ್ಯಜ್ಞಾನ ಪಡೆದು ಶೇಷ ಶೇಷಿ ಭಾವವನ್ನು ಅರಿತು ಉಜ್ಜೀವಿಸುವಂತೆ) ನೀವು ಭಗವತ್ ಗುಣಾಮೃತವನ್ನು ಈ ಪ್ರಪಂಚದ ಮಾನವರ ಮೇಲೆ ವರ್ಷಿಸಿರಿ.

**ನಾಂಗಳುಮ್ ಮಾರ್ಗಳಿ ನೀರಾಡ ಮಹಿಳ್‌ನ್ದ್**:- ಭಗವತ್ ಕೈಂಕರ್ಯವನ್ನು ಪ್ರಾರ್ಥಿಸುತ್ತಿರುವ ನಾವುಗಳೂ ಕೂಡ ಸಂತುಷ್ಟ ಚಿತ್ತರಾಗಿ ಭಗವದ್ಗುಣ ಸಾಗರದಲ್ಲಿ ಮುಳುಗಿ ಭಗವದನುಭವ ಪಡೆಯುವಂತೆ, ಭಗವದ್ಗುಣಾಮೃತದ ಮಳೆಯನ್ನು ವರ್ಷಿಸಿರಿ. ಅದರಲ್ಲಿ ಮುಳುಗಿ ನಾವು ನಮ್ಮ ವ್ರತವನ್ನು ಭಗವತ್ ಕೈಂಕರ್ಯ ರೂಪವಾಗಿ ಸಂತೋಷವಾಗಿ ಆಚರಿಸಿದರೆ -

**ಏಲ್ ಓರ್ ಎಂ ಪಾವಾಯ್** - ನಮ್ಮ ಅದ್ವಿತೀಯವಾದ ಈ ವ್ರತವು ಸಾಂಗವಾಗಿ ನೆರವೇರುವುದು.

ವಾಕ್ಯಾರ್ಥದ ಪ್ರಕಾರ ಇದು ವರ್ಷ ದೇವತೆಯನ್ನು ಮಳೆ ಸುರಿಸುವಂತೆ ಪ್ರಾರ್ಥಿಸುವ ಪಾಶುರವಾಗಿರುವುದರಿಂದ ಇದರಲ್ಲಿ ಮೋಡದ ಕಪ್ಪು ಬಣ್ಣವನ್ನು ಪರಮಾತ್ಮನ ಬಣ್ಣಕ್ಕೂ, ಮಿಂಚಿನ ಹೊಳಪನ್ನು ಭಗವಂತನ ಕೈಯಲ್ಲಿರುವ ಚಕ್ರಾಯುಧದ ಹೊಳಪಿಗೂ, ಗುಡುಗಿನ ಧ್ವನಿಯನ್ನು ಭಗವಂತನ ವಾಮಹಸ್ತದಲ್ಲಿರುವ ಶಂಖದ ಧ್ವನಿಗೂ, ಮಳೆಯ ನೀರನ್ನು ಪರಮಾತ್ಮನ ಕೈಯ್ಯಲ್ಲಿರುವ ಶಾರ್ಙ್ಗವೆಂಬ ಆಯುಧವು ವರ್ಷಿಸುವ ಬಾಣಗಳ ಸುರಿಮಳೆಗೂ ಹೋಲಿಸಿದೆ.

ಆದರೆ ವಿಶೇಷಾರ್ಥದ ಪ್ರಕಾರ ಇದು (ಆಚಾರ್ಯರಿಗೆ) ಗುರುಗಳಿಗೆ ಸಲ್ಲಿಸುವ ಪ್ರಾರ್ಥನೆಯಾಗಿರುವುದರಿಂದ ಗುರುಗಳ ಶರೀರದ ಕಾಂತಿಯನ್ನು ಪರಮಾತ್ಮನ ತಿರುಮೇನಿಯ ಕಾಂತಿಗೂ, ಅವರ ವರ್ಚಸ್ಸನ್ನು ಚಕ್ರಾಯುಧದ ಹೊಳಪಿಗೂ, ಅವರು ಘೋಷಿಸುವ ತತ್ತ್ವಾರ್ಥಗಳನ್ನು ಶಂಖದ ಧ್ವನಿಗೂ. ಅವರು ವರ್ಷಿಸುವ ಜ್ಞಾನ ಮಳೆಯನ್ನು ಶಾರ್ಙ್ಗಾಯುಧದ ಶರ ಮಳೆಗೂ ಹೋಲಿಸಿದೆ.

ಒಟ್ಟಿನಲ್ಲಿ ಗೋದಾದೇವಿಯು ಜಗತ್ತಿನ ಜೀವಿಗಳೆಲ್ಲಾ ಸಂತೋಷ ಪಡುವಂತೆ ಎಲ್ಲ ಕಡೆಯೂ ಮಳೆ ಸುರಿಸುವಂತೆ ವರುಣ ದೇವನನ್ನೂ, ವೇದ ವೇದಾಂತಾದಿ ತತ್ತ್ವಶಾಸ್ತ್ರಸಾಗರದ ಒಳಗೆ ಪ್ರವೇಶಿಸಿ, ಮಥನ ಮಾಡಿ ಅದರ ಸಾರಭರಿತವಾದ ಜ್ಞಾನ ಮಳೆಯನ್ನು ತಮ್ಮ ಮೇಲೆ ವರ್ಷಿಸಿ ತಾವು ಭಗವದ್ಗುಣ ಸಾಗರದಲ್ಲಿ ಮುಳುಗಿ, ಭಗವದನುಭವ ಪಡೆದು ಸಂತೋಷಿಸುವಂತೆ ಮಾಡಬೇಕೆಂದು ಆಚಾರ್ಯರುಗಳನ್ನೂ, ಜ್ಞಾನಿಗಳಾದ ಗುರು-ಹಿರಿಯರನ್ನೂ ಈ ಪಾಶುರದಲ್ಲಿ ಪ್ರಾರ್ಥಿಸಿದ್ದಾಳೆ.

## ಪಾಶುರ - 5

ಐದನೆಯ ಪಾಶುರದಲ್ಲಿ ಭಗವಂತನನ್ನು ಕಾಯೇನ, ವಾಚಾ, ಮನಸಾ ಅಂದರೆ ಶರೀರ, ಮಾತು, ಮನಸ್ಸುಗಳಿಂದ ಪೂಜಿಸಿ ನಿಮ್ಮ ಪಾಪಗಳನ್ನೆಲ್ಲಾ ಹೋಗಲಾಡಿಸಿಕೊಳ್ಳಿರಿ ಎಂಬ ಉಪದೇಶವಿದೆ.

**"ಮಾಯನ್ನೈಮನ್ನು ವಡ ಮಧುರೈ ಮೈನ್ದನ್ನೈ**
**ತೂಯಪೆರುನೀರ್‌ಯಮುನ್ನೈತ್ತುರೈವನ್ನೈ**
**ಆಯರ್‌ಕುಲತ್ತಿನಿಲ್ ತೋನ್ರುಮಣಿವಿಳಕ್ಕೈ**
**ತಾಯ್ಕೈಕ್ಕುಡಲ್ ವಿಳಕ್ಕಮ್‌ಶೆಯ್‌ದ ದಾಮೋದರನ್ನೈ**
**ತೂಯೋಮಾಯ್ ವನ್ದು ನಾಮ್ ತೂಮಲರ್ ತೂವಿತ್ತೊಳುದು**
**ವಾಯಿನಾಲ್‌ಪ್ಪಾಡಿ ಮನತ್ತಿನಾಲ್ ಶಿನ್ದಿಕ್ಕ**
**ಪೋಯಪಿಳ್ಳೈಯುಮ್ ಪುಹುದರುವಾನ್ನಿನ್ರನವುಮ್**
**ತೀಯಿನಿಲ್ ತೂಶಾಹುಮ್ ಶೆಪ್ಪೇಲೋರೆಮ್ಬಾವಾಯ್".**

"ಆಶ್ಚರ್ಯಕರವಾದ ಗುಣ ಚೇಷ್ಟಿತಾದಿಗಳನ್ನು ಉಳ್ಳವನೂ, ಉತ್ತರ ಮಧುರಾಪುರಿಯಲ್ಲಿ ಮಗುವಾಗಿ ಜನಿಸಿದವನೂ, ಪರಿಶುದ್ಧವೂ ಅತ್ಯಧಿಕವೂ ಆದ ನೀರಿನಿಂದ ಕೂಡಿರುವ ಯಮುನಾ ನದಿಯ ತೀರಪ್ರದೇಶದಲ್ಲಿ ವಾಸಿಸುವವನೂ, ಗೊಲ್ಲರ ಕುಲದಲ್ಲಿ ಬಂದು ನೆಲೆಸಿ ಅದಕ್ಕೆ ಮಂಗಳಕರವಾದ ರತ್ನದೀಪದಂತಿರುವವನೂ, ತಾಯಿಯ ಉದರವನ್ನು ಪ್ರಕಾಶ ಪಡಿಸಿದವನೂ ಆದ ದಾಮೋದರನ ಬಳಿಗೆ, ಅಂದರೆ ತಾನಾಗಿ ತಾಯಿ ಯಶೋದೆಯಿಂದ ಹಗ್ಗದಲ್ಲಿ ಕಟ್ಟಿಸಿಕೊಂಡು ಅವಳಿಗೆ ಅತ್ಯಂತ ಸುಲಭನಾಗಿರುವ ಕೃಷ್ಣನ ಬಳಿಗೆ ನಾವು ಪರಿಶುದ್ಧರಾಗಿ ಬಂದು, ಶುದ್ಧವಾದ ಪುಷ್ಪಗಳನ್ನು ಅವನಿಗೆ ಸಮರ್ಪಿಸಿ,

ಬಾಯಿಂದ ಅವನ ಕಲ್ಯಾಣ ಗುಣಗಳನ್ನು ಹಾಡಿ, ಮನಸ್ಸಿನಿಂದ ಅವನನ್ನೇ ಚಿಂತಿಸುತ್ತಿದ್ದರೆ, ಹಿಂದೆ ನಾವು ಮಾಡಿರುವ ಪಾಪಗಳೂ, ಇಂದು ಮಾಡಿರುವ ಪಾಪಗಳೂ ಮತ್ತು ಮುಂದೆ ಮಾಡುವ ಪಾಪಗಳೂ ಎಲ್ಲವೂ ಬೆಂಕಿಯಲ್ಲಿಟ್ಟ ಹತ್ತಿಯಂತೆ ಸುಟ್ಟು ಭಸ್ಮವಾಗಿ ನಾಶವಾಗುವುವು. ಆದ್ದರಿಂದ ಅವನ ದಿವ್ಯನಾಮಗಳನ್ನು ಹೇಳಿರಿ - ನಮ್ಮ ಅದ್ವಿತೀಯವಾದ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು.'' ಇದು ಈ ಪಾಶುರದ ವಾಕ್ಯಾರ್ಥ.

ಮಹಾ ಪರಾಕ್ರಮಿಯಾದ ದಶರಥ ಮಹಾರಾಜನು ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ಉದ್ದೇಶಿಸಿದನು; ಪ್ರಜೆಗಳೆಲ್ಲರೂ ಅದನ್ನು ಅನುಮೋದಿಸಿ, ಸಮ್ಮತಿ ನೀಡಿದರು; ವಸಿಷ್ಠ ಮಹರ್ಷಿಗಳು ನಕ್ಷತ್ರ ನೋಡಿ ಏರ್ಪಾಡು ಮಾಡಿದರು. ಇಷ್ಟೆಲ್ಲಾ ಆದಮೇಲೂ ಶ್ರೀರಾಮನ ಪಟ್ಟಾಭಿಷೇಕ ತಡೆಹೊಂದಿ ನಿಂತುಹೋಯಿತು. ಅಂದಮೇಲೆ ಅನಂತ ಪಾಪಗಳನ್ನು ಮಾಡಿರುವ ನಾವು ಮಾಡಲು ಉದ್ದೇಶಿಸಿರುವ ಈ ವ್ರತವು ವಿಘ್ನವಿಲ್ಲದೆ ಸಾಂಗವಾಗಿ ನೆರವೇರಬಲ್ಲದೆ ಎಂಬ ಶಂಕೆಗೆ ಇಲ್ಲಿ ಉತ್ತರ ಹೇಳಿದೆ. ಈ ವ್ರತವನ್ನು ಭಗವತ್ಕೈಂಕರ್ಯವಾಗಿ ಭಗವಂತನ ನಾಮ ಸಂಕೀರ್ತನೆಯೊಂದಿಗೆ, ಭಗವಂತನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಆಚರಿಸಿದರೆ - ಅಂದರೆ ತ್ರಿಕರಣಗಳಿಂದಲೂ ಭಗವಂತನಿಗೆ ಸೇವೆ ಸಲ್ಲಿಸಿದರೆ ನಮ್ಮ ಸಕಲ ಪಾಪಗಳೂ ನಾಶವಾಗಿ ನಮ್ಮ ಕಾರ್ಯವು ಸಾಂಗವಾಗಿ ನೆರವೇರಬಲ್ಲದು. ಆದ್ದರಿಂದ ಭಗವಂತನ ದಿವ್ಯನಾಮಗಳನ್ನು ಹಾಡಿರಿ ಎಂದು ಇಲ್ಲಿ ಉಪದೇಶ ನೀಡಿದ್ದಾಳೆ. ಈ ಪಾಶುರದಲ್ಲಿ ಕೃಷ್ಣಾನುಭವವು ಪೂರ್ಣವಾಗಿ ಇದೆ ಮತ್ತು ಭಗವಂತನ ಪರತ್ವ, ಸೌಶೀಲ್ಯ ಸೌಲಭ್ಯಾದಿಗಳ ವರ್ಣನೆಯೂ ಇದೆ.

ಮಾಯನ್ನೈ : ಆಶ್ಚರ್ಯ ಚೇಷ್ಟಿತನನ್ನು - ಇದು ಅವನ ಪರತ್ವವನ್ನು ತಿಳಿಸುತ್ತದೆ. ನಮ್ಮ ಮನೋವಾಕ್ಕುಗಳಿಗೆ ಎಟುಕದೆ ಪುರುಷೋತ್ತಮನಾಗಿ ಪರಮ ಪದದಲ್ಲಿರುವ ಪರಮಾತ್ಮನು ರಾಮಕೃಷ್ಣಾದಿ ಅವತಾರಗಳನ್ನು ಎತ್ತಿದಾಗ ತನ್ನ

ಪರತ್ವವನ್ನು ಮರೆಸಿಕೊಂಡು ಭೂಲೋಕದಲ್ಲಿ ಅವತರಿಸಿ ಮಾಡಿರುವ ಅವನ ಆಶ್ಚರ್ಯಕರವಾದ ಚೇಷ್ಟಿತಗಳನ್ನು ನೆನೆಸಿ 'ಮಾಯನ್ನೈ' ಎಂದಿದ್ದಾಳೆ. ಅವತಾರ ಕಾಲದಲ್ಲಿ ಅನೇಕ ವೇಳೆ ಅವನೇ ಪರಮಾತ್ಮನೆಂಬುದನ್ನು ತೋರಿಸುವ ಪ್ರಸಂಗಗಳೂ ಬಂದಿವೆ. ರಾಮಾವತಾರದಲ್ಲಿ ಮಂಡೋದರಿಯು ರಾಮನನ್ನು ನೋಡಿ ' ಶಂಖ ಚಕ್ರ ಗದಾಧರಃ' - ಎಂದು ಅವನ ಪರತ್ವವನ್ನು ವ್ಯಕ್ತವಾಗಿ ತಿಳಿಸಿದ್ದಾಳೆ. ಕೃಷ್ಣಾವತಾರದಲ್ಲಿ - ಹುಟ್ಟುವಾಗಲೇ ಶಂಖಚಕ್ರ ಗದಾಪಾಣಿಯಾಗಿ ಕಾಣಿಸಿ ಕೊಂಡಿದ್ದಾನೆ ಮತ್ತು ಆಶ್ಚರ್ಯಭರಿತವೂ ಅತ್ಯದ್ಭುತವೂ ಆದ ಅನೇಕ ಮಾಯಾ ಚೇಷ್ಟಿತಗಳನ್ನು ಮಾಡಿದ್ದಾನೆ.

**ಮನ್ನು ವಡಮದುರೈ ಮೈಂದನ್ನೈ** : ಭಗವತ್ ಸಂಬಂಧ ಪಡೆದ ಉತ್ತರ ಮಧುರೆಯಲ್ಲಿ ಮಗುವಾಗಿ ಜನಿಸಿದವನನ್ನು - ಅವನು ಇಚ್ಛಿಸಿ ಬಂದು ಅವತರಿಸಿದ ದೇಶ ಮಧುರೆ.

**ತೂಯಪೆರುನೀರ್‌ಯಮುನ್ನೈತ್ತುರೈವನ್ನೈ** : ಪರಿಶುದ್ಧವಾಗಿ ಅಗಾಧವಾಗಿರುವ ನೀರಿನಿಂದ ತುಂಬಿರುವ ಯಮುನಾ ನದಿತೀರವಾಸಿಯಾದವನನ್ನು - ಅಂದರೆ ಭಕ್ತರಿಗಾಗಿ ಮಧುರೆಯಿಂದ ನಂದ ಗೋಕುಲಕ್ಕೆ ಬಂದು ನೆಲೆಸಿದವನನ್ನು - ಶಿಶುವಾದ ಕೃಷ್ಣಪರಮಾತ್ಮನನ್ನುತಲೆಯಮೇಲೆ ಎತ್ತಿಕೊಂಡುಬಂದ ವಸುದೇವನಿಗೆ ದಾರಿಬಿಟ್ಟು ಹಿರಿಮೆ ಪಡೆದ ಯಮುನಾ ನದಿತೀರ ವಾಸಿಯಾಗಿ ಪರಮಾತ್ಮನು ಅಲ್ಲಿ ಭಕ್ತರಾದ ಗೋಪರೊಂದಿಗೂ ಗೋಪಿ ಯರೊಂದಿಗೂ ಆಟ ಆಡಿ ಆನಂದಪಟ್ಟಿದ್ದಾನೆ. ಇದು ಶ್ರೀ ಕೃಷ್ಣಪರಮಾತ್ಮನ ಭಕ್ತಪರಾಧೀನತೆಯನ್ನು ವ್ಯಕ್ತಪಡಿಸುತ್ತದೆ.

**ಆಯರ್ ಕುಲತ್ತಿನಿಲ್‌ತೋನ್ರುಮ್‌ಅಣಿವಿಳಕ್ಕೈ** : ಗೋಪಕುಲದಲ್ಲಿ ಕಾಣಿಸಿಕೊಂಡು ರತ್ನದೀಪದಂತಿರುವವನನ್ನು - ಪರಮ ಪದದಲ್ಲಿ ಅವನ ಕಲ್ಯಾಣ ಗುಣಗಳು ಹಗಲಿನಲ್ಲಿಟ್ಟ ದೀಪದಂತೆ ಪ್ರಕಾಶಿಸಲು ಆಸ್ಪದವಿಲ್ಲ. ಆದರೆ ಭೂ

ಲೋಕದಲ್ಲಿ ಕೃಷ್ಣಪರಮಾತ್ಮನು ಅವತರಿಸಿ. ನಂದ ಗೋಕುಲದಲ್ಲಿ ಗೊಲ್ಲರ ನಡುವೆ ಬೆಳಕಾಗಿ ಇದ್ದು ತನ್ನ ಸೌಶೀಲ್ಯ ಸೌಲಭ್ಯಾದಿ ಕಲ್ಯಾಣ ಗುಣಗಳನ್ನು ಕತ್ತಲೆಯಲ್ಲಿಟ್ಟ ದೀಪದಂತೆ ಪ್ರಕಾಶಪಡಿಸಿ ತೋರಿಸಿದ್ದಾನೆ.

**ತಾಯೈಕ್ಕುಡಲ್ ವಿಳಕ್ಕಮ್‌ಶೆಯ್‌ದದಾಮೋದರನ್ನೈ** - ದೇವಕಿ, ಕೌಸಲ್ಯೆ ಮುಂತಾದ ತಾಯಿಯರ ಕರುಳಿಗೆ ಬೆಳಕು ತಂದ ದಾಮೋದರನನ್ನು - ಬೆಣ್ಣೆ ಕದಿಯುವ ವ್ಯಾಜದಲ್ಲಿ ಯಶೋದೆಯಿಂದ ತಾನಾಗಿ ಕಟ್ಟಿಸಲ್ಪಟ್ಟುಕೊಂಡು ದಾಮೋದರನೆನಿಸಿಕೊಂಡವನನ್ನು (ಅಂದರೆ ದಾಮ - ಮೊಸರು ಕಡೆಯುವ ಹಗ್ಗವನ್ನು - ಉದರ - ಸೊಂಟದಲ್ಲಿ ಹೊಂದಿರುವವನು ದಾಮೋದರ) - ಇಲ್ಲಿ ಅವನ ಸೌಲಭ್ಯ ಸೌಶೀಲ್ಯಾದಿ ಗುಣಗಳು ಪ್ರಕಾಶವಾಗಿವೆ.

**ನಾಂ ತೂಯೋಮಾಯ್ ವನ್ದ್** - ನಾವು ಪರಿಶುದ್ಧರಾಗಿ ಬಂದು ಗೋಪಿಯರು ಗೊಲ್ಲಕುಲದವರು. ಸ್ನಾನಾದಿ ಆಚಾರ ವ್ಯವಹಾರಗಳನ್ನು ಅರಿಯದವರು ಎಂದಮೇಲೆ ಅವರಿಗೆ ಶುದ್ಧಿ ಎಂಬುದು ಏನು ? ಪರಮಾತ್ಮ ವಿಷಯ ಜ್ಞಾನವೇ, ಭಗವತ್‌ಶೇಷತ್ವ ಅಂದರೆ ಭಗವಂತ ಸ್ವಾಮಿ ತಾನು ದಾಸ ಎಂಬ ಜ್ಞಾನಾನುಸಂಧಾನವೇ ಜೀವಾತ್ಮನಿಗೆ ಮೇಲಾದ ಪರಿಶುದ್ಧತೆ, ದ್ರೌಪದಿ ಸ್ನಾತೆಯಾಗಿರುವ ಕಾಲದಲ್ಲಿ ಶರಣಾಗತಿ ಮಾಡಿದಳೆಂದೂ, ಅರ್ಜುನನು ಯುದ್ಧ ಭೂಮಿಯಲ್ಲಿ ಶರಣಾಗತಿ ಮಾಡಿದನೆಂದೂ ಪುರಾಣಗಳು ತಿಳಿಸುತ್ತವೆ. ಆದ್ದರಿಂದ ಶರಣಾಗತಿಗೆ ಶರೀರ ಸ್ನಾನ ಮುಖ್ಯವಲ್ಲ. ಇದ್ದಹಾಗೆಯೇ ಶರಣಾಗತಿ ಮಾಡಬಹುದು. ದೇಹೇಂದ್ರಿಯ ಮನಃ ಪ್ರಾಣ ಬುದ್ಧಿಗಳೆಲ್ಲವೂ ಪರಮಾತ್ಮನಿಗೆ ಶೇಷವಾಗಿವೆ, ಪರಮಾತ್ಮನೇ ತನಗೆ ಉಪಾಯ, ಅವನ ಕೈಂಕರ್ಯವೇ ತನಗೆ ಪುರುಷಾರ್ಥವೆಂಬ ಜ್ಞಾನ ಪಡೆಯುವುದೇ ಜೀವಾತ್ಮನಿಗೆ ಭಾವಶುದ್ಧಿ. ಇಂತಹ ಮನೋಭಾವ ಹೊಂದಿ, ಪರಿಶುದ್ಧರಾಗಿ ಬಂದು.

**ತೂಮಲರ್ ತೂವಿತ್ತೊಳುದು** - ಪರಿಶುದ್ಧವಾದ ಪುಷ್ಪಗಳನ್ನು ಅವನಿಗೆ ಸಮರ್ಪಿಸಿ, ಅವನನ್ನು ನಮಸ್ಕರಿಸಿ ಶರಣಾಗಿ - ಇತರ ಯಾವ ಲೌಕಿಕ ಪ್ರಯೋಜನಗಳಿಗೂ ಆಸೆಪಡದೆ, ಪುಷ್ಪ ಸಮರ್ಪಿಸುವುದೇ ಪ್ರಯೋಜನವಾಗಿ ಅರ್ಪಿಸುವುದೇ ಶುದ್ಧವಾದ ಪುಷ್ಪ. ''ಪತ್ರಂ ಪುಷ್ಪಂ ಫಲಂ ತೋಯಂ ಯೋಮೇ ಭಕ್ತ್ಯಾ ಪ್ರಯಚ್ಛತಿ'' - ಅಂದರೆ ಕೇವಲ ಒಂದು ಎಲೆಯಾಗಲಿ, ಹೂವಾಗಲಿ, ಹಣ್ಣಾಗಲಿ, ನೀರಾಗಲಿ ಯಾವುದಾದರೂ ಸರಿ, ಭಕ್ತಿಯಿಂದ ಸಮರ್ಪಿಸಿದರೆ ಅದನ್ನು ನಾನು ಸಂತೋಷದಿಂದ ಸ್ವೀಕರಿಸುವೆನು ಎಂದು ಕೃಷ್ಣ ಪರಮಾತ್ಮನು ಗೀತೆಯಲ್ಲಿ ಹೇಳಿದ್ದಾನೆ. ಅದನ್ನೇ ಇಲ್ಲಿ ತಿಳಿಸಿದೆ, ಇಲ್ಲಿ ಯಾವ ಪುಷ್ಪದ ಹೆಸರನ್ನೂ ಹೇಳದೆ ಸುಮ್ಮನೆ 'ತೂಮಲರ್', ಎಂದೂ, ಪುಷ್ಪವನ್ನು ಯಾವ ರೀತಿ ಸಮರ್ಪಿಸಬೇಕೆಂದು ಹೇಳದೆ ಸುಮ್ಮನೆ 'ತೂವಿ ತೊಳುದು' ಎಂದೂ ಹೇಳಿದೆ. ಆದ್ದರಿಂದ ಯಾವ ಪುಷ್ಪವನ್ನಾದರೂ ಸರಿ ಭಕ್ತಿಭಾವನೆಯಿಂದ ಅರ್ಪಿಸಬೇಕು ಎಂದು ಅಭಿಪ್ರಾಯವಾಗುತ್ತದೆ. ಅಂದರೆ ನಾವು ಯಾವ ಪುಷ್ಪವನ್ನು ಸಮರ್ಪಿಸಿದೆವು, ಯಾವ ರೀತಿ ಸಮರ್ಪಿಸಿದೆವು ಎಂಬುದೆಲ್ಲ ಮುಖ್ಯವಲ್ಲ, ಹೃದಯದಲ್ಲಿರುವ ಭಕ್ತಿ ಭಾವನೆಯೇ ಮುಖ್ಯವಾದುದು.

ಇಲ್ಲಿ ಪುಷ್ಪಗಳೆಂದು ಹೇಳಿರುವುದು, ಕೇವಲ ಗಿಡದಲ್ಲಿ ಬೆಳೆದ ಪುಷ್ಪಗಳನ್ನು ಕೈಯಿಂದ ತಂದು ಸಮರ್ಪಿಸುವುದು ಎಂಬುದು ವಾಕ್ಯಾರ್ಥ. ಆದರೆ ಅಷ್ಟು ಮಾತ್ರವಲ್ಲದೆ ನಾವು ಕೈಯಿಂದ ಮಾಡುವ ಕರ್ತವ್ಯ ಕರ್ಮಗಳೆಲ್ಲವೂ ನಾವು ಪರಮಾತ್ಮನಿಗೆ ಸಮರ್ಪಿಸುವ ಪುಷ್ಪಗಳಾಗಿವೆ. ಅವುಗಳನ್ನು ಸಾಧನ ಬುದ್ಧಿಯಿಂದ ಆಚರಿಸದೆ ಕರ್ತೃತ್ವ ಮಮತಾಫಲ ತ್ಯಾಗ ಪೂರ್ವಕವಾಗಿ ಎಲ್ಲವೂ ಪರಮಾತ್ಮನ ಪೂಜೆ ಎಂಬ ಭಕ್ತಿ ಭಾವನೆಯಿಂದ ಸಂತೋಷದಿಂದ ಆಚರಿಸಿದರೆ ಅವುಗಳೆಲ್ಲವೂ ನಾವು ಪರಮಾತ್ಮನಿಗೆ ಪೂಜಾ ರೂಪವಾಗಿ ಸಮರ್ಪಿಸುವ ತೂಮಲರ್ ಅಂದರೆ ಪರಿಶುದ್ಧವಾದ ಪುಷ್ಪಗಳಾಗುತ್ತವೆ ಎಂಬುದು ವಿಶೇಷಾರ್ಥ, ನಾವು ಯಾವ

ಕರ್ಮ ಮಾಡಿದೆವು, ಯಾವ ರೀತಿ ಮಾಡಿದೆವು ಎಂಬುದೆಲ್ಲ ಮುಖ್ಯವಲ್ಲ; ಕರ್ಮ ಮಾಡುವಾಗ ಹೃದಯದಲ್ಲಿರುವ ಭಕ್ತಿ ಭಾವನೆಯೇ ಮುಖ್ಯವಾದುದು. ಪರಮಾತ್ಮನ ಪೂಜೆಯೆಂದು ಭಕ್ತಿಯಿಂದ ಕರ್ಮಮಾಡುವ ಕರ್ಮಯೋಗನಿಷ್ಠರು ಎಂದೂ ಕೆಟ್ಟ ಕರ್ಮ ಮಾಡಲಾರರು. ಅವರು ಮಾಡುವುದೆಲ್ಲಾ ಸತ್ಕರ್ಮಗಳೇ ಆಗಿರುತ್ತವೆ. ''ಯತ್ಕರೋಷಿ ಯದಶ್ನಾಸಿ - ತತ್ಕುರುಷ್ವಮದರ್ಪಣಂ' ಅಂದರೆ ನೀನು ಮಾಡುವ ಸಮಸ್ತ ಲೌಕಿಕ ವೈದಿಕ ಕರ್ಮಗಳೆಲ್ಲವನ್ನೂ ನನ್ನ ಪೂಜೆ ಎಂದು ಮಾಡಿ ನನಗೆ ಸಮರ್ಪಿಸು ಎಂದು ಶ್ರೀಕೃಷ್ಣ ಪರಮಾತ್ಮನು ಗೀತೆಯಲ್ಲಿ ಹೇಳಿರುವುದನ್ನು ಇಲ್ಲಿ ಗೋದಾದೇವಿಯು ತಿಳಿಸಿದ್ದಾಳೆ.

**ವಾಯಿನಾಲ್ ಪಾಡಿ** - ಬಾಯಿಂದ ಹಾಡಿ - ಬಾಯಿಪಡೆದಿರುವುದಕ್ಕೆ ಅವನ ನಾಮಗಳನ್ನು ಹಾಡುವುದೇ ಮುಖ್ಯ ಪ್ರಯೋಜನ.

**ಮನತ್ತಿನಾಲ್ ಶಿನ್ದಿಕ್ಕ** - ಮನಸ್ಸಿನಿಂದ ಚಿಂತಿಸಿದರೆ - ಮನಸ್ಸನ್ನು ಪಡೆದಿರುವುದಕ್ಕೆ ಅವನನ್ನು ಧ್ಯಾನಿಸುವುದೇ ಮುಖ್ಯ ಪ್ರಯೋಜನ.

**ಪೋಯಪಿಳ್ಳೆಯುಂ ಪುಹುದರುವಾನಿನ್ರನವುಮ್** - ನಾವು ಹಿಂದೆ ಮಾಡಿದ ಪಾಪಗಳು ಎಲ್ಲವೂ ಅಂದರೆ ಭಗವತ್ ಜ್ಞಾನ ನಮಗೆ ಉಂಟಾಗುವುದಕ್ಕೆ ಮುಂಚೆ ಬುದ್ಧಿ ಪೂರ್ವಕವಾಗಿ ನಾವು ಮಾಡಿದ ಪಾಪಗಳೂ ಮತ್ತು ಭಗವತ್ ಜ್ಞಾನ ನಮಗೆ ಉಂಟಾದ ಮೇಲೆ ನಮಗೆ ತಿಳಿಯದೆ ಪ್ರಕೃತಿ ಸಂಬಂಧದಿಂದ ನಮ್ಮಿಂದ ಉಂಟಾಗುವ ಪಾಪಗಳೂ ಇವುಗಳೆಲ್ಲವೂ, ಅಂದರೆ ಹಿಂದೆ ಮಾಡಿದ, ಮುಂದೆ ಮಾಡುವ ಮತ್ತು ಈಗ ಮಾಡುತ್ತಿರುವ ಪಾಪಗಳೆಲ್ಲವೂ -

**ತೀಯಿನಿಲ್ ತೂಶಾಹುವಮ್** - ಬೆಂಕಿಯಲ್ಲಿಟ್ಟ ಹತ್ತಿಯಂತೆ ಸುಟ್ಟು ಭಸ್ಮವಾಗುವುವು ಅಂದರೆ ಸಂಪೂರ್ಣವಾಗಿ ನಾಶವಾಗುವುವು - ಕರ್ಮಫಲವನ್ನು ಅನುಭವಿಸಿಯೇ ತೀರಬೇಕು ಎಂದು ವೇದದಲ್ಲಿ ಹೇಳಿರುವಾಗ, ಇಲ್ಲಿ ಗೋದಾದೇವಿಯು ಹೇಳಿರುವುದು ವೇದ ವಾಕ್ಯಗಳಿಗೆ ವಿರೋಧವಾಗುತ್ತದೆಯೇ

ಎಂಬ ಶಂಕೆಗೆ ಆಸ್ಪದವಿಲ್ಲ - ಬೆಂಕಿಯ ಪ್ರಭಾವ ಎಲ್ಲವನ್ನೂ ಸುಡುವ ಪ್ರಭಾವ. ಆದರೆ ನೀರಿರುವ ಜಾಗದಲ್ಲಿ ಬೆಂಕಿಗೆ ಪ್ರಭಾವವಿಲ್ಲ. ಅದೇ ರೀತಿ ಕರ್ಮವನ್ನು ಅನುಭವಿಸಿಯೇ ತೀರಬೇಕು. ಅದರ ಪ್ರಭಾವವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಭಗವತ್ ಸಂಬಂಧ ಜ್ಞಾನ, ಭಗವದ್ ಭಕ್ತಿ ಉಂಟಾದರೆ ತಣ್ಣೀರು ಕಂಡ ಬೆಂಕಿಯಂತೆ ಆ ಕರ್ಮ ಕಾರ್ಯ ಮಾಡುವುದಿಲ್ಲ. ಆದ್ದರಿಂದ ತ್ರಿಕರಣಗಳಿಂದಲೂ ಪರಮಾತ್ಮನನ್ನು ಭಜಿಸಿರಿ ನಿಮ್ಮ ಪಾಪಗಳೆಲ್ಲವೂ ನಾಶವಾಗುತ್ತವೆ.

**'ಶೆಪ್ಪ್'** - ಹೇಳಿರಿ - ಸರ್ವದಾ ಭಗವನ್ನಾಮ ಹೇಳಿರಿ ಎಂದು ಗೋದಾದೇವಿಯು ಎಲ್ಲರಿಗೂ ಉಪದೇಶ ಮಾಡಿದ್ದಾಳೆ.

**ಏಲ್‌ಓರ್ ಎಂಪಾವಾಯ್** - ನಮ್ಮ ಅದ್ವಿತೀಯವಾದ ವ್ರತವು ನಿರ್ವಿಘ್ನವಾಗಿ ನೆರವೇರುವುದು - ತೂಮಲರ್ ತೂವಿತೊಳುದು - ಅಂದರೆ ಕೈಗಳಿಂದ ಪರಿಶುದ್ಧವಾದ ಪುಷ್ಪಗಳನ್ನು ಸಮರ್ಪಿಸಿ, ನಮಸ್ಕರಿಸಿ ಎಂಬುದು ಕರ್ತವ್ಯ ಕರ್ಮಗಳನ್ನು ಕರ್ತೃತ್ವ, ಮಮತಾ ಫಲತ್ಯಾಗದೊಂದಿಗೆ ಭಗವದಾರಾಧನೆ ಎಂದು ಭಕ್ತಿಯಿಂದ ಮಾಡಿರಿ ಎಂದು ಕರ್ಮಯೋಗವನ್ನೂ; - ವಾಯಿನಾಲ್‌ಪಾಡಿ - ಅಂದರೆ ಬಾಯಿನಿಂದ ಅವನ ದಿವ್ಯ ನಾಮಗಳನ್ನು ಹಾಡಿರಿ ಎಂಬುದು ಭಕ್ತಿ ಯೋಗವನ್ನೂ; ಮನತ್ತಿನಾಲ್ ಶಿನ್ದಿಕ್ಕ - ಅಂದರೆ ಮನಸ್ಸಿನಲ್ಲಿ ಅವನನ್ನು ಧ್ಯಾನಿಸಿರಿ ಎಂಬುದು ಭಗವಂತ್ ಚಿಂತನ ರೂಪ ಜ್ಞಾನ ಯೋಗವನ್ನೂ ತಿಳಿಸುತ್ತದೆ. ಕೈ, ಬಾಯಿ, ಮನಸ್ಸು ಎಂಬ ತ್ರಿಕರಣಗಳಿಂದ ಕರ್ಮ, ಜ್ಞಾನ, ಭಕ್ತಿಯೋಗಗಳೆಲ್ಲವನ್ನೂ, ತೂಯೋಮಾಯ್ - ಅಂದರೆ ಸಾಧನ ಬುದ್ಧಿಯಿಂದ ಮಾಡದೆ ಪರಮಾತ್ಮನ ಪವಿತ್ರ ಕೈಂಕರ್ಯವೆಂಬ ಭಾವ ಶುದ್ಧಿಯಿಂದ ಮಾಡಿರಿ ಎಂಬುದೇ ಈ ಪಾಶುರದ ವಿಶೇಷಾರ್ಥ. ಪೂರ್ವಾಚಾರ್ಯರುಗಳು ಚರಮ ಶ್ಲೋಕವೆಂದು ಕರೆದಿರುವ ಭಗವದ್ಗೀತೆಯ 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬ ಅತಿ ಮುಖ್ಯವಾದ ಶ್ಲೋಕದ ಅರ್ಥವನ್ನೇ ಈ ಪಾಶುರವು ಪ್ರತಿಪಾದಿಸುತ್ತದೆ ಎಂಬುದನ್ನು ಹಿಂದೆಯೇ ವಿವರಿಸಿ ತಿಳಿಸಿದೆ. ಭಗವಂತನು ಸ್ವಾಮಿ, ನಾವು ಅವನ ದಾಸರು ಎಂಬ ಮನೋಭಾವ

ಹೊಂದಿ ಪರಿಶುದ್ಧ ಮನಸ್ಕರಾಗಿ ಭಗವನ್ನಾಮಗಳನ್ನು ಹಾಡುತ್ತಾ, ಅವನ ದಿವ್ಯ ಗುಣ ಚೇಷ್ಟಿತಾದಿಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ, ನಾವು ನಮ್ಮ ಕರ್ತವ್ಯ ಕರ್ಮಗಳನ್ನು ಅವನ ಕೈಂಕರ್ಯವೆಂಬ ಪವಿತ್ರ ಭಾವನೆಯೊಂದಿಗೆ ಭಕ್ತಿಯಿಂದ ಮಾಡುತ್ತಿದ್ದರೆ, ನಾವು ಹಿಂದೆ ಮಾಡಿದ, ಇಂದು ಮಾಡುತ್ತಿರುವ ಮತ್ತು ಮುಂದೆ ಮಾಡುವ ಪಾಪಗಳೆಲ್ಲವೂ ಸಂಪೂರ್ಣಗಿ ನಾಶವಾಗಿ ನಮಗೆ ಭಗವದನುಭವ ಲಭಿಸುತ್ತದೆ. ಆದ್ದರಿಂದ ಗೋದಾದೇವಿಯು ಈ ಪಾಶುರದಲ್ಲಿ ಸರ್ವರಿಗೂ 'ಶೆಪ್ಪ್' - ಅಂದರೆ ಸರ್ವದಾ ಭಗವನ್ನಾಮಗಳನ್ನು ಹೇಳಿರಿ ಎಂಬ ಸಾರವಾದ ಉಪದೇಶ ನೀಡಿದ್ದಾಳೆ. ಇದೇ ಅವಳ ಮುಖ್ಯವಾದ ಸರ್ವೋದಯ ಸಂದೇಶ.

ಇಲ್ಲಿಗೆ ಈ ಐದು ಪಾಶುರಗಳಿಂದ ತಿರುಪ್ಪಾವೈಯ ಮೊದಲನೆಯ ವಿಭಾಗ ಮುಗಿಯಿತು. ಇದು ತಿರುಪ್ಪಾವೈಗೆ ಪೀಠಿಕೆ ಅಥವಾ ಅವತಾರಿಕೆಯಾಗಿದೆ. ಮೊದಲನೆಯ ಪಾಶುರದಲ್ಲಿ ಗೋದಾದೇವಿಯು ಪರಮಾತ್ಮನ ಕಲ್ಯಾಣ ಗುಣಸಾಗರದಲ್ಲಿ ಮುಳುಗುವ ಮಾರ್ಹಳಿ ನೀರಾಟ್ಟವೆಂಬ ವ್ರತಾನುಷ್ಠಾನ ಮಾಡಲು ಬನ್ನಿರಿ ಎಂದು ಎಲ್ಲರನ್ನೂ ಕರೆಯುತ್ತಾಳೆ. ಇದರಲ್ಲಿ ಪ್ರಾಪ್ಯ (ಪುರುಷಾರ್ಥ), ಪ್ರಾಪಕ (ಉಪಾಯ) ಮತ್ತು ಅಧಿಕಾರಿಗಳ ಸ್ವರೂಪವು ತಿಳಿಸಲ್ಪಟ್ಟಿದೆ. ಶ್ರೀಮನ್ನಾರಾಯಣನೇ ಪರತತ್ತ್ವ, ಅವನಿಗೆ ಕೈಂಕರ್ಯ ಮಾಡುವುದೇ ಪರಮ ಪುರುಷಾರ್ಥ, ಅದನ್ನು ಹೊಂದಲು ಅವನೇ ಉಪಾಯ, ಅವನಲ್ಲಿ ಶರಣಾಗತಿ ಮಾಡಲು ಇಚ್ಛೆ ಉಳ್ಳವರೆಲ್ಲರೂ ಅದಕ್ಕೆ ಅಧಿಕಾರಿಗಳು ಮತ್ತು ಆ ಇಚ್ಛೆ ಹೃದಯದಲ್ಲಿ ಉಂಟಾಗುವ ಕಾಲವೇ ಶರಣಾಗತಿ ಮಾಡಲು ಸರಿಯಾದ ಕಾಲ ಎಂದು ತಿಳಿಸಿದೆ. ಈ ವ್ರತಾಚರಣೆಗೆ ಅವಶ್ಯಕವಾದ ಕೃತ್ಯಾಕೃತ್ಯ ವಿವೇಕವು ಅಂದರೆ ಭಗವಂತನೇ ಉಪಾಯ ಮತ್ತು ಅವನೇ ಉಪೇಯ (ಫಲ) ವೆಂದಿರುವವರು ಸ್ವಾಭಾವಿಕವಾಗಿ ಆಚರಿಸುವ ಮತ್ತು ತ್ಯಜಿಸುವ ಕರ್ಮಗಳ ವಿಚಾರವು ಎರಡನೆಯ ಪಾಶುರದಲ್ಲಿ ತಿಳಿಸಲ್ಪಟ್ಟಿದೆ. ಮೂರನೆಯ ಪಾಶುರದಲ್ಲಿ ಭಗವನ್ನಾಮ ಸಂಕೀರ್ತನೆ ಮಾಡಿದರೆ ಮಾನವನ ಹೃದಯವು ಪವಿತ್ರವಾಗಿ

ಭಕ್ತಿಭರಿತವಾಗುತ್ತದೆ ಮತ್ತು ದೇಶವೂ ಸುಭಿಕ್ಷವಾಗಿ ಸಂಪತ್ಸಮೃದ್ಧವಾಗಿ ಆಗುತ್ತದೆ ಎಂದು ತಿಳಿಸಿದೆ. ನಾಲ್ಕನೆಯ ಪಾಶುರದಲ್ಲಿ ವ್ರತಾಚರಣೆಗಾಗಿ ಮಳೆ ಸುರಿಸುವಂತೆ ವರ್ಷ ದೇವತೆಯನ್ನು ಪ್ರಾರ್ಥಿಸಿದ್ದಾರೆ. ಇದರಲ್ಲಿ ಭಗವದ್ಭಕ್ತರಿಗೆ ದೇವತೆಗಳೂ ಸಹಾಯ ಮಾಡುತ್ತಾರೆ ಎಂಬುದು ಸೂಚಿತವಾಗಿದೆ. ಇದು ತಮ್ಮ ಮೇಲೆ ಜ್ಞಾನ ಮಳೆ ಸುರಿಸುವಂತೆ ಆಚಾರ್ಯರುಗಳನ್ನು ಪ್ರಾರ್ಥಿಸುವ ಪಾಶುರವೂ ಆಗಿದೆ.

ಐದನೆಯ ಪಾಶುರದಲ್ಲಿ ಕಾಯೇನ ವಾಚಾ ಮನಸಾ ಅಂದರೆ ಶರೀರ ಮಾತು ಮನಸ್ಸುಗಳಿಂದ ಭಗವಂತನ ಕೈಂಕರ್ಯ ಮಾಡಿದರೆ ಸಮಸ್ತಪಾಪಗಳೂ ನಾಶವಾಗುವುವು; ಎಲ್ಲರೂ ಸರ್ವದಾ ಭಗವನ್ನಾಮಗಳನ್ನು ಹಾಡಿರಿ ಎಂದು ಸರ್ವರಿಗೂ ಸಂದೇಶ ನೀಡಿದ್ದಾಳೆ. ಮೊದಲನೆಯ ಪಾಶುರದಲ್ಲಿ 'ನಾರಾಯಣನೇ' ಎಂದು ಪರಮ ಪದದಲ್ಲಿರುವ ಪರಮಾತ್ಮನ ಪರ ರೂಪವನ್ನು, ಎರಡನೆಯ ಪಾಶುರದಲ್ಲಿ 'ಪಾರ್ಕಡಲಿಲ್ ಪೈಯ್ಯತುಯಿನ್ರ ಪರಮನ್' ಎಂದು ಪರಮಾತ್ಮನ ವ್ಯೂಹ ರೂಪವನ್ನೂ, ಮೂರು, ನಾಲ್ಕು ಮತ್ತು ಐದನೆಯ ಪಾಶುರಗಳಲ್ಲಿ ಅವನ ವಾಮನ, ರಾಮ, ಕೃಷ್ಣಾದಿ ವಿಭವ ರೂಪಗಳನ್ನೂ - ಹಾಡಿದ್ದಾಳೆ. 'ಓಂಗಿ ಉಲಹಳನ್ದ ಉತ್ತಮನ್' ಎಂದು 3ನೇ ಪಾಶುರದಲ್ಲಿ ವಾಮನ, ತ್ರಿವಿಕ್ರಮಾವತಾರಗಳನ್ನು ಹಾಡಿದ್ದಾಳೆ. ನಾಲ್ಕನೇ ಪಾಶುರದಲ್ಲಿ ರಾಮಾವತಾರವು ಸೂಚಿಸಲ್ಪಟ್ಟಿದೆ. ಐದನೇ ಪಾಶುರದಲ್ಲಿ ಕೃಷ್ಣಾವತಾರವನ್ನು ವ್ಯಕ್ತವಾಗಿ ಹಾಡಿದ್ದಾಳೆ. ಹೀಗೆ ಈ ಮೊದಲ ಐದು ಪಾಶುರಗಳಲ್ಲಿ ಪರಮಾತ್ಮನ ಪರವ್ಯೂಹ ವಿಭವರೂಪಗಳಿಗೆ ಮಂಗಳ ಹಾಡಿದ್ದಾಳೆ ಮತ್ತು ಅದರೊಂದಿಗೆ 'ನೀರಾಡಪ್ಪೋದುವೀರ್ ಪ್ಪೋದುಮಿನೋ' ಎಂದು ಭಗವಂತನನಾಮ ಸಂಕೀರ್ತನೆ ಮಾಡಲು ಭಾಗವತರನ್ನೆಲ್ಲಾ ತನ್ನೊಡನೆ ಕಲಿತುಕೊಳ್ಳುವಂತೆ ಕರೆದು ಭಾಗವತರ ಅನುಗ್ರಹವನ್ನೂ ಪ್ರಾರ್ಥಿಸಿದ್ದಾಳೆ ಮತ್ತು ಭೂಲೋಕದ ಜನರಿಗೆಲ್ಲಾ ಭಗವನ್ನಾಮ ಹೇಳುವಂತೆ ಸಂದೇಶ ನೀಡಿದ್ದಾಳೆ.

# 2ನೆಯ ವಿಭಾಗ

## ಪಾಶುರಗಳು 6 ರಿಂದ 15 – ಭಾಗವತರುಗಳನ್ನು ಎಬ್ಬಿಸುವ ಪಾಶುರಗಳು

ಈ ಪಾಶುರಗಳಲ್ಲಿ, ಮೊದಲು ಎದ್ದಿರುವ ಗೋಪಿಯರು ಮಲಗಿರುವ ಇತರ ಗೋಪಿಯರನ್ನು ಎಬ್ಬಿಸುತ್ತಾರೆ. ಅವರನ್ನು ತಮ್ಮೊಡನೆ ಭಗವನ್ನಾಮ ಸಂಕೀರ್ತನೆಮಾಡಿ, ಭಗವದನುಭವ ಪಡೆಯಲು ಒಂದು ಸೇರುವಂತೆ ಕರೆಯುತ್ತಾರೆ. ಇದು ಪಾಶುರಗಳ ವಾಕ್ಯಾರ್ಥದಿಂದ ತಿಳಿದುಬರುವ ಅರ್ಥವಾಗಿದೆ. ಆದರೆ ಇದರಲ್ಲಿ ಬಹಳ ತತ್ತ್ವಾರ್ಥ ಅಡಗಿದೆ. ಗೋಪಿಯರೆಲ್ಲರೂ ಕೃಷ್ಣನಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿ ಭಗವದ್ಗುಣಾನುಭವದಲ್ಲಿ ಮಗ್ನರಾಗಿರುವವರಾಗಿದ್ದಾರೆ. ಹೀಗಿದ್ದಾಗ್ಯೂ ಕೆಲವರು ಮಾತ್ರ ಎದ್ದು ಭಗವನ್ನಾಮ ಸಂಕೀರ್ತನೆ ಮಾಡುವುದಾಗಿಯೂ ಮತ್ತೆ ಕೆಲವರು ಸುಮ್ಮನೆ ಮಲಗಿರುವುದರಿಂದ ಅವರನ್ನು ಇವರು ಎಬ್ಬಿಸುವುದಾಗಿಯೂ ಹೇಳಿರುವುದರ ಅರ್ಥವೇನು - ಎಂದರೆ ಎಲ್ಲರೂ ಭಗವದ್ಗುಣಾನುಭವದಲ್ಲಿ ಆಸಕ್ತರಾಗಿದ್ದರೂ, ಕೆಲವರು ತಮ್ಮ ರಕ್ಷಣೆಯ ಭಾರವನ್ನು ಭಗವಂತನಲ್ಲಿ ಸಮರ್ಪಿಸಿ, ತಾವು ತಮ್ಮ ರಕ್ಷಣೆಗಾಗಿ ಯತ್ನ ಮಾಡುವುದು ತಮ್ಮ ಸ್ವರೂಪಕ್ಕೆ ಸರಿಯಾದುದಲ್ಲ; ತಾವು ಭಗವಂತನಿಗೆ ಪರತಂತ್ರರಾಗಿ ಇರುವುದರಿಂದ ಅವನೇ ಬಂದು ತಮ್ಮನ್ನು ರಕ್ಷಿಸುತ್ತಾನೆಂದು ದೃಢ ನಂಬಿಕೆ ಹೊಂದಿದವರಾಗಿ, ಹೃದಯದಲ್ಲಿ ಭಗವದನುಭವರಸವನ್ನು ಅನುಭವಿಸುತ್ತಾ ಅದರಲ್ಲೇ ಮಗ್ನರಾಗಿ ಶಾಂತಚಿತ್ತರಾಗಿ ಸುಮ್ಮನೆ ಮಲಗಿದ್ದಾರೆ. ಆದರೆ ಮತ್ತೆ ಕೆಲವರು ಭಗವದನುಭವರಸವನ್ನು ಹೃದಯದಲ್ಲಿ ಅನುಭವಿಸಿ, ಭಗವಂತನನ್ನು ಈ ಕೂಡಲೇ ಅಂದರೆ ತಕ್ಷಣವೇ ಹೊಂದಬೇಕೆಂಬ ಅತ್ಯಂತ ತ್ವರೆ ಉಳ್ಳವರಾಗಿ, ಅವನು ಬಂದು ರಕ್ಷಿಸುವವರೆಗೂ

ಶಾಂತವಾಗಿ ಕಾಯುತ್ತಾ ಮಲಗಿರಲು ಸಾಧ್ಯವಾಗದೆ ಪ್ರಾತಃಕಾಲದಲ್ಲೇ ಎದ್ದು ಭಗವನ್ನಾಮ ಸಂಕೀರ್ತನೆ ಮಾಡಲು ಪ್ರಾರಂಭಿಸುತ್ತಾರೆ. ಹೀಗೆ ಮೊದಲು ಎದ್ದವರು ಇತರ ಭಗವದ್ಭಕ್ತರ, ಭಾಗವತರ ಸಂಗವನ್ನು ಪಡೆಯಬೇಕೆಂದು ಆಸೆಹೊಂದಿ ಮಲಗಿರುವವರನ್ನು ಎಬ್ಬಿಸುತ್ತಾರೆ ಮತ್ತು ಭಗವಂತನ ಮಂದಿರಕ್ಕೆ ಹೋಗಿ ನಾಮ ಸಂಕೀರ್ತನೆಮಾಡಿ ಭಗವದ್ಗುಣ ಸಾಗರದಲ್ಲಿ ಅವಗಾಹಿಸಿ ಅವನ ಕೃಪೆಗೆ ಪಾತ್ರರಾಗೋಣ ಬನ್ನಿರಿ ಎಂದು ಕರೆಯುತ್ತಾರೆ ಎಂದು ಅಭಿಪ್ರಾಯ.

ಮಲಗಿರುವವರೂ ಭಗವದ್ಭಕ್ತರಾದ ಗೋಪಿಗಳೇ, ತಾವು ಎದ್ದು ಇತರರನ್ನು ಎಬ್ಬಿಸುವವರೂ ಭಗವದ್ಭಕ್ತರಾದ ಗೋಪಿಗಳೇ - ಅಂದಮೇಲೆ ಅವರವರು ಅವರವರ ಪಾಡಿಗೆ ಭಗವನ್ನಾಮ ಸಂಕೀರ್ತನೆ ಹಾಡಿಕೊಂಡು, ಭಗವದ್ಗುಣ ಸಾಗರದಲ್ಲಿ ಮುಳುಗಿ ಆನಂದಪಡಬಹುದಲ್ಲ; ಇತರರನ್ನು ಎಬ್ಬಿಸಿ ತಮ್ಮೊಡನೆ ಕಲೆಯುವಂತೆ ಕರೆಯುವುದು ಏತಕ್ಕೆ ಎಂಬ ಪ್ರಶ್ನೆಗೆ ನಮ್ಮ ಪೂರ್ವಾಚಾರ್ಯರುಗಳು ಮುಖ್ಯವಾಗಿ ಮೂರು ಕಾರಣಗಳನ್ನು ತಿಳಿಸಿದ್ದಾರೆ.

(1) ಭಗವದನುಭವದ ಆನಂದವನ್ನು ಒಬ್ಬರೇ ಅನುಭವಿಸುವುದಕ್ಕಿಂತ ಇತರರೊಂದಿಗೆ ಸೇರಿ ಅನುಭವಿಸುವುದು ಹೆಚ್ಚು ರಸಭರಿತವಾಗಿರುವುದರಿಂದ, ಎಲ್ಲರನ್ನೂ ಭಗವನ್ನಾಮ ಸಂಕೀರ್ತನೆ ಮಾಡಿ, ಭಗವದನುಭವ ಪಡೆಯೋಣ ಬನ್ನಿರಿ ಎಂದು ಕರೆಯುತ್ತಾಳೆ ಗೋದೆ. 'ಏಕಃ ಸ್ವಾದುನಭುಂಜೀಥಾಃ' - ಅಂದರೆ ರಸವತ್ತಾದ ಪದಾರ್ಥವನ್ನು ಒಬ್ಬನು ತಾನೇ ಒಬ್ಬಂಟಿಗನಾಗಿ ಇದ್ದು ಅನುಭವಿಸಬಾರದು ಎಂದು ಹೇಳಿದೆ. ಭಗವದ್ಗುಣಾನುಭವವು ಎಲ್ಲಕ್ಕಿಂತ ರಸಭರಿತವಾದುದುದಾಗಿದೆ. 'ಬೋಧಯಂತಃ ಪರಸ್ಪರಂ' - ಅಂದರೆ ಭಕ್ತರು ತಾವು ತಾವು ಅನುಭವಿಸುವ ಭಗವಂತನ ಕಲ್ಯಾಣಗುಣಗಳನ್ನೂ, ರಮಣೀಯವೂ ದಿವ್ಯವೂ ಆದ ಚೇಷ್ಟಿತಗಳನ್ನೂ ಒಬ್ಬರಿಗೊಬ್ಬರು ಹೇಳಿಕೊಂಡು ಎಲ್ಲರೊಂದಿಗೂ ಪರಮ ಆನಂದ ಹೊಂದುತ್ತಾರೆ ಎಂದು ಭಗವದ್ಗೀತೆಯಲ್ಲಿ ಹೇಳಿದೆ. ತಿರುವಾಯ್ಮೊಳಿಯಲ್ಲಿ 'ಅಡಿಯಾರ್‌ಹಳ್ ಕುಳಾಂಗಳ್ಳೆ ಉಡನ್

ಕೂಡುವದೆನ್ರುಕೊಲೋ' ಎಂದು ನಮ್ಮಾಳ್ವಾರ್ರವರೂ ಭಗವದ್ಭಕ್ತರ ಸಂಗವನ್ನು ಆಸೆ ಪಟ್ಟು ಪ್ರಾರ್ಥಿಸಿದ್ದಾರೆ. ಆದ್ದರಿಂದ ಗೋದಾದೇವಿಯು ಎಲ್ಲರೂ ಒಟ್ಟಿಗೆ ಸೇರಿ ಭಗವನ್ನಾಮ ಸಂಕೀರ್ತನೆ ಮಾಡಿ, ಭಗವದ್ಗುಣಸಾಗರದಲ್ಲಿ ಮುಳುಗಿ ಪರಮ ಆನಂದ ಪಡೆಯೋಣ ಬನ್ನಿರಿ ಎಂದು ಎಲ್ಲರನ್ನೂ ಎಬ್ಬಿಸಿ ಕರೆಯುತ್ತಾಳೆ. ಕ್ಷುದ್ರ ವಿಷಯಾನುಭವಕ್ಕೆ ಇತರರ ಸಂಗವೂ ಬೆಳಕೂ ಬೇಕಾಗಿಲ್ಲ.

(2) ಭಗವದ್ಗುಣಸಾಗರದಲ್ಲಿ ಮುಳುಗುವುದಕ್ಕೆ ಮುಂಚೆ ಅದರಲ್ಲಿ ನುರಿತಿರುವ ಇತರರ ಸಹಾಯವನ್ನು ಪಡೆಯುವುದು ಒಳ್ಳೆಯದು. 'ಪೆರುಕ್ಕಾತ್ತಿಲ್ ಇಳಿವಾರ್ಕ್ಕುತ್ತುಣ್ಹೈತ್ತೇಟ್ಟುಮಾಪ್ಪೋಲೆ' - ಎಂದು ಹೇಳಿರುವಂತೆ ಹರಿಯುತ್ತಿರುವ ಒಂದು ದೊಡ್ಡ ನದಿಯಲ್ಲಿ ಸ್ನಾನಕ್ಕೆ ಇಳಿಯುವುದಕ್ಕೆ ಮುಂಚೆ, ಯಾವ ಘಟ್ಟದಲ್ಲಿ ಇಳಿದು ಸ್ನಾನ ಮಾಡುವುದು ಒಳ್ಳೆಯದು ಎಂಬುದನ್ನು ತಿಳಿದವರಿಂದ ಅರಿತು, ಅನಂತರ ಇಳಿಯಬೇಕು, ಇಲ್ಲದಿದ್ದರೆ ಸುಳಿಯಲ್ಲಿ ಸಿಕ್ಕಿ ಕಷ್ಟ ಪಡಬೇಕಾದ ಸಂಭವವುಂಟು, ಅದೇ ರೀತಿ ಭಗವಂತನ ಕಲ್ಯಾಣಗುಣಸಾಗರವು ಬಹಳ ಅಗಾಧವಾಗಿರುವುದರಿಂದ ಯಾವ ಯಾವ ಗುಣಗಳನ್ನು ಅನುಸಂಧಾನ ಮಾಡಿ, ಅನುಭವಿಸಬೇಕು ಎಂಬುದೆಲ್ಲವನ್ನೂ ಭಕ್ತರಿಂದ ಅರಿತು, ಅವರೊಡನೆ ಕಲೆತು ಅನುಭವಿಸುವುದು ಒಳ್ಳೆಯದು.

(3) ಭಗವದ್ವಿಷಯವನ್ನು ಅನುಭವಿಸುವಾಗ 'ತದೀಯರೈಮುನ್ನಿಟ್ಟಲ್ಲದು ಅನುಭವಿಕ್ಕ ಮಾಟ್ಟಾರ್' - ಅಂದರೆ ಭಾಗವತರನ್ನು ಮುಂದಿಟ್ಟುಕೊಂಡಲ್ಲದೆ ಅನುಭವಿಸಲಾರರು ಎಂದೂ, ''ವೇದಂವಲ್ಲಾರೈಕೊಂಡು ವಿಣ್ಣೋರ್‌ಪೆರು ಮಾನ್ ಪಾದಂ ಪಣಿಮಿನೋ'' ಅಂದರೆ ಭಾಗವತರನ್ನು ಮುಂದಿಟ್ಟುಕೊಂಡು ಭಗವಂತನನ್ನು ಆಶ್ರಯಿಸಿರಿ ಎಂದೂ ಹೇಳಿದೆ. ಒಬ್ಬ ಮಾವಟಿಗನನ್ನು ಮುಂದು ಮಾಡಿಕೊಂಡು ಒಂದು ಆನೆಯನ್ನು ಸಮೀಪಿಸಬೇಕಾಗಿದೆ. ಹಾಗೆಯೇ ಪರಮಾತ್ಮನನ್ನು ಆಶ್ರಯಿಸಿ, ಅವನಲ್ಲಿ ಶರಣಾಗತಿ ಮಾಡಬೇಕಾದರೆ ಭಾಗವತರ ಆಶ್ರಯವು ಅವಶ್ಯಕ. ಅವರೊಂದಿಗೆ ಸೇರಿಕೊಂಡು ಅವರ ಸಹಾಯ ಪಡೆದು

ಭಗವಂತನನ್ನು ಆಶ್ರಯಿಸುವುದು ಸುಲಭ. ಆದ್ದರಿಂದ ಮೊದಲು ಭಾಗವತರನ್ನು ಎಬ್ಬಿಸಿ ಅವರ ಜತೆಗೂಡಿ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾರೆ.

ಈ ಹತ್ತು ಪಾಶುರಗಳು ಅಂದರೆ 6ನೇ ಪಾಶುರದಿಂದ 16ನೇ ಪಾಶುರದವರೆಗಿನ 10 ಪಾಶುರಗಳು, ಭಗವನ್ನಾಮ ಸಂಕೀರ್ತನೆ ಮಾಡಿ ಭಗವದನುಭವ ಪಡೆಯಲು ಸಹಕಾರಿಗಳಾಗಿ ತಮ್ಮೊಡನೆ ಕಲೆತುಕೊಳ್ಳುವಂತೆ ಭಗವತ್ ಕೈಂಕರ್ಯದಲ್ಲಿ ಅಭಿರುಚಿಯುಳ್ಳ ಚೇತನರನ್ನೂ, ಭಾಗವತರನ್ನೂ ಕರೆಯುವ ಪಾಶುರಗಳಾಗಿವೆ. ಒಂದೊಂದು ಪಾಶುರದಲ್ಲಿ ಒಬ್ಬೊಬ್ಬ ಗೋಪಿಯನ್ನು ಎಬ್ಬಿಸುತ್ತಾರೆ. ಪ್ರತಿ ಒಂದು ಪಾಶುರದಲ್ಲೂ ಮೂರು ವಿಷಯಗಳನ್ನು ಗೋದಾದೇವಿಯು ತಿಳಿಸಿದ್ದಾಳೆ. (1)ಪ್ರಾತಃಕಾಲವಾಗಿರುವುದಕ್ಕೆ ಒಂದೆರಡು ಗುರುತುಗಳನ್ನು ಹೇಳಿದ್ದಾಳೆ. (2)ಮಲಗಿರುವವಳ ಗುಣಗಳನ್ನು ಹೇಳಿ ಅವಳನ್ನು ಸಂಬೋಧಿಸಿ ಕರೆಯುತ್ತಾಳೆ. (3)ಪರಮಾತ್ಮನ, ಮುಖ್ಯವಾಗಿ ಶ್ರೀ ಕೃಷ್ಣ ಪರಮಾತ್ಮನ ಕೆಲವು ಕಲ್ಯಾಣ ಗುಣಗಳನ್ನೂ, ದಿವ್ಯ ಚೇಷ್ಟಿತಗಳನ್ನೂ ಹಾಡಿ ಸ್ತುತಿಸಿದ್ದಾಳೆ. - ಈ ಪ್ರತಿ ಒಂದು ಪಾಶುರದಲ್ಲೂ ಗೋದಾದೇವಿಯು ಮಾನವನ ಹೃದಯದಲ್ಲಿ ಸತ್ತ್ವಗುಣವು ತಲೆಯೆತ್ತುವುದಕ್ಕೆ ಬೇಕಾದ ಕೆಲವು ಅಂಶಗಳನ್ನು ತಿಳಿಸಿ, ಭಾಗವತರ ಗುಣಗಳನ್ನು ವಿವರಿಸಿ, ಪರಮಾತ್ಮನ ಕಲ್ಯಾಣಗುಣಗಳನ್ನು ಹಾಡಿ ಸ್ತೋತ್ರ ಮಾಡಿದ್ದಾಳೆ ಎಂಬ ವಿಶೇಷಾರ್ಥವನ್ನು ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.

# ಪಾಶುರ - 6

ಆರನೆಯ ಪಾಶುರದಿಂದ ಹದಿನಾರನೆಯ ಪಾಶುರದವರೆಗಿನ ಹತ್ತು ಪಾಶುರಗಳು ಭಗವದನುಭವಕ್ಕೆ ಸಹಕಾರಿಗಳಾದ ಭಗವದ್ಭಕ್ತರನ್ನು ಎಬ್ಬಿಸಿ, ತಮ್ಮೊಡನೆ ಕಲೆತು ಭಗವನ್ನಾಮಸಂಕೀರ್ತನೆ ಮಾಡುವಂತೆ ಕರೆಯುವ ಪಾಶುರಗಳಾಗಿವೆ. ಅವರಲ್ಲಿ ಒಬ್ಬರಿಗಿಂತಒಬ್ಬರು ಮೇಲಾದ ಭಗವದ್ಭಕ್ತರಾಗಿದ್ದಾರೆ.

**ಪುಳ್ಳುಮ್ ಶಿಲಮ್ಬಿನಕಾಣ್ ಪುಳ್ಳರೈಯನ್ ಕೋಯಿಲಿಲ್**
**ವೆಳ್ಳೈ ವಿಳಿಶಙ್ಗಿನ್ ಪೇರರವಂ ಕೇಟ್ಟಿಲೈಯೋ**
**ಪಿಳ್ಳಾಯೆಳುಂದಿರಾಯ್ ಪೇಯ್‌ಮುಲೈ ನಂಜುಂಡು**
**ಕಳ್ಳಚ್ಚಕಡಂ ಕಲಕ್ಕಳಿಯ ಕ್ಕಾಲೋಚ್ಚಿ**
**ವೆಳ್ಳತ್ತರವಿಲ್ ತುಯಿಲಮರ್‌ನ್ದ ವಿತ್ತಿನ್ನೈ**
**ಉಳ್ಳತ್ತುಕ್ಕೊಣ್ಡು ಮುನಿವರ್‌ಕಳುಮ್ ಯೋಗಿಕಳುಮ್**
**ಮೆಳ್ಳವೆಳುನ್ದರಿಯೆನ್ರ ಪೇರರವಮ್ ।**
**ಉಳ್ಳಮ್‌ಪುಹುಂದು ಕುಳಿರ್‌ನ್ದೇಲೋರೆಮ್ಬಾವಾಯ್ .**

ಬೆಳಗಾಯಿತು, ಪಕ್ಷಿಗಳು ಕೂಡ ಚಿಲಿಪಿಲಿಗುಟ್ಟುತ್ತಾ ಶಬ್ದ ಮಾಡುತ್ತಿವೆ, ನೋಡು. ಪಕ್ಷಿರಾಜನಾದ ಗರುಡನಿಗೆ ಸ್ವಾಮಿಯಾಗಿರುವ ಪರಮಾತ್ಮನ ದೇವಾಲಯದಲ್ಲಿ ಬಿಳಿಯ ಶಂಖದ ಮಹಾನಾದವನ್ನು ಕೇಳಲಿಲ್ಲವೇ ! ಎಲೈ ಚಿಕ್ಕ ಹುಡುಗಿಯೇ ! ಏಳುವವಳಾಗು. ರಾಕ್ಷಸಿಯಾದ ಪೂತನಿಯ ವಿಷಭರಿತವಾದ ಸ್ತನ್ಯಪಾನ ಮಾಡಿ, ವಂಚಕನಾಗಿ ಗಾಡಿಯರೂಪಹೊಂದಿಬಂದ ಶಕಟಾಸುರನನ್ನು ಅವನ ಬಲವೆಲ್ಲಾ ನಾಶವಾಗುವಂತೆ ಕಾಲಿನಿಂದ ಒದೆದು,

ಕ್ಷೀರಾಬ್ಧಿಯಲ್ಲಿ ಆದಿಶೇಷನ ಮೇಲೆ ಮಲಗಿ ಯೋಗ ನಿದ್ರೆಯಲ್ಲಿರುವ ಜಗತ್ಕಾರಣ ಭೂತನಾದ ಪರಮಾತ್ಮನನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಮುನಿಗಳೂ, ಯೋಗಿಗಳೂ, ಮೆಲ್ಲಗೆ ಎದ್ದು 'ಹರಿಹರಿ' ಎಂದು ಹೇಳುವ ಮಹಾಘೋಷವು ನಮ್ಮ ಹೃದಯದೊಳಗೆ ಪ್ರವೇಶಿಸಿ ನಮ್ಮ ಮನಸ್ಸಿಗೆ ತಂಪನ್ನುಂಟುಮಾಡಿ ನಮ್ಮ ಸಂತಾಪವನ್ನು ಹೋಗಲಾಡಿಸಿದೆ. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುತ್ತದೆ. ಇದು ಈ ಪಾಶುರದ ವಾಕ್ಯಾರ್ಥ.

ಈ ಪಾಶುರದಲ್ಲಿ ಗೋದಾದೇವಿಯು ನೂತನವಾಗಿ ಭಗವತ್ ಸಂಬಂದ ಪಡೆದ ಅಧಿಕಾರಿ ಒಬ್ಬಳನ್ನು ಎಬ್ಬಿಸುತ್ತಾಳೆ. ಅವಳು ಭಾಗವತರೊಂದಿಗೆ ಕಲೆತು, ಅವಳನ್ನು ಮುಂದಿಟ್ಟುಕೊಂಡು ಭಗವಂತನನ್ನು ಆಶ್ರಯಿಸಬೇಕು ಎಂಬುದನ್ನೂ ಮತ್ತು ಭಾಗವತ ಗೋಷ್ಠಿಯ ಪ್ರಭಾವವನ್ನೂ ಅರಿಯದವಳು. ಆದ್ದರಿಂದ ಅವಳನ್ನು ಪಿಳ್ಳಾಯ್ ಅಂದರೆ ಏನೂ ಅರಿಯದವಳೇ ಎಂದು ಸಂಬೋಧನೆಮಾಡಿ, ಕರೆಯುತ್ತಾಳೆ.

**ಪುಳ್ಳುಮ್ ಶಿಲಮ್ಬಿನಕಾಣ್** - ಬೆಳಗಾಯಿತು, ಪಕ್ಷಿಗಳೂ ಕೂಡ ಗೂಡಿನಿಂದ ಹೊರಗೆ ಬಂದು ಚಿಲಿಪಿಲಿಗುಟ್ಟುತ್ತಿರುವುದನ್ನು ನೋಡು.

ಅಂದರೆ ಭಾಗವತರುಗಳು ಭಗವಂತನ ಗುಣಸಂಕೀರ್ತನೆಯೊಂದಿಗೆ ಭಗವತ್ ಕೈಂಕರ್ಯರೂಪವಾಗಿ ತಮ್ಮ ಧರ್ಮಬದ್ಧವಾದ ಕರ್ಮಾನುಷ್ಠಾನ ಮಾಡಲು ಎದ್ದು ಹೊರಟಿದ್ದಾರೆ ಎಂಬುದು ವಿಶೇಷಾರ್ಥ.

**ಪುಳ್ಳರೈಯನ್ ಕೋಯಿಲಿಲ್ ವೆಳ್ಳೈವಿಳಿಶಙ್ಗಿನ್ ಪೇರರವಂ ಕೇಟ್ಟಿಲೈಯೋ:** - ಗರುಡನಿಗೆ ಸ್ವಾಮಿಯಾದ ಪರಮಾತ್ಮನಗುಡಿಯಲ್ಲಿ ಬಿಳಿಯ ಶಂಖದ ಮಹಾಧ್ವನಿಯು ನಿನಗೆ ಕೇಳಿಸಲಿಲ್ಲವೇ - ಅಂದರೆ ಗರುಡನಿಗೆ ಸ್ವಾಮಿಯಾದ ಪರಮಾತ್ಮನ ವಾಸಸ್ಥಾನವಾದ ಪ್ರಣವದ ಅಂದರೆ 'ಓಂ'ಕಾರದ ಮಹಾಘೋಷವನ್ನು ಅಂದರೆ ಭಗವದನನ್ಯಾರ್ಹಶೇಷತ್ವವೆಂಬ ಅಂದರೆ

ಭಗವಂತನೊಬ್ಬನಿಗೇ ನಾನು ದಾಸನು ಎಂಬ ಘೋಷವನ್ನು ಕೇಳಲಿಲ್ಲವೇ ಎಂಬುದು ವಿಶೇಷಾರ್ಥ.

**ಪಿಳ್ಳಾಯ್ ಎಳುಂದಿರಾಯ್** : ಭಾಗವತರ ಮಹಿಮೆ ಅರಿಯದವಳೇ, ನಮ್ಮೊಡನೆ ಕಲೆತು ಭಗವನ್ನಾಮ ಸಂಕೀರ್ತನೆ ಮಾಡಲು ಎದ್ದು ಬಾ ಎಂದು ಕರೆಯುತ್ತಾರೆ.

**ಪೇಯ್ ಮುಲೈನಂಜುಂಡು** - ಪೂತನಿಯ ವಿಷಭರಿತವಾದ ಸ್ತನ್ಯಪಾನಮಾಡಿ ಅವಳನ್ನು ಸಂಹರಿಸಿದ,

**ಕಳ್ಳಚ್ಚಕಡಂ ಕಲಕ್ಕಳಿಯ ಕ್ಕಾಲೋಚ್ಚಿ** - ಕಳ್ಳತನದಲ್ಲಿ ಬಂದ ಶಕಟಾಸುರನನ್ನು ಕಾಲಿನಿಂದ ಒದೆದು ಸಂಹರಿಸಿದ,

**ವೆಳ್ಳತ್ತರವಿಲ್ ತುಯಿಲಮರ್ನ್ದ ವಿತ್ತಿನೈ** - ಕ್ಷೀರಾಬ್ಧಿಯಲ್ಲಿ ಯೋಗನಿದ್ರೆಮಾಡುತ್ತಿರುವ, ಜಗತ್ತಿಗೆ ಮೂಲ ಕಾರಣನಾಗಿ ಬೀಜಪ್ರದನಾದ ಪರಮಾತ್ಮನನ್ನು ,

**ಉಳ್ಳತ್ತುಕ್ಕೊಣ್ಡು ಮುನಿವರ್‌ಕಳುಂ ಯೋಗಿಕಳುಂ ಮೆಳ್ಳೆ ವೆಳುನ್ದು ಅರಿಯೆನ್ರ ಪೇರರವಂ** - ಪರಮಾತ್ಮನನ್ನು ತಮ್ಮ ಹೃದಯದಲ್ಲಿ ಧ್ಯಾನಮಾಡುತ್ತಿರುವ ಭಗವದ್ಗುಣಾನುಭವಪರರಾದ ಮುನಿಗಳೂ (ಜ್ಞಾನನಿಷ್ಠರೂ), ಭಗವತ್ ಕೈಂಕರ್ಯಪರರಾದ ಯೋಗಿಗಳೂ (ಕರ್ಮನಿಷ್ಠರೂ) ಮೆಲ್ಲನೆ ಎದ್ದು ಹರಿನಾಮ ಸಂಕೀರ್ತನೆ ಮಾಡುತ್ತಿರುವ ಅವರ 'ಹರಿಃ ಹರಿಃ' ಎಂಬ ಮಹಾಧ್ವನಿಯು

**ಉಳ್ಳಂಪುಹುನ್ದು ಕುಳಿರ್‌ನ್ದು** - ನಮ್ಮ ಹೃದಯದಲ್ಲಿ ಪ್ರವೇಶಿಸಿ ಮಹದಾನಂದವನ್ನು ಉಂಟುಮಾಡುತ್ತಿದೆ. ಆ ಹರಿನಾಮವನ್ನು ಕೇಳಿ ಸಂತೋಷಗೊಂಡವಳಾಗಿ ನೀನೂ ಎದ್ದುಬರುವವಳಾಗು.

**ಏಲೋರೆಮ್ಬಾವಾಯ್** : ನೀನು ಬಂದು ಕಲೆತುಕೊಂಡರೆ ನಮ್ಮ ವ್ರತವು ಶುಭವಾಗಿ ನೆರವೇರುವುದು.

ಎಲ್ಲರೂ ವೇದಸಾರವಾದ ತಿರುಮಂತ್ರಾರ್ಥವನ್ನು ಅಂದರೆ ತಾವು ಭಗವಂತನಿಗೆ ಅನನ್ಯಾರ್ಹ ಶೇಷಭೂತರು ಅಂದರೆ ದಾಸರು ಎಂಬುದನ್ನು ಅರಿತು, ಅದನ್ನು ಪ್ರಾತಃಕಾಲದಲ್ಲಿ ಏಳುತ್ತಲೇ ಸ್ಮರಿಸುತ್ತಾ , ಹರಿನಾಮಸ್ಮರಣೆ ಮಾಡಿರಿ ಎಂಬ ಉಪದೇಶವೂ, ಅರ್ಚಾವತಾರರೂಪಿಯಾಗಿ ದೇವಸ್ಥಾನದಲ್ಲಿ ನೆಲೆಸಿರುವ ಪರಮಾತ್ಮನಿಗೆ ಶರಣಾಗತರಾಗಿ ಎಂಬ ಸಂದೇಶವೂ ಈ ಪಾಶುರದಲ್ಲಿ ಅಡಗಿದೆ.

## ಪಾಶುರ - 7

ಈ ಪಾಶುರದಲ್ಲಿ ಭಾಗವತರೊಂದಿಗೆ ಕಲೆತು ಭಗವಂತನ ಗುಣಾನುಭವ ಮಾಡಬೇಕೆಂಬುದನ್ನು ಅರಿತವಳಾಗಿದ್ದರೂ, ಅದನ್ನು ಮರೆತು ತಾನೊಬ್ಬಳೇ ಭಗವದ್ಗುಣಾನುಭವವನ್ನು ಅನುಭವಿಸುತ್ತಾ ಮಲಗಿರುವವಳೊಬ್ಬಳನ್ನು ಗೋದಾದೇವಿಯು ಎಬ್ಬಿಸಿ, ತಮ್ಮೊಡನೆ ಭಗವನ್ನಾಮ ಸಂಕೀರ್ತನೆ ಮಾಡಲು ಕಲೆತುಕೊಳ್ಳುವಂತೆ ಕರೆಯುತ್ತಾಳೆ.

**ಕೀಶುಕೀಶೆನ್ರೆಜ್ಗುಂ ಆನೈಚ್ಚಾತ್ತಮ್ ಕಲನ್ದು**
**ಪೇಶಿನಪೇಚ್ಚರವಮ್ ಕೇಟ್ಟಿಲ್ಲೈಯೋ ಪೇಯ್‌ಪೆಣ್ಣೇ**
**ಕಾಶುಮ್‌ಪಿರಪ್ಪುಮ್ ಕಲಕಲಪ್ಪಕ್ಕೈಪ್ಪೇರ್ತ್ತು**
**ವಾಶನರುಜ್ಗುಳಲ್ ಆಯ್‌ಚ್ಚಿಯರ್ ಮತ್ತಿನಾಲ್**
**ಓಶೈಪಡುತ್ತತಯಿರರವಮ್ ಕೇಟ್ಟಿಲ್ಲೈಯೋ**
**ನಾಯಕಪೆಣ್ಪಿಳ್ಳಾಯ್ ನಾರಾಯಣನ್‌ಮೂರ್ತಿ**
**ಕೇಶವನ್ನೈ ಪ್ಪಾಡವುಮ್ ನೀ ಕೇಟ್ಟೇಕಿಡತ್ತಿಯೋ**
**ತೇಶಮುಡ್ಯೆಯಾಯ್ ! ತಿರವೇಲೋರೆಮ್ಬಾವಾಯ್ .**

''ಬುದ್ಧಿಯಿಲ್ಲದ ಹೆಣ್ಣೇ ! ಎಲ್ಲಾ ಕಡೆಯಲ್ಲೂ ಭಾರದ್ವಾಜ ಪಕ್ಷಿಗಳು ಒಂದರೊಂದಿಗೆ ಒಂದು ಕಲೆತುಕೊಂಡು 'ಕೀಚು ಕೀಚು' ಎಂದು ಹೇಳುವ ಮಾತುಗಳ ಶಬ್ದವನ್ನು ನೀನು ಕೇಳಲಿಲ್ಲವೇ ? ಪರಿಮಳ ವಸ್ತುಗಳ ಸುವಾಸನೆಯಿಂದ ಕೂಡಿದ ಕೂದಲುಗಳನ್ನುಳ್ಳ ಗೊಲ್ಲರ ಹೆಣ್ಣು ಮಕ್ಕಳು, ತಮ್ಮ ಕತ್ತಿನಲ್ಲಿ ಹಾಕಿಕೊಂಡಿರುವ ಅಚ್ಚುತಾಲಿ ಆಮೆತ್ತಾಲಿಗಳು ಒಂದರೊಂದಿಗೆ ಒಂದು ತಗಲಿ ಕಲಕಲವೆಂದು ಶಬ್ದಿಸುವಂತೆ ಕೈಗಳನ್ನು ಸೇರಿಸಿಕೊಂಡು ಕಡೆಗೋಲಿನಿಂದ

ಮಜ್ಜಿಗೆ ಕಡೆಯುತ್ತಿರುವ ಶಬ್ದವನ್ನು ನೀನು ಕೇಳಲಿಲ್ಲವೇ ? ನಮಗೆಲ್ಲಾ ನಾಯಕಿಯಾದ ಹೆಣ್ಣುಮಗಳೇ ! ಶ್ರೀಮನ್ನಾರಾಯಣನ ಅವತಾರವಾದ ಕೃಷ್ಣಪರಮಾತ್ಮನನ್ನು ನಾವುಗಳು ನಾರಾಯಣ, ಕೇಶವ ಎಂದು ಹಾಡುತ್ತಿರಲಾಗಿ ನೀನು ಅದನ್ನು ಕೇಳುತ್ತಲೇ ಮಲಗಿರುವೆಯಾ ? ತೇಜಸ್ಸುಳ್ಳವಳೇ, ನೀನು ಎದ್ದು ಬಂದು ಬಾಗಿಲು ತೆಗಿ - ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ಪೇಯ್‌ಪೆಣ್ಣೇ** : ಬುದ್ಧಿಯಿಲ್ಲದಹೆಣ್ಣೇ - ಅಂದರೆ ಭಾಗವತರೊಂದಿಗೆ ಸೇರುವುದರ ಪ್ರಭಾವವನ್ನು ಅರಿತೂ ಅದನ್ನು ಆಚರಿಸದೆ ಇರುವವಳೇ -

**ಕೀಶುಕೀಶೆನ್ರೆಂಗುಂ ಆನೆಚ್ಚಾತ್ತನ್ ಕಲನ್ದು ಪೇಶಿನಪೇಚ್ಚರವಂ ಕೇಟ್ಟಿಲ್ಲೈಯೋ** - ಎಲ್ಲೆಲ್ಲೂ ಭಾರದ್ವಾಜ ಪಕ್ಷಿಗಳು ಒಂದರೊಂದಿಗೆ ಒಂದು ಕಲೆತು ಆಡುತ್ತಿರುವ ಮಾತುಗಳ ಧ್ವನಿಯನ್ನು ನೀನು ಕೇಳಲಿಲ್ಲವೇ ? - ಅಂದರೆ ಭಾಗವತರು ಭಗವದ್ವಿಷಯವಾಗಿ ಸಂಭಾಷಣೆ ಮಾಡುತ್ತಿರುವುದರ ಧ್ವನಿಯನ್ನು ನೀನು ಕೇಳಲಿಲ್ಲವೇ - ಎಂಬುದು ವಿಶೇಷಾರ್ಥ. ಆಚಾರ್ಯರುಗಳು ಸಂಸ್ಕೃತ ಮತ್ತು ದ್ರಾವಿಡವೇದಗಳ ತತ್ತ್ವಾರ್ಥಗಳನ್ನು ಒಂದರೊಂದಿಗೆ ಒಂದನ್ನು ಕಲೆಸಿ ಉಪದೇಶ ಮಾಡುತ್ತಿರುವುದನ್ನು ನೀನು ಕೇಳಲಿಲ್ಲವೇ - ಎಂಬುದು ಮತ್ತೊಂದು ವಿಶೇಷಾರ್ಥ.

**ಕಾಶುಮ್ ಪಿರಪ್ಪುಮ್ ಕಲಕಲಪ್ಪಕ್ಕೈಪೇರ್ತ್ತುವಾಶನರುಞ್ಜುಳಲ್ ಆಯ್‌ಚ್ಚಿಯರ್ ಮತ್ತಿನಾಲ್ ಓಶೈ ಪಡುತ್ತ ತಯಿರರವಮ್ ಕೇಟ್ಟಿಲ್ಲೈಯೋ** - ತಾವು ಧರಿಸಿರುವ ಅಚ್ಚುತ್ತಾಲಿ ಆಮೈತ್ತಾಲಿ ಎಂಬ ಆಭರಣಗಳು ಕಲಕಲವೆಂದು ಶಬ್ದ ಮಾಡುತ್ತಿರಲಾಗಿ, ಸುವಾಸನೆಯಿಂದ ಕೂಡಿದ ಕೂದಲುಳ್ಳವರಾದ ಗೋಪ ಸ್ತ್ರೀಯರು ಕೈಗಳನ್ನು ಅಲುಗಾಡಿಸುತ್ತಾ ಕಡಗೋಲಿನಿಂದ ಮೊಸರು ಕಡೆಯುವ ಶಬ್ದವನ್ನು ಕೇಳಲಿಲ್ಲವೇ ?

ಅಂದರೆ ಭಗವದ್ಭಕ್ತರಾದ ಗೋಪಕನ್ಯೆಯರು ಪ್ರಾತಃಕಾಲದಲ್ಲೆದ್ದು ಮೊಸರು ಕಡೆಯುವುದೇ ಮೊದಲಾದ ನಿತ್ಯಕರ್ಮಗಳನ್ನು ಭಗವನ್ನಾಮಸಂಕೀರ್ತನೆ ಯೊಂದಿಗೆ ಮಾಡುತ್ತಿರುವುದರಿಂದ ಮೊಸರು ಕಡೆಯುವ ಶಬ್ದದೊಂದಿಗೆ ಭಗವನ್ನಾಮ ಸಂಕೀರ್ತನೆಯ ಘೋಷವೂ ಮಿಳಿತವಾಗಿ ಉಂಟಾದ ಮಂಗಳ ಧ್ವನಿಯು ನಿನಗೆ ಕೇಳಿಸಲಿಲ್ಲವೇ ? ಎಂಬುದು ವಿಶೇಷಾರ್ಥ.

ಜ್ಞಾನಿಗಳಾದ ಭಕ್ತರು ಪ್ರಾತಃಕಾಲದಲ್ಲಿ ಎದ್ದು ತಿರುಮಂತ್ರ, ದ್ವಯ, ಚರಮ ಶ್ಲೋಕಗಳೆಂಬ ರಹಸ್ಯ ತ್ರಯಗಳ ಅರ್ಥವನ್ನೆಲ್ಲಾ ಒಂದುಗೂಡಿಸಿ, ಮಥನ ಮಾಡಿ, ಅದರಿಂದ ಲಭಿಸುವ ತತ್ತ್ವ ಹಿತ ಪುರುಷಾರ್ಥಗಳ ಜ್ಞಾನದ ತಿರುಳನ್ನು ಎಲ್ಲರಿಗೂ ಉಪದೇಶ ಮಾಡುತ್ತಿರುವುದು ನಿನಗೆ ಕೇಳಿಸಲಿಲ್ಲವೇ - ಎಂಬುದು ಮತ್ತೊಂದು ವಿಶೇಷಾರ್ಥ.

**ನಾಯಕಪ್ಪೆಣ್‌ಪಿಳ್ಳಾಯ್** - ನಮಗೆಲ್ಲಾ ನಾಯಕಿ ಅಂದರೆ ಯಜಮಾನಿಯಾಗಿರುವವಳೇ,

**ನಾರಾಯಣನ್‌ಮೂರ್ತಿ ಕೇಶವನ್ನೈ ಪಾಡವುಂ ನೀಕೇಟ್ಟೇ ಕಿಡತ್ತಿಯೋ** - ನಾರಾಯಣನು ಕೃಷ್ಣನಾಗಿ ಅವತರಿಸಿ, ಕೇಶಿ ಎಂಬ ರಾಕ್ಷಸನನ್ನು ಕೊಂದ ಚರಿತ್ರೆಯನ್ನು ನಾವು ಹಾಡುತ್ತಿರುವಾಗ, ನೀನು ಅದನ್ನು ಕೇಳುತ್ತಾ ಅದನ್ನೇ ಮನಸ್ಸಿನಲ್ಲಿ ಸವಿಯುತ್ತಾ ಮಲಗಿರಬಹುದೇ !

**ತೇಶಮುಡೈಯಾಯ್‌ತಿರ** - ನೀನು ಶೇಷತ್ವ ಜ್ಞಾನಹೊಂದಿದವಳಾಗಿ, ಸಾತ್ವಿಕತೇಜಸ್ಸುಳ್ಳವಳಾಗಿ ಇದ್ದಿಯೇ - ಬಾಗಿಲು ತೆರೆದು ಎದ್ದು ಬಂದು ನಮ್ಮೊಡನೆ ಕಲೆತು ಕೊಳ್ಳುವವಳಾಗು.

**ಎಲೋರೆಮ್ಬಾವಾಯ್** - ನಮ್ಮ ವ್ರತವು ಸಾಂಗವಾಗಿಯೂ ಶುಭವಾಗಿಯೂ ನೆರವೇರುವುದು. ಗೋಪಕನ್ಯೆಯರು ಮುರಾರಿಪಾದಾರ್ಪಿತ ಚಿತ್ತವೃತ್ತಿ ಅಂದರೆ ಭಗವಂತನ ಪಾದಕಮಲಗಳಲ್ಲಿ ನೆಟ್ಟ ಮನಸ್ಸುಳ್ಳವರಾಗಿದ್ದರು. ಅವರು ಸದಾ

ಭಗವನ್ನಾಮ ಸ್ಮರಣೆ ಮಾಡುತ್ತಿದ್ದರು. ಮೊಸರು ಕಡೆಯುವುದು, ಮೊಸರು ಮಾರುವುದು ಮುಂತಾದ ನಿತ್ಯ ಕರ್ತವ್ಯಕರ್ಮಗಳನ್ನೆಲ್ಲಾ ಭಗವನ್ನಾಮ ಸಂಕೀರ್ತನೆಯೊಂದಿಗೆ ಮಾಡುತ್ತಿದ್ದರು. ಅವರಂತೆ ಸರ್ವರೂ ಪ್ರಾತಃಕಾಲದಲ್ಲಿ ಎದ್ದು ತಮ್ಮ ದಿನನಿತ್ಯದ ಕರ್ತವ್ಯ ಕರ್ಮಗಳನ್ನೆಲ್ಲಾ ಭಗವನ್ನಾಮ ಸ್ಮರಣೆಯೊಂದಿಗೆ ಆಚರಿಸುವ ಅಭ್ಯಾಸ ಮಾಡಿರಿ; ಶರೀರ, ಇಂದ್ರಿಯಗಳು ಕರ್ಮಾಚರಣೆಯಲ್ಲೂ ಮನಸ್ಸು ಪರಮಾತ್ಮನ ಚಿಂತನ ಸ್ತೋತ್ರಧ್ಯಾನಾದಿಗಳಲ್ಲೂ ನೆಲೆಸಲಿ; ಭಗವದಾರಾಧನ ರೂಪವಾಗಿ ಕರ್ಮ ಮಾಡಿರಿ ಎಂಬ ಸರ್ವೋದಯ ಸಂದೇಶವನ್ನು ಗೋದಾದೇವಿಯು ಈ ಪಾಶುರದಲ್ಲಿ ನೀಡಿದ್ದಾಳೆ.

# ಪಾಶುರ - 8

ಈ ಪಾಶುರದಲ್ಲಿ ಭಗವಂತನಲ್ಲಿ ಅತ್ಯಂತ ಪ್ರೀತಿ ಹೊಂದಿರುವ ಒಬ್ಬ ಗೋಪಿಯನ್ನು ಎಬ್ಬಿಸುತ್ತಾಳೆ. ನಮ್ಮಾಳ್ವಾರ್ರಂತೆ ಇವಳಿಗೂ ಪರಮಾತ್ಮನಲ್ಲಿ 'ಆರಾದಕಾದಲ್' - ಅಂದರೆ ಅಪಾರವಾದ ಭಕ್ತಿ ಇದೆ. ಶ್ರೀ ಕೃಷ್ಣಪರಮಾತ್ಮನಿಗೂ ಇವಳ ಮೇಲೆ ಅತ್ಯಂತ ಪ್ರೀತಿ ಇದೆ. ''ಪ್ರಿಯೋಹಿ ಜ್ಞಾನಿನೋತ್ಯರ್ಥಂ ಅಹಂಸಚಮಮ ಪ್ರಿಯಃ'' ಅಂದರೆ ಜ್ಞಾನಿಯಾದ ಭಕ್ತನಿಗೆ ನನ್ನ ಮೇಲೆ ಅತ್ಯಂತ ಹೆಚ್ಚಾದ ಪ್ರೀತಿ ಇದೆ. ಅಂತಹ ಭಕ್ತನ ಮೇಲೆ ನನಗೂ ಅತ್ಯಂತ ಹೆಚ್ಚಾದ ಪ್ರೀತಿ ಇದೆ ಎಂದು ಶ್ರೀ ಕೃಷ್ಣಪರಮಾತ್ಮನು ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ.

**ಕೀಳ್‌ವಾನಮ್ ವೆಳ್ಳೆನ್ರು ಎರುಮ್ಮೈ ಶಿರು ವೀಡು**
**ಮೇಯ್‌ವಾನ್ ಪರನ್ದನಕಾಣ್ ಮಿಕ್ಕುಳ್ಳಪಿಳ್ಳೈಕಳುಮ್**
**ಪೋವಾನ್ ಪೋಹಿನ್ರಾರೈ ಪೋಹಾಮಲ್ ಕಾತ್ತು ಉನ್ನೈ**
**ಕ್ಕೂವುವಾನ್‌ವನ್ದು ನಿನ್ರೋಮ್ ಕೋತುಕಲಮುಡೈಯ**
**ಪಾವಾಯ್ ಎಳುನ್ದಿರಾಯ್ ಪಾಡಿಪ್ಪರೈಗೊಣ್ಡು**
**ಮಾವಾಯ್ ಪಿಳನ್ದಾನ್ನೈ ಮಲ್ಲರೈ ಮಾಟ್ಟಿಯ**
**ದೇವಾದಿ ದೇವನ್ನೈಚ್ಚೆನ್ರುನಾಂ ಸೇವಿತ್ತಾಲ್**
**ಆವಾವೆನ್ರಾರಾಯ್‌ನ್ದರುಳೇಲೋರೆಮ್ಬಾವಾಯ್ .**

''ಕುತೂಹಲವುಳ್ಳ ಹೆಣ್ಣುಮಗಳೇ ! ಪೂರ್ವದಿಕ್ಕಿನಲ್ಲಿ ಆಕಾಶವು ಬಿಳುಪಾಗಿರುವುದರಿಂದ ಎಮ್ಮೆಗಳು ಎಳೆಗರಿಕೆ ಹುಲ್ಲನ್ನು ಮೇಯಲು ಹೊರಟಿವೆ ನೋಡು. ಹೋಗಲು ಸಿದ್ಧರಾಗಿದ್ದ ಇತರ ಎಲ್ಲಾ ಹೆಣ್ಣುಮಕ್ಕಳನ್ನೂ ಹೋಗದಂತೆ ತಡೆದು, ನಿನ್ನನ್ನು ಕೂಗಲು ನಾವು ಬಂದಿದ್ದೇವೆ. ನೀನು ಎದ್ದು ಬಾ. ನಾವು ಪರಮಾತ್ಮನನ್ನು ಸ್ತೋತ್ರಮಾಡಿ ಹಾಡಿ ಪರೈ ಎಂಬ ವಾದ್ಯವನ್ನು ಪಡೆದು, ಕೇಶಿ

ಎಂಬ ಅಸುರನ ಬಾಯನ್ನು ಸೀಳಿದವನೂ, ಮಲ್ಲರನ್ನು ಸೋಲಿಸಿದವನೂ ಆದ ಕೃಷ್ಣಪರಮಾತ್ಮನ ಬಳಿ ಹೋಗಿ ಅವನಿಗೆ ನಮಸ್ಕಾರ ಮಾಡಿದರೆ, ಅವನು ನಮ್ಮ ಕೊರತೆಗಳನ್ನೆಲ್ಲಾ ವಿಚಾರಿಸಿ 'ಅಯ್ಯೋ' ಎಂದು ಮನ ಕರಗಿದವನಾಗಿ ನಮ್ಮ ಇಷ್ಟಾರ್ಥಗಳನ್ನು ಅರಿತು ಕೃಪೆ ಮಾಡುವನು. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು''. ಇದು ಈ ಪಾಶುರದ ವಾಕ್ಯಾರ್ಥ.

**ಕೀಳ್ವಾನಂ ವೆಳ್ಳೆನ್ರು** : ಪೂರ್ವ ದಿಕ್ಕಿನಲ್ಲಿ ಆಕಾಶದಲ್ಲಿ ಬೆಳಕು ಬಂದಿದೆ, ಅಂದರೆ ಹೃದಯದಲ್ಲಿ ಸ್ವಲ್ಪ ಜ್ಞಾನೋದಯವಾಗುತ್ತಿದೆ ಎಂಬುದು ವಿಶೇಷಾರ್ಥ.

**ಎರುಮೈ ಶಿರು ವೀಡು ಮೆಯ್ವಾನ್ ಪರನ್ದನ ಕಾಣ್** - ಎಮ್ಮೆಗಳು ಸಣ್ಣ ತೋಟಗಳಲ್ಲಿ ಎಳೆ ಹುಲ್ಲು ಮೇಯಲು ಹೊರಟಿವೆ - ಅಂದರೆ ಜ್ಞಾನವು ಹುಟ್ಟಿದ ಮೇಲೆ ಅಜ್ಞಾನವು ತನ್ನ ಮಾರ್ಗ ಹಿಡಿದು ಹೋಗುತ್ತಿದೆ ಎಂಬುದು ವಿಶೇಷಾರ್ಥ.

**ಮಿಕ್ಕುಳ್ಳಪಿಳ್ಳೈಗಳುಂ ಪೋವಾನ್ ಪೋಹಿನ್ರಾರೈ ಪೋಹಾಮಲ್ ಕಾತ್ತು ಉನ್ನೈ ಕ್ಕೂವುವಾನ್‌ವನ್ದು ನಿನ್ರೋಂ** - ಹೋಗಬೇಕೆಂದು ಹೋಗುತ್ತಿರುವ ಇತರ ಹೆಣ್ಣುಮಕ್ಕಳನ್ನೆಲ್ಲಾ ಹೋಗದಂತೆ ತಡೆದು ಅವರನ್ನೂ ಕರೆದುಕೊಂಡು ನಿನ್ನಂತಹ ಭಗವದ್ಭಕ್ತೆಯನ್ನು ಮುಂದುಮಾಡಿಕೊಂಡು ಹೋಗೋಣವೆಂದು ಬಂದಿದ್ದೇವೆ - ಎಂಬುದು ವಿಶೇಷಾರ್ಥ.

**ಕೋತುಕಲ ಮುಡೈಯ ಪಾವಾಯ್ ಎಳುಂದಿರಾಯ್** - ಮಹಾಕುತೂಹಲವುಳ್ಳ ಹೆಣ್ಣೇ - ಅಂದರೆ ಭಗವಂತನಲ್ಲಿ ಅತ್ಯಂತ ಪ್ರೀತಿ ಉಳ್ಳ ಭಕ್ತಶಿರೋಮಣಿಯೇ, ಎದ್ದು ಬರುವವಳಾಗು.

**ಪಾಡಿ ಪರೈಗೊಣ್ಡು** : ಹಾಡಿ ಪರೈ ಎಂಬ ವಾದ್ಯವನ್ನು ಪಡೆದು - ಅಂದರೆ ನಾವೆಲ್ಲರೂ ಒಟ್ಟಿಗೆ ಸೇರಿ ಭಗವನ್ನಾಮ ಸಂಕೀರ್ತನೆ ಮಾಡುವ ಪುರುಷಾರ್ಥವನ್ನು ಪಡೆದು - ಎಂಬ ವಿಶೇಷಾರ್ಥವು ಇಲ್ಲಿ ತಿಳಿಸಲ್ಪಟ್ಟಿದೆ.

**ಮಾವಾಯ್ ಪಿಳನ್ದಾನ್ನೈ** - ಕೇಶಿ ಎಂಬ ರಾಕ್ಷಸನ ಬಾಯನ್ನು ಸೀಳಿ ಸಂಹರಿಸಿದ,

**ಮಲ್ಲರೈ ಮಾಟ್ಟಿಯ** - ಚಾಣೂರ ಮಲ್ಲರೆಂಬ ಜಟ್ಟಿಗಳನ್ನು ಸಂಹರಿಸಿದ,

**ದೇವಾದಿ ದೇವನ್ನೈ** - ದೇವತೆಗಳಿಗೂ ಸ್ವಾಮಿಯಾದ ಪರಮಾತ್ಮನನ್ನು,

**ಚ್ಚೆನ್ರುನಾಂಸೇವಿತ್ತಾಲ್** - ಅವನ ಬಳಿಹೋಗಿ ನಾವು ಅವನನ್ನು ನಮಸ್ಕರಿಸಿದರೆ,

**ಆವಾವೆನ್ರು ಆರಾಯ್‌ನ್ದ್ ಅರುಳ್** - ಅಯ್ಯೋ ಪಾಪ ! ನನ್ನಬಳಿಗೆ ಬಂದರಲ್ಲಾ ಎಂದು ಕೃಪೆಮಾಡಿ ನಮ್ಮ ಇಷ್ಟಾರ್ಥಗಳನ್ನು ಪರಿಶೀಲಿಸಿ ಅನುಗ್ರಹಿಸುವನು.

**ಏಲೋರೆಮ್ಬಾವಾಯ್** - ನಮ್ಮ ವ್ರತವು ಶುಭವಾಗಿ ನೆರವೇರುವುದು.

ಈ ಪಾಶುರದಲ್ಲಿ ಪರಮಾತ್ಮನಲ್ಲಿ ಅತ್ಯಂತ ಪ್ರೀತಿ ಹೊಂದಿರುವ ಭಕ್ತನು ಪರಮಾತ್ಮನಿಗೂ ಅತ್ಯಂತ ಪ್ರಿಯನಾಗಿದ್ದಾನೆ. ಅಂತಹ ತನ್ನ ಪ್ರೀತಿಯ ಭಕ್ತನನ್ನು ಪರಮಾತ್ಮನು ಖಂಡಿತವಾಗಿಯೂ ಅನುಗ್ರಹಿಸುತ್ತಾನೆ ಎಂದು ವಿಶೇಷಾರ್ಥವು ತಿಳಿಸಲ್ಪಟ್ಟಿದೆ. ''ಯಮೇವೈಷವೃಣುತೇತೇನಲಭ್ಯಃ'' - ಎಂಬ ಉಪನಿಷದ್ವಾಕ್ಯ ದಂತೆ ಪರಮಾತ್ಮನು ಯಾರನ್ನು ಅನುಗ್ರಹಿಸುತ್ತಾನೋ ಅವನಿಗೆ ಅವನು ಲಭಿಸುತ್ತಾನೆ ಎಂದು ಅರ್ಥ. ಅವನು ಯಾರನ್ನು ಅನುಗ್ರಹಿಸುತ್ತಾನೆ ? ಯಾರು ಅವನಿಗೆ ಪ್ರಿಯರೋ ಅವರನ್ನು ಅನುಗ್ರಹಿಸುತ್ತಾನೆ. ಯಾರು ಅವನಿಗೆ ಪ್ರಿಯರು ಎಂದರೆ ಅವನನ್ನು ಯಾರು ಪ್ರೀತಿಸುತ್ತಾರೋ ಅವರು ಅವನಿಗೆ ಪ್ರಿಯರು, ಆದ್ದರಿಂದ ಪರಮಾತ್ಮನನ್ನು ಅತ್ಯಂತವಾಗಿ ಪ್ರೀತಿಸುವವರನ್ನು ಪರಮಾತ್ಮನೂ ಅತ್ಯಂತವಾಗಿ ಪ್ರೀತಿಸಿ ಅನುಗ್ರಹಿಸುತ್ತಾನೆ ಎಂದು ತಾತ್ಪರ್ಯ. ಭಗವಂತನಲ್ಲಿ ಅತ್ಯಂತ ಭಕ್ತಿ ಹೊಂದಿರುವ ಅಂತಹ ಭಗವದ್ಭಕ್ತೆಯೊಬ್ಬಳನ್ನು ತಮ್ಮೊಡನೆ ಬಂದು ಕಲೆತು ಭಗವನ್ನಾಮ ಸಂಕೀರ್ತನೆ ಮಾಡಿ ಆನಂದ ಪಡೆಯುವಂತೆ ಕರೆಯುತ್ತಾರೆ.

ಅದೂ ಅಲ್ಲದೆ ಪರಮಾತ್ಮನು ತಾನೇ ನಮ್ಮ ಬಳಿ ಬಂದು ನಮ್ಮನ್ನು ಅನುಗ್ರಹಿಸಿ ಪರಿಪಾಲಿಸಬೇಕೆಂದು ಆತುರನಾಗಿದ್ದಾನೆ. ನಾವಾಗಿ ಅವನ ಬಳಿ ಹೋಗಿ

ಅವನನ್ನು ಪ್ರಾರ್ಥಿಸಿದರೆ, ಆಗ ಅವನು ಖಂಡಿತವಾಗಿ ನಮ್ಮ ಇಷ್ಟಾರ್ಥಗಳನ್ನು ವಿಚಾರಿಸಿ ಅನುಗ್ರಹಿಸುವನು ಎಂಬ ಅರ್ಥವೂ ಇಲ್ಲಿ ಸೂಚಿತವಾಗಿದೆ. ಇದಕ್ಕೆ ನಿದರ್ಶನವಾಗಿ ದಂಡಕಾರಣ್ಯದ ಋಷಿಗಳ ಚರಿತ್ರೆಯು ರಾಮಾಯಣದಲ್ಲಿ ತಿಳಿಸಿದೆ. ದಂಡಕಾರಣ್ಯದ ಋಷಿಗಳು ಚಿತ್ರಕೂಟದಲ್ಲಿ ಶ್ರೀರಾಮನ ಬಳಿ ಬಂದು ನಮಸ್ಕರಿಸಿದಾಗ, ತಾನೇ ಅವರ ಬಳಿ ಹೋಗಬೇಕೆಂದಿದ್ದಾಗ, ಅವರೇ ತನ್ನ ಬಳಿ ಬಂದರಲ್ಲಾ ಎಂದು ಶ್ರೀರಾಮನು ಅವರಲ್ಲಿ ಬಹಳ ಕನಿಕರ ಹೊಂದಿದವನಾಗುತ್ತಾನೆ ಮತ್ತು "ಪ್ರಸೀದಂತು ಭವಂತಃ ಮೇ" ಎಂದು ಹೇಳಿ ಅವರನ್ನು ರಕ್ಷಿಸುವುದಾಗಿ ಅಭಯ ನೀಡುತ್ತಾನೆ.

'ಪಾಡಿ ಪರೈಗೊಂಡು' ಅಂದರೆ ನಾಮ ಸಂಕೀರ್ತನೆ ಮಾಡುವುದೇ ಪುರುಷಾರ್ಥವು ಎಂಬ ವಿಶೇಷಾರ್ಥವೂ ಈ ಪಾಶುರದಲ್ಲಿ ತಿಳಿಸಿದೆ.

# ಪಾಶುರ - 9

ಈ ಪಾಶುರದಲ್ಲಿ ತಾನು ಪರಮಾತ್ಮನ ಸ್ವತ್ತು, ತನ್ನ ಸ್ವತ್ತನ್ನು ರಕ್ಷಿಸುವ ಭಾರ ಸ್ವಾಮಿಯಾದ ಅವನಿಗೆ ಸೇರಿದ್ದು; ಅವನೇ ಬಂದು ತನ್ನನ್ನು ರಕ್ಷಿಸುವಾಗ ರಕ್ಷಿಸಲಿ ಎಂದು ಸುಮ್ಮನೆ ಭಗವಧ್ಯಾನ ಮಗ್ನಳಾಗಿ ಮಲಗಿರುವ ಗೋಪಿಯೊಬ್ಬಳನ್ನು ಎಬ್ಬಿಸುತ್ತಾಳೆ. ಭರತನಂತೆ, ಸೀತಾದೇವಿಯಂತೆ ಭಗವದತ್ಯಂತ ಪರತಂತ್ರಳಾಗಿ ಇರುವವಳು ಇವಳು. ಸೀತಾದೇವಿಯನ್ನು ರಾವಣನು ಲಂಕೆಯಲ್ಲಿ ಬಂಧಿಸಿ ಇಟ್ಟಿದ್ದಾಗ, ಅವಳು ತನ್ನ ರಕ್ಷಣೆ ಮಾಡಿಕೊಳ್ಳಲು ತಾನು ಶಕ್ತಳಾಗಿದ್ದಾಗ್ಯೂ, ರಕ್ಷಿಸಿ ಕೊಳ್ಳಲಿಲ್ಲ. ಆಂಜನೇಯನ ಬಾಲವನ್ನು ಸುಡಬೇಡ ಎಂದು ಅಗ್ನಿ ದೇವನಿಗೆ ಆಜ್ಞೆ ಇತ್ತ ಅವಳು, ರಾವಣನನ್ನು ನೋಡಿ 'ಭಸ್ಮೀಭವ' ಎಂದು ಶಪಿಸಬಹುದಾಗಿತ್ತು. ಆದರೆ ಶ್ರೀರಾಮನು ಬಂದು ತನ್ನನ್ನು ಕರೆದುಕೊಂಡು ಹೋಗುವುದು ಉಚಿತವಾದುದು ಎಂದು ಪರಮಾತ್ಮನ ರಕ್ಷಣಾ ಕಾರ್ಯವನ್ನು ನಿರೀಕ್ಷಿಸುತ್ತಾ ಸುಮ್ಮನಿದ್ದಳು. ಅವಳಂತೆ ಈ ಗೋಪಿಯೂ ಶಾಂತವಾಗಿ ಭಗವಂತನ ರಕ್ಷಣೆಯನ್ನು ನಿರೀಕ್ಷಿಸುತ್ತಾ ಸುಮ್ಮನೆ ಮಲಗಿದ್ದಾಳೆ. ಗೋದಾದೇವಿಯು ಉಪಾಯ ಅಧ್ಯವಸಾಯ ನಿಷ್ಠಳಾದ ಇವಳನ್ನು ಎಬ್ಬಿಸುತ್ತಾಳೆ.

**ತೂಮಣಿ ಮಾಡತ್ತು ಚ್ಚುತ್ತುಂ ವಿಳಕ್ಕೆರಿಯ**
**ದೂಪಮ್ ಕಮಳ ತುಯಿಲಣೈ ಮೇಲ್ ಕಣ್ವಳರುಮ್**
**ಮಾಮಾನ್ ಮಗಳೇ ಮಣಿಕ್ಕದವಂ ತಾಳ್‌ತಿರವಾಯ್**
**ಮಾಮೀರ್ ಅವಳೈಯೆಳುಪ್ಪೀರೋ ಉನ್‌ಮಗಳ್ ತಾನ್**
**ಊಮೈಯೋ ಅನ್ರಿಚ್ಚೆವಿಡೋ ಅನನ್ದಲೋ**
**ಏಮಪ್ಪೆರುನ್ತುಯಿಲ್ ಮನ್ತಿರಪ್ಪಟ್ಟಾಳೋ**
**ಮಾಮಾಯನ್ ಮಾದವನ್ ವೈಕುನ್ದನೆನ್ರೆನ್ರು**
**ನಾಮಮ್ ಪಲವುಮ್ ನವಿನ್ರೇಲೋರೆಮ್ಬಾವಾಯ್**

''ದಿವ್ಯವಾದ ರತ್ನಮಣಿಗಳಿಂದ ಕಟ್ಟಲ್ಪಟ್ಟ ಮಾಳಿಗೆಯಲ್ಲಿ, ಸುತ್ತಲೂ ದೀಪಗಳು ಪ್ರಕಾಶವಾಗಿ ಉರಿಯುತ್ತಿರಲು, ಧೂಪದ ಪರಿಮಳವು ಎಲ್ಲಾ ಕಡೆಯಲ್ಲೂ ಹರಡಿರಲು, ಮೆತ್ತಗಿರುವ ಹಾಸಿಗೆಯ ಮೇಲೆ ನಿದ್ರಿಸುತ್ತಿರುವ ಮಾಮನ ಮಗಳೇ ! ಮಣಿಗಳಿಂದ ಕೂಡಿರುವ ಬಾಗಿಲಿನ ಚಿಲಕವನ್ನು ತೆಗೆಯುವವಳಾಗು. ಅವಳ ತಾಯಿಯವರೇ ! ಮಲಗಿರುವ ನಿಮ್ಮ ಮಗಳನ್ನು ನೀವಾದರೂ ಎಬ್ಬಿಸಿರಿ. ನಿಮ್ಮ ಮಗಳೇನಾದರೂ ಮೂಗಿಯೋ, ಇಲ್ಲ ಕಿವುಡಳೋ, ಇಲ್ಲ ಗಾಢನಿದ್ರೆಯಲ್ಲಿದ್ದಾಳೆಯೋ, ಇಲ್ಲ ಮಂತ್ರದಿಂದ ಕಟ್ಟಲ್ಪಟ್ಟವಳಾಗಿದ್ದಾಳೆಯೋ ತಿಳಿಯಲಿಲ್ಲ. ಮಾಯಾಚೇಷ್ಟಿತನು, ಲಕ್ಷ್ಮೀವಲ್ಲಭನು, ವೈಕುಂಠನಾಥನು ಎಂಬ ಪರಮಾತ್ಮನ ಅನೇಕ ದಿವ್ಯನಾಮಗಳನ್ನು ಸಂಕೀರ್ತನೆ ಮಾಡಿರಿ. (ಆಗಲಾದರೂ ನಿಮ್ಮ ಮಗಳು ಏಳುವವಳಾಗಲಿ) ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು''. ಇದು ಈ ಪಾಶುರದ ವಾಕ್ಯಾರ್ಥ.

**ತೂಮಣಿ ಮಾಡತ್ತುಚುತ್ತುಂ ವಿಳಕ್ಕೆರಿಯ ದೂಪಂ ಕಮಳ ತುಯಿಲಣೈ ಮೇಲ್ ಕಣ್ವಳರುಂ''** - ಪರಿಶುದ್ಧವಾದ ಮಾಣಿಕ್ಯಮಣಿಗಳಿಂದ ಕೂಡಿರುವ ಗೃಹದಲ್ಲಿ, ಸುತ್ತಲೂ ದೀಪಗಳು ಉರಿಯುತ್ತಿರಲು, ದೂಪದ ಪರಿಮಳವು ಎಲ್ಲಕಡೆಯಲ್ಲೂ ಹರಡಿಕೊಂಡಿರಲು, ಮೆತ್ತಗಿರುವ ಹಾಸಿಗೆಯ ಮೇಲೆ ಮಲಗಿ ನಿದ್ರಿಸುತ್ತಿರುವ - ಎಂಬುದು ವಾಕ್ಯಾರ್ಥ -

ಅಂದರೆ ಹೃದಯದ ಸರ್ವ ಕಡೆಗಳಲ್ಲೂ ಒಳಗೂ ಹೊರಗೂ ಜ್ಞಾನ ದೀಪವು ಉರಿಯತ್ತಿರಲು, ಆ ಜ್ಞಾನಾನುಷ್ಠಾನದ ಫಲವಾಗಿ. ಸ್ವಪ್ರಯತ್ನ ರಹಿತಳಾಗಿ ಭಗವಂತನೇ ತನಗೆ ಸ್ವಾಮಿ, ರಕ್ಷಕ ಎಂದೂ, ತನಗೆ ಸ್ವತ್ತಾದ ತನ್ನನ್ನು ಅವನು ಅವನಿಗೆ ಇಷ್ಟ ಬಂದ ಹಾಗೆ ಇಷ್ಟ ಬಂದಾಗ ರಕ್ಷಿಸಲಿ ಎಂದೂ, ಭಗವದತ್ಯಂತ ಪರತಂತ್ರಳಾಗಿ, ಶಾಂತಳಾಗಿ, ಸ್ವ ಪ್ರವೃತ್ತಿ ನಿವೃತ್ತಳಾಗಿರುವವಳೇ ! ಎಂಬುದು ವಿಶೇಷಾರ್ಥ.

**ಮಾಮಾನ್ ಮಹಳೇ** - ಮಾಮನ ಮಗಳೇ - ಅಂದರೆ ಭಗವಂತನಿಗೆ ಪರಮ ಭಕ್ತಳಾದ ಅವಳ ಸಂಬಂಧ ಪಡೆದಿರಬೇಕೆಂದು ಅವಳನ್ನು ಮಾಮನ ಮಗಳೇ ಎಂದು ಸಂಬೋಧಿಸಿ ಕರೆಯುತ್ತಾಳೆ ಎಂದು ಅಭಿಪ್ರಾಯ.

**ಮಣಿಕ್ಕದವಂ ತಾಳ್ ತಿರವಾಯ್** : ಮಣಿಗಳಿಂದ ಕೂಡಿರುವ ಬಾಗಿಲನ್ನು ತೆಗೆಯುವವಳಾಗು - ಅಂದರೆ ಭಗವದನುಭವಕ್ಕೆ ಪ್ರತಿಬಂಧಕಗಳಾದ ಅಹಂಕಾರ ಮಮಕಾರಗಳನ್ನು ಹೋಗಲಾಡಿಸುವವಳಾಗು ಎಂಬುದು ವಿಶೇಷಾರ್ಥ.

**ಮಾಮೀರ್ ಅವಳ್ಳೆ ಎಳುಪ್ಪೀರೊ** - ಅವಳ ತಾಯಿಯನ್ನು ಕರೆದು 'ನೀವಾದರೂ ಅವಳನ್ನು ಎಬ್ಬಿಸಿರಿ' ಎನ್ನುತ್ತಾರೆ.

**ಉನ್ ಮಹಳ್‌ತಾನ್ ಊಮ್ಮೈಯೋ, ಅನ್ರಿಚ್ಚೆವಿಡೋ ಅನನ್ದಲೋ, ಏಮಪ್ಪೆರುನ್ತುಯಿಲ್ ಮನ್ತಿರಪಟ್ಟಾಳೋ** - ನಿನ್ನ ಮಗಳು ಮಾತಾಡಲಾಗದೆ ಮೂಗಳಾಗಿದ್ದಾಳೆಯೋ, ಅಥವಾ ಕಿವಿ ಕೇಳಿಸದೆ ಕಿವುಡಳಾಗಿದ್ದಾಳೆಯೋ, ಅಥವಾ ಚೆನ್ನಾಗಿ ನಿದ್ರಿಸುವಂತೆ ಅವಳಿಗೆ ಯಾರಾದರೂ ಮಂತ್ರ ಹಾಕಿದ್ದಾರೆಯೇ ? ಎಂದು ಕೇಳುತ್ತಾರೆ. ಅಂದರೆ ಕಿವಿ, ಬಾಯಿ ಮುಂತಾದ ಇಂದ್ರಿಯಗಳೆಲ್ಲವೂ ಪರಮಾತ್ಮನಲ್ಲಿ ಮಗ್ನವಾಗಿ ಅವಳಿಗೆ ಬಾಹ್ಯ ಜಗತ್ತಿನ ಪ್ರಜ್ಞೆ ಇಲ್ಲದಂತಾಗಿದೆಯೇ ? ಎಂದು ಕೇಳುತ್ತಾರೆ ಎಂಬುದು ವಿಶೇಷಾರ್ಥ.

**ಮಾಮಾಯನ್, ಮಾದವನ್, ವೈಕುಂದನ್ ಎನ್ರೆನ್ರು ನಾಮಮ್ ಪಲವುಮ್ ನವಿನ್ರು** - ಮಾಯೆ ಎಂಬ ಪ್ರಕೃತಿ ಬಂಧನದಿಂದ ತನ್ನಲ್ಲಿ ಶರಣಾದವರನ್ನು ದಾಟಿಸುವವನು, ಶ್ರಿಯಃ ಪತಿಯು, ಪರಮಪದನಾಥನು ಎಂಬುದಾಗಿ ಪರಮಾತ್ಮನ ಪರತ್ವ ಸೌಲಭ್ಯ ಶ್ರಿಯಃಪತಿತ್ವಾದಿಗಳನ್ನು ತಿಳಿಸುವ ಅವನ ಅನೇಕ ನಾಮಗಳನ್ನು ಬಾಯಿ ತುಂಬ ಹಾಡಿದರೆ -

**ಏಲೋ ರೆಮ್ಬಾವಾಯ್** - ನಮ್ಮ ವ್ರತವು ಶುಭವಾಗಿ ನೆರವೇರುವುದು.

ಭಗವಂತನ ಕಲ್ಯಾಣಗುಣಗಳ ಸ್ಮರಣೆಯ ಜ್ಞಾನಪ್ರಕಾಶವು ಹೃದಯದ ನಾಲ್ಕುಕಡೆಯೂ ಹರಡಿರಲಾಗಿ, ತದೇಕ ಚಿತ್ತಳಾಗಿ, ಸ್ವಾಮಿಯಾದ ಭಗವಂತನು, ತನಗೆ ಇಷ್ಟ ಬಂದಾಗ ತನ್ನನ್ನು ರಕ್ಷಿಸಲಿ ಎಂದು ಶಾಂತ ಚಿತ್ತಳಾಗಿ ಹಾಸಿಗೆಯ ಮೇಲೆ ನಿದ್ರಿಸುತ್ತಿರುವ ಭಕ್ತಶಿರೋಮಣಿಯನ್ನು ಎಬ್ಬಿಸುತ್ತಾರೆ. ಆದರೆ ಅವಳು ಇವರ ಮಾತನ್ನು ಕೇಳದವಳಾಗಿ, ಇವರಿಗೆ ಉತ್ತರವನ್ನೂ ಹೇಳದವಳಾಗಿ, ಎಚ್ಚರಗೊಳ್ಳದೆ ಧ್ಯಾನಾವಸ್ಥೆಯಲ್ಲಿ ಮಲಗಿರುವುದನ್ನು ನೋಡಿ, ಅವಳನ್ನು ಎಬ್ಬಿಸುವಂತೆ ಅವಳ ತಾಯಿಯನ್ನು ಕೇಳಿಕೊಳ್ಳುತ್ತಾರೆ. ಕೊನೆಗೆ ಅವಳಿಗೆ ಬಾಹ್ಯ ಜ್ಞಾನವುಂಟಾಗಿ ಅವಳು ತಮ್ಮೊಡನೆ ನಾಮ ಸಂಕೀರ್ತನೆ ಮಾಡಲೆಂದು 'ಮಾಮಾಯನ್, ಮಾದವನ್, ವೈಹುಂದನ್' ಎಂದು ಪರಮಾತ್ಮನ ಕಲ್ಯಾಣಗುಣಗಳನ್ನು ಅವಳ ಮುಂದೆ ಹಾಡುತ್ತಾರೆ ಎಂಬುದೇ ಈ ಪಾಶುರದ ವಿಶೇಷಾರ್ಥ. ಚೇತನನು ಭಗವಂತನಿಗೆ ಅತ್ಯಂತ ಪರತಂತ್ರನು. ಭಗವಂತನೇ ಅವನನ್ನು ರಕ್ಷಿಸಬೇಕು. ಆದ್ದರಿಂದ ಚೇತನನು ತಾನಾಗಿ ತನ್ನ ರಕ್ಷಣೆಗೆ ಪ್ರಯತ್ನಪಡದೆ, ಭಕ್ತಿರೂಪಾಪನ್ನಜ್ಞಾನದಿಂದ ಕೂಡಿದವನಾಗಿ, ಭಕ್ತಿಭರಿತ ಧ್ಯಾನಮಗ್ನನಾಗಿ, ಅವನ ರಕ್ಷಣೆಯನ್ನು ನಿರೀಕ್ಷಿಸುತ್ತಾ ಶಾಂತ ಚಿತ್ತನಾಗಿ, ಇರಬೇಕೆಂಬ ತತ್ತ್ವವು ಈ ಪಾಶುರದಲ್ಲಿ ಸೂಚಿತವಾಗಿದೆ. ಅಂತಹ ಧ್ಯಾನ ಪರನಾದ ಭಗವದ್ಭಕ್ತನು ತಮ್ಮೊಡನೆ ಕಲೆತು ಭಗವನ್ನಾಮ ಸಂಕೀರ್ತನೆಯಲ್ಲಿ ನಿರತನಾಗಲೆಂದು ಗೋದಾದೇವಿಯು ಅಂತಹ ಧ್ಯಾನನಿಷ್ಠರನ್ನೂ ಕರೆಯುತ್ತಾಳೆ.

## ಪಾಶುರ 10

ಈ ಪಾಶುರದಲ್ಲಿ ಪ್ರಪನ್ನಳಾದ, ಉಪಾಯ ನಿಷ್ಠಳಾದ ಭಕ್ತೆಯೊಬ್ಬಳನ್ನು ಎಬ್ಬಿಸುತ್ತಾರೆ, ಭಗವಂತನೇ ತನಗೆ ರಕ್ಷಕನೆಂದು ಅರಿತ ಅವಳು, ಉಪಾಯ ನಿಷ್ಠಳಾಗಿ ಅವನಲ್ಲಿ ಶರಣಾಗತಿ ಮಾಡಿ, ಭಗವದನುಭವ ಪಡೆದವಳಾಗಿ, ಅವನ ಗುಣಗಳನ್ನೇ ನೆನೆಯುತ್ತಾ, ಅದರ ಸವಿಯನ್ನು ಅನುಭವಿಸುತ್ತಾ, ಸುಖವಾಗಿ ಮಲಗಿದ್ದಾಳೆ. ಹೀಗೆ ಎಲ್ಲರಿಗಿಂತ ಮೇಲಾದ ಜ್ಞಾನಿಯಾಗಿ ಉಪಾಯ ನಿಷ್ಠಳಾದ ಭಕ್ತಳಾಗಿರುವುದರಿಂದ ಅವಳನ್ನು ಅಮ್ಮನಾಯ್ ಎಂದು ಕರೆಯುತ್ತಾಳೆ.

**ನೋತ್ತುಚ್ಚುವರ್‌ಗಂ ಪುಹುಹಿನ್ರವಮ್ಮನಾಯ್**
**ಮಾತ್ತಮುಮ್ ತಾರಾರೋ ವಾಶಲ್ ತಿರವಾದಾರ್**
**ನಾತ್ತತ್ತುಳಾಯ್ ಮುಡಿ ನಾರಾಯಣನ್ ನಮ್ಮಾಲ್**
**ಪೋತ್ತಪ್ಪರೈತರುಂ ಪುಣ್ಣಿಯನಾಲ್ ಪಣ್ಡೊರುನಾಳ್**
**ಕೂತ್ತತ್ತಿನ್ ವಾಯ್‌ವೀಳ್‌ನ್ದ ಕುಂಬಕರಣನುಮ್**
**ತೋತ್ತುಮುನಕ್ಕೇ ಪೆರುನ್ತುಯಿಲ್‌ತಾನ್ ತನ್ದಾನೋ**
**ಆತ್ತವನನ್ದಲುಡೈಯಾಯ್ ಅರುಙ್ಕಲಮೇ**
**ತೇತ್ತಮಾಯ್ ವನ್ದು ತಿರವೇಲೋರೆಮ್ಬಾವಾಯ್**

“ವ್ರತಾದಿಗಳನ್ನು ಅನುಷ್ಠಿಸಿ ಸ್ವರ್ಗವನ್ನು ಪ್ರವೇಶಿಸುವವಳಾಗಿ, ಸರ್ವರಿಗೂ ಸ್ವಾಮಿನಿಯಾಗಿರುವವಳೇ ! ಬಾಗಿಲನ್ನು ತೆಗೆಯದಿದ್ದರೂ ಮಾತನ್ನಾದರೂ ಆಡಬಾರದೇ ? ಪರಿಮಳದಿಂದ ಕೂಡಿರುವ ತುಳಸೀ ಮಾಲೆಯನ್ನು ತಲೆಯಲ್ಲಿ ಧರಿಸಿರುವ ಶ್ರೀಮನ್ನಾರಾಯಣನು ನಮ್ಮಿಂದ ಸ್ತೋತ್ರಮಾಡಲ್ಪಟ್ಟವನಾಗಿ ನಮಗೆ ನಮ್ಮ ಇಷ್ಟಾರ್ಥವನ್ನು ಅನುಗ್ರಹಿಸುವನು. ಪುಣ್ಯಪುರುಷನಾದ ಪರಮಾತ್ಮನಿಂದ,

ಪೂರ್ವಕಾಲದಲ್ಲಿ ಒಂದು ದಿವಸ, ಯಮನ ಬಾಯಿಗೆ ಬಿದ್ದ ಕುಂಭಕರ್ಣನು ಸೋತವನಾಗಿ ತನ್ನ ಮಹಾನಿದ್ರೆಯನ್ನು ನಿನಗೆ ಕೊಟ್ಟಿದ್ದಾನೆಯೇ ? ಅಧಿಕವಾದ ನಿದ್ರೆಯಿಲ್ಲದಿರುವವಳೇ, ನಮಗೆ ಆಭರಣದಂತಿರುವವಳೇ, ನಿದ್ರೆಯಿಂದ ಎಚ್ಚೆತ್ತು ತಿಳಿಯಾಗಿ ಬಂದು ಬಾಗಿಲನ್ನು ತೆಗೆಯುವವಳಾಗು. (ನಮ್ಮೊಂದಿಗೆ ಬಂದು ಸೇರುವವಳಾಗು) ಅದ್ವಿತೀಯವಾದ ನಮ್ಮ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ನೋತ್ತುಚ್ಚುವರ್‌ಗಂ ಪುಹುಹಿನ್ರವಮ್ಮನಾಯ್** - ವ್ರತಾದಿಗಳನ್ನು ಅನುಷ್ಠಿಸಿ ಭಗವಂತನೇ ರಕ್ಷಕನೆಂದು ನಂಬಿ, ಅವನಲ್ಲಿ ಪ್ರಪತ್ತಿಮಾಡಿ, ಸ್ವರ್ಗಸುಖಕ್ಕೆ ಸಮವಾಗಿರುವ ಭಗವದನುಭವ ಪಡೆದಿರುವ ಸ್ವಾಮಿನಿಯಾದವಳೇ -

**ಮಾತ್ತಮುಮ್‌ತಾರಾರೋ ವಾಶಲ್ ತಿರವಾದಾರ್** - ನೀನು ಬಾಗಿಲು ತೆಗೆಯದೆ ಇದ್ದರೂ ಮಾತನ್ನಾದರೂ ಆಡಬಾರದೆ ?

ಗೀತೆಯಲ್ಲಿ 'ಬೋಧಯಂತಃ ಪರಸ್ಪರಂ' ಎಂದು ಹೇಳಿರುವಂತೆ ಭಗವದ್ಭಕ್ತರು ತಮ್ಮ ಭಗವದನುಭವಗಳನ್ನೂ ಭಗವಂತನ ಕಲ್ಯಾಣ ಗುಣಗಳನ್ನೂ ಒಬ್ಬರಿಗೊಬ್ಬರು ಹೇಳುತ್ತಲೂ, ಕೇಳುತ್ತಲೂ, ಸಂಕೀರ್ತನೆ ಮಾಡುತ್ತಲೂ ಆನಂದ ಪಡುತ್ತಾರೆ ಎಂದು ಹೇಳಿದೆ. ಅದೇ ರೀತಿ ಇಲ್ಲಿ ಇವಳನ್ನು ಇವಳ ಭಗವದನುಭವಗಳನ್ನು ತಮಗೆ ತಿಳಿಸುವಂತೆ ಕೇಳುತ್ತಾರೆಂದು ತಾತ್ಪರ್ಯ.

**ನಾತ್ತತ್ತುಳಾಯ್ ಮುಡಿ ನಾರಾಯಣನ್ ನಮ್ಮಾಲ್ ಪೋತ್ತ ಪ್ಪರೈತರುಂ** - ಪರಿಮಳ ಭರಿತವಾದ ತುಳಸಿಯನ್ನು ತನ್ನ ಕಿರೀಟದಲ್ಲಿ ಧರಿಸಿರುವ ನಾರಾಯಣನು ನಮ್ಮಿಂದ ಸ್ತೋತ್ರ ಮಾಡಲ್ಪಟ್ಟವನಾಗಿ ನಮ್ಮ ಪುರುಷಾರ್ಥಗಳನ್ನು ಅನುಗ್ರಹಿಸುವನು.

**ಪುಣ್ಣಿಯನಾಲ್** - ಅಂತಹ ಪುಣ್ಯಾತ್ಮನಾದ ಶ್ರೀ ರಾಮಚಂದ್ರನಿಂದ,

**ಪಣ್ಣೊರುನಾಳ್** - ಪೂರ್ವಕಾಲದಲ್ಲಿ ಒಂದು ದಿನ

**ಕೂತ್ತತ್ತಿನ್ ವಾಯ್‌ವೀಳ್‌ನ್ದ ಕುಂಬಕರಣನುಮ್ ತೋತ್ತುಮುನಕ್ಕೇ ಪೆರುನ್ತುಯಿಲ್‌ತಾನ್‌ತನ್ದಾನೋ** - ಮೃತ್ಯುವಶನಾದ ಕುಂಭಕರ್ಣನು ಸೋತವನಾಗಿ ಅವನ ಗಾಢನಿದ್ರೆಯನ್ನು ನಿನಗೇ ಕೊಟ್ಟಿದ್ದಾನೆಯೇ ?

ಅಂದರೆ - ಚೇತನನು ಪ್ರತಿನಿತ್ಯ ಸುಷುಪ್ತಿಕಾಲದಲ್ಲಿ (ಅಂದರೆ ನಿದ್ರೆಯಲ್ಲಿರುವಾಗ) ಪರಮಾತ್ಮನ ಬಳಿ ಹೋಗಿ ಸೇರುತ್ತಾನೆಂದೂ ಆದರಿಂದ ಅವನಿಗೆ ಆ ಕಾಲದಲ್ಲಿ ಬಾಹ್ಯ ಜಗತ್ತಿನ ಸುಖದುಃಖಗಳು ಯಾವುವೂ ತಿಳಿಯುವುದಿಲ್ಲವೆಂದೂ ಛಾಂದೋಗ್ಯ ಉಪನಿಷತ್ತಿನಲ್ಲಿ ತಿಳಿಸಿದೆ. ಅದರಂತೆ ಇವಳೂ ಬ್ರಹ್ಮಾನುಭವದಲ್ಲಿ ಮುಳುಗಿರುವುದರಿಂದ ಬಾಹ್ಯ ಪ್ರಾಪಂಚಿಕ ವಿಷಯಗಳಲ್ಲಿ ಕುಂಭಕರ್ಣನಂತೆ ಗಾಢ ನಿದ್ರೆಗೊಂಡವಳಂತೆ ಇದ್ದಾಳೆ ಎಂಬುದೇ ವಿಶೇಷಾರ್ಥ.

**ಆತ್ತಅನನ್ದಲುಡೈಯಾಯ್** - ಭಗವದ್ಗುಣಾನುಭವವೆಂಬ ಗಾಢನಿದ್ರೆಯಲ್ಲಿರುವವಳೇ,

**ಅರುಙ್ಗಲಮೇ** - ನಮಗೆಲ್ಲಾ ಆಭರಣದಂತಿರುವವಳೇ,

**ತೇತ್ತಮಾಯ್‌ವನ್ದು-ತಿರ** - ನಿನ್ನ ಗಾಢ ನಿದ್ರೆಯಿಂದ ಎಚ್ಚರಗೊಂಡು ಬಂದು ಬಾಗಿಲು ತೆಗೆದು ನಮ್ಮೊಡನೆ ಕಲೆತು ನಾಮ ಸಂಕೀರ್ತನೆ ಮಾಡುವವಳಾಗು.

**ಏಲೋರೆಮ್ಬಾವಾಯ್** - ನಮ್ಮ ವ್ರತವು ಶುಭವಾಗಿ ನೆರವೇರುವುದು.

**'ನಾರಾಯಣನ್ ನಮ್ಮಾಲ್ ಪೋತ್ತ ಪರೈತರುಂ'** - ಅಂದರೆ ನಮ್ಮಿಂದ ಸ್ತುತಿಸಲ್ಪಟ್ಟ ನಾರಾಯಣನು ನಮಗೆ ಪುರುಷಾರ್ಥಗಳನ್ನು ಕೊಡುತ್ತಾನೆ ಎಂದು ಹೇಳಿರುವುದರಿಂದ ಭಗವಂತನೇ ಸಿದ್ಧಧರ್ಮವು. ಅವನೇ ಮೋಕ್ಷೋಪಾಯವು ಎಂಬುದು ಈ ಪಾಶುರದಲ್ಲಿ ಪ್ರತಿಪಾದಿತವಾಗಿದೆ. ಚೇತನನು ಆಚರಿಸುವ ಭಕ್ತಿ ಶರಣಾಗತಿಗಳು ಮೋಕ್ಷೋಪಾಯಗಳಲ್ಲ. ಸಿದ್ಧ ಧರ್ಮವಾದ ಭಗವಂತನೇ

ಉಪಾಯ. ಅವನೇ ಫಲಕೊಡುವವನು, ಆದರೆ ಅವನೇ ನಮ್ಮನ್ನು ರಕ್ಷಿಸಬೇಕೆಂಬ ಇಚ್ಛೆ ನಮ್ಮಲ್ಲಿ ಹುಟ್ಟಬೇಕು. ಆಗ ಅವನು ತಾನಾಗಿ ಬಂದು ನಮ್ಮನ್ನು ರಕ್ಷಿಸುತ್ತಾನೆ. ನಮ್ಮನ್ನು ನೀನು ರಕ್ಷಿಸಬೇಕು ಎಂದು ನಾವು ನಮ್ಮ ಇಚ್ಛೆಯನ್ನು ಅವನಿಗೆ ತಿಳಿಸಿ ಪ್ರಾರ್ಥಿಸುವುದೇ ನಾವು ಮಾಡುವ ಭಕ್ತಿ ಪ್ರಪತ್ತಿಗಳು, ಅದೇ ನಾವು ಆಚರಿಸುವ ವ್ರತಾನುಷ್ಠಾನಾದಿಗಳು. ಹೀಗೆ ಭಕ್ತಿನಿಷ್ಠರಾದ, ವ್ರತನಿಷ್ಠರಾದ ನಮ್ಮ ವಿಘ್ನಗಳನ್ನು ನಿವಾರಿಸಿ ಇಷ್ಟಗಳನ್ನು ಅನುಗ್ರಹಿಸಿ, ನಮ್ಮನ್ನು ರಕ್ಷಿಸುವವನು ಆ ಪರಮಾತ್ಮನೇ ಎಂಬುದು ಈ ಪಾಶುರದಲ್ಲಿ ಪ್ರತಿಪಾದಿಸಲ್ಪಟ್ಟಿದೆ.

# ಪಾಶುರ - 11

ಈ ಪಾಶುರದಲ್ಲಿ ಕರ್ಮಯೋಗನಿಷ್ಠರಾದ ಗೋಪಾಲರ ಕುಲದಲ್ಲಿ ಜನಿಸಿದವಳನ್ನು ಎಬ್ಬಿಸುತ್ತಾರೆ. ಅಂತಹ ಉತ್ತಮ ಕುಲದಲ್ಲಿ ಜನಿಸಿದವಳಾದ್ದರಿಂದ ಅವಳು ಭಗವಂತನ ಅನುಗ್ರಹಕ್ಕೆ ಪಾತ್ರಳಾಗಲು ಪಡೆದಿರಬೇಕಾದ ಸಾತ್ತ್ವಿಕ ಗುಣ ಪೂರ್ತಿ ಉಳ್ಳವಳಾಗಿದ್ದಾಳೆ. ಅಂತಹ ಉತ್ತಮ ಗೋಪಿಕೆಯೊಬ್ಬಳನ್ನು ತಮ್ಮೊಡನೆ ಕಲೆತು ನಾಮ ಸಂಕೀರ್ತನೆ ಮಾಡುವಂತೆ ಕರೆಯುತ್ತಾಳೆ.

**ಕತ್ತುಕ್ಕರವೈಕ್ಕಣಙ್ಗಳ್ ಪಲಕರನ್ದು**
**ಶೆತ್ತಾರ್ ತಿರಲಳಿಯ ಚ್ಚೆನ್ರು ಶೆರುಚ್ಚೆಯ್ಯುಮ್**
**ಕುತ್ತ ಮೊನ್ರಿಲ್ಲಾದ ಕೋವಲರ್‌ತಮ್ ಪೊರ್ಕೊಡಿಯೇ**
**ಪುತ್ತರವಲ್‌ಕುಲ್ ಪುನಮಯಿಲೇ ಪೋದರಾಯ್**
**ಶುತ್ತತ್ತುತ್ತೋಳಿಮಾರೆಲ್ಲಾರುಮ್‌ವನ್ದು ನಿನ್**
**ಮುತ್ತಂ ಪುಕುನ್ದು ಮುಕಿಲ್‌ವಣ್ಣನ್ ಪೇರ್‌ಪಾಡ**
**ಶಿತ್ತಾದೇ ಪೇಶಾದೇ ಶೆಲ್ವಪೆಣ್ಣಾಟ್ಟಿನೀ**
**ಎತ್ತುಕ್ಕುರಙ್ಗುಮ್ ಪೋರುಳೇಲೋರೆಮ್ಬಾವಾಯ್ .**

"ಕರುಹಾಕಿರುವ ಅನೇಕ ಹಸುಗಳ ಹಾಲು ಕರೆಯುವವರೂ, ಶತ್ರುಗಳ ಬಲವೆಲ್ಲವೂ ನಾಶವಾಗುವಹಾಗೆ ತಾವೇ ಹೋಗಿ ಯುದ್ಧ ಮಾಡುವವರೂ ಆಗಿ, ಯಾವ ದೋಷವೂ ಇಲ್ಲದ ಗೋಪಾಲರ ವಂಶಕ್ಕೆ ಚಿನ್ನದ ಬಳ್ಳಿಯಂತೆ ರಮ್ಯವಾಗಿ ಇರುವವಳೇ ! ಹುತ್ತದಲ್ಲಿರುವ ಹಾವಿನಂತೆ ನಿತಂಬ ಪ್ರದೇಶವುಳ್ಳವಳೇ ! ಕಾಡಿನಲ್ಲಿರುವ ನವಿಲಿನ ಗರಿಯಂತೆ ನೀಳವಾದ ಕೇಶರಾಶಿ ಉಳ್ಳವಳೇ, ನೀನು ಎದ್ದು ಬರುವವಳಾಗು, ಸುತ್ತಲೂ ಇರುವ ಸಖಿಯರೆಲ್ಲರೂ ನಿನ್ನ ಮನೆಯ ಬಾಗಿಲಬಳಿ ಬಂದು ನಿಂತು, ನೀಲಮೇಘ ಶ್ಯಾಮವರ್ಣವುಳ್ಳ ಪರಮಾತ್ಮನ

ನಾಮಸಂಕೀರ್ತನೆ ಮಾಡುತ್ತಿದ್ದಾಗ್ಯೂ, ಐಶ್ವರ್ಯವನ್ನು ಪಡೆದಿರುವ ನೀನು ಅಲುಗಾಡದೇ, ಮಾತಾಡದೇ ಹೀಗೆ ನಿದ್ರಿಸುತ್ತಿರಲು ಕಾರಣವೇನು ? (ನೀನು ಎದ್ದುಬಂದರೆ) ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ಕತ್ತುಕ್ಕರವೈ ಕ್ಕಣಜ್ಗಳ್ ಪಲಕರನ್ದು** :- ಕರು ಹಾಕಿದ ಅನೇಕ ಹಸುಗಳಿಂದ ಹಾಲು ಕರೆದು - ಹಸುಗಳನ್ನೂ ಕರುಗಳನ್ನೂ ರಕ್ಷಿಸಿ ಹಾಲು ಕರೆಯುವುದೇ ಗೋಪಾಲರ ಧರ್ಮಬದ್ಧವಾದ ಕುಲಧರ್ಮ, ಎಲ್ಲರೂ ಅವರವರ ಕುಲ ಧರ್ಮವನ್ನು ಆಚರಿಸಬೇಕು ಎಂಬ ಕರ್ಮನಿಷ್ಠೆಯನ್ನು ಇಲ್ಲಿ ತಿಳಿಸಿದ್ದಾಳೆ.

**ಶೆತ್ತಾರ್ ತಿರಲಳಿಯ ಚ್ಚೆನ್ರು ಶೆರುಚ್ಚೆಯ್ಯುಮ್** :- ಕೃಷ್ಣನಿಗೆ ವಿರೋಧಿಗಳಾದವರ ಶಕ್ತಿಯೆಲ್ಲಾ ಅಳಿಯುವಂತೆ ಮಾಡುವವನಾದ - ಅಂದರೆ ತನ್ನ ಕುಲ ಧರ್ಮಾನುಷ್ಠಾನದೊಂದಿಗೆ ಭಗವತ್ ಕೈಂಕರ್ಯಪರನೂ ಆಗಿರುವ -

**ಕುತ್ತಮೊನ್ನಿಲ್ಲಾದ** - ದೋಷರಹಿತನಾದ - ಅಂದರೆ ಫಲಾಸಕ್ತಿರಹಿತವಾಗಿ ಕರ್ಮಗಳನ್ನು ಆಚರಿಸುವವನಾಗಿ ದೋಷವಿಲ್ಲದವನಾದ - ಸ್ವಧರ್ಮೋಚಿತವಾದ ಕರ್ಮಗಳನ್ನು ಸಾಧನಬುದ್ಧಿಯಿಂದ ಮಾಡದಿದ್ದುದರಿಂದ ಯಾವ ದೋಷವೂ ಇಲ್ಲದವನೆಂದು ಇಲ್ಲಿ ಹೇಳಿದೆ.

**ಕೋವಲರ್‌ತಮ್‌ಪೊರ್ಕ್ಕೊಡಿಯೇ** :- ಅಂತಹ ಗೋಪಾಲರ ಕುಲದಲ್ಲಿ ಜನಿಸಿದ ಪೆಣ್ಮಣಿಯೇ ಎಂದು ಸಂಬೋಧಿಸಿ ಅವಳನ್ನು ಕರೆಯುತ್ತಾಳೆ - ಅಂದರೆ ಭಕ್ತಿ ಭರಿತಳಾಗಿ ಸ್ಪೃಹಣೀಯಳಾಗಿರುವವಳೇ ಎಂಬುದು ವಿಶೇಷಾರ್ಥ.

**ಪುತ್ತರವಲ್‌ಕುಲ್‌ಪುನಮಯಿಲೇ** - ಹುತ್ತದಲ್ಲಿರುವ ಹಾವಿನಂತೆ ಕಟಿಪ್ರದೇಶವುಳ್ಳವಳೇ, ನವಿಲಿನಂತೆ ಸುಂದರವಾಗಿರುವವಳೇ, - ಅಂದರೆ ಭಗವಂತನಿಗೆ ಅನುಗುಣವಾದ ರೂಪ ಗುಣಾದಿಗಳುಳ್ಳವಳೆಂದು ಅವಳನ್ನು ವರ್ಣಿಸಿದ್ದಾರೆ. 'ತುಲ್ಯ ಶೀಲವಯೋ ವೃತ್ತಾ' ಎಂದು ಸೀತಾದೇವಿಯನ್ನು

ಶ್ರೀರಾಮನಿಗೆ ಅನುರೂಪವಾದ ರೂಪ, ಗುಣ, ನಡತೆಯುಳ್ಳವಳೆಂದು ಹನುಮಂತನು ವರ್ಣಿಸಿದ್ದಾನೆ. ಅದೇರೀತಿ ಇವಳೂ ಭಗವಂತ ಕೃಪೆಗೆ ಪಾತ್ರಳಾಗಲು ಅರ್ಹಳಾಗಿದ್ದಾಳೆಂದು ಅಭಿಪ್ರಾಯ.

**ಪೋದರಾಯ್** - ಎದ್ದು ಬಾ.

**ಶುತ್ತತ್ತ್ತೋಳಿಮಾರೆಲ್ಲಾರುಮ್‌ವನ್ದು ನಿನ್‌ಮುತ್ತಂ ಪುಕುನ್ದು ಮುಕಿಲ್ವಣ್ಣನ್ ಪೇರ್‌ಪಾಡ** - ಗೋಕುಲದಲ್ಲಿರುವವರೆಲ್ಲರೂ ನಿನ್ನ ಮನೆ ಬಾಗಿಲಿಗೆ ಬಂದು ಮೇಘಶ್ಯಾಮನಾದ ಪರಮಾತ್ಮನ ನಾಮಗಳನ್ನು ಹಾಡುತ್ತಿರುವಾಗ -

**ಶಿತ್ತಾದೇ ಪೇಶಾದೇ ಶೆಲ್ವ ಪೆಣ್ಣಾಟ್ಟಿ** : ಅಲುಗಾಡದೇ ಮಾತಾಡದೇ ಇರುವ ಐಶ್ವರ್ಯವಂತಳಾದ ಹೆಣ್ಣುಮಗಳೇ - ಅಂದರೆ ಭಗವದ್ಭಕ್ತಿ ಎಂಬ ಸಂಪತ್ತಿನಿಂದ ಕೂಡಿ ಭಗವದನುಭವದಲ್ಲಿ ನಿರತಳಾಗಿ ಮೈ ಮರೆತು ಅಲುಗಾಡದೇ ಮಾತಾಡದೇ ಇರುವವಳೇ ಎಂಬುದು ವಿಶೇಷಾರ್ಥ.

ನೀ ಎತ್ತುಕ್ಕುರಙ್ಗುಮ್‌ಪೊರುಳ್ ಏಲ್ - ನೀನು ಶಯನಿಸುತ್ತಿರುವುದಕ್ಕೆ ಕಾರಣವೇನು ? - ಅಂದರೆ ನೀನು ನಿನ್ನ ಮನೆ ಬಾಗಿಲಿಗೆ ಬಂದಿರುವ ಭಾಗವತರೊಂದಿಗೆ ಕಲೆತು ಹಾಡಬೇಕಾಗಿರುವಾಗ, ನೀನು ಮಾತ್ರ ಸ್ವಾನುಭವನಿರತಳಾಗಿ ಮಲಗಿರಲು ಕಾರಣವೇನು ?

**ಏಲೋರೆಂಪಾವಾಯ್** - ನೀನು ಎದ್ದು ಬಂದು ನಮ್ಮೊಡನೆ ಕಲೆತು ನಾಮ ಸಂಕೀರ್ತನೆ ಮಾಡಿದರೆ ನಮ್ಮ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು, ಈ ಪಾಶುರದಲ್ಲಿ ಕರ್ಮಯೋಗವನ್ನು ಅನುಷ್ಠಿಸಬೇಕೆಂದು ತಿಳಿಸಿದೆ. ಭಗವಂತನಲ್ಲಿ ಶರಣಾಗತಿ ಮಾಡಿದವನು, ಭಗವಂತನೇ ತನ್ನನ್ನು ರಕ್ಷಿಸುತ್ತಾನೆಂದು ನಿರ್ಭರನಾಗಿ ಶಾಂತನಾಗಿ ಇರುತ್ತಾನೆ. ಆದರೆ ತನ್ನ ವರ್ಣಾಶ್ರಮೋಚಿತವಾದ ಸ್ವಧರ್ಮವಾದ ಕರ್ತವ್ಯ ಕರ್ಮಗಳನ್ನು ಫಲಾಭಿಸಂಧಿರಹಿತನಾಗಿ, ಭಗವತ್ ಕೈಂಕರ್ಯವಾಗಿ, ಅವನ ಆರಾಧನೆ ಎಂಬ ಭಾವನೆಯೊಂದಿಗೆ ಪ್ರೀತಿ ಭಕ್ತಿಗಳಿಂದ ಆಚರಿಸುತ್ತಾನೆ.

ಕರ್ಮಗಳನ್ನು ಮಾಡುವುದೇ ಪ್ರಯೋಜನವಾಗಿ ಮಾಡುತ್ತಾನೆ. ಭಗವದ್ಗೀತೆಯ 3ನೇ ಅಧ್ಯಾಯದಲ್ಲಿ ಕರ್ಮಯೋಗವು ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ - ''ನಿಯತಂ ಕುರುಕರ್ತ್ವಂ । ಕರ್ಮ ಜ್ಯಾಯೋ ಹಿ ಅಕರ್ಮಣಃ'' - ಅಂದರೆ ಕರ್ತವ್ಯ ಕರ್ಮಗಳನ್ನು ಮಾಡಲೇಬೇಕು. ಭಗವಂತನಲ್ಲಿ ಭಕ್ತಿ ಉಂಟಾಗಬೇಕಾದರೆ ಅದಕ್ಕೆ ಅಂಗವಾಗಿ ಭಗವತ್ ಚಿಂತನ ಧ್ಯಾನಾದಿಗಳನ್ನು ಮಾಡಬೇಕು; ಅದು ಲಭಿಸಬೇಕಾದರೆ ಕರ್ಮಗಳನ್ನು ಫಲಾಸಕ್ತಿರಹಿತವಾಗಿ ಆಚರಿಸಿ ಪಾಪಗಳನ್ನು ಹೋಗಲಾಡಿಸಿಕೊಳ್ಳಬೇಕು. ಅದೂ ಅಲ್ಲದೆ ಶರೀರದ ಧಾರಣಾದಿಗಳಿಗಾಗಿಯೂ ಕರ್ಮ ಮಾಡಲೇಬೇಕಾಗುತ್ತದೆ. ಅಂದರೇನು, ಭಗವಂತನ ಧ್ಯಾನ ಮಾಡಬೇಕಾದರೂ ಶರೀರ ಚೆನ್ನಾಗಿರಬೇಕು. ಅದಕ್ಕೆ ಆಹಾರಬೇಕು. ಅದಕ್ಕಾಗಿ ದ್ರವ್ಯಾರ್ಜನೆ ಮಾಡಬೇಕು; ಅದಕ್ಕೆ ಕರ್ಮ ಮಾಡಬೇಕು. ಆದ್ದರಿಂದ ಸರ್ವರೂ ಕರ್ಮ ಮಾಡಲೇಬೇಕು. ಕರ್ಮ ಮಾಡದೆ ಯಾರೂ ಒಂದು ಕ್ಷಣವೂ ಇರಲಾಗುವುದಿಲ್ಲ. ಮಹಾ ಜ್ಞಾನಿಗಳಾದ ಜನಕಾದಿ ಮಹರ್ಷಿಗಳೂ ಕೂಡ ಜಗತ್ತಿನ ಜನಗಳಿಗೆ-ಮಾರ್ಗದರ್ಶಕರಾಗಿರಲು ಲೋಕ ಕಲ್ಯಾಣಕ್ಕಾಗಿ ಕರ್ಮ ಮಾಡಿದರು. ಶ್ರೀ ಕೃಷ್ಣ ಪರಮಾತ್ಮನೂ ಅರ್ಜುನನಿಗೆ ಸಾರಥಿಯಾಗಿ ಕರ್ಮ ಮಾಡಿದನು. ಆದ್ದರಿಂದ ಸರ್ವರೂ ಕರ್ಮ ಮಾಡಬೇಕು. ಕರ್ತವ್ಯ ಕರ್ಮಗಳನ್ನು ಫಲಾಸಕ್ತಿರಹಿತವಾಗಿ ಭಗವದಾರಾಧನರೂಪವಾಗಿ ಮಾಡುವುದೇ ಕರ್ಮಯೋಗವು ಎಂದು ಗೀತೆಯಲ್ಲಿ ತಿಳಿಸಿದ್ದಾನೆ. ಇದನ್ನೇ ಇಲ್ಲಿ ಗೋದಾದೇವಿಯು 'ಕುತ್ತಮೊನ್ರಿಲ್ಲಾದ ಕೋವಲರ್'' ಎಂದು ಗೋಕುಲದ ಗೋಪಾಲರು ತಮ್ಮ ಕರ್ತವ್ಯ, ಕರ್ಮಗಳನ್ನು ಸಾಧನ ಬುದ್ಧ್ಯಾ ಆಚರಿಸದೆ ಭಗವಗತ್ ಕೈಂಕರ್ಯವಾಗಿ ಮಾಡುವ ಕರ್ಮಯೋಗ ನಿಷ್ಠರಾಗಿದ್ದರು ಎಂದು ತಿಳಿಸಿದ್ದಾಳೆ. ಇಂತಹ ಕರ್ಮಯೋಗನಿಷ್ಠರಾದ ಭಕ್ತರ ವಂಶದಲ್ಲಿ ಹುಟ್ಟಿದಂತಹ ಒಬ್ಬ ಭಕ್ತೆಯನ್ನು ತಮ್ಮೊಡನೆ ಕಲೆತು ನಾಮಸಂಕೀರ್ತನೆ ಮಾಡುವಂತೆ ಕರೆಯುತ್ತಾಳೆ. ಸ್ವಧರ್ಮನಿಷ್ಠರಾದವರ ಕುಲದಲ್ಲಿ ಜನಿಸಿ ಅಂದರೆ ಸತ್ಕುಲದಲ್ಲಿ ಜನಿಸಿ ಸದ್ಗುಣ ಸಂಪತ್ತನ್ನು ಪಡೆದಿರುವವರ ಸಂಗವನ್ನು ಆಸೆ ಪಡುತ್ತಾಳೆ.

## ಪಾಶುರ - 12

ಈ ಪಾಶುರದಲ್ಲಿ ಕೃಷ್ಣಪರಮಾತ್ಮನಿಗೆ ಅಂತರಂಗಕೈಂಕರ್ಯ ಮಾಡುವುದರಲ್ಲಿ ನಿರತನಾಗಿ ಸ್ವಧರ್ಮಾಚರಣೆಯನ್ನು ಲಕ್ಷಿಸದೆ, ವಿಶೇಷಧರ್ಮಾನುಷ್ಠಾನ ಪರನಾದ ಒಬ್ಬ ಗೋಪಾಲನ ತಂಗಿಯನ್ನು ಕರೆಯುತ್ತಾಳೆ.

**ಕನೈತ್ತಿಳಮ್ ಕತ್ತೆರುಮ್ಮೈ ಕನ್ರುಕ್ಕಿರಙ್ಗಿ**
**ನಿನೈತ್ತು ಮುಲೈವಳಿಯೇ ನಿನ್ರು ಪಾಲ್‌ಶೋರ**
**ನನೈತ್ತಿಲ್ಲಮ್ ಶೇರಾಕ್ಕುಮ್ ನಱ್ಚೆಲ್ವನ್ ತಙ್ಗಾಯ್**
**ಪನಿತ್ತಲೈವೀಳ ನಿನ್ ವಾಶಲ್ ಕಡೈಪತ್ತಿ**
**ಶಿನತ್ತಿನಾಲ್ ತೆನ್ನಿಲಙ್ಗೈಕ್ಕೋಮಾನೈಚ್ಚೆತ್ತ**
**ಮನತ್ತುಕ್ಕಿನಿ ಯಾನೈ ಪ್ಪಾಡವುಮ್ ನೀ ವಾಯ್‌ತಿರವಾಯ್**
**ಇನಿತ್ತಾನೆೞುನ್ದಿರಾಯ್ ಈದೆನ್ನ ಪೇರುರಕ್ಕಮ್**
**ಅನೈತ್ತಿಲ್ಲತ್ತಾರುಂ ಅರಿಂದೇಲೋರೆಮ್ಬಾವಾಯ್ .**

"ಎಳೆ ಕರುಗಳನ್ನು ಹೊಂದಿರುವ ಎಮ್ಮೆಗಳು (ಹಾಲು ಕರೆಯುವವರಿಲ್ಲದೆ) ತಮ್ಮ ಕರುಗಳ ಮೇಲೆ ಕನಿಕರ ಹೊಂದಿ ಕರುಗಳನ್ನು ನೆನೆಸಿಕೊಂಡು ತಮ್ಮ ಸ್ತನಗಳಿಂದ ನಿಲ್ಲದಂತೆ ಒಂದೇ ಸಮನೆ ಹಾಲು ಸುರಿಸುತ್ತಿರಲು, ಅದರಿಂದ ಮನೆಯೆಲ್ಲಾ ನೆನೆಸಲ್ಪಟ್ಟು ಕೆಸರಾಗುವಂತೆ ಮಾಡುವವನಾದ, ಭಗವದನು ಭವವೆಂಬ ಒಳ್ಳೆಯ ಐಶ್ವರ್ಯ ಪಡೆದಿರುವವನ ತಂಗಿಯಾದವಳೇ - ನಮ್ಮ ತಲೆಯಮೇಲೆ ಮಂಜು ಬೀಳುತ್ತಿರಲು, ನಿನ್ನ ಮನೆಯ ಬಾಗಿಲನ್ನು ಬಂದು ಸೇರಿ ಲಂಕಾಪುರಿಯ ರಾಜನಾದ ರಾವಣನನ್ನು ಸಂಹರಿಸಿದವನಾದ, ಮನಸ್ಸಿಗೆ ಹಿತಪರನಾದ ಶ್ರೀರಾಮನನ್ನು ನಾವು ಹಾಡುತ್ತಿದ್ದಾಗ್ಯೂ ನೀನು ಬಾಯನ್ನು

ತೆಗೆಯದೆ ಸುಮ್ಮನಿರುವೆಯಲ್ಲಾ, ಇನ್ನು ಮೇಲಾದರೂ ಎದ್ದು ಬಾ. ಇದೆಂತಹ ಗಾಢನಿದ್ರೆ ! ಎಲ್ಲ ಮನೆಯವರೂ ಇದನ್ನು ತಿಳಿಯುವಂತೆ ಆಗಿದೆ. (ನೀನು ಎದ್ದು ಬಂದರೆ) ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು.'' ಇದು ಈ ಪಾಶುರದ ವಾಕ್ಯಾರ್ಥ.

**ಕನೈತ್ತು ಇಳಂ ಕತ್ತೆರುಮ್ಮೈ ಕನ್ರುಕ್ಕಿರಜ್ಗಿ ನಿನೈತ್ತು ಮುಲೈ ವಳಿಯೇನಿನ್ರು, ಪಾಲ್ ಶೋರ** :- ಎಳೆ ಕರುಗಳನ್ನು ಹೊಂದಿರುವ ಎಮ್ಮೆಗಳು ತಮ್ಮ ಕರುಗಳ ಮೇಲಿನ ಮಮತೆಯಿಂದ, ಅವುಗಳಿಗೆ ಹಾಲು ಕೊಡಬೇಕೆಂದು ಕೂಗುತ್ತಿರಲಾಗಿ, ಹಾಲು ಕರೆಯುವವರಾರೂ ಇಲ್ಲದೆ ಇದ್ದುದರಿಂದ ತಮ್ಮ ಕರುವನ್ನು ನೆನೆಸಿಕೊಂಡು ಸುಮ್ಮನೆ ತಾವಾಗಿಯೇ ಧಾರಾಳವಾಗಿ ಹಾಲನ್ನು ಸುರಿಸುತ್ತಿರಲು -

**ನನೈತ್ತ್ ಇಲ್ಲಂ ಶೇರಾಕ್ಕುಂ ನರ್ಚೆಲ್ವನ್ ತಜ್ಗಾಯ್** :- ಮನೆಯೆಲ್ಲಾ ಹಾಲಿನಿಂದ ನೆನೆದು ಕೆಸರಾಗುವಂತೆ ಮಾಡಿರುವ, ಭಗವತ್ ಕೈಂಕರ್ಯವೆಂಬ ಉತ್ತಮವಾದ ಸಂಪತ್ತನ್ನು ಪಡೆದಿರುವವನ ತಂಗಿಯೇ - ಎಂದು ಅವಳನ್ನು ಕರೆಯುತ್ತಾಳೆ.

**ನರ್ಚೆಲ್ವನ್** - ಎಂದರೆ ಒಳ್ಳೆಯ ಸಂಪತ್ತುಳ್ಳವನು ಎಂದು ಅರ್ಥ. ಅಂದರೇನು ಶ್ರೀಕೃಷ್ಣ ಪರಮಾತ್ಮನ ಕೈಂಕರ್ಯವೆಂಬ ಮಹಾ ಸಂಪತ್ತನ್ನು ಪಡೆದಿರುವವನು. ಅವನು ಭಗವಂತನಿಗೆ ಅಂತರಂಗ ಕೈಂಕರ್ಯ ಮಾಡುವುದರಲ್ಲೇ ನಿರತನಾಗಿದ್ದುದರಿಂದ, ತನ್ನ ಸ್ವಧರ್ಮವಾದ ಹಸು, ಎಮ್ಮೆಗಳ ಹಾಲು ಕರೆಯುವುದೇ ಮೊದಲಾದ ಸಾಮಾನ್ಯ ಧರ್ಮವನ್ನು ಅನುಷ್ಠಿಸುತ್ತಿರಲಿಲ್ಲ. ಇದರ ಫಲವಾಗಿ ಹಸುಗಳೂ, ಎಮ್ಮೆಗಳೂ, ತಮ್ಮ ಕರುಗಳನ್ನು ನೆನೆದು ತಮ್ಮ ಕೆಚ್ಚಲಿನ ಮೂಲಕ ತಾವಾಗಿಯೇ ಹಾಲು ಸುರಿಸುತ್ತಿದ್ದುದರಿಂದ ಅವನ ಮನೆಯೆಲ್ಲಾ ಹಾಲಿನಿಂದ ಕೆಸರಾಗಿದ್ದಿತು. ಇಂತಹ ವಿಶೇಷ ಧರ್ಮವಾದ ಭಗವತ್ ಕೈಂಕರ್ಯ ನಿಷ್ಠನಾದವನ ತಂಗಿ ಎಂದು ಅವಳನ್ನು ಸಂಬೋಧಿಸಿ ಕರೆಯುತ್ತಾಳೆ. ಉತ್ತಮ ಮಾನವರ ಸಂಬಂಧ ಪಡೆಯುವುದು ಬಹಳ ಶ್ರೇಯಸ್ಕರವಾದುದು ಎಂದು ಅಭಿಪ್ರಾಯ.

**ಪನಿತ್ತಲೈ ವೀಳ ನಿನ್‌ವಾಶಲ್ ಕಡೈಪತ್ತಿ** - ತಲೆಯ ಮೇಲೆ ಪ್ರಾತಃಕಾಲದ ಮಂಜು ಬೀಳುತ್ತಿರಲಾಗಿ, ನಿನ್ನ ಬಾಗಿಲ ಬಳಿ ನಿಂತು - ಅಂದರೆ, ಮೇಲೆ ಮಂಜು, ಕೆಳಗೆ ಹಾಲು ಕೋಡಿ, ಹೃದಯದಲ್ಲಿ ಭಗವತ್ ಭಕ್ತಿಯ ಹನಿ ಬೀಳುತ್ತಿರಲಾಗಿ - ಅಂದರೆ ಸಂಸಾರಸಾಗರದಲ್ಲಿ ಮುಳುಗಿರುವ ನಮ್ಮ ಮೇಲೆ ಭಕ್ತಿರೂಪಾಪನ್ನಜ್ಞಾನದ ಹನಿ ಬೀಳುತ್ತಿರಲಾಗಿ ಎಂಬುದು ವಿಶೇಷಾರ್ಥ.

ನಿನ್ನ ಬಾಗಿಲ ಬಳಿ ಬಂದು ನಿಂತು -

**ಶಿನತ್ತಿನಾಲ್ ತೆನ್ನಿಲಙ್ಗೈ ಕೋಮಾನೈಚ್ಚೆತ್ತ** :- ಕೋಪದಿಂದ ದಕ್ಷಿಣ ದಿಕ್ಕಿನಲ್ಲಿರುವ ಲಂಕಾನಗರದ ರಾಜನಾದ ರಾವಣನನ್ನು ಸಂಹರಿಸಿದ.

**ಮನತ್ತುಕ್ಕಿನಿಯಾನೈ ಪಾಡವುಂ ನೀವಾಯ್ ತಿರವಾಯ್** :- ಮನಸ್ಸಿಗೆ ಶಾಂತಿಯನ್ನೂ ಆನಂದವನ್ನೂ ಉಂಟುಮಾಡುವ ಶ್ರೀರಾಮಚಂದ್ರನನ್ನು ನಾವೆಲ್ಲರೂ ಹಾಡುತ್ತಿರುವಾಗ, ನೀನು ಬಾಯಿಬಿಟ್ಟು ಹಾಡದೆ ಸುಮ್ಮನೆ ಮಲಗಿರುವೆಯಲ್ಲಾ - ಕ್ರೂರಿಯಾದ ರಾವಣನ ಮೇಲೆ ಕೋಪಗೊಂಡು ಅವನನ್ನು ರಾಮನು ಸಂಹರಿಸಿದನು. ಆದರೆ ಅವನು ಭಕ್ತರ ಮೇಲೆ ಕರುಣೆ ತೋರಿ ರಕ್ಷಿಸಿದ್ದಾನೆ. ಅವನ ನಾಮಸ್ಮರಣೆಯೇ ಸರ್ವರಿಗೂ ಶಾಂತಿದಾಯಕ ವಾದುದಾಗಿದೆ. ರಾಮ ಮಂತ್ರಕ್ಕೆ ತಾರಕ ಮಂತ್ರವೆಂದೂ ಹೆಸರು. ಶ್ರೀ ವಿಷ್ಣುಸಹಸ್ರನಾಮ ಭಾಷ್ಯದಲ್ಲಿ ಶ್ರೀ ಪರಾಶರ ಭಟ್ಟರು ಶ್ರೀ ರಾಮನಾಮವನ್ನು ಮೃತಸಂಜೀವಿನಿ ರಾಮ ಮಂತ್ರವೆಂದು ಹೇಳಿದ್ದಾರೆ. ರಾಮನಾಮ ಸ್ಮರಣೆಯಿಂದ ಶಾಂತಿ ಸುಖಗಳು ಲಭಿಸುತ್ತವೆ ಎಂದು ತುಳಸೀದಾಸ್, ತುಕಾರಾಂ ಮುಂತಾದ ಭಗವದ್ಭಕ್ತರೆಲ್ಲರೂ ಹಾಡಿದ್ದಾರೆ. ಅಂತಹ ಶ್ರೀ ರಾಮನಾಮವನ್ನು ನಾವು ಹಾಡುತ್ತಿರುವಾಗ ನೀನು ಏಕೆ ಹಾಡದೆ ಸುಮ್ಮನಿದ್ದೀಯೇ ?

ಇನಿತ್ತಾನೆಳುಂದಿರಾಯ್ :- ಇನ್ನುಮೇಲಾದರೂ ಎಚ್ಚರಗೊಂಡು ಏಳು.

ಈದೆನ್ನಪೇರುರಕ್ಕಂ :- ಇದೆಂತಹ ಗಾಢನಿದ್ರೆ -

**ಆನ್ರೈತ್ತಿಲ್ಲತ್ತಾರುಮ್ ಅರಿಂದ್** :- ಎಲ್ಲಮನೆಯವರಿಗೂ ನಿನ್ನ ಸ್ವಭಾವವು ತಿಳಿಯಿತು. ನೀನು ಬಂದರೆ -

**ಏಲೋ ರೆಂಪಾವಾಯ್** :- ನಮ್ಮ ವ್ರತವು ಶುಭವಾಗಿ ನೆರವೇರುವುದು.

11ನೇ ಪಾಶುರಕ್ಕೂ 12ನೇ ಪಾಶುರಕ್ಕೂ ಒಂದು ಸಂಬಂಧವಿದೆ. ಈ ಎರಡು ಪಾಶುರಗಳ ಅರ್ಥವನ್ನೂ ಒಟ್ಟಿಗೆ ಸೇರಿಸಿಕೊಳ್ಳಬೇಕು. ಗೋಕುಲದ ಗೋಪಾಲರಿಗೆ ಹಸುಗಳನ್ನು ರಕ್ಷಿಸಿ ಹಾಲು ಕರೆಯುವುದು ಅವರ ಕುಲಧರ್ಮ, ಅದನ್ನು ಅನುಷ್ಠಿಸುತ್ತಿದ್ದಂತಹ ಧರ್ಮನಿಷ್ಠರಾದವರ ಕುಲದಲ್ಲಿ ಜನಿಸಿದವಳನ್ನು 11ನೇ ಪಾಶುರದಲ್ಲಿ ಎಬ್ಬಿಸಿದರು. ಈಗ ಈ 12ನೇ ಪಾಶುರದಲ್ಲಿ ಸ್ವಧರ್ಮವಾದ ಕರ್ಮಗಳನ್ನು ಆಚರಿಸದವನ ತಂಗಿಯನ್ನು ಎಬ್ಬಿಸುತ್ತಾರೆ. ಶ್ರೀ ಕೃಷ್ಣಪರಮಾತ್ಮನಿಗೆ ಅಂತರಂಗ ಕೈಂಕರ್ಯ ಮಾಡುತ್ತಿದ್ದವನ ತಂಗಿಯನ್ನು ಎಬ್ಬಿಸುತ್ತಾರೆ. ಅವನು ತನ್ನ ಜಾತಿಧರ್ಮವಾದ, ಹಸುಗಳ ಹಾಲು ಕರೆಯುವ ಕೆಲಸವನ್ನು ಬಿಟ್ಟು ಪರಮಾತ್ಮನ ಕೈಂಕರ್ಯದಲ್ಲಿ ನಿರತನಾಗಿದ್ದನು. ಇದು ವಿಶೇಷ ಧರ್ಮ. 'ಕೃಷ್ಣಂ ಧರ್ಮಂಸನಾತನಂ' ಎಂದು ಹೇಳಿರುವಂತೆ ಸಾಕ್ಷಾತ್ ಧರ್ಮ ಸ್ವರೂಪನಾದ ಪರಮಾತ್ಮನಿಗೆ ಕೈಂಕರ್ಯ ಮಾಡುವುದರಲ್ಲಿ ಅವನು ನಿರತನಾಗಿದ್ದುದರಿಂದ, ಹಸುಗಳ ಹಾಲು ಕರೆಯುವ ಸಾಮಾನ್ಯ ಧರ್ಮವಾದ ಅವನ ಜಾತಿ ಧರ್ಮ ಕೈಬಿಟ್ಟು ಹೋಯಿತು. ಭಗವಂತನಿಗೆ ಅಂತರಂಗ ಕೈಂಕರ್ಯ ಮಾಡುವುದರಲ್ಲಿ ನಿರತರಾಗಿರುವವರು ಸಾಧಾರಣವಾದ ಕುಲಧರ್ಮವನ್ನು ಆಚರಿಸಿಯೇ ತೀರಬೇಕೆಂಬ ನಿರ್ಬಂಧವಿಲ್ಲ.

ಶ್ರೀರಾಮನು ಸಾಕ್ಷಾತ್ ಧರ್ಮಸ್ವರೂಪನೆಂದು ದಶರಥ ಮಹಾರಾಜನು ತಿಳಿದವನಾಗಿದ್ದರೂ, ಕೈಕೇಯಿಗೆ ಕೊಟ್ಟ ಮಾತನ್ನು ಸತ್ಯವಾಗಿಸಬೇಕೆಂಬ ಸಾಮಾನ್ಯ ಧರ್ಮಕ್ಕೆ ಪ್ರಾಮುಖ್ಯತೆ ಕೊಟ್ಟು ಶ್ರೀರಾಮನನ್ನು ಕಾಡಿಗೆ ಕಳುಹಿಸಿದನು. ಅವನಿಗೆ ಮೋಕ್ಷ ಲಭಿಸಲಿಲ್ಲ. ಆದರೆ ದಧಿಭಾಂಡವನೆಂಬುವವನು ಕೃಷ್ಣನನ್ನು ತನ್ನ ಮಜ್ಜಿಗೆಯ ಬಾಂಢದೊಳಗೆ ಮರೆಸಿ ಇಟ್ಟು, 'ಕೃಷ್ಣ ಇಲ್ಲ ಇಲ್ಲ' ಎಂದು ಸುಳ್ಳು ಹೇಳಿದನು. ಇವನು ಸಾಮಾನ್ಯ ಧರ್ಮವಾದ ಸತ್ಯವನ್ನು ತ್ಯಜಿಸಿ ಸಾಕ್ಷಾತ್

ಧರ್ಮಸ್ವರೂಪನಾದ ಕೃಷ್ಣನನ್ನು ರಕ್ಷಿಸಿದ್ದರಿಂದ ಇವನಿಗೆ ಮೋಕ್ಷ ಲಭಿಸಿತು ಎಂದು ಪುರಾಣದಲ್ಲಿ ತಿಳಿಸಿದೆ. ಸ್ವಧರ್ಮಾನುಷ್ಠಾನವಾಗಲಿ, ವಿಶೇಷ ಧರ್ಮಾನುಷ್ಠಾನವಾಗಲಿ ಎರಡೂ ಮಾಡಬೇಕಾದವುಗಳೇ. ಆದರೆ ವಿಶೇಷ ಧರ್ಮಾನುಷ್ಠಾನ ಮಾಡಬೇಕಾದ ಸಂದರ್ಭ ಒದಗಿದಾಗ ಸ್ವಧರ್ಮವನ್ನು ಬಿಡುವುದು ತಪ್ಪಾಗಲಾರದು. ಲಕ್ಷ್ಮಣನು ಕುಲಧರ್ಮವೆಂದು ಅಯೋಧ್ಯೆಯಲ್ಲಿ ಕುಳಿತಿರದೆ, ಸಾಮಾನ್ಯ ಧರ್ಮವಾದ ಗೃಹಸ್ಥ ಧರ್ಮವನ್ನು ತ್ಯಜಿಸಿ ಶ್ರೀರಾಮನೊಂದಿಗೆ ಕಾಡಿಗೆ ಹೋಗಿ ಅವನ ಸೇವೆಯಲ್ಲಿ ನಿರತನಾಗಿ ವಿಶೇಷ ಧರ್ಮವಾದ ಭಗವತ್ ಕೈಂಕರ್ಯದಲ್ಲಿ ನಿರತನಾದನು. ಅದೇ ರೀತಿ ನಚ್ಚಿಲ್ವನೂ ತನ್ನ ಕುಲಧರ್ಮವನ್ನು ತ್ಯಜಿಸಿ ಭಗವತ್ ಕೈಂಕರ್ಯದಲ್ಲಿ ನಿರತನಾಗಿದ್ದನು. ಸ್ವಧರ್ಮಾನುಷ್ಠಾನವಾಗಲಿ, ವಿಶೇಷ ಧರ್ಮಾನುಷ್ಠಾನವಾಗಲಿ, ನೇರವಾಗಿ ಮೋಕ್ಷಕ್ಕೆ ಸಾಧನವಾಗಲಾರದು, ಸಿದ್ಧ ಧರ್ಮನಾದ ಪರಮಾತ್ಮನೇ ಮೋಕ್ಷಪ್ರದನು. ಅವನ ಕೈಂಕರ್ಯ ಮಾಡುವುದೇ ಮೇಲಾದ ಧರ್ಮ ಎಂಬ ಉಪದೇಶಗಳೆಲ್ಲವೂ ಈ ಪಾಶುರದಲ್ಲಿ ಅಡಗಿವೆ.

# ಪಾಶುರ - 13

ಈ ಪಾಶುರದಲ್ಲಿ ಭಕ್ತಿರೂಪಾಪನ್ನ ಜ್ಞಾನಯೋಗ ನಿಷ್ಠಳಾಗಿ ಭಗವದನುಭವದ ಆನಂದವನ್ನು ತಾನೊಬ್ಬಳೇ ಅನುಭವಿಸುತ್ತಾ ಮಲಗಿರುವ ಭಕ್ತಶಿರೋಮಣಿಯನ್ನು ಎಬ್ಬಿಸಿ ತಮ್ಮೊಡನೆ ಕಲೆತು ನಾಮಸಂಕೀರ್ತನೆ ಮಾಡುವಂತೆ ಕರೆಯುತ್ತಾಳೆ.

**ಪುಳ್ಳಿನ್‌ವಾಯ್ ಕೀಣ್ಡಾನ್ನೈ ಪೊಲ್ಲಾವರಕ್ಕನ್ನೈ**
**ಕಿಳ್ಳಿಕ್ಕಳೈನ್ದಾನ್ನೈ ಕೀರ್ತ್ತಿಮೈಪಾಡಿಪ್ಪೋಯ್**
**ಪಿಳ್ಳೈಗಳೆಲ್ಲಾರುಂ ಪಾವೈಕ್ಕಳಂ ಪುಕ್ಕಾರ್**
**ವೆಳ್ಳಿಯೆಳುನ್ದು ವಿಯಾಳಮುರಙ್ಗಿತ್ತು**
**ಪುಳ್ಳುಮ್ ಶಿಲಮ್ಬಿನಕಾಣ್ ಪೋದರಿಕ್ಕಣ್ಣಿನಾಯ್**
**ಕುಳ್ಳಕ್ಕುಳಿರ ಕ್ಕುಡೈನ್ದು ನೀರಾಡಾದೇ**
**ಪಳ್ಳಿಕ್ಕಿಡತ್ತಿಯೋ ಪಾವಾಯ್ ನೀ ನನ್ನಾಳಾಲ್**
**ಕಳ್ಳನ್ತವಿರ್‌ನ್ದು ಕಲನ್ದೇಲೋರೆಮ್ಬಾವಾಯ್ .**

"ಪಕ್ಷಿಯರೂಪದಲ್ಲಿ ಬಂದ ಬಕಾಸುರನ ಬಾಯನ್ನು ಸೀಳಿದ ಮತ್ತು ದುಷ್ಟ ರಾಕ್ಷಸನಾದ ರಾವಣನ ಶಿರಸ್ಸನ್ನು ಕತ್ತರಿಸಿದ ಶ್ರೀರಾಮನ ಕೀರ್ತನೆಯನ್ನು ಹಾಡುತ್ತಾಹೋಗಿ ಹೆಣ್ಣುಮಕ್ಕಳೆಲ್ಲರೂ, ಸಂಕೇತ ಮಾಡಿಕೊಂಡಿದ್ದ ವ್ರತಸ್ಥಾನವನ್ನು ಹೋಗಿ ಸೇರಿದರು. ಶುಕ್ರನು ಉದಿಸಿದ್ದಾನೆ. ಗುರುವು ಅಸ್ತಮಿಸಿದ್ದಾನೆ. ಪಕ್ಷಿಗಳೂ ಎದ್ದು ಕೂಗುತ್ತಿವೆ ನೋಡು. ಸುಂದರವಾದ ಕಣ್ಣುಳ್ಳವಳೇ, ಬೆಳಗಾಗಿರುವ ಸಮಯವನ್ನು ಅರಿತುಕೋ. ಅತಿ ಶೀತಳವಾಗಿರುವ ನೀರಿನಲ್ಲಿ ಮುಳುಗಿ ಸ್ನಾನ ಮಾಡದೆ, ಹಾಸಿಗೆಯಲ್ಲಿ ಮಲಗಿ ನಿದ್ರೆ ಮಾಡುತ್ತಿರುವೆಯಾ ? ಹೆಣ್ಣು ಮಗಳೇ ;

ನೀನು ಈ ಶುಭ ದಿನದಲ್ಲಿ ಕಪಟ ಬುದ್ಧಿಯನ್ನು ಬಿಟ್ಟು ನಮ್ಮೊಡನೆ ಸೇರಿಕೊಂಡರೆ ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು''. ಇದು ಈ ಪಾಶುರದ ವಾಕ್ಯಾರ್ಥ.

**ಪುಳ್ಳಿನ್‌ವಾಯ್‌ಕೀಣ್ಡಾನೈ** :- ಪಕ್ಷಿರೂಪದಲ್ಲಿ ಬಂದ ಬಕಾಸುರನೆಂಬ ರಾಕ್ಷಸನ ಬಾಯನ್ನು ಸೀಳಿದ ಶ್ರೀಕೃಷ್ಣಪರಮಾತ್ಮನ -

**ಪೊಲ್ಲಾಅರಕ್ಕನೈ ಕಿಳ್ಳಿಕ್ಕಳೈನ್ದಾನೈ** :- ದುಷ್ಟ ರಾಕ್ಷಸನಾದ ರಾವಣನನ್ನು ಅನಾಯಾಸವಾಗಿ ಕಿತ್ತೊಗೆದು ಸಂಹರಿಸಿದ ಶ್ರೀ ರಾಮಚಂದ್ರನ - ಶ್ರೀರಾಮನು ಕೇವಲ ದುಷ್ಟರಾಕ್ಷಸರನ್ನು ಮಾತ್ರ ಸಂಹರಿಸಿದನೇ ವಿನಹ ವಿಭೀಷಣಾದಿ ಒಳ್ಳೆಯ ರಾಕ್ಷಸರನ್ನು ರಕ್ಷಿಸಿದ್ದಾನೆ ಎಂಬುದನ್ನು 'ಪೊಲ್ಲಾಅರಕ್ಕನೈ' - ಎಂಬುದು ಸೂಚಿಸುತ್ತದೆ.

**ಕೀರ್ತ್ತಿಮೈಪಾಡಿಪ್ಪೋಯ್ ಪಿಳ್ಳೈಗಳೆಲ್ಲಾರುಂ ಪಾವೈಕ್ಕಳಂ ಪುಕ್ಕಾರ್** :- ರಾಮನಾಮ ಕೃಷ್ಣನಾಮಗಳನ್ನು ಸಂಕೀರ್ತನೆ ಮಾಡುತ್ತಾ ಗೋಪಿಯರೆಲ್ಲರೂ ವ್ರತ ಸ್ಥಾನವನ್ನು ಹೋಗಿ ಸೇರಿದರು - ಅಂದರೆ ಭಕ್ತಾದಿಗಳೆಲ್ಲರೂ ಭಗವದ್ಗುಣಚೇಷ್ಟಿತಾದಿಗಳನ್ನು ಹಾಡುತ್ತಾ ಭಗವತ್ ಸಾನ್ನಿಧ್ಯವನ್ನು ಹೋಗಿ ಸೇರಿದರು ಎಂದು ಅಭಿಪ್ರಾಯ. ರಾಮಾವತಾರ, ಕೃಷ್ಣಾವತಾರ ಈ ಎರಡು ಅವತಾರಗಳನ್ನೂ ಈ ಪಾಶುರದಲ್ಲಿ ಹಾಡಿದ್ದಾರೆ.

**ವೆಳ್ಳಿ ಎಳುನ್ದು ವಿಯಾಳ ಮುರಙ್ಗಿತ್ತು** :- ಶುಕ್ರನು ಉದಿಸಿ ಗುರುವು ಅಸ್ತಮಿಸಿದ್ದಾನೆ. ಅಂದರೆ ಅಜ್ಞಾನವು ನಶಿಸಿ ಜ್ಞಾನೋದಯವಾಗಿದೆ ಎಂಬುದು ವಿಶೇಷಾರ್ಥ.

**ಪುಳ್ಳುಮ್ ಶಿಲುಂಬಿನಕಾಣ್** - ಪಕ್ಷಿಗಳು ಬೆಳಗಾಗಿರುವುದರಿಂದ ಎದ್ದು ಕೂಗುತ್ತಿವೆ - ಅಂದರೆ ವೇದವು ಘೋಷಿಸುತ್ತಿದೆ; ಸರ್ವರಿಗೂ ಜ್ಞಾನದ ಉಪದೇಶ ನೀಡುತ್ತಿದೆ ಎಂಬುದು ವಿಶೇಷಾರ್ಥ.

**ಪೋದರಿ ಕ್ಕಣ್ಣಿನಾಯ್** :- ಜಿಂಕೆಯಂತೆಯೂ, ಪುಷ್ಪಗಳಂತೆಯೂ ಸುಂದರವಾದ ಕಣ್ಣುಗಳುಳ್ಳವಳೇ - ಅಂದರೆ ಸಮ್ಯಕ್ ಜ್ಞಾನ ಪಡೆದಿರುವವಳೇ ಎಂದು ಅಭಿಪ್ರಾಯ.

**ಕುಳ್ಳಕುಳಿರಕುಡೈಂದು ನೀರಾಡಾದೇ** :- ಈ ಪ್ರಾತಃ ಕಾಲದಲ್ಲಿ ತಣ್ಣಗೆ ಚೆನ್ನಾಗಿ ಸ್ನಾನ ಮಾಡದೆ - ಅಂದರೆ ಉಷಃ ಕಾಲದಲ್ಲಿ ಎದ್ದು ಶರೀರದ ಕಲ್ಮಶಗಳೆಲ್ಲಾ ನಾಶವಾಗುವಂತೆ ಸ್ನಾನ ಮಾಡದೆ - ಅಂದರೆ ಮನಸ್ಸಿನ ಕಲ್ಮಶಗಳೆಲ್ಲಾ ನಾಶವಾಗಿ ಮನಸ್ಸು ತಂಪಾಗಿ ತೃಪ್ತಿಯಾಗುವಂತೆ ಭಗವದ್ಗುಣ ಸಾಗರದಲ್ಲಿ ಅವಗಾಹಿಸದೆ ಎಂಬುದು ವಿಶೇಷಾರ್ಥ.

**ಪಳ್ಳಿಕ್ಕಿಡತ್ತಿಯೋ ಪಾವಾಯ್ ನೀನನ್ನಾಳಾಲ್** :-ನಾವೆಲ್ಲರೂ ನಿನ್ನ ಮನೆ ಬಾಗಿಲಿಗೆ ಬಂದು ಭಗವನ್ನಾಮ ಸಂಕೀರ್ತನೆ ಮಾಡುತ್ತಿರುವ ಈ ಶುಭ ದಿನದಲ್ಲಿ ಗುಣಭರಿತೆಯಾದ ನೀನು ನಿನ್ನ ಪಾಡಿಗೆ ಭಗವತ್ ಗುಣಚೇಷ್ಟಿತಾದಿಗಳನ್ನು ನೆನೆಸುತ್ತಾ ಮಲಗಿರಬಹುದೇ !

**ಕಳ್ಳಮ್ತವಿರ್‌ನ್ದು ಕಲಂದ್** - ಈ ಕಳ್ಳತನದ ಮನೋಭಾವವನ್ನು ಬಿಟ್ಟು- ಅಂದರೆ ಕೃಷ್ಣಪರಮಾತ್ಮನ ಗುಣಚೇಷ್ಟಿತಾದಿಗಳನ್ನೆಲ್ಲಾ ನೀನೊಬ್ಬಳೇ ಅನುಭವಿಸಿಕೊಂಡು ಮಲಗಿರುವ ಈ ಕಳ್ಳತನವನ್ನು ಬಿಟ್ಟು ನಮ್ಮೊಡನೆ ಬಂದು ಕಲೆತು ಭಗವನ್ನಾಮ ಸಂಕೀರ್ತನೆ ಮಾಡುವವಳಾಗು ಎಂಬುದು ವಿಶೇಷಾರ್ಥ.

**ಏಲೋರೆಂಪಾವಾಯ್** - ಆಗ ನಮ್ಮ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು.

ಈ ಪಾಶುರದಲ್ಲಿ ಭಕ್ತಿ ರೂಪಾಪನ್ನ ಜ್ಞಾನ ಪಡೆದವರು ಕೇವಲ ತಾವೊಬ್ಬರೇ ಭಗವದ್ಗುಣಾನುಭವವನ್ನು ಅನುಭವಿಸುವವರಾಗಿರದೆ, ಭಾಗವತರೊಂದಿಗೆ ಕಲೆತು ಭಗವದ್ಗುಣಸಾಗರದಲ್ಲಿ ಮುಳುಗಿ ಭಗವದನುಭವ ಪಡೆಯಬೇಕು ಎಂದು ತಿಳಿಸಿದೆ.

ವೆಳ್ಳಿ ಯೆಳುಂದು ವಿಯಾಳಮುರಜ್ಗಿತ್ತು-ಪೋದು ಅರಿ - ಎಂದು ಹೇಳಿರುವುದರಿಂದ ಒಂದು ದಿನ ಕಳೆದುಹೋಗಿದೆ. ನೆನ್ನೆಯ ದಿನ ಕಳೆದು ಇಂದಿನ ಹೊಸ ದಿನ ಪ್ರಾರಂಭವಾಗಿದೆ. ಅಂದಮೇಲೆ ನಮ್ಮ ಜೀವಿತಕಾಲದಲ್ಲಿ ಒಂದು ದಿನ ಕಳೆದು ಹೋಯಿತು. ಇಂದಿನಿಂದಲಾದರೂ ನಾವೆಲ್ಲರೂ ಭಗವನ್ನಾಮ ಸಂಕೀರ್ತನೆ ಮಾಡೋಣ ಬನ್ನಿರಿ. - 'ಪೋದುಅರಿ' ಎಂಬುದಕ್ಕೆ ಕಾಲದ ಹಿರಿಮೆಯನ್ನು ಅರಿತವಳಾಗು ಎಂಬ ಅರ್ಥವೂ ಸೂಚಿತವಾಗುತ್ತದೆ.

"ಕಾಲಕ್ಷೇಪೋನಕರ್ತವ್ಯೋ ಕ್ಷೀಣಮಾಯುಃ ಕ್ಷಣೇ ಕ್ಷಣೇ ।

ಯಮಸ್ಯ ಕರುಣಾನಾಸ್ತಿ ಕರ್ತವ್ಯಂ ಹರಿ ಕೀರ್ತನಂ ॥"

ಅಂದರೆ ಪ್ರತಿ ಕ್ಷಣದಲ್ಲೂ ಆಯುಸ್ಸು ಕ್ಷೀಣಿಸುತ್ತಾ ಇದೆ - ಆದ್ದರಿಂದ ಕಾಲವನ್ನು ವ್ಯರ್ಥಗೊಳಿಸದೇ ಹರಿ ಕೀರ್ತನೆ ಮಾಡಿರಿ ಎಂದು ಅರ್ಥ. ಈ ಉಪದೇಶವೂ ಈ ಪಾಶುರದಲ್ಲಿ ಅಡಗಿದೆ.

# ಪಾಶುರ - 14

ಈ ಪಾಶುರದಲ್ಲಿ ಎಲ್ಲರನ್ನೂ ತಾನೇ ಮೊದಲು ಬಂದು ಎಬ್ಬಿಸುವುದಾಗಿ ಹೇಳಿದ್ದರೂ, ಭಗವದನುಭವದಲ್ಲಿ ಅದನ್ನು ಮರೆತು ಮಲಗಿರುವ ಜ್ಞಾನ, ಭಕ್ತಿ ವೈರಾಗ್ಯಾದಿ ಗುಣಗಳನ್ನು ಪರಿಪೂರ್ಣವಾಗಿ ಹೊಂದಿರುವ ಪರಮ ಭಾಗವತೆಯನ್ನು ಎಬ್ಬಿಸುತ್ತಾರೆ. ಅವಳನ್ನು ನಂಗಾಯ್ ಅಂದರೆ ಗುಣಪೂರ್ತಿ ಉಳ್ಳವಳು, ನಾಣಾದಾಯ್ ಅಂದರೆ ಭಗವಂತನಿಗೆ ದಾಸಳಾಗಿರುವುದರಲ್ಲಿ ನಾಚಿಕೆ ಇಲ್ಲದವಳು ಮತ್ತು ನಾವುಡೈಯಾಯ್ ಅಂದರೆ ವಾಗ್ಚಾತುರ್ಯವುಳ್ಳವಳು - ಮಧುರವಾಗಿ ಮಾತಾಡುವವಳು ಎಂಬ ಮೂರು ಗುಣಗಳುಳ್ಳವಳನ್ನಾಗಿ ಸಂಬೋಧನೆ ಮಾಡಿ ಕರೆಯುತ್ತಾರೆ.

**ಉಙ್ಗಳ್‌ಪುಳೈಕ್ಕಡೈತೋಟ್ಟತ್ತು ವಾವಿಯುಳ್**
**ಶೆಙ್ಗಳುನೀರ್‌ವಾಯ್‌ನೆಹಿಳ್‌ನ್ದು ಆಮ್ಬಲ್‌ವಾಯ್‌ಕೂಮ್ಬಿನ ಕಾಣ್**
**ಶೆಙ್ಗಲ್‌ಪೊಡಿಕ್ಕೂರೈ ವೆಣ್‌ಪಲ್ ತವತ್ತವರ್**
**ತಙ್ಗಳ್ ತಿರುಕ್ಕೋಯಿಲ್ ಶೆಙ್ಗುಡುವಾನ್‌ಪೋತನ್ದಾರ್**
**ಎಙ್ಗಳೈ ಮುನ್ನ ಮೆಳುಪ್ಪುವಾನ್ ವಾಯ್‌ಪೇಶುಮ್**
**ನಙ್ಗಾಯೆಳುಂದಿರಾಯ್ ನಾಣಾದಾಯ್ ನಾವುಡೈಯಾಯ್**
**ಶಙ್ಗೊಡು ಶಕ್ಕರಮೇನ್ದುನ್ದಡಕ್ಕೈಯನ್**
**ಪಙ್ಗಯ ಕಣ್ಣಾನೈಪ್ಪಾಡೇಲೋರೆಮ್ಬಾವಾಯ್ .**

''ನಿಮ್ಮ ಮನೆಯ ಹಿತ್ತಲ ತೋಟದ ಕೊಳದಲ್ಲಿರುವ ಶೆಂಗಳ್ ನೀರ್ ಪುಷ್ಪಗಳು ಅರಳಿವೆ. ಆಂಬಲ್ ಪುಷ್ಪಗಳ ಬಾಯಿ ಮುಚ್ಚಿಹೋಗಿವೆ. ಕಾವಿ ಬಣ್ಣದ ಪುಡಿಯಿಂದ ನೆನೆಸಲ್ಪಟ್ಟ ಕಾಷಾಯವಸ್ತ್ರವನ್ನು ಧರಿಸಿರುವ, ಶುದ್ಧವಾದ

ದಂತಗಳನ್ನು ಪಡೆದಿರುವ ತಪಸ್ವಿಗಳಾದ ಸನ್ಯಾಸಿಗಳು ತಮ್ಮ ತಮ್ಮ ಆಲಯಗಳ ಬಾಗಿಲ ಬೀಗಗಳನ್ನು ತೆಗೆಯಲು ಹೋಗುತ್ತಿದ್ದಾರೆ. ನಮ್ಮನ್ನು ಮೊಟ್ಟ ಮೊದಲೇ ಬಂದು ಎಬ್ಬಿಸುವುದಾಗಿ ವಾಗ್ದಾನ ಮಾಡಿದ್ದವಳೇ, ಪರಿಪೂರ್ಣ ಸಂಪತ್ತನ್ನು ಪಡೆದಿರುವವಳೇ, ಏಳುವವಳಾಗು. ನಾಚಿಕೆ ಇಲ್ಲದವಳೇ, ವಾಕ್ಚಾತುರ್ಯವುಳ್ಳವಳೇ, ಶಂಖಚಕ್ರವನ್ನು ಧರಿಸಿರುವವನೂ, ದೀರ್ಘ ಬಾಹುಗಳುಳ್ಳವನೂ, ಪುಂಡರೀಕಾಕ್ಷನೂ ಆದ ಪರಮಾತ್ಮನನ್ನು ಸ್ತುತಿಸಿ ಹಾಡೋಣ. (ನೀನೂ ಬರುವವಳಾಗು) - ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ಉಙ್ಗಳ್‌ಪುಳ್ಳೈಕ್ಕಡೈತೋಟ್ಟತ್ತು ವಾವಿಯುಳ್ ಶೆಙ್ಗಳುನೀರ್‌ವಾಯ್‌ನೆಹಿಳ್‌ನ್ದು ಅಮ್ಬಲ್‌ವಾಯ್‌ಕೂಮ್ಬಿನ ಕಾಣ್:-** ನಿಮ್ಮ ಹಿತ್ತಲ ತೋಟದ ಬಾವಿಯಲ್ಲಿ ಕಮಲಪುಷ್ಪವು ಅರಳಿದೆ ಮತ್ತು ಕನ್ನೈದಿಲೆ ಪುಷ್ಪವು ಮುಚ್ಚಿಕೊಂಡಿದೆ- ಅಂದರೇನು ಚಂದ್ರನು ಅಸ್ತಮಿಸಿ ಸೂರ್ಯೋದಯವಾಗಿ ಬೆಳಗಾಗಿದೆ ಎಂದು ತಿಳಿದುಬರುತ್ತಿದೆ. ಸೂರ್ಯೋದಯವಾದರೆ ಕಮಲ ಪುಷ್ಪವು ಅರಳುತ್ತದೆ- ಅಂದರೆ ನಿಮ್ಮ ಹೃದಯದಲ್ಲಿ ಜ್ಞಾನೋದಯವಾಗಿ ಅಜ್ಞಾನವು ನಾಶವಾಗುತ್ತಿದೆ ಎಂಬುದು ವಿಶೇಷಾರ್ಥ.

**ಶೆಂಗಲ್‌ಪೊಡಿಕ್ಕೂರೈ ವೆಣ್‌ಪಲ್‌ತ್ತವತ್ತವರ್ ತಙ್ಗಳ್ ತಿರುಕ್ಕೋಯಿಲ್ ಶೆಙ್ಗುವಾನ್‌ಪೋತನ್ದಾರ್ :** ಕಾವಿ ಬಣ್ಣದ ಕಾಷಾಯಧಾರಿಗಳಾಗಿ ಬಿಳಿಯ ಹಲ್ಲುಗಳನ್ನು ಪಡೆದಿರುವ ಸನ್ಯಾಸಿಗಳು ತಮ್ಮ ತಮ್ಮ ದೇವಸ್ಥಾನಗಳ ಬೀಗಗಳನ್ನು ತೆಗೆಯಲು ಹೋಗುತ್ತಿದ್ದಾರೆ. ಇದೂ ಬೆಳಗಾಗಿರುವುದಕ್ಕೆ ಮತ್ತೊಂದು ಗುರುತು. ಭಾಗವತರುಗಳು ಭಗವದಾರಾಧನೆ ಮಾಡಲು ಹೊರಟಿದ್ದಾರೆ ಎಂದು ಅರ್ಥ.

**ಎಙ್ಗಳೈ ಮುನ್ನಂ ಎಳುಪ್ಪುವಾನ್ ವಾಯ್‌ಪೇಶುಮ್ ನಙ್ಗಾಯ್ ಎಳುಂದಿರಾಯ್** - ಪರಿಪೂರ್ಣವಾದ ಗುಣವುಳ್ಳವಳೇ ನೀನೇ ಮೊದಲು ಬಂದು ನಮ್ಮನ್ನೆಲ್ಲಾ ಎಬ್ಬಿಸುವುದಾಗಿ ಮಾತು ಕೊಟ್ಟಿದ್ದೆಯಲ್ಲಾ, ಏಳುವವಳಾಗು.

**ನಾಣಾದಾಯ್** - ನಾಚಿಕೆ ಇಲ್ಲದವಳೇ ನೀನು ಹೇಳಿದ ಮಾತಿಗೆ ತಪ್ಪಿ ಇನ್ನೂ, ಮಲಗಿರಲು ನಿನಗೆ ನಾಚಿಕೆಯಿಲ್ಲವೇ ?

**ನಾವುಡೈಯಾಯ್** - ನೀನು ವಾಕ್ ಚಾತುರ್ಯವುಳ್ಳವಳಾಗಿದ್ದೀಯೆ, ಚೆನ್ನಾಗಿ ಮಾತಾಡಬಲ್ಲವಳಾಗಿದ್ದೀಯೆ -

ಅಂದರೆ ನೀನು ಭಗವದನುಭವದಲ್ಲಿ ಮೈಮರೆತು ಮಲಗಿದವಳಾಗಿ ನಮ್ಮನ್ನು ಮೊದಲೇ ಬಂದು ಎಬ್ಬಿಸುವ ನಿನ್ನ ಮಾತನ್ನು ನಡೆಸಲಿಲ್ಲ. ಹೀಗೆ ಭಗವಂತನಿಗೆ ದಾಸಳಾಗಿ ಇರುವುದರಲ್ಲಿ ನಿನಗೆ ನಾಚಿಕೆ ಇಲ್ಲವಾಗಿದೆ ಮತ್ತು ನೀನು ಮೃದುಭಾಷಿಣಿಯಾಗಿಯೂ ಇದ್ದೀಯೆ, ಎಂದು ಅಭಿಪ್ರಾಯ.

**ಶಙ್ಗೊಡು ಶಕ್ಕರಂ ಏನ್ದುಂತಡಕ್ಕೈಯ್ಯನ್** - ಶಂಕ ಚಕ್ರಗಳನ್ನು ಧರಿಸಿಕೊಂಡಿರುವ ಕೈಗಳನ್ನು ಪಡೆದ.

**ಪಙ್ಗಯಕಣ್ಣಾನ್ನೈಪಾಡ** - ವಿಶಾಲ ನೇತ್ರನಾದ ಶ್ರೀ ಕೃಷ್ಣನನ್ನು ಸಂಕೀರ್ತನೆ ಮಾಡಲು ಎದ್ದು ಬಾ.

**ಎಲ್ಲೋರೆಂಪಾವಾಯ್** - ಪರಿಪೂರ್ಣಗುಣಭರಿತಳೂ, ಮೃದುಭಾಷಿಣಿಯೂ ಆದ ನೀನು ಬಂದು ನಮ್ಮೊಡನೆ ಸೇರಿದರೆ ನಮ್ಮ ವ್ರತವು ಶುಭವಾಗಿಯೂ, ಸಾಂಗವಾಗಿಯೂ ನೆರವೇರುವುದು.

ಶ್ರೀ ಕೃಷ್ಣಪರಮಾತ್ಮನು ಹುಟ್ಟಿದಾಗಲೇ ಶಂಖ ಚಕ್ರಗಳನ್ನು ಧರಿಸಿಕೊಂಡೇ ಹುಟ್ಟಿದನು. ಶಂಖಚಕ್ರಾದಿಗಳನ್ನು ಧರಿಸಿ ಭಕ್ತರಿಗೆ ತನ್ನ ಸೌಂದರ್ಯವನ್ನು ತೋರಿಸಿ ಅವರ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಳ್ಳುತ್ತಾನೆ. ವಿರೋಧಿಗಳಾದ ಪಾಪಿಷ್ಠರಿಗೆ ಅದೇ ಶಂಖಚಕ್ರಗಳನ್ನು ತೋರಿಸಿ ಭಯ ಹುಟ್ಟಿಸುತ್ತಾನೆ. ಆದ್ದರಿಂದ ಶಂಕಚಕ್ರಾದಿಗಳು ಭಕ್ತರಿಗೆ ಪರಮಾತ್ಮನ ಆಭರಣವಾಗಿ ಕಾಣಿಸುತ್ತವೆ ಮತ್ತು ವಿರೋಧಿಗಳಿಗೆ ಪರಮಾತ್ಮನ ಆಯುಧಗಳಾಗಿ ಕಾಣಿಸಿ

ಭಯಜನಕವಾದುವಾಗಿವೆ. ಪರಮಾತ್ಮನ ಸುಂದರವಾದ ಕಣ್ಣುಗಳು ಭಕ್ತರಿಗೆ ಅಭಯ ಪ್ರದಾನಮಾಡುವ ಹಾಗೆ ತೋರುತ್ತವೆ ಮತ್ತು ಶತ್ರುಗಳಿಗೆ ಅವು ಕ್ರೂರವಾಗಿ ಕಾಣುತ್ತಾ ಭಯ ಹುಟ್ಟಿಸುವಂತಹವುಗಳಾಗಿವೆ. ಹೀಗೆ ಭಕ್ತರ ರಕ್ಷಣೆಗಾಗಿಯೂ ದುಷ್ಟರ ಶಿಕ್ಷೆಗಾಗಿಯೂ ಅವತಾರವೆತ್ತಿದ ಶ್ರೀಕೃಷ್ಣಪರಮಾತ್ಮನನ್ನು ಹಾಡೋಣ ಬನ್ನಿರಿ ಎಂದು ಈ ಪಾಶುರದಲ್ಲಿ ಕರೆಯುತ್ತಾಳೆ.

''ವಿಸೃಜ್ಯಲಜ್ಜಾಂಯೋಗೀತೇ ಮನ್ನಾಮಾನಿ ನಿರಂತರಂ । ಕುಲಕೋಟಿ ಸಮಾಯುಕ್ತೋಲಭತೇ ಮಾಮಕಂ ಪದಂ॥'

ಅಂದರೆ ಲಜ್ಜೆಬಿಟ್ಟು ನನ್ನ ನಾಮ ಸಂಕೀರ್ತನೆ ಮಾಡುವವರು ನನ್ನನ್ನು ಹೊಂದುವರು ಎಂದು ಹೇಳಿದೆ. ಅದನ್ನೇ ಈ ಪಾಶುರದಲ್ಲಿನಾಣಾದಾಯ್ ಎಂಬ ಪದದ ಮೂಲಕ ತಿಳಿಸಿದ್ದಾಳೆ. ಭಗವದ್ಗುಣಾನುಭವದಲ್ಲಿ ಮೈಮರೆತು ಮಲಗಿದ್ದರೂ ನಾಚಿಕೆಯಿಲ್ಲದವಳಾಗಿದ್ದಾಳೆ. ಅದೇ ರೀತಿ ಭಗವನ್ನಾಮ ಸಂಕೀರ್ತನೆ ಮಾಡಿ ಭಗವದ್ಗುಣಾನುಭವದಲ್ಲಿ ಮುಳುಗಿರುವವರೂ ಲಜ್ಜೆಯನ್ನು ಬಿಟ್ಟು ನಾಮ ಸಂಕೀರ್ತನೆ ಮಾಡಬೇಕು. ಇತರರು ಏನು ಹೇಳುವರೋ ಎಂಬ ಲಜ್ಜೆಯಿಂದ ಕೂಡಿದವರಾಗಿ ನಾಮಸಂಕೀರ್ತನೆ ಮಾಡದೆ ಬಾಯಿಮುಚ್ಚಿಕೊಂಡಿರಬಾರದು. ಲಜ್ಜೆಬಿಟ್ಟು ಸಂಕೀರ್ತನೆ ಮಾಡಿ ಭಗವದನುಭವ ಪಡೆಯಬೇಕೆಂಬ ಅಭಿಪ್ರಾಯವು ಈ ಪಾಶುರದಲ್ಲಿ ಸೂಚಿತವಾಗಿದೆ.

# ಪಾಶುರ - 15

ಈ ಪಾಶುರವು ಬಹಳ ಮುಖ್ಯವಾದ ಪಾಶುರವಾಗಿದೆ. ಇದರಲ್ಲಿ ಶ್ರೀವೈಷ್ಣವರ ಲಕ್ಷಣವು ತಿಳಿಸಲ್ಪಟ್ಟಿದೆ. ಪರಮ ಭಾಗವತೆಯಾದ ಒಬ್ಬ ಭಕ್ತಶಿರೋಮಣಿಯನ್ನು ಎಬ್ಬಿಸಿ ತಮ್ಮೊಡನೆ ಕಲೆತುಕೊಳ್ಳವಂತೆ ಈ ಪಾಶುರದಲ್ಲಿ ಕರೆಯುತ್ತಾರೆ. ಎಲ್ಲರೂ ಬರಬೇಕು, ತಮ್ಮೊಡನೆ ಕಲೆತುಕೊಂಡು ಭಗವದನುಭವ ಪಡೆಯಬೇಕೆಂಬ ಆಸೆಯಿಂದ ಎಲ್ಲರಿಗೂ ಕಾಯುತ್ತಾ ಮಲಗಿರುವ ಗೋಪಿಕೆ ಇವಳು. ಭಾಗವತರಲ್ಲಿ ಅತಿ ವ್ಯಾಮೋಹ ಹೊಂದಿ ಭಾಗವತ ಗೋಷ್ಠಿಯಲ್ಲಿ ಕಲೆಯಬೇಕೆಂಬ ಆಸೆ ಉಳ್ಳವಳೂ, ಭಾಗವತರು ತನ್ನನ್ನು ನಿಂದಿಸಿದರೂ ಅದನ್ನು ಶಾಂತವಾಗಿ ಸಹಿಸಿಕೊಳ್ಳುವಂತಹವಳೂ ಆಗಿದ್ದಾಳೆ.

**ಎಲ್ಲೇ ! ಇಳಙ್ಕಿಳಿಯೇ ! ಇನ್ನಮುರಂಗುದಿಯೋ**
**ಶಿಲ್ಲೆನ್ಱಳೈಯೇನ್ಮಿನ್ ನಂಗೈಮೀರ್ ಪೋದರುಹಿನ್ಱೇನ್**
**ವಲ್ಲೈಯುನ್ ಕಟ್ಟುರೈಕಳ್ ಪಣ್ಡೇ ಉನ್ವಾಯರಿದುಮ್**
**ವಲ್ಲೀರ್‌ಕಳ್ ನೀಙ್ಗಳೇ ನಾನೇತಾನಾಯಿಡುಕ**
**ಒಲ್ಲೈ ನೀಪೋದಾಯ್ ! ಉನಕ್ಕೆನ್ನವೇರುಡೈಯೈ**
**ಎಲ್ಲಾರುಮ್ ಪೋನ್ದಾರೋ ? ಪೋನ್ದಾರ್ ಪೋನ್ದೆಣ್ಣಿಕ್ಕೊ.**
**ವಲ್ಲಾನೈ ಕೊನ್ಱಾನೈ ಮಾತ್ತಾರೈ ಮಾತ್ತಳಿಕ್ಕ**
**ವಲ್ಲಾನೈ ಮಾಯನೈ ಪ್ಪಾಡೇ ಲೋರೆಮ್ಬಾವಾಯ್.**

ಈ ಪಾಶುರವು ಹೊರಗೆ ಬಂದು ನಿಂತಿರುವ ಗೋಪಿಯರಿಗೂ, ಒಳಗೆ ಇರುವ ಗೋಪಿಕೆಗೂ ನಡೆಯುವ ಸಂಭಾಷಣೆಯ ರೂಪದಲ್ಲಿದೆ.

(ಹೊರಗಿನವರು) - ಎಲ್ಲೆ ಗಿಣಿಯಂತೆ ಮಾತಾಡುವವಳೇ ! ಇನ್ನೂ

ಮಲಗಿರುವೆಯಾ ? (ಒಳಗಿನವಳು) - ನನ್ನನ್ನು ಶಿಲ್ ಶಿಲ್ ಎಂದು ಕೋಪದಿಂದ ಕರೆಯಬೇಡಿರಿ. ಇದೋ ನಾನಾಗಿಯೇ ಹೊರಟು ಬರುತ್ತೇನೆ. (ಹೊರಗಿನವರು) - ಸಮರ್ಥೆಯಾದ ನಿನ್ನ ಚಮತ್ಕಾರದ ಮಾತುಗಳನ್ನೂ, ನಿನ್ನ ವಾಕ್ಚಾತುರ್ಯವನ್ನೂ ನಾವು ಮೊದಲೇ ತಿಳಿದಿದ್ದೇವೆ. (ಒಳಗಿನವಳು )- ನೀವು ಬಹಳ ಸಾಮರ್ಥ್ಯವುಳ್ಳವರು. ನನ್ನದೇ ತಪ್ಪು ಎಂದು ಇಟ್ಟುಕೊಳ್ಳಿರಿ. (ಹೊರಗಿನವರು) - ನೀನು ಬೇಗ ಹೊರಟು ಬಾ. ನಿನಗೇಕೆ ಬೇರೆಯಾದ ಭಗವದನುಭವ ! (ಒಳಗಿನವಳು) - ಎಲ್ಲರೂ ಹೊರಟಾಯಿತೇ ? (ಹೊರಗಿನವರು) - ಹೊರಟಿದ್ದಾರೆ. ನೀನು ಹೊರಟು ಬಂದು ಎಣಿಸಿಕೊ.

ಬಲಿಷ್ಠವಾದ ಕುವಲಯಾ ಪೀಡವೆಂಬ ಆನೆಯನ್ನು ಕೊಂದವನೂ, ಶತ್ರುಗಳ ಸಾಮರ್ಥ್ಯವನ್ನು ನಾಶಪಡಿಸಬಲ್ಲವನೂ, ಮಾಯಾ ಚೇಷ್ಟಿತನೂ ಆದ ಶ್ರೀಕೃಷ್ಣ ಪರಮಾತ್ಮನನ್ನು ಹಾಡೋಣ ಬಾ. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು - ಎಂಬುದು ಈ ಪಾಶುರದ ವಾಕ್ಯಾರ್ಥ.

ಈ ಪಾಶುರವು ಸಂವಾದ ರೂಪದಲ್ಲಿದೆ.

**ಹೊರಗಿರುವ ಗೋಪಿಗಳು -**

**ಎಲ್ಲೇ ಇಳಙ್ಗಿಳಿಯೇ! ಇನ್ನಂ ಉರಙ್ಗುದಿಯೋ ! –** ಗಿಣಿ ಮರಿಯಂತೆ ಸುಂದರವಾಗಿರುವವಳೇ, ಇಂಪಾಗಿ ಹಾಡುವವಳೇ! ಇನ್ನೂ ಮಲಗಿರುವೆಯಾ? ಇಳಂ ಕಿಳಿಯೇ ಎಂದು ಇವಳನ್ನು ಗೌರವವಾಗಿ ಸಂಬೋಧನೆ ಮಾಡಿ ಕರೆಯುತ್ತಾರೆ. ನಾವು ಇಷ್ಟು ಜನರನ್ನು ಎಬ್ಬಿಸಿ ಕರೆದುಕೊಂಡು ಬಂದಮೇಲೂ ಇನ್ನೂ ನೀನು ಮಲಗಿರುವೆಯಾ ಎನ್ನುತ್ತಾರೆ.

**ಒಳಗೆ ಇರುವ ಗೋಪಿಕೆ - ಶಿಲ್ಲೆನ್ರಳೈಯೇನ್ಮಿನ್ ನಙ್ಗೈಮೀರ್ ಪೋದರುಕಿನ್ರೇನ್ -** ಶಿಲ್ ಶಿಲ್ ಎಂದು ನನ್ನನ್ನು ಕರೆಯಬೇಡಿರಿ. ಪೂರ್ಣರಾದ ಹೆಣ್ಣು ಮಕ್ಕಳಿರಾ ಇದೋ ನಾನೇ ಹೊರಟುಬರುತ್ತೇನೆ - ಎನ್ನುತ್ತಾಳೆ.

**ಹೊರಗೆ ಇರುವವರು - ವಲ್ಲೇ ಉನ್‌ಕಟ್ಟುರೈಕಳ್ ಪಣ್ಡೇ ಉನ್‌ವಾಯರಿದುಂ** - ನಿನ್ನ ವಾಕ್ ಸಾಮರ್ಥ್ಯವನ್ನೂ ನಿನ್ನ ಚಮತ್ಕಾರವಾದ ಮಾತುಗಳನ್ನೂ ಬಹುದಿನಗಳಿಂದಲೇ ನಾವು ತಿಳಿದಿದ್ದೇವೆ.

**ಒಳಗೆ ಇರುವವಳು - ವಲ್ಲೀರ್‌ಕಳ್ ನೀಙ್ಗಳೇ ನಾನೇ ತಾನಾಯಿಡುಕ** - ನೀವೇ ಸಾಮರ್ಥ್ಯ ಉಳ್ಳವರು. ನೀವು ಹೇಳಿದಹಾಗೆ ದೋಷವುಳ್ಳವಳು ನಾನೇ ಆಗಿರಲಿ ಎನ್ನುತ್ತಾಳೆ. ತನ್ನಲ್ಲಿ ಅವರು ಆರೋಪಿಸಿದ ದೋಷವನ್ನು ಅದು ತನ್ನಲ್ಲಿ ಇಲ್ಲದಿದ್ದರೂ ಪ್ರತಿಭಟಿಸದೆ ಸುಮ್ಮನಿರುತ್ತಾಳೆ.

**ಹೊರಗೆ ಇರುವವರು - ಒಲ್ಲೈನೀಪೋದಾಯ್ ಉನಕ್ಕೆನ್ನವೇರುಡಯ್ಯೆ** - ಬೇಗನೇ ನೀನು ಎದ್ದು ಬಾ. ನಾವೆಲ್ಲರೂ ಭಗವನ್ನಾಮ ಸಂಕೀರ್ತನೆ ಮಾಡುತ್ತಿರಲಾಗಿ ನೀನೊಬ್ಬಳೇ ಬೇರೆಯಾಗಿ ಭಗವದನುಭವದಲ್ಲಿ ನಿರತಳಾಗಿ ಒಳಗೆ ಇರುವುದು ಸರಿಯೇ ? ಅಂದರೆ ನೀನೂ ನಮ್ಮೊಂದಿಗೆ ಬಂದು ಸೇರಿಕೊಂಡು ಹಾಡುವವಳಾಗು ಎಂದು ಕರೆಯುತ್ತಾರೆಂದು ಅಭಿಪ್ರಾಯ.

**ಒಳಗೆ ಇರುವವಳು - ಎಲ್ಲಾರುಮ್‌ಪೋನ್ದಾರೋ ?** - ಎಲ್ಲರೂ ಭಗವನ್ನಾಮ ಸಂಕೀರ್ತನೆ ಮಾಡಲು ಬಂದಿದ್ದಾರೆಯೇ ? - ಎಂದು ಕೇಳುತ್ತಾಳೆ. ಏಕೆಂದರೆ ಭಾಗವತರೆಲ್ಲರೊಂದಿಗೆ ಕಲೆತು ಭಗವದನುಭವ ಪಡೆಯಬೇಕೆಂದು ಅವಳಿಗೆ ಆಸೆ.

**ಹೊರಗೆ ಇರುವ ಗೋಪಿಗಳು - ಪೋನ್ದಾರ್ ಪೋನ್ದೆಣ್ಣಿಕ್ಕೊಳ್** : ಎಲ್ಲರೂ ಬಂದಿದ್ದಾರೆ. ನೀನೇ ಬಂದು ಎಣಿಸಿನೋಡಿಕೋ ಎನ್ನುತ್ತಾರೆ.

**ವಲ್ಲಾನ್ಯೆ ಕೊನ್ರಾನ್ಯೆ** : ಬಲಿಷ್ಠವಾದ ಕುವಲಯಾಪೀಡವೆಂಬ ಆನೆಯನ್ನು ಸಂಹರಿಸಿದವನನ್ನು -

**ಮಾತ್ತಾರ್ರೈ ಮಾತ್ತಳಿಕ್ಕವಲ್ಲಾನ್ಯೆ** - ವಿರೋಧಿಗಳ ಮನಸ್ಸನ್ನು ಮಾರ್ಪಡಿಸಿ ತನ್ನವರನ್ನಾಗಿಸಿಕೊಳ್ಳುವವನೂ, ಅದು ಆಗದಿದ್ದಾಗ ಅವರ ಬಲವನ್ನು ನಾಶಪಡಿಸುವವನೂ ಆಗಿರುವವನನ್ನು -

ಇಲ್ಲಿ ಪರಮಾತ್ಮನ ಅವತಾರಕ್ಕೆ ಪ್ರಯೋಜನವನ್ನು ತಿಳಿಸಿದ್ದಾಳೆ. ''ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ'' - ಅಂದರೆ ಸಾಧುಗಳ ರಕ್ಷಣೆ, ದುಷ್ಟರ ವಿನಾಶ ಮತ್ತು ಧರ್ಮ ಸಂಸ್ಥಾಪನೆ ಈ ಮೂರು ಕೆಲಸಗಳನ್ನೂ ಮಾಡುವುದಕ್ಕಾಗಿ ನಾನು ಯುಗ ಯುಗಗಳಲ್ಲಿ ಅವತಾರ ಮಾಡುತ್ತೇನೆ, ಎಂದು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ತಿಳಿಸಿದ್ದಾನೆ. ಇದನ್ನೇ ಇಲ್ಲಿ ಗೋದಾದೇವಿಯೂ ತಿಳಿಸಿದ್ದಾಳೆ. **ವಲ್ಲಾನೈಕೊನ್ರಾನೈ - ಮಾತ್ತಾರೈ ಮಾತ್ತಳಿಕ್ಕವಲ್ಲಾನೈ** - ಎಂದು ಶ್ರೀಕೃಷ್ಣ ಪರಮಾತ್ಮನು ಕುವಲಯಾಪೀಡವೆಂಬ ಆನೆಯನ್ನು ಸಂಹರಿಸಿದುದು ಮಾತ್ರವಲ್ಲದೆ ಚಿಕ್ಕ ವಯಸ್ಸಿನಿಂದಲೇ ಪೂತನಿ, ಶಕಟಾಸುರ, ಧೇನುಕ ಮುಂತಾಗಿ ಅನೇಕ ರಾಕ್ಷಸರನ್ನೆಲ್ಲಾ ಸಂಹಾರಮಾಡಿ ದುಷ್ಟರ ವಿನಾಶ ಮಾಡಿದ್ದಾನೆ, ಎಂಬುದನ್ನು ತಿಳಿಸಿದ್ದಾಳೆ.

**ಮಾಯನ್ನೈ** - ಮಾಯಾ ಚೇಷ್ಟಿತನಾದವನನ್ನು - ಅಂದರೆ ಗೋಪಿಗಳು, ಮಾಲಾಕಾರ, ಅಕ್ರೂರ ಮುಂತಾಗಿ ಅನೇಕ ಸಾಧುಗಳಿಗೆಲ್ಲಾ ಬೆಣ್ಣೆ ಕದಿಯುವುದು, ಒರಳಿಗೆ ಕಟ್ಟಿಹಾಕಿಸಿಕೊಳ್ಳುವುದು, ವಿಶ್ವರೂಪ ತೋರಿಸುವುದು ಮುಂತಾದ ತನ್ನ ಆಶ್ಚರ್ಯಕರ ಗುಣ ಚೇಷ್ಟಿತಾದಿಗಳನ್ನೆಲ್ಲಾ ತೋರಿಸಿ, ಅವರಿಗೆಲ್ಲಾ ಭಗವದನುಭವ ಕೊಟ್ಟು ರಕ್ಷಿಸಿದ್ದಾನೆ; 'ಕೃಷ್ಣಂ ಧರ್ಮಂ ಸನಾತನಂ' ಎಂದು ಹೇಳಿರುವಂತೆ ಪರಮಾತ್ಮನಾದ ತಾನೇ ಸಿದ್ಧ ಧರ್ಮನೆಂಬುದನ್ನು ಸ್ಥಾಪಿಸಿ ಧರ್ಮ ಸಂಸ್ಥಾಪನೆ ಮಾಡಿದ್ದಾನೆ; ಚೇತನರಿಗೆ ತನ್ನಲ್ಲಿ ಭಕ್ತಿ ಉಂಟುಮಾಡುವವನೂ, ಉಂಟಾದ ಭಕ್ತಿಯನ್ನು ಬೆಳೆಸುವವನೂ ಮತ್ತು ಅದಕ್ಕೆ ಅಡ್ಡಿಯಾಗಿ ಬರುವ ಪಾಪಗಳನ್ನೆಲ್ಲಾ ನಿರಸನಮಾಡುವವನೂ ಅವನೇ ಮತ್ತು ಅದರಿಂದ ಲಭಿಸುವ ಫಲವೂ ಅವನೇ ಎಂಬ ಅವನ ಅವತಾರದ ಮುಖ್ಯ ಪ್ರಯೋಜನವನ್ನೆಲ್ಲಾ ಕೃಷ್ಣಾವತಾರದಲ್ಲಿ ತನ್ನ ಮಾಯಾ ಚೇಷ್ಟಿತಾದಿಗಳಿಂದ

ತೋರಿಸಿದ್ದಾನೆ ಎಂಬ ಈ ಅರ್ಥಗಳೆಲ್ಲಾ ಈ ಪಾಶುರದಲ್ಲಿ 'ಮಾಯನ್ನೈ' ಎಂಬ ಪದದಲ್ಲಿ ಸೂಚಿತವಾಗಿದೆ ಎಂದು ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.

**ಪಾಡೇಲೋರೆಂಪಾವಾಯ್** : ಇಂತಹ ಕಲ್ಯಾಣ ಗುಣಭರಿತನಾದ ಪರಮಾತ್ಮನನ್ನು ಭಾಗವತೋತ್ತಮೆಯಾದ ನಿನ್ನೊಂದಿಗೆ ನಾವೆಲ್ಲರೂ ಸೇರಿ ಸಂಕೀರ್ತನೆ ಮಾಡಿದರೆ ನಮ್ಮ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು.

ಈ ಪಾಶುರವು ಸಂಭಾಷಣೆಯ ರೂಪದಲ್ಲಿದೆ. ಹೀಗೆ ಮಾಡು ಎಂದು ಉಪದೇಶದ ರೂಪದಲ್ಲಿ ತಿಳಿಸುವುದಕ್ಕಿಂತ ಅನುಷ್ಠಾವದ ಮೂಲಕ ತೋರಿಸುವುದು ಒಳ್ಳೆಯದು. ಸಂವಾದದಲ್ಲಿ ಹೇಳಿದರೆ ಸುಲಭವಾಗಿ, ಚೆನ್ನಾಗಿ ಮನಸ್ಸಿಗೆ ತಿಳಿಯುತ್ತದೆ. ಭಗವದ್ಗೀತೆ, ಶ್ರೀರಾಮಾಯಣ, ಶ್ರೀವಿಷ್ಣುಸಹಸ್ರನಾಮ ಎಲ್ಲವೂ ಸಂವಾದ ರೂಪದಲ್ಲಿ ಪ್ರಾರಂಭಿಸಲ್ಪಟ್ಟಿವೆ.

ಈ ಪಾಶುರದಲ್ಲಿ ''ನಾನೇತಾನಾಯಿಡುಕ'' ಎಂಬ ವಾಕ್ಯದ ಮೂಲಕ ಶ್ರೀ ವೈಷ್ಣವರ ಒಂದು ಮುಖ್ಯವಾದ ಲಕ್ಷಣವು ತಿಳಿಸಲ್ಪಟ್ಟಿದೆ. ಇತರರು ತಮ್ಮ ಮೇಲೆ ಇಲ್ಲದ ದೋಷಾರೋಷಣೆಗಳನ್ನು ಆರೋಪಿಸಿದರೂ, ಅದನ್ನು ಸಹಿಸಿಕೊಂಡು ಕೋಪಮಾಡಿಕೊಳ್ಳದೆ ಇರಬೇಕು. ಅಷ್ಟು ಮಾತ್ರವಲ್ಲದೆ ಅವರು ತಮ್ಮ ಮೇಲೆ ದೋಷಾರೋಪಣೆ ಮಾಡಿ ಕೃಪೆ ತೋರಿಸಿದ್ದಾರೆಂದು ಅವರಿಗೆ ಧನ್ಯವಾದ ಹೇಳಬೇಕು ಎಂಬ ಉತ್ತಮವಾದ ಗುಣವು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ. ''ಅದ್ವೇಷ್ಟಾಸರ್ವ ಭೂತಾನಾಂ ಮೈತ್ರಃ ಕರುಣ ಏವಚ'' ಅಂದರೆ ಸರ್ವರಲ್ಲೂ ದ್ವೇಷಭಾವವಿರಕೂಡದು, ಅಷ್ಟು ಮಾತ್ರವಲ್ಲದೆ ಅವರಲ್ಲಿ ಮೈತ್ರವೂ ಸ್ನೇಹವೂ ಕರುಣೆಯೂ ಇರಬೇಕು ಎಂದು ಶ್ರೀ ಕೃಷ್ಣಪರಮಾತ್ಮನು ಗೀತೆಯಲ್ಲಿ ಉಪದೇಶಿಸಿರುವುದನ್ನೇ ಇಲ್ಲಿ ಗೋದಾದೇವಿಯು ಅನುಷ್ಠಾನದಲ್ಲಿ ತಿಳಿಸಿದ್ದಾಳೆ.

''ನಧರ್ಮನಿಷ್ಠೋಽಸ್ಮಿ ನಚಾತ್ಮವೇದಿ ನಭಕ್ತಿಮಾನ್'' ಅಂದರೆ ನಾನು ಧರ್ಮನಿಷ್ಠನಲ್ಲ, ಜ್ಞಾನನಿಷ್ಠನಲ್ಲ, ಭಕ್ತಿನಿಷ್ಠನೂ ಆಗಿಲ್ಲ - ಎಂದು ಶ್ರೀ

ಯಾಮುನಾಚಾರ್ಯರು ಭಗವಂತನಲ್ಲಿ ತಮ್ಮ ತಪ್ಪುಗಳನ್ನೆಲ್ಲಾ ನಿವೇದಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಅದನ್ನೇ ಇಲ್ಲಿ ಗೋದಾದೇವಿಯು ಭಾಗವತರಲ್ಲಿ ನಿವೇದಿಸಿಕೊಂಡಿದ್ದಾಳೆ.

ಶ್ರೀವಚನ ಭೂಷಣದಲ್ಲಿ ''ಕುತ್ತಂಶ್ಯೆದವರ್‌ಹಳ್‌ಪಕ್ಕಲ್ ಪೊರ್‍ಯೆಯುಂ, ಕೃಪೆಯುಂ, ಶಿರಿಪ್ಪುಂ, ಉಹಪ್ಪುಂ, ಉಪಕಾರ ಸ್ಮೃತಿಯುಂ, ನಡಕ್ಕವೇಣುಂ'' - ಎಂದು ಹೇಳಿದೆ. ಅಂದರೆ ತಮ್ಮ ಮೇಲೆ ಯಾರಾದರೂ ದೋಷಾರೋಪಣೆ ಮಾಡಿದರೂ ಅದನ್ನು ಸಹಿಸಿಕೊಳ್ಳಬೇಕು; ಅನಂತರ ಅವರು ಈ ರೀತಿ ಇಲ್ಲದ್ದನ್ನು ಹೇಳಿ ಅವರ ಗುಣವನ್ನು ಕೆಡಿಸಿಕೊಂಡು ಪಾಪ ಹೊಂದಿದರಲ್ಲಾ ಎಂದು ಅವರ ಮೇಲೆ ಕರುಣೆಹೊಂದಬೇಕು; ನಮ್ಮ ಶರೀರವನ್ನು ತಾನೇ ಅವರು ನಿಂದಿಸಿದ್ದು, ಆತ್ಮವನ್ನು ಅವರೆಂದಿಗೂ ನಿಂದಿಸಲು ಸಾಧ್ಯವಿಲ್ಲವೆಂದು ನಗಬೇಕು; ನಮ್ಮನ್ನು ನಿಂದಿಸಿ ನಮ್ಮ ಪಾಪವನ್ನು ಕಳೆದರಲ್ಲಾ ಎಂದು ಸಂತೋಷ ಪಡಬೇಕು; ಒಂದು ವೇಳೆ ಅವರು ಹೇಳಿದ ತಪ್ಪು ನಿಜವಾಗಿ ನಮ್ಮಲ್ಲಿ ಇದ್ದಿತಾದರೆ ನಮ್ಮಲ್ಲಿ ಇದ್ದ ತಪ್ಪನ್ನು ಅವರು ತೋರಿಸಿಕೊಟ್ಟು ಅದನ್ನು ತಿದ್ದಿಕೊಳ್ಳಲು ನಮಗೆ ಸಹಾಯ ಮಾಡಿದರಲ್ಲಾ ಎಂದು ಅವರಲ್ಲಿ ಉಪಕಾರ ಸ್ಮೃತಿಯನ್ನೂ ಕೃತಜ್ಞತೆಯನ್ನೂ ಹೊಂದಬೇಕು ಎಂದು ತಿಳಿಸಿದೆ. ಈ ಅರ್ಥಗಳೆಲ್ಲಾ ಇಲ್ಲಿ ಸೂಚಿಸಲ್ಪಟ್ಟಿವೆ.

ಸಾಧಾರಣವಾಗಿ ನಿಜವಾಗಿ ತಪ್ಪುಮಾಡಿದವನೂ ಕೂಡ ತಾನು ಯಾವ ತಪ್ಪನ್ನೂ ಮಾಡಿಲ್ಲವೆಂದು ವಾದಿಸುತ್ತಾನೆ. ಅವನು ಅಧಮನು. ನಾನು ತಿಳಿಯದೆ ಏನೋ ತಪ್ಪು ಮಾಡಿಬಿಟ್ಟೆ ಎಂದು ಕ್ಷಮಾಪಣೆ ಕೇಳಿಕೊಳ್ಳುವವನು ಮಧ್ಯಮನು; ಮತ್ತು ತಾನು ನಿಜವಾಗಿ ತಪ್ಪು ಮಾಡಿಲ್ಲದಿದ್ದರೂ ಇತರರ ನಿಂದೆಯನ್ನು ಸಹಿಸಿಕೊಳ್ಳುವವನು ಉತ್ತಮನು ಎಂದು ಹೇಳಿದೆ. 'ವಿದ್ಯಾದದಾತಿವಿನಯಂ' ಎಂದು ಹೇಳಿರುವಂತೆ ಶಾಂತ ಗುಣಹೊಂದಿ ವಿನಯವಾಗಿ ಇರುವುದೇ ಮೇಲಾದಗುಣ. ಭಾಗವತನಾದವನು ಯಾರಾದರೂ ತನ್ನಲ್ಲಿಲ್ಲದ ದೋಷಾರೋಪಣೆ ಮಾಡಿದರೂ ಅದು ತನ್ನ ಪಾಪದ ಫಲ ಎಂಬ ಭಾವನೆ

ಹೊಂದಿದವನಾಗಿ ಶಾಂತನಾಗಿ ಇರುತ್ತಾನೆ. ಇದನ್ನು ಶ್ರೀರಾಮಾಯಣದಲ್ಲಿ ಭರತ ಮತ್ತು ಸೀತಾದೇವಿಯವರು ಅನುಷ್ಠಿಸಿ ತೋರಿಸಿದ್ದಾರೆ. ಶ್ರೀರಾಮಚಂದ್ರನು ಕಾಡಿಗೆ ಹೋಗಿದ್ದಕ್ಕೆ ಮುಖ್ಯವಾಗಿ ಮಂಥರೆಯೂ, ಕೈಕೇಯಿಯೂ, ದಶರಥ ಮಹಾರಾಜನೂ ಕಾರಣರಾಗಿದ್ದರು. ಆದಾಗ್ಯೂ ಆದೊಂದನ್ನೂ ಪರಿಗಣಿಸದೆ ಪರಮ ಭಾಗವತನಾದ ಭರತನು ತಾನು ಸಂಪೂರ್ಣನಾಗಿ ನಿರಪರಾಧಿ ಯಾಗಿದ್ದಾಗ್ಯೂ ಕೂಡ 'ಮತ್‌ಪಾಪಮೇವ ಅತ್ರನಿಮಿತ್ತಂ ಆಸೀತ್' - ಅಂದರೆ ನನ್ನ ಪಾಪವೇ ಇದಕ್ಕೆಲ್ಲ ಕಾರಣ ಎಂದು ಹೇಳಿದ್ದಾನೆ. ಸೀತಾದೇವಿಯೂ ಕೂಡ ''ಮಮೈವದುಷ್ಕೃತಂ ಕಿಂಚಿನ್‌ಮಹದಸ್ತಿ ನಸಂಶಯಃ'' - ಅಂದರೆ ತಾನು ಶ್ರೀರಾಮಚಂದ್ರನಿಂದ ಬೇರೆಯಾಗಿ ಅಶೋಕ ವನದಲ್ಲಿ ಕಷ್ಟಪಟ್ಟಿದ್ದಕ್ಕೆಲ್ಲಾ ತಾನು ಮಾಡಿದ ದುಷ್ಕರ್ಮಗಳೇ ಕಾರಣವೆಂದು ಹನುಮಂತನೊಂದಿಗೆ ಹೇಳಿದ್ದಾಳೆ. ಹೀಗೆ ಭಾಗವತರಾದವರು ಪರರಿಂದ ತಾವು ಅನುಭವಿಸುವ ಕಷ್ಟಗಳಿಗೂ, ತಮ್ಮ ಬಗ್ಗೆ ನಿಂದೋಕ್ತಿಗಳಿಗೂ ತಮ್ಮ ಪಾಪಗಳೇ ಕಾರಣವೆಂದು ಹೇಳಿಕೊಂಡು ಶಾಂತರಾಗಿರುತ್ತಾರೆಯೇ ವಿನಃ ಅದಕ್ಕಾಗಿ ಇತರರ ಮೇಲೆ ಕೋಪಗೊಂಡು ದೂಷಿಸುವುದಿಲ್ಲ. - ಇದು ಭಾಗವತರ ಲಕ್ಷಣ. ಇಂತಹ ಉತ್ತಮ ಗುಣ ಪಡೆದಿರುವ ಒಬ್ಬ ವೈಷ್ಣವಾಧಿಕಾರಿಯನ್ನು ಈ ಪಾಶುರದಲ್ಲಿ ಎಬ್ಬಿಸಿದ್ದಾಳೆ.

ಶ್ರೀವೈಷ್ಣವರ ಲಕ್ಷಣವನ್ನು ತಿಳಿಸುವುದರಿಂದ ಈ ಪಾಶುರವು ತಿರುಪ್ಪಾವೈಯಲ್ಲಿ ಬಹಳ ಮುಖ್ಯವಾದ ಪಾಶುರಗಳಲ್ಲಿ ಒಂದಾಗಿದೆ. ಭಗವದ್ವಿಷಯ ಪರವಾಗಿ 'ಶಿತ್ತಂ ಶಿರುಕಾಲ್ಲೆ' ಎಂಬ 29ನೇ ಪಾಶುರವೂ, ಭಾಗವತ ವಿಷಯ ಪರವಾಗಿ, ಈ ಪಾಶುರವೂ ಬಹಳ ಪ್ರಧಾನವಾದ ಪಾಶುರಗಳಾಗಿವೆ. ತಿರುಪ್ಪಾವೈಯಲ್ಲಿ 29 ಪಾಶುರಗಳಿವೆ. 30ನೆಯ ಪಾಶುರ ಫಲಶ್ರುತಿಯಾಗಿದೆ. ರತ್ನದ ಮಣಿಯನ್ನು ಒಂದು ಹಾರದ ಮಧ್ಯದಲ್ಲಿ ಹಾಕುವಂತೆ ಇದು ತಿರುಪ್ಪಾವೈ ಎಂಬ ಹೂ ಮಾಲೆಯ 29 ಪಾಶುರಗಳಲ್ಲಿ ಮಧ್ಯದ 15ನೇ ಪಾಶುರವಾಗಿ ನಾಯಕ ಮಣಿಯಂತೆ ಪ್ರಕಾಶಿಸುತ್ತಿದೆ ಎಂದು ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.

**6ನೆಯ ಪಾಶುರದಿಂದ 15ನೆಯ ಪಾಶುರದ ವರೆಗಿನ ಹತ್ತು ಪಾಶುರಗಳ ಸಂದೇಶದ ಸಾರಾಂಶ :-**

**1. ಇತರ ಗೋಪಕನ್ಯೆಯರನ್ನು ಗೋದಾದೇವಿಯು ಎಬ್ಬಿಸುತ್ತಾಳೆ. ಎಂಬ ವಾಕ್ಯಾರ್ಥದ ಪ್ರತಿಪಾದನೆ : -**

ಈ ಹತ್ತು ಪಾಶುರಗಳಿಗೆ ನಮ್ಮ ಪೂರ್ವಾಚಾರ್ಯರುಗಳು ಅನೇಕ ವಿಧವಾಗಿ ಅರ್ಥ ತಿಳಿಸಿದ್ದಾರೆ. ವಾಕ್ಯಾರ್ಥದ ಪ್ರಕಾರ ಈ ಹತ್ತು ಪಾಶುರಗಳಲ್ಲಿ ಗೋದಾದೇವಿಯು ಪ್ರಾತಃಕಾಲದಲ್ಲಿ ಎದ್ದು ಇತರ ಗೋಪಕನ್ಯೆಯರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಎಬ್ಬಿಸಿ, ತಮ್ಮೊಡನೆ ಕಲೆತು ಭಗವನ್ನಾಮ ಸಂಕೀರ್ತನೆ ಮಾಡುವಂತೆ ಕರೆಯುತ್ತಾಳೆ ಎಂಬ ಅಭಿಪ್ರಾಯವು ಸೂಚಿಸಲ್ಪಟ್ಟಿದೆ. ಒಂದೊಂದು ಪಾಶುರದಲ್ಲೂ ಒಬ್ಬೊಬ್ಬ ಗೋಪಕನ್ಯೆಯ ಮನೆ ಬಾಗಿಲಿಗೆ ಹೋಗಿ, ಮೊದಲು ಪ್ರಾತಃಕಾಲವಾಗಿದೆ ಎಂಬುದಕ್ಕೆ ಕೆಲವು ಗುರುತುಗಳನ್ನೆಲ್ಲಾ ತಿಳಿಸಿ, ಅವಳ ಗುಣಗಳನ್ನು ವರ್ಣಿಸಿ, ತದನಂತರ ಪರಮಾತ್ಮನ ಕಲ್ಯಾಣಗುಣಚೇಷ್ಟಿತಾದಿಗಳನ್ನು ಹಾಡಿ, ಅವನನ್ನು ಸ್ತುತಿಸಿ, ಅವನ ನಾಮಸಂಕೀರ್ತನೆ ಮಾಡಲು ಬರುವಂತೆ ಅವರುಗಳನ್ನು ಕರೆಯುತ್ತಾಳೆ.

**2. ಭಾಗವತರ ಅನುಗ್ರಹವನ್ನು ಪ್ರಾರ್ಥಿಸುತ್ತಾಳೆ ಎಂಬ ವಿಶೇಷಾರ್ಥದ ಪ್ರತಿಪಾದನೆ :-**

ಈ ಹತ್ತು ಪಾಶುರಗಳಲ್ಲಿ ಗೋದಾದೇವಿಯು ಒಂದು ದೊಡ್ಡ ಶಾಸ್ತ್ರಾರ್ಥವನ್ನೇ ಪ್ರತಿಪಾದಿಸಿದ್ದಾಳೆ. ಭಾಗವತರನ್ನು ಮುಂದಿಟ್ಟುಕೊಂಡು ಭಗವಂತನಲ್ಲಿ ಶರಣಾಗತಿ ಮಾಡಬೇಕೆಂಬ ಶಾಸ್ತ್ರಾರ್ಥವು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ ಎಂಬ ವಿಶೇಷಾರ್ಥವನ್ನು ನಮ್ಮ ಪೂರ್ವಾಚಾರ್ಯರುಗಳು ವಿವರಿಸಿ ತಿಳಿಸಿದ್ದಾರೆ. ಈ ಹತ್ತು ಪಾಶುರಗಳು ಒಂದೊಂದೂ ಒಬ್ಬ ಭಗವದ್ಭಕ್ತರನ್ನು ಸ್ತೋತ್ರಮಾಡಿ, ತಮ್ಮೊಡನೆ ಕಲೆತು ನಾಮ ಸಂಕೀರ್ತನೆ ಮಾಡಿ ತಮ್ಮ ವ್ರತವು ಸಾಂಗವಾಗಿ

ಶುಭವಾಗಿ ನೆರವೇರುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುವ ಪಾಶುರಗಳಾಗಿವೆ ಎಂಬುದೇ ವಿಶೇಷಾರ್ಥ. ಅವರುಗಳಲ್ಲಿ ಒಬ್ಬರಿಗಿಂತ ಒಬ್ಬರು ಮೇಲಾದ ಭಕ್ತರಾಗಿದ್ದಾರೆ.

6ನೇ ಪಾಶುರದಿಂದ 10ನೇ ಪಾಶುರದವರೆಗಿನ 5 ಪಾಶುರಗಳಲ್ಲಿ - ಭಾಗವತರೊಂದಿಗೆ ಕಲೆತು ಭಗವದನುಭವ ಪಡೆಯಬೇಕೆಂಬುದನ್ನು ಅರಿಯದೆ ಮತ್ತು ಅರಿತು ಅನುಷ್ಠಿಸದೆ ಭಗವದ್ವಿಷಯಕ್ಕೆ ಹೊಸಬರಾದವರನ್ನು ಎಬ್ಬಿಸುತ್ತಾಳೆ.

6ನೇ ಪಾಶುರದಲ್ಲಿ ಭಗವದನುಭವಕ್ಕೆ ಅತಿ ಹೊಸಬಳನ್ನು ಪಿಳ್ಳಾಯ್ - ಎಂದು ಸಂಬೋಧನೆಮಾಡಿ, ತನ್ನೊಡನೆ ಕಲೆತು ನಾಮ ಸಂಕೀರ್ತನೆ ಮಾಡಲು ಕರೆಯುತ್ತಾಳೆ.

7ನೇ ಪಾಶುರದಲ್ಲಿ ಭಾಗವತರೊಂದಿಗೆ ಕಲೆತು ಭಗವದನುಭವ ಪಡೆಯಬೇಕೆಂಬುದನ್ನು ಅರಿತೂ, ಅದನ್ನು ಮರೆತಿರುವವಳನ್ನು ನಾಯಗಪೆಣ್ಪಿಳ್ಳಾಯ್ - ತೇಶಮುಡೆಯಾಯ್ ಎಂದು ಕರೆಯುತ್ತಾಳೆ.

8ನೇ ಪಾಶುರದಲ್ಲಿ ಪರಮಾತ್ಮನಲ್ಲಿ ಅತ್ಯಂತ ಭಕ್ತಿವುಳ್ಳವಳನ್ನು ಕೋತುಕಲ ಮುಡೆಯಪಾವಾಯ್ ಎಂದು ಕರೆಯುತ್ತಾಳೆ.

9ನೇ ಪಾಶುರದಲ್ಲಿ ಭಗವದನುಭವಲ್ಲಿ ಮಗ್ನಳಾಗಿ ಮಲಗಿರುವ ಭಕ್ತಳೊಂದಿಗೆ ತನ್ನ ಸಂಬಂಧವನ್ನು ಹೇಳಿ 'ಮಾಮಾನ್‌ಮಹಳೇ' ಎಂದು ಕರೆಯುತ್ತಾಳೆ.

10ನೇ ಪಾಶುರದಲ್ಲಿ, ಭಗವಂತನಲ್ಲಿ ಶರಣಾಗತಿ ಮಾಡಿ, ಅವನ ಅನುಗ್ರಹ ಪಡೆದು, ಭಗವದನುಭವದಲ್ಲಿ ಪರಿಪೂರ್ಣವಾಗಿ ಆನಂದ ಹೊಂದಿ ಮಲಗಿರುವವಳನ್ನು "ನೋತ್ತುಚ್ಚುವರ್ಗಂ ಪುಹುಹಿನ್ರವಮ್ಮನಾಯ್" ಎಂದೂ, 'ಆತ್ತ ಅನಂದಲುಡೈಯಾಯ್' (ಭಗವದ್ಗುಣಾನುಭವದಲ್ಲಿಯೇ ಮಗ್ನಳಾಗಿರುವವಳೇ) - ಎಂದೂ, 'ಅರುಂಕಲಮೆ' (ನಮಗೆಲ್ಲರಿಗೂ ಆಭರಣದಂತಿರುವವಳೇ) ಎಂದೂ ಕರೆಯುತ್ತಾಳೆ.

11ನೇ ಪಾಶುರದಿಂದ 15ನೇ ಪಾಶುರದವರೆಗಿನ 5 ಪಾಶುರಗಳಲ್ಲಿ ಎಬ್ಬಿಸಲ್ಪಡುವವರು ಅತ್ಯಂತ ಮೇಲಾದ ಭಕ್ತರು. ಇಲ್ಲಿ ಕರ್ಮಯೋಗ ನಿಷ್ಠರನ್ನೂ, ಭಗವತ್‌ಕೈಂಕರ್ಯನಿಷ್ಠರನ್ನೂ, ಜ್ಞಾನ ನಿಷ್ಠರನ್ನೂ, ಭಾಗವತಲಕ್ಷಣಪೂರ್ತಿ ಪಡೆದವರನ್ನೂ ಕರೆಯುತ್ತಾಳೆ. 11ನೇ ಪಾಶುರದಲ್ಲಿ ಕರ್ತವ್ಯ ಕರ್ಮನಿಷ್ಠರಾಗಿ ಕರ್ಮಯೋಗನಿಷ್ಠರಾದವರ ಸಂಬಂಧವುಳ್ಳವಳನ್ನು "ಕುತ್ತಮೊನ್ರಿಲ್ಲಾದ ಕೋವಲರ್‌ತಂ ಪೊರ್ಕ್ಕೊಡಿಯೇ" - ಎಂದು ಕರೆಯುತ್ತಾಳೆ.

12ನೇ ಪಾಶುರದಲ್ಲಿ ಭಗವಂತನಿಗೆ ಅಂತರಂಗ ಕೈಂಕರ್ಯ ಮಾಡುವುದರಲ್ಲಿ ನಿರತನಾಗಿ ವಿಶೇಷಧರ್ಮನಿಷ್ಠನಾದವನ ತಂಗಿಯನ್ನು "ನಚ್ಚೆಲ್ವನ್ ತಂಗಾಯ್" ಎಂದು ಕರೆಯುತ್ತಾಳೆ.

13ನೇ ಪಾಶುರದಲ್ಲಿ ಜ್ಞಾನ ನಿಷ್ಠಳಾದವಳನ್ನು 'ಪೋದರಿ ಕಣ್ಣಿನಾಯ್' 'ಪಾವಾಯ್' ಎಂದು ಕರೆಯುತ್ತಾಳೆ.

14ನೇ ಪಾಶುರದಲ್ಲಿ ಭಾಗವತಶೇಷತ್ವಪೂರ್ತಿ ಪಡೆದಿರುವವಳನ್ನು 'ನಂಗಾಯ್' 'ನಾಣಾದಾಯ್' - 'ನಾವುಡೈಯಾಯ್' ಎಂದು ಕರೆಯುತ್ತಾಳೆ.

15ನೇ ಪಾಶುರದಲ್ಲಿ ಎಲ್ಲರಿಗಿಂತಲೂ ಮೇಲಾದವಳಾಗಿ, ಭಾಗವತಲಕ್ಷಣಪೂರ್ತಿ ಉಳ್ಳವಳನ್ನು ಅಂದರೆ ತನ್ನ ಮೇಲೆ ಆರೋಪಿತವಾದ, ತನ್ನಲಿಲ್ಲದ ದೋಷವನ್ನು ಕೋಪದಿಂದ ಪ್ರತಿಭಟಿಸದೆ 'ನಾನೇ ತಾನಾಯಿಡುಹ' ಎಂದು ಶಾಂತ ಚಿತ್ತಳಾಗಿ ಸಹಿಸಿಕೊಂಡಿರುವ ಶ್ರೀವೈಷ್ಣವಲಕ್ಷಣ ಪಡೆದಿರುವವಳನ್ನು "ಎಲ್ಲೇ ಇಳಂ ಕಿಳಿಯೇ" ಎಂದು ಕರೆಯುತ್ತಾಳೆ. ಹೀಗೆ ತಿರುಪ್ಪಾವೈಯ 6 ರಿಂದ 15ನೇ ಪಾಶುರದವರೆಗಿನ 10 ಪಾಶುರಗಳಲ್ಲಿ ಗೋದಾದೇವಿಯು ಅನೇಕ ಭಾಗವತರನ್ನು ತನ್ನೊಡನೆ ಕಲೆತು ಭಗವನ್ನಾಮ ಸಂಕೀರ್ತನೆ ಮಾಡುವಂತೆ ಕರೆಯುತ್ತಾಳೆ. ಮತ್ತು ತನ್ನ ವ್ರತವು ಶುಭವಾಗಿ ನೆರವೇರುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾಳೆ ಎಂಬ ವಿಶೇಷಾರ್ಥವು ಮೇಲೆ ವಿವರವಾಗಿ ತಿಳಿಸಲ್ಪಟ್ಟಿದೆ.

3. ಗೋದಾದೇವಿಯು ನಮ್ಮನ್ನೆಲ್ಲಾ ಅಜ್ಞಾನನಿದ್ರೆಯಿಂದ ಎಬ್ಬಿಸಿ ನಾಮ ಸಂಕೀರ್ತನೆ ಮಾಡಲು ಕರೆಯುತ್ತಾಳೆ ಎಂಬ ಸುಂದರ ಕಲ್ಪನಾರ್ಥದ ಪ್ರತಿಪಾದನೆ : -

ಈ ಹತ್ತು ಪಾಶುರಗಳನ್ನು ಮತ್ತೊಂದು ವಿಧವಾಗಿ ಅರ್ಥಮಾಡಿ ಅನುಸಂಧಾನ ಮಾಡಬಹುದೆಂಬ ಅಭಿಪ್ರಾಯವು ಸೂಚಿಸಲ್ಪಟ್ಟಿದೆ. ಅದೇನೆಂದರೆ ಗೋದಾ ದೇವಿಯು 'ತಮೋಗುಣಹೊಂದಿ ಅಜ್ಞಾನದಲ್ಲಿ ಮಲಗಿರುವ ನಮ್ಮನ್ನೆಲ್ಲಾ ಎಬ್ಬಿಸಿ ಭಗವನ್ನಾಮ ಸಂಕೀರ್ತನೆ ಮಾಡಿ ಉಜ್ಜೀವಿಸುವಂತೆ ಉಪದೇಶಿಸಿದ್ದಾಳೆ ಎಂದು ಕಲ್ಪನೆ ಮಾಡಿಕೊಂಡು ಈ ಹತ್ತು ಪಾಶುರಗಳನ್ನು ಅನುಸಂಧಾನ ಮಾಡುವುದು ಬಹಳ ಸುಂದರವಾದ ಕಲ್ಪನೆಯಾಗಿದೆ. ಏನೂ ಅರಿಯದವರಾದ ನಮ್ಮನ್ನು 'ಪಿಳ್ಳಾಯ್' ಎಂದು 6ನೇ ಪಾಶುರದಲ್ಲಿ ಕರೆದಿದ್ದಾಳೆ. ಅನಂತರ ನಮ್ಮೆಲ್ಲರ ಹೃದಯಗಳಲ್ಲೂ ಸತ್ತ್ವಗುಣವೂ, ಸದ್ಗುಣಗಳೂ ಭಗವದ್ಭಕ್ತಿಯೂ ಅಡಗಿರುವುದರಿಂದ ಅವುಗಳನ್ನು ಪ್ರಕಾಶಪಡಿಸಿಕೊಂಡು ಉಜ್ಜೀವಿಸಬೇಕೆಂದು ನಮ್ಮನ್ನು ಒತ್ತಾಯಪಡಿಸಿ ಭಗವನ್ನಾಮ ಸಂಕೀರ್ತನೆ ಮಾಡಲು ಕರೆಯುತ್ತಾಳೆ. ತಾಯಿಯಾದವಳು ತನ್ನ ಚಿಕ್ಕಮಕ್ಕಳನ್ನು ಸ್ನಾನ ಮಾಡಲು ಕರೆದಾಗ ಬರುವುದಿಲ್ಲವೆಂದು ಓಡಿ ಹೋದರೆ, ಮಗುವೇ ! ನನ್ನ ಪುಟ್ಟ, ನನ್ನ ಚಿನ್ನ, ನನ್ನ ಗಿಣಿಯೇ, ನೀನು ಬಹಳ ಜಾಣಮರಿಯಲ್ಲವೇ ಎಂದೆಲ್ಲಾ ಹೇಳಿ ಅವರನ್ನು ಹುರಿದುಂಬಿಸಿ ತನ್ನ ಬಳಿಗೆ ಕರೆದು ಸ್ನಾನ ಮಾಡಿಸುವುದನ್ನು ನಾವು ಲೋಕಾನುಭವದಲ್ಲಿ ಕಾಣುತ್ತಿದ್ದೇವೆ. ಅದೇ ರೀತಿ ಲೋಕಮಾತೆಯಾಗಿ ಜಗತ್ತಿನ ಜೀವಿಗಳೆಲ್ಲರಿಗೂ ಮಾತೆಯಾದ, ಭೂಮಾತೆಯಾದ ಗೋದಾದೇವಿಯು ಅವಳ ಮಕ್ಕಳಾದ ನಮ್ಮನ್ನು 'ನಾಯಕಪ್ಪೆಣ್ಪಿಳ್ಳಾಯ್, ತೇಶಮುಡ್ಶೆಯಾಯ್, ಕೋತುಕಲಮುಡ್ಶೆಯಾಯ್, ಆತ್ತ ಆನಂದಲುಡ್ಶೆಯಾಯ್, ಪೋದರಿ ಕಣ್ಣಿನಾಯ್, ನಂಗಾಯ್, ನಾವುಡ್ಶೆಯಾಯ್, ಇಳಂ ಕಿಳಿಯೇ ಎಂದೆಲ್ಲಾ ಒಳ್ಳೆಯಮಾತುಗಳಿಂದಲೂ; 'ನಾಣಾದಾಯ್' 'ಕುಂಬಕರ್ಣನುಂತೋತ್ತು ಮುನಕ್ಕೇ ಪೆರುಂತುಯಿಲ್ ತಾನ್ ತಂದಾನೋ' ಎಂಬ ಹಾಸ್ಯದ

ಮಾತುಗಳಿಂದಲೂ, ಬಿಡದೆ ನಮ್ಮನ್ನು ಮತ್ತೆ ಮತ್ತೆ ಒತ್ತಾಯ ಪಡಿಸಿ ತಾಯಿಯಂತೆ ಪ್ರೀತಿಯಿಂದ ಕರೆದು ನಮ್ಮ ಮಾನಸಿಕ ಮಲಗಳನ್ನೆಲ್ಲಾ ಕಳೆಯಲು ತನ್ನೊಡದೆ ಭಗವನ್ನಾಮ ಸಂಕೀರ್ತನೆ ಮಾಡುವಂತೆ ಒತ್ತಾಯಪಡಿಸುತ್ತಿದ್ದಾಳೆ ಎಂಬ ಕಲ್ಪನೆಯೊಂದಿಗೆ ಈ ಹತ್ತು ಪಾಶುರಗಳನ್ನು ಅನುಸಂಧಾನ ಮಾಡುವುದು ಬಹಳ ರಸಮಯವಾಗಿರುತ್ತದೆ ಮತ್ತು ಲೋಕಮಾತೆಯ ಅನುಗ್ರಹದ ಫಲವಾಗಿ ನಮಗೆ ಭಗವದ್ಭಕ್ತಿ ಹುಟ್ಟಲು ಮತ್ತು ಬೆಳೆಯಲು ಸಹಾಯಕವಾಗುತ್ತದೆ ಎಂಬ ಉಪದೇಶವು ಈ ಹತ್ತು ಪಾಶುರಗಳಲ್ಲಿ ಸೂಚಿತವಾಗಿದೆ ಎಂಬ ಅಭಿಪ್ರಾಯವೂ ತಿಳಿಸಲ್ಪಟ್ಟಿದೆ.

**4. ಹತ್ತು ಆಳ್ವಾರುಗಳ ಅನುಗ್ರಹವನ್ನು ಪ್ರಾರ್ಥಿಸುತ್ತಾಳೆ ಎಂಬ ವಿಶೇಷಾರ್ಥದ ಪ್ರತಿಪಾದನೆ :**

ಕೆಲವು ವ್ಯಾಖ್ಯಾನಕಾರರು ಈ ಹತ್ತು ಪಾಶುರಗಳಲ್ಲಿ ಹತ್ತು ಆಳ್ವಾರುಗಳನ್ನು ಗೋದೆ ಎಬ್ಬಿಸುತ್ತಾಳೆ ಎಂಬ ವಿಶೇಷಾರ್ಥವನ್ನೂ ತಿಳಿಸಿದ್ದಾರೆ. ಪೊಯ್‌ಹೈ ಆಳ್ವಾರ್, ಪೇಯಾಳ್ವಾರ್, ಪೂದತ್ತಾಳ್ವಾರ್, ತಿರುಮಳಿಶೈ ಆಳ್ವಾರ್, ಕುಲಶೇಖರ ಆಳ್ವಾರ್, ಪೆರಿಯಾಳ್ವಾರ್, ತೊಂಡರಡಿಪ್ಪೊಡಿ ಆಳ್ವಾರ್, ತಿರುಪ್ಪಾಣಾಳ್ವಾರ್, ನಮ್ಮಾಳ್ವಾರ್, ತಿರುಮಂಗೈ ಆಳ್ವಾರ್ ಈ ಹತ್ತು ಆಳ್ವಾರುಗಳನ್ನೂ ಭಗವದ್ಗುಣಾನುಭವವೆಂಬ ಈ ವ್ರತದಲ್ಲಿ ತಮ್ಮೊಡನೆ ಕಲೆತು ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾಳೆ ಎಂಬ ವಿಶೇಷಾರ್ಥವನ್ನು ಸೂಚಿಸಿದ್ದಾರೆ.

**5. ಹತ್ತು ಆಚಾರ್ಯರುಗಳ ಅನುಗ್ರಹವನ್ನು ಪ್ರಾರ್ಥಿಸುತ್ತಾಳೆ ಎಂಬ ವಿಶೇಷಾರ್ಥದ ಪ್ರತಿಪಾದನೆ :**

ಈ ಹತ್ತು ಪಾಶುರಗಳಲ್ಲಿ ಆಚಾರ್ಯ ಗುರುಪರಂಪರೆಯಲ್ಲಿ 'ಅಸ್ಮತ್ ಗುರುಭ್ಯೋನಮಃ' ಎಂದು ಪ್ರಾರಂಭಿಸಿ 'ಶ್ರೀಮತೇ ಶಠಕೋಪಾಯ ನಮಃ' ಎನ್ನುವ ವರೆಗಿನ ಹತ್ತು ಆಚಾರ್ಯರುಗಳನ್ನೂ ಕ್ರಮವಾಗಿ ಎಬ್ಬಿಸಿ ಪ್ರಾರ್ಥಿಸುತ್ತಾಳೆ.

ಅಂದರೆ 'ಅಸ್ಮತ್ ಗುರುಭ್ಯೋನಮಃ, ಅಸ್ಮತ್ ಪರಮಗುರುಭ್ಯೋ ನಮಃ, ಅಸ್ಮತ್ ಸರ್ವಗುರುಭ್ಯೋನಮಃ, ಶ್ರೀಮತೇ ರಾಮಾನುಜಾಯ ನಮಃ, ಶ್ರೀ ಪರಾಂಕುಶ ದಾಸಾಯ ನಮಃ, ಶ್ರೀಮತೇ ಯಾಮುನಮುನಯೇ ನಮಃ, ಶ್ರೀ ರಾಮಮಿಶ್ರಾಯ ನಮಃ, ಶ್ರೀ ಪುಂಡರೀಕಾಕ್ಷಾಯ ನಮಃ, ಶ್ರೀ ಮನ್ನಾಥಮುನಯೇ ನಮಃ, ಶ್ರೀಮತೇ ಶಠಕೋಪಾಯ ನಮಃ ಎಂದು ಹತ್ತು ಆಚಾರ್ಯರುಗಳ ಅನುಗ್ರಹವನ್ನು ಈ ಹತ್ತು ಪಾಶುರಗಳಲ್ಲಿ ತಮ್ಮ ಭಗವನ್ನಾಮ ಸಂಕೀರ್ತನೆಯ ವ್ರತವು ಶುಭವಾಗಿ ನೆರವೇರಲೆಂದು ಪ್ರಾರ್ಥಿಸಿದ್ದಾಳೆ ಎಂಬ ವಿಶೇಷಾರ್ಥವೂ ತಿಳಿಸಲ್ಪಟ್ಟಿದೆ.

ಹೀಗೆ ಈ ಹತ್ತು ಪಾಶುರಳಿಗೆ ಅನೇಕ ವಿಧವಾದ ಅರ್ಥ ವಿಶೇಷಾರ್ಥಗಳನ್ನು ನಮ್ಮ ಪೂರ್ವಾಚಾರ್ಯರುಗಳು ತಮ್ಮ ವ್ಯಾಖ್ಯಾನಗಳಲ್ಲಿ ತಿಳಿಸಿದ್ದಾರೆ. ಆದರೆ ಭಾಗವತರೊಡನೆ ಕೂಡಿಕೊಂಡು ಭಗವಂತನಲ್ಲಿ ಶರಣಾಗತಿ ಮಾಡಬೇಕೆಂಬ ಶಾಸ್ತ್ರಾರ್ಥವನ್ನು ಈ ಹತ್ತು ಪಾಶುರಗಳಿಂದ ಗೋದಾದೇವಿಯು ಪ್ರತಿಪಾದಿಸಿದ್ದಾಳೆ ಎಂಬುದೇ ಪ್ರಧಾನವಾದ ಅರ್ಥ.

**6. ಭಗವಂತನ ಪೂರ್ಣ ಸ್ವರೂಪ, ಅವನ ದಿವ್ಯ ನಾಮರೂಪಗುಣಚೇಷ್ಟಿತಾದಿಗಳ ಪ್ರತಿಪಾದನೆ :**

ತಿರುಪ್ಪಾವೈಯ 1 ರಿಂದ 5 ಮತ್ತು 6 ರಿಂದ 15, ಒಟ್ಟು 15 ಪಾಶುರಗಳಲ್ಲಿ ಭಗವಂತನ ಪೂರ್ಣಸ್ವರೂಪವೂ, ಅವನ ದಿವ್ಯನಾಮ ರೂಪಗಳೂ ಅವನ ಕಲ್ಯಾಣಗುಣಚೇಷ್ಟಿತಾದಿಗಳೂ ವಿವರಿಸಲ್ಪಟ್ಟಿವೆ. ಆದ್ದರಿಂದ ಈ ಪಾಶುರಗಳ ಅನುಸಂಧಾನದಿಂದ ಭಗವಂತನ ದಿವ್ಯನಾಮ, ರೂಪ, ಗುಣಚೇಷ್ಟಿತಾದಿಗಳನ್ನೆಲ್ಲಾ ಸಂಕೀರ್ತನೆ ಮಾಡಿದಂತಾಗುತ್ತದೆ ಮತ್ತು ತನ್ಮೂಲಕ ಅವನಲ್ಲಿ ಭಕ್ತಿ ಹುಟ್ಟಿ ಬೆಳೆಯಲು ಅವಕಾಶ ಉಂಟಾಗುತ್ತದೆ ಎಂದೂ ತಿಳಿಸಿದ್ದಾರೆ.

ಮೊದಲನೇ ಐದು ಪಾಶುರಗಳಲ್ಲಿ ಪರಮಾತ್ಮನ ಪರವ್ಯೂಹ ವಿಭವ ಅಂತರ್ಯಾಮಿ ಅರ್ಚಾರೂಪಗಳೆಲ್ಲವೂ ವಿವರಿಸಲ್ಪಟ್ಟಿವೆ. ಅದರೊಂದಿಗೆ ಮೊದಲನೆಯ ಪಾಶುರದಲ್ಲಿ 'ನಂದಗೋಪನ್ ಕುಮರನ್' 'ಯಶೋದೈ ಇಳಂ ಶಿಂಗಂ' ಕದಿರ್‌ಮದಿಯಂಪೋಲ್ ಮುಹತ್ತಾನ್' ಎಂದು ಶ್ರೀ ಕೃಷ್ಣಪರಮಾತ್ಮನ ಸೌಶೀಲ್ಯ, ಸೌಲಭ್ಯ, ಗಾಂಭೀರ್ಯ, ಸೌಂದರ್ಯಾದಿ ಗುಣಗಳೆಲ್ಲಾ ವರ್ಣಿಸಲ್ಪಟ್ಟು ಕೊನೆಯಲ್ಲಿ 'ನಾರಾಯಣನೇ ನಮಕ್ಕೇ ಪರೈತರುವಾನ್' ಎಂದು ಅವನೇ ಪರಮಪದದಲ್ಲಿರುವ ಮತ್ತು ಸರ್ವರಲ್ಲೂ ಅಂತರ್ಯಾಮಿಯಾಗಿರುವ ಶ್ರೀಮನ್ನಾರಾಯಣನು, ಅವನೇ ನಮಗೆ ಪುರುಷಾರ್ಥಗಳನ್ನು ಕೊಡುವವನು ಎಂದು ಅವನ ಪರತ್ವವೂ, ಅಂತರ್ಯಾಮಿತ್ವವೂ, ಅವನ ಸೌಶೀಲ್ಯ ಸೌಲಭ್ಯಾದಿ ಕಲ್ಯಾಣಗುಣಗಳೂ, ವಿವರಿಸಲ್ಪಟ್ಟಿವೆ. 2ನೆಯ ಪಾಶುರದಲ್ಲಿ 'ಪಾರ್ಕಡಲುಳ್ ಪೈಯ್ಯತುಯಿನ್ರ ಪರಮನ್' ಎಂದು ಅವನ ವ್ಯೂಹರೂಪವೂ ಮತ್ತು ಲೋಕ ರಕ್ಷಣ ಚಿಂತಾಮಗ್ನನಾಗಿ ಯೋಗನಿದ್ರೆಯಲ್ಲಿ ಇದ್ದಾನೆಂದು ಅವನ ದಯಾ ಗುಣವೂ ವಿವರಿಸಲ್ಪಟ್ಟಿದೆ.

3ನೆಯ ಪಾಶುರದಲ್ಲಿ 'ಓಂಗಿ ಉಲಹಳನ್ದ ಉತ್ತಮನ್' ಎಂದು ಅವನ ತ್ರಿವಿಕ್ರಮಾವತಾರದ ವಿಭವರೂಪವೂ, ಸರ್ವರನ್ನೂ ರಕ್ಷಿಸಿರುವ ಅವನ ಉದಾರ ಗುಣವೂ ವರ್ಣಿಸಲ್ಪಟ್ಟಿವೆ. 4ನೆಯ ಪಾಶುರದಲ್ಲಿ "ಆಳಿಮಳೈಕ್ಕಣ್ಣಾ" ಎಂದು ಮಳೆಗೆ ನಿರ್ವಾಹಕನಾದ ವರುಣ ದೇವನಿಗೂ ಪರಮಾತ್ಮನೇ ಅಂತರ್ಯಾಮಿಯಾಗಿದ್ದಾನೆಂದೂ ಮತ್ತು ವಿಶೇಷಾರ್ಥದ ಪ್ರಕಾರ ಜ್ಞಾನ ಭಕ್ತಿಗಳನ್ನು ಉಪದೇಶಿಸುವ ಆಚಾರ್ಯರುಗಳಿಗೂ ಅಂತರ್ಯಾಮಿಯಾಗಿದ್ದಾನೆಂದೂ ಅವನ ಅಂತರ್ಯಾಮಿತ್ವವು ಸೂಚಿಸಲ್ಪಟ್ಟಿದೆ. 5ನೆಯ ಪಾಶುರದಲ್ಲಿ 'ಮಾಯನ್' ಎಂದು ಶ್ರೀ ಕೃಷ್ಣಪರಮಾತ್ಮನಾಗಿ ಅವತರಿಸಿ ಅನೇಕ ಮಾಯಾಚೇಷ್ಟಿತಾದಿಗಳನ್ನೆಲ್ಲಾ ಮಾಡಿರುವವನು ಆ ಪರಮಾತ್ಮನೇ ಎಂದೂ, ಅವನ ದಿವ್ಯ ನಾಮ ಸಂಕೀರ್ತನೆ ಮಾಡಿ ಅವನಲ್ಲಿ ಶರಣಾದರೆ ಚೇತನರ ಸಮಸ್ತ ಪಾಪಗಳೂ ನಾಶವಾಗಿ ಅವರು

ಮುಕ್ತಿಹೊಂದುವರು ಎಂಬ ಅರ್ಥವೂ ಪ್ರತಿಪಾದಿಸಲ್ಪಟ್ಟಿದೆ. ಹೀಗೆ ಮೊದಲನೆಯ ಈ ಐದು ಪಾಶುರಗಳಲ್ಲಿ ಪರಮಾತ್ಮನ ಪರತ್ವವೂ, ಅವನ ಸೌಶೀಲ್ಯ ಸೌಲಭ್ಯಾದಿ ಕಲ್ಯಾಣಗುಣಗಳೂ, ಅವನ ದಯಾ ಸ್ವರೂಪವೂ, ಅವನು ತ್ರಿವಿಕ್ರಮನಾಗಿಯೂ ಶ್ರೀಕೃಷ್ಣನಾಗಿಯೂ ಅವತರಿಸಿ ಜಗತ್ತಿನ ಜೀವಿಗಳಿಗೆಲ್ಲಾ ಅನುಗ್ರಹ ಮಾಡಿರುವ ಅವನ ರಕ್ಷಕತ್ವವೂ ಪ್ರತಿಪಾದಿಸಲ್ಪಟ್ಟಿರುವುದರಿಂದ, ಈ ಐದು ಪಾಶುರಗಳ ಅನುಸಂಧಾನದಿಂದ ಪರಮಾತ್ಮನೇ ರಕ್ಷಕನೆಂಬ ಮಹಾ ವಿಶ್ವಾಸವುಂಟಾಗಲು ಆಸ್ಪದವಾಗುತ್ತದೆ.

6ನೇ ಪಾಶುರದಿಂದ 11ನೇ ಪಾಶುರದವರೆಗಿನ 5 ಪಾಶುರಗಳಲ್ಲಿ ಭಗವದ್ಗುಣ ಚೇಷ್ಟಿತಾದಿಗಳ ಗಾನರೂಪ ಅನುಸಂಧಾನವೂ ಅದರಿಂದ ಉಂಟಾಗುವ ಭಗವದ್ಗುಣಾನುಭವವೂ ತಿಳಿಸಲ್ಪಟ್ಟಿದೆ. 6ನೆಯ ಪಾಶರುದಲ್ಲಿ 'ಪೇಯ್‌ಮುಲೈ ನಂಜುಂಡು, ಕಳ್ಳಚ್ಚಕಡಂ ಕಲಕಳಿಯ ಕಾಲೋಚ್ಚಿ, ವೆಳ್ಳತ್ತರವಿಲ್‌ತುಯಿಲ್ ಮರ್‌ನ್ದವಿತ್ತಿನ್ನೈ' - ಅಂದರೆ ಪೂತನಿ ಶಕಟಾಸುರರನ್ನು ಸಂಹಾರ ಮಾಡಿದ ಶ್ರೀಕೃಷ್ಣಪರಮಾತ್ಮನೇ ಕ್ಷೀರಾಬ್ಧಿಶಾಯಿಯಾಗಿ ಮಲಗಿ ಜಗತ್ತಿಗೆಲ್ಲಾ ಬೀಜಪ್ರದನಾಗಿಕಾರಣಭೂತನಾಗಿದ್ದಾನೆ ಎಂದೂ; ಮತ್ತು ಚೇತನರಿಗೆ ಪ್ರಕೃತಿ ಸಂಬಂಧದಿಂದ ಬರುವ ಅಹಂಕಾರ ಮಮಕಾರಾದಿಗಳನ್ನೂ ನೀಗಿಸುವವನೂ, ಕಾಮಕ್ರೋಧಾದಿಗಳನ್ನು ನಾಶಮಾಡುವವನೂ ಅವನೇ ಆಗಿದ್ದಾನೆ ಎಂದೂ :-

7ನೆ ಪಾಶುರದಲ್ಲಿ 'ನಾರಾಯಣರ್ಮೂರ್ತಿ ಕೇಶವನ್ನೈ' - ಅಂದರೆ ಸರ್ವರಿಗೂ ಅಂತರಾತ್ಮನಾಗಿರುವ ಶ್ರೀಮನ್ನಾರಾಯಣನೇ ತನ್ನ ಸೌಶೀಲ್ಯದಿಂದ ಕೃಷ್ಣನಾಗಿ ಅವತರಿಸಿ ಕೇಶಿ ಸಂಹಾರ ಮಾಡಿದ್ದಾನೆ ಎಂದೂ, ಮತ್ತು ಪರಮಾತ್ಮನು ಭೂಲೋಕದಲ್ಲಿ ಅವತರಿಸಿ ನಮ್ಮವಿರೋಧಿಗಳನ್ನೆಲ್ಲಾ ನಾಶಮಾಡುತ್ತಾನೆ ಎಂದೂ,

8ನೆಯ ಪಾಶುರದಲ್ಲಿ 'ಮಾವಾಯ್ ಪಿಳಂದಾನ್ನೈ, ಮಲ್ಲರೈಮಾಟ್ಟಿಯ ದೇವಾದಿದೇವನ್ನೈ' - ಅಂದರೆ ಕುವಲಯಾಪೀಡವೆಂಬ ಆನೆಯನ್ನು ಸಂಹರಿಸಿ,

ಚಾಣೂರಮಲ್ಲರೆಂಬ ಜಟ್ಟಿಗಳನ್ನು ಸಂಹರಿಸಿದ ಶ್ರೀಕೃಷ್ಣನೇ ದೇವಾದಿದೇವನಾದ ಪರಮಾತ್ಮನೆಂದೂ ಮತ್ತು ಅವನು ಕರುಣಾಮೂರ್ತಿಯಾಗಿರುವುದರಿಂದ ತನ್ನನ್ನು ಸಮೀಪಿಸಿ ಪ್ರಾರ್ಥಿಸಿದವರ ಕಾಮಕ್ರೋಧಾದಿಗಳನ್ನೆಲ್ಲಾ ನಾಶಮಾಡಿ, ಅವರಿಗೆಲ್ಲಾ ಸಂತೋಷದಿಂದ ಕೃಪೆತೋರಿಸಿ ಅನುಗ್ರಹಿಸುವನು ಎಂದೂ,

9ನೆಯ ಪಾಶುರದಲ್ಲಿ ''ಮಾಮಾಯನ್, ಮಾಧವನ್, ವೈಕುಂದನ್' - ಅಂದರೆ ಆಶ್ಚರ್ಯಗುಣಚೇಷ್ಟಿತಾದಿಗಳನ್ನು ಮಾಡಿದ ಶ್ರೀಕೃಷ್ಣನೇ'' ''ಮಾಮೇವಯೇ ಪ್ರಪದ್ಯಂತೆ ಮಾಯಾಮೇತಾಂತರಂತಿತೇ'' - ಎಂದು ಗೀತೆಯಲ್ಲಿ ಹೇಳಿರುವಂತೆ ತನ್ನಲ್ಲಿ ಶರಣಾದವರನ್ನೆಲ್ಲಾ ಮಾಯೆ ಎಂಬ ಪ್ರಕೃತಿ ಬಂಧನದಿಂದ ದಾಟಿಸುವವನೂ ಆಗಿದ್ದಾನೆ, ಅವನೇ ಲಕ್ಷ್ಮೀಪತಿಯಾಗಿ, ವೈಕುಂಠವಾಸಿಯಾಗಿ ಇರುವ ಪರಮಾತ್ಮನು ಎಂದೂ, 10ನೇ ಪಾಶುರದಲ್ಲಿ 'ನಾತ್ತುತುಳಾಯ್‌ಮುಡಿನಾರಾಯಣನ್' 'ಪುಣ್ಣಿಯನ್' ಅಂದರೆ ತುಳಸೀಹಾರ ಧರಿಸಿರುವ ಶ್ರೀಮನ್ನಾರಾಯಣನನ್ನು ನಾವು ಸ್ತೋತ್ರಮಾಡಿದರೆ ಅವನು ನಮ್ಮ ಇಷ್ಟಾರ್ಥವನ್ನು ಅನುಗ್ರಹಿಸುವ ಪುಣ್ಯಪುರುಷನಾಗಿದ್ದಾನೆ, ಅವನೇ ನಮಗೆ ರಕ್ಷಕನು ಎಂದು ತಿಳಿಸಿದೆ. ಹೀಗೆ ಈ ಐದು ಪಾಶುರಗಳಲ್ಲಿ ಅವನ ದಿವ್ಯನಾಮರೂಪಗುಣಚೇಷ್ಟಿತಾದಿಗಳ ಅನುಸಂಧಾನವೂ ಅದರಿಂದ ಲಭಿಸುವ ಭಗವದ್ಗುಣಾನುಭವವೂ ವಿವರಿಸಲ್ಪಟ್ಟಿದೆ.

11ನೇ ಪಾಶುರದಿಂದ 16ನೇ ಪಾಶುರದವರೆಗಿನ 5 ಪಾಶುರಗಳಲ್ಲಿ ಪರಮಪುರುಷನಾದ ಪರಮಾತ್ಮನೇ ರಾಮಕೃಷ್ಣಾದಿ ಅವತಾರಗಳನ್ನೆತ್ತಿದ್ದಾನೆಂಬುದೂ, ಈ ಅವತಾರಗಳಲ್ಲಿ ಅವನು ಮಾಡಿದ ಅದ್ಭುತ ಚೇಷ್ಟಿತಾದಿಗಳೊಡನೆ ಅವನ ದಿವ್ಯನಾಮಸಂಕೀರ್ತನೆಯ ಮಹಿಮೆಯೂ ವಿವರಿಸಲ್ಪಟ್ಟಿದೆ. 11ನೆಯ ಪಾಶುರದಲ್ಲಿ 'ಮುಹಿಲ್ವಣ್ಣನ್' ಅಂದರೆ ಅವನ ದರ್ಶನ ಪಡೆದ ಮಾತ್ರದಿಂದಲೇ ಭಕ್ತರ ಮನಸ್ಸಿನಲ್ಲಿರುವ ಶ್ರಮವೆಲ್ಲಾತೀರಿ ಭಕ್ತಿ ಉಂಟಾಗುವಂತೆ

ನೀಲಮೇಘಶ್ಯಾಮನಾಗಿ, ದಿವ್ಯಮಂಗಳ ವಿಗ್ರಹವಿಶಿಷ್ಟನಾಗಿದ್ದಾನೆ ಮತ್ತು ಧಾರಾಳವಾಗಿ ನೀರು ಸುರಿಸುವ ಮೇಘಗಳಂತೆ ಪರಮ ಉದಾರನೂ ಆಗಿದ್ದಾನೆ ಎಂದೂ; 12ನೆಯ ಪಾಶುರದಲ್ಲಿ 'ಶಿನತ್ತಿನಾಲ್ ತೆನ್ನಿಲಂಗೈ ಕೋಮಾನ್ನೈ ಶೆತ್ತಮನತ್ತುಕ್ಕಿನಿಯಾನ್ನೈ' ಅಂದರೆ ಕೋಪಹೊಂದಿ ಲಂಕಾಧಿಪತಿಯಾದ ರಾವಣನನ್ನು ಸಂಹರಿಸಿದ ಶ್ರೀರಾಮನ ನಾಮ ಸಂಕೀರ್ತನೆ ಮಾಡುವುದರಿಂದ ಮನಸ್ಸಿಗೆ ಆಹ್ಲಾದ ಉಂಟಾಗಿ ಶಾಂತಿ ಲಭಿಸುತ್ತದೆ ಮತ್ತು ಶ್ರೀರಾಮಮಂತ್ರವು ಸರ್ವರನ್ನೂ ರಕ್ಷಿಸುವ ತಾರಕಮಂತ್ರವಾಗಿದೆ ಎಂದೂ.

13ನೆಯ ಪಾಶುರದಲ್ಲಿ 'ಪುಳ್ಳಿನ್‌ವಾಯ್‌ಕೀಂಡಾನ್ನೈ ಪೊಲ್ಲಾಅರಕ್ಕನ್ನೈ ಕಿಳ್ಳಿಕಳ್ಳೆಂದಾನ್ನೈ' ಅಂದರೆ ಬಕಾಸುರನ ವಧೆಮಾಡಿ ಶ್ರೀಕೃಷ್ಣನೂ, ರಾವಣಾಸುರನನ್ನು ಸಂಹರಿಸಿ ಶ್ರೀರಾಮನೂ ದುಷ್ಟರನ್ನು ಶಿಕ್ಷಿಸಿ ಭಕ್ತರನ್ನು ರಕ್ಷಿಸಿದ್ದಾರೆ ಎಂದೂ 14ನೆಯ ಪಾಶುರದಲ್ಲಿ 'ಶಂಗೊಡುಚಕ್ಕರಂ ಏಂದುಂ ತಡಕ್ಕೈಯ್ಯನ್ ಪಂಕಯಕಣ್ಣಾನ್ನೈ' ಅಂದರೆ ಭಕ್ತರಿಗೆ ಸೌಂದರ್ಯ ಜನಕವಾಗಿಯೂ ವಿರೋಧಿಗಳಿಗೆ ಭಯಜನಕವಾಗಿಯೂ ಇರುವ ಶಂಕಚಕ್ರಗಳನ್ನು ಧರಿಸಿದವನಾಗಿಯೂ ಮತ್ತು ಭಕ್ತರಿಗೆ ಅಭಯಪ್ರದವಾಗಿ ಸುಂದರವಾಗಿರುವ ಮತ್ತು ವಿರೋಧಿಗಳಿಗೆ ಭಯಂಕರವಾಗಿ ಕ್ರೂರವಾಗಿ ತೋರುವ ತಾವರೆ ಪುಷ್ಪದಂತೆ ಸುಂದರವಾಗಿರುವ ಕಣ್ಣುಳ್ಳವನೂ ಆಗಿದ್ದಾನೆ ಎಂದೂ;

15ನೇ ಪಾಶುರದಲ್ಲಿ 'ವಲ್ಲಾನ್ನೈ ಕೊನ್ರಾನ್ನೈ' ಪರಮಾತ್ಮನೇ ಕೃಷ್ಣನಾಗಿ ಅವತರಿಸಿ ಬಲಿಷ್ಟವಾದ ಕುವಲಯಾಪೀಡವೆಂಬ ಆನೆಯನ್ನು ಸಂಹರಿಸಿದ್ದಾನೆ; 'ಮಾತ್ತಾರ್ರೈ ಮಾತ್ತಳಿಕ್ಕವಲ್ಲಾನ್ನೈ' ಅಂದರೆ ವಿರೋಧಿಗಳ ಮನಸ್ಸನ್ನು ಮಾರ್ಪಡಿಸಿ ತನ್ನವರನ್ನಾಗಿಸಿಕೊಳ್ಳುತ್ತಾನೆ, ಹಾಗಲ್ಲದಿದ್ದರೆ ಅವರ ಬಲವನ್ನು ನಾಶಪಡಿಸುವವನೂ ಆಗಿದ್ದಾನೆ, 'ಮಾಯನ್ನೈ' ಅಂದರೆ ಬಾಲ್ಯದಲ್ಲಿಯೇ ಪೂತನಿ, ಶಕಟಾಸುರ ಮೊದಲಾದ ರಾಕ್ಷಸರನ್ನೆಲ್ಲಾ ಸಂಹಾರಮಾಡಿ

ಮಹಾವೀರನಾಗಿದ್ದರೂ, ಭಕ್ತರಾದ ಗೋಪಾಲರಿಗೂ ಗೋಪಿಯರಿಗೂ ಭವ್ಯನಾಗಿ, ವಿಧೇಯನಾಗಿ ಆಶ್ಚರ್ಯಚೇಷ್ಟಿತಗಳನ್ನು ಮಾಡಿದ ಮಾಯಾವಿಯೂ ಆಗಿದ್ದಾನೆ ಎಂದೂ - ವಿಶೇಷಾರ್ಥದ ಪ್ರಕಾರ ನಾನು ನನ್ನದು ಎಂಬ ಅಹಂಕಾರ ಮಮಕಾರಗಳೆಂಬ ಬಲವುಳ್ಳ ಆನೆಗಳನ್ನು ನಾಶಮಾಡುವವನೂ; ತಾವು ಪರಮಾತ್ಮನಿಗೆ ಶೇಷಭೂತರು (ದಾಸರು) ಎಂಬ ಜ್ಞಾನವಿಲ್ಲದವರಲ್ಲಿರುವ ಅಹಂಕಾರವನ್ನು ತಾವು ಭಗವಂತನಿಗೆ ದಾಸ ಭೂತರೆಂಬ ಸಾತ್ತ್ವಿಕ ಅಹಂಕಾರವಾಗಿ ಮಾರ್ಪಡಿಸುವವನೂ ಆದ ಪರಮಾತ್ಮನು ತನ್ನ ಹಿರಿಮೆಯನ್ನು ಗಮನಿಸದೆ ಭಕ್ತರೆಲ್ಲರೊಂದಿಗೆ ಪರಮಹಿತ ಬಂಧುವಾಗಿ ಕಲೆತು ತನ್ನ ಸೌಶೀಲ್ಯವನ್ನು ಪ್ರಕಾಶಿಸಿ 'ಮಾಯನ್' ಅಂದರೆ ಆಶ್ಚರ್ಯ ಚೇಷ್ಟಿತನಾಗಿದ್ದಾನೆ ಎಂದೂ ಹೇಳಿದ್ದಾಳೆ.

ಒಟ್ಟಿನಲ್ಲಿ ಈ ಮೊದಲ 15 ಪಾಶುರಗಳಲ್ಲಿ ಪರಮಾತ್ಮನ ಪರತ್ವವೂ, ಅವನ ದಿವ್ಯರೂಪಗಳೂ ಅವನ ಸೌಶೀಲ್ಯ, ಸೌಲಭ್ಯಾದಿ ಗುಣಗಳೂ, ಅವನ ಅವತಾರಕಾಲದ ದಿವ್ಯ ಚೇಷ್ಟಿತಾದಿಗಳೂ, ಅವನ ರಕ್ಷಕತ್ವ ದಯಾಗುಣಗಳೂ ಮತ್ತು ಅವನ ದಿವ್ಯನಾಮದ ಮಹಿಮೆಯೂ ಪ್ರತಿಪಾದಿಸಲ್ಪಟ್ಟಿವೆ. ಆದ್ದರಿಂದ ಈ ಪಾಶುರಗಳನ್ನು ಹಾಡುವುದರಿಂದ ಪರಮಾತ್ಮನ ದಿವ್ಯರೂಪ ಗುಣಚೇಷ್ಟಿತಾದಿಗಳನ್ನು ಸ್ಮರಿಸುವುದರೊಂದಿಗೆ ಅವನ ನಾಮ ಸಂಕೀರ್ತನೆಯೂ ಮಾಡಲ್ಪಟ್ಟು ಪರಮಾತ್ಮನೇ ರಕ್ಷಕನೆಂಬ ಮಹಾ ವಿಶ್ವಾಸವುಂಟಾಗುವುದಕ್ಕೂ, ಅವನ ದಿವ್ಯನಾಮರೂಪಗುಣಚೇಷ್ಟಿತಾದಿಗಳ ಅನುಸಂಧಾನದಿಂದ ಭಗವಂತನಲ್ಲಿ ಭಕ್ತಿ ಹುಟ್ಟುವುದಕ್ಕೂ ಮತ್ತು ಅವನ ಗುಣಗಾನದಿಂದ ಭಕ್ತಿಬೆಳೆಯುವುದಕ್ಕೂ ಆಸ್ಪದವುಂಟಾಗುತ್ತದೆ ಮತ್ತು ಅವನ ಅನುಗ್ರಹವೂ ಲಭಿಸುತ್ತದೆ ಎಂದು ನಮ್ಮ ಪೂರ್ವಾಚಾರ್ಯರುಗಳು ಉಪದೇಶ ನೀಡಿದ್ದಾರೆ.

# 3ನೆಯ ವಿಭಾಗ

## ಪಾಶುರಗಳು 16 ರಿಂದ 20

ಈ ಐದು ಪಾಶುರಗಳು, ಪರಮಾತ್ಮನಿಗೆ ಪ್ರಿಯರಾಗಿ ಕೈಂಕರ್ಯಪರರಾಗಿ ಇರುವವರನ್ನೂ, ಶ್ರೀದೇವಿಯನ್ನೂ, ಪ್ರಾರ್ಥಿಸಿ, ಅವರೊಂದಿಗೆ ಕೂಡಿ ಶ್ರಿಯಪತಿಯಾದ ಪರಮಾತ್ಮನಿಗೆ ಸುಪ್ರಭಾತ ಹಾಡಿ ಅವನನ್ನು ಪ್ರಾರ್ಥಿಸುವ ಪಾಶುರಗಳಾಗಿವೆ. 6ನೇ ಪಾಶುರದಿಂದ 16ನೇ ಪಾಶುರದವರೆಗಿನ ಹಿಂದಿನ 10 ಪಾಶುರಗಳಲ್ಲಿ ಗೋದಾದೇವಿಯು ಭಗವದ್ಗುಣಾನುಭವದಲ್ಲಿ ನಿರತರಾಗಿ ಆನಂದದಿಂದ ಮಲಗಿರುವ ಭಗವದ್ಭಕ್ತರಾದ ಗೋಪಕನ್ಯೆಯರನ್ನೆಲ್ಲಾ ಎಬ್ಬಿಸಿ ಅವರೊಂದಿಗೆ ಕಲೆತುಕೊಂಡಳು. ಈಗ ಅವರೆಲ್ಲರೂ ಒಟ್ಟಿಗೆ ಸೇರಿ ಶ್ರೀ ಕೃಷ್ಣಪರಮಾತ್ಮನನ್ನು ಸಂದರ್ಶಿಸಿ, ಅವನಿಗೆ ಸುಪ್ರಭಾತಹಾಡಿ, ಮಂಗಳಾಶಾಸನ ಮಾಡಬೇಕೆಂಬ ಉದ್ದೇಶದಿಂದ ನಂದಗೋಪಾಲನ ಅರಮನೆಗೆ ಹೋಗುತ್ತಾರೆ. 'ನೀರಾಡ ಪ್ಪೋದುವೀರ್‌ಪ್ಪೋದುಮಿನೋ' ಎಂದು ಎಲ್ಲರನ್ನೂ ಎಬ್ಬಿಸಿ, ಸ್ನಾನಮಾಡಲು ಇಷ್ಟವಿರುವವರೆಲ್ಲಾ ಬನ್ನಿರಿ ಎಂದು ಮೊದಲನೆಯ ಪಾಶುರದಲ್ಲಿ ಕರೆದ ಗೋದಾದೇವಿಯು, ಅವರೆಲ್ಲರನ್ನೂ ಕರೆದುಕೊಂಡು ಸ್ನಾನಮಾಡಲು ಯಾವ ತಟಾಕಕ್ಕೂ ಹೋಗದೆ ನಂದಗೋಪಾಲನ ಅರಮನೆಗೆ ಬಂದುದೇತಕ್ಕೆ? ''ನೀರಾಟ್ಟ'' ಎಂಬ ಪದವು ತಿರುಪ್ಪಾವೈಯಲ್ಲಿ ಅನೇಕ ಕಡೆ ಹೇಳಿದೆಯಲ್ಲಾ; ಅದರ ಅರ್ಥವೇನು ? ಎಂದರೆ - ''ನೀರಾಟ್ಟ''ವೆಂಬುದು ಕೇವಲ ತಣ್ಣೀರಿನ ಸ್ನಾನಮಾತ್ರವಲ್ಲ. ದೇಹಕ್ಕೆ ಹೇಗೆ ತಣ್ಣೀರಿನ ಸ್ನಾನದಿಂದ ಶುದ್ಧಿ ಉಂಟಾಗುತ್ತದೆಯೋ, ಅದೇ ರೀತಿ ಭಗವದ್ಗುಣಾನುಭವದಿಂದ ಆತ್ಮಶುದ್ಧಿ ಉಂಟಾಗುತ್ತದೆ. ಭಗವಂತನೇ ಒಂದು

ತಾಮರೈ ತಟಾಕವೆಂದು ಹೇಳಿದೆ. ಆದ್ದರಿಂದ ಭಗವಂತನೆಂಬ ಆ ತಟಾಕದ ಬಳಿ ಹೋಗುತ್ತಾರೆ. ಶ್ರೀಕೃಷ್ಣಪರಮಾತ್ಮನನ್ನು ಹುಡುಕಿಕೊಂಡು ನಂದಗೋಪನ ಅರಮನೆಗೆ ಹೋಗುತ್ತಾರೆ. ಅವನನ್ನು ದರ್ಶಿಸಿ ಅವನ ಸಂಕೀರ್ತನೆ ಮಾಡಿ ಭಗವದ್ಗುಣಾನುಭವದಲ್ಲಿ ಮುಳುಗುವುದನ್ನೇ ಇಲ್ಲಿ "ನೀರಾಟ್ಟ"ವೆಂದು ಗೋದೆ ತಿಳಿಸಿದ್ದಾಳೆ.

**"ಶೆಯ್ಯಾದನ ಶೆಯ್ಯೋಮ್"** - ಅಂದರೆ ಹಿರಿಯರು ಮಾಡದುದನ್ನು ನಾವು ಮಾಡುವುದಿಲ್ಲ ಎಂದು ಎರಡನೆಯ ಪಾಶುರದಲ್ಲಿ ಹೇಳಿದ್ದನ್ನು ಇಲ್ಲಿ ಅನುಷ್ಠಿಸಿ ತೋರಿಸಿದ್ದಾರೆ. ಭಗವದ್ಭಕ್ತರು, ಭಗವತ್‌ಕೈಂಕರ್ಯಪರರು ಮುಂತಾದ ಭಾಗವತರನ್ನು ಮುಂದಿಟ್ಟುಕೊಂಡು ಭಗವಂತನ ಬಳಿ ಹೋಗುವ ಹಿರಿಯರ ಕ್ರಮವನ್ನು ಇಲ್ಲಿ ಅನುಷ್ಠಿಸಿದ್ದಾರೆ. ಹಿಂದಿನ ಹತ್ತು ಪಾಶುರಗಳಲ್ಲಿ ಭಕ್ತರನ್ನು ಎಬ್ಬಿಸಿ ಅವರೊಂದಿಗೆ ಕಲೆತುಕೊಂಡರು. ಈಗ ವಿಣ್ಣೋರನ್ನು ಅಂದರೆ ಭಗವಂತ್ಕೈಂಕರ್ಯಪರರ ಸಹಾಯವನ್ನು ಕೋರುತ್ತಾರೆ. ಭಗವಂತನಿಗೆ ಅಂತರಂಗ ಕೈಂಕರ್ಯ ಮಾಡುವವರನ್ನು ವಿಣ್ಣೋರ್ ಎಂದು ಹೇಳಿದೆ. ಹೀಗೆ ಏನೂ ಅರಿಯದ ಈ ಗೋಪಿಯರು ಮಹಾಜ್ಞಾನಿಗಳ ಅನುಷ್ಠಾನವನ್ನು ಆಚರಿಸಿದ್ದಾರೆ.

ಪರಮಾತ್ಮನಿಗೆ ತನ್ನ ಭಕ್ತರಲ್ಲಿ ಅತ್ಯಂತ ಪ್ರೀತಿ. ಆದ್ದರಿಂದಲೇ "ತ್ವದ್ಭೃತ್ಯ ಭೃತ್ಯ ಪರಿಚಾರಕ ಭೃತ್ಯ ಭೃತ್ಯ ಭೃತ್ಯಸ್ಯ ಭೃತ್ಯ ಇತಿ ಮಾಂಸ್ಮರ ಲೋಕನಾಥ" ಎಂದು ಮುಕುಂದಮಾಲೆಯಲ್ಲಿ ಶ್ರೀಕುಲಶೇಖರಾಳ್ವಾರ್‌ - 'ಪರಮಾತ್ಮನೇ, ನನ್ನನ್ನು ನಿನ್ನ ಸೇವಕರ ಮತ್ತು ಭಕ್ತರ ಸೋಪಾನದಲ್ಲಿ ಏಳನೆಯ ಕೆಳಮೆಟ್ಟಿಲಿನವನನ್ನಾಗಿ ಸ್ಮರಿಸಿಕೊಂಡು ಕಾಪಾಡು" ಎಂದು ಪ್ರಾರ್ಥನೆ ಸಲ್ಲಿಸಿದ್ದಾರೆ. ಅದೇ ರೀತಿ ಇಲ್ಲಿ ಗೋದಾದೇವಿಯು ಪರಮಾತ್ಮನಿಗೆ ಅತ್ಯಂತ ಪ್ರಿಯರಾದ ಅವನ ಕೈಂಕರ್ಯಪರರನ್ನು ಪ್ರಾರ್ಥಿಸಿದ್ದಾಳೆ.

# ಪಾಶುರ - 16

ಈ ಪಾಶುರದಲ್ಲಿ ಹೆಣ್ಣು ಮಕ್ಕಳೆಲ್ಲರೂ ಗೋದಾದೇವಿಯೊಂದಿಗೆ ಒಟ್ಟಿಗೆ ಸೇರಿ ಹೋಗಿ, ನಂದ ಗೋಪಾಲನ ಅರಮನೆಯ ಬಾಗಿಲ ಬಳಿ ನಿಂತು, ಬಾಗಿಲು ತೆಗೆಯುವಂತೆ ಕೋವಿಲ್‌ಕಾಪ್ಪಾನ್ ಮತ್ತು ವಾಶಲ್‌ಕಾಪ್ಪಾನ್ - ಅಂದರೆ ದೇವಸ್ಥಾನದ ಕ್ಷೇತ್ರಪಾಲಕ ಮತ್ತು ದ್ವಾರಪಾಲಕರ ಸಹಾಯವನ್ನು ಪ್ರಾರ್ಥಿಸುತ್ತಾರೆ ಎಂಬುದು ವಾಕ್ಯಾರ್ಥ. ಆಚಾರ್ಯರನ್ನು ನಮಸ್ಕರಿಸಿ ಅವರ ಸಹಾಯವನ್ನು ಕೋರುತ್ತಾರೆ ಎಂಬುದು ವಿಶೇಷಾರ್ಥ.

**ನಾಯಕನಾಯ್ ನಿನ್ರನನ್ದಗೋಪನುಡ್ಯೆಯ**
**ಕೋಯಿಲ್ ಕಾಪ್ಪಾನೇ ಕೊಡಿತ್ತೋನ್ರುಂ ತೋರಣ**
**ವಾಶಲ್ ಕಾಪ್ಪಾನೇ ಮಣಿಕ್ಕದವಂ ತಾಳ್ ತಿರವಾಯ್**
**ಆಯರ್ ಶಿರುಮಿಯರೋಮುಕ್ಕು ಅರೈ ಪರೈ**
**ಮಾಯನ್ ಮಣಿವಣ್ಣನ್ ನೆನ್ನಲೇ ವಾಯ್‌ನೇರ್‌ನ್ದಾನ್**
**ತೂಯೋಮಾಯ್ ವನ್ದೋಂ ತುಯಿಲೆಳಪಾಡುವಾನ್**
**ವಾಯಾಲ್ ಮುನ್ನ ಮುನ್ನಂ ಮಾತ್ತಾದೆಯಮ್ಮಾನೀ**
**ನೇಶ ನಿಲೈಕ್ಕದುವುಂ ನೀಕ್ಕೇಲೋ ರೆಮ್ಬಾವಾಯ್.**

"ನಾಯಕನಾಗಿರುವ ಶ್ರೀ ನಂದಗೋಪಾಲನ ಮಂದಿರದ ಮಹಾದ್ವಾರವನ್ನು ಕಾಯುವವನೇ ! ಧ್ವಜ ಪಟಗಳಿಂದಲೂ, ತೋರಣಗಳಿಂದಲೂ ಅಲಂಕರಿಸಲ್ಪಟ್ಟ ಒಳಬಾಗಿಲನ್ನು ಕಾಯುವವನೇ ! ಮಣಿಗಳಿಂದ ಅಲಂಕೃತವಾದ ಬಾಗಿಲಿನ ಕವಾಟವನ್ನು ತೆಗೆಯುವವನಾಗು. ಗೋಪಕುಲದ ಹೆಣ್ಣುಮಕ್ಕಳಾದ ನಮಗೆ ಮಾಯಾಚೇಷ್ಟಿತನೂ, ನೀಲಮಣಿವರ್ಣವುಳ್ಳವನೂ ಆದ ಶ್ರೀಕೃಷ್ಣನು, ಘೋಷಿಸುವ ಪರೈ ಎಂಬ

ವಾದ್ಯವನ್ನು ಕೊಡುವುದಾಗಿ ನೆನ್ನೆಯೇ ವಾಗ್ದಾನ ಮಾಡಿದ್ದಾನೆ. ಅವನಿಗೆ ಸುಪ್ರಭಾತ ಹಾಡುವುದಕ್ಕಾಗಿ ಬಂದಿದ್ದೇವೆ. ಸ್ವಾಮಿಯೇ, ಮೊಟ್ಟ ಮೊದಲಿಗೇ ನಮ್ಮನ್ನು ತಡೆಯ ಬೇಡ. ಭದ್ರವಾಗಿರುವ ಈ ಮೊದಲ ಬಾಗಿಲನ್ನು ನೀನೇ ತೆಗೆಯಬೇಕು. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ಫಲಿಸುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ನಾಯಕನಾಯ್ ನಿನ್ರ ನಂದಗೋಪನುಡೈಯ ಕೋಯಿಲ್ ಕಾಪ್ಪಾನೇ** - ಅಂದರೆ ನಾಯಕನಾದ ನಂದಗೋಪನ ಅರಮನೆಯ ಬಾಗಿಲು ಕಾಯುವವನೇ ಅಥವಾ ನಂದಗೋಪನ ಅರಮನೆಯ ಬಾಗಿಲು ಕಾಯುವ ನಾಯಕನೇ - ಎಂದು ಎರಡು ವಿಧವಾದ ಅರ್ಥವು ಇಲ್ಲಿ ತಿಳಿಸಲ್ಪಟ್ಟಿದೆ. ಶ್ರೀಕೃಷ್ಣಪರಮಾತ್ಮನಿಗೆ ತಂದೆಯಾಗಿರುವ ನಂದಗೋಪನನ್ನು ನಾಯಕನೆಂದು ಕರೆದಿದ್ದಾರೆ. ಶ್ರೀಕೃಷ್ಣನು ನಂದಗೋಪನಿಗೆ ಮಗನಾಗಿ ಅವತರಿಸಿ ಅವನ ಅಧೀನದಲ್ಲಿದ್ದುದರಿಂದ 'ಕೃಷ್ಣನ ಕೋಯಿಲ್' ಎಂದು ಹೇಳದೆ 'ನಂದಗೋಪ್ಪನ ಕೋಯಿಲ್' ಎಂದು ಹೇಳಿದ್ದಾರೆ. ಇದು ಅವನಿಗೂ ಬಹಳ ಪ್ರಿಯವಾದ ಮಾತಾಗಿದೆ. ಅದೇ ರೀತಿ ಶ್ರೀಕೃಷ್ಣನ ಮನೆಯನ್ನು ಕಾಯುತ್ತಾ ಅವನನ್ನು ರಕ್ಷಿಸುತ್ತಿರುವ ದ್ವಾರಪಾಲಕನನ್ನೂ ನಾಯಕನೆಂದು ಗೌರವಿಸಿ ಕರೆದಿದ್ದಾರೆ. ಶ್ರೀಕೃಷ್ಣನಂತಹ ಮಹಾರತ್ನವನ್ನು ಕಾಪಾಡಿ ಉಪಕರಿಸುತ್ತಿರುವ ಇವರುಗಳನ್ನು-ನಾಯಕರೆಂದು ಕೊಂಡಾಡುತ್ತಾರೆ.

**ಕೊಡಿತ್ತೋನ್ರುಂ ತೋರಣವಾಶಲ್ ಕಾಪ್ಪಾನೇ ಮಣಿಕ್ಕದವಂ ತಾಳ್‌ತಿರವಾಯ್** :- ಅಂದರೆ (ಹೊರಬಾಗಿಲು ದಾಟಿದ ಮೇಲೆ) ಧ್ವಜಗಳಿಂದ ಪ್ರಕಾಶಿಸುತ್ತಿರುವ ತೋರಣ ಕಟ್ಟಿರುವ ಒಳಬಾಗಿಲು ಕಾಯುವವರೇ, ಮಣಿ ಮಯವಾದ ಆ ಬಾಗಿಲಿನ ಚಿಲಕವನ್ನು ತೆಗೆಯಿರಿ ಎಂದು ಪ್ರಾರ್ಥಿಸುತ್ತಾರೆ. ಗೋದಾದೇವಿಗೆ ಅರ್ಚಾವತಾರದಲ್ಲಿ ಬಹಳ ಶ್ರದ್ಧೆ ಭಕ್ತಿ ಇದ್ದುದರಿಂದ ಅವಳು ವಟಪತ್ರ ಶಾಯಿಯನ್ನೇ ಶ್ರೀಕೃಷ್ಣನನ್ನಾಗಿ ಭಾವಿಸಿಕೊಂಡು, ಅವನ

ದೇವಸ್ಥಾನದ ಹೊರಬಾಗಿಲಿನ ಮತ್ತು ಒಳಬಾಗಿಲಿನ ದ್ವಾರಪಾಲಕರನ್ನು, ಬಾಗಿಲು ತೆಗೆದು ಭಗವಂತನ ದರ್ಶನ ಪಡೆಯಲು ಸಹಾಯ ಮಾಡುವಂತೆ ಪ್ರಾರ್ಥಿಸುತ್ತಾಳೆ. ದೇವಸ್ಥಾನದ ಗೋಪುರದ ಬಾಗಿಲ ಬಳಿ ಇರುವವನನ್ನು 'ಕೋಯಿಲ್ ಕಾಪ್ಪಾನ್;' ಎಂದೂ ಧ್ವಜಸ್ಥಂಭದ ಹತ್ತಿರ ಇರುವ ಬಾಗಿಲ ಬಳಿ ಇರವವನನ್ನು 'ತೋರಣ ವಾಯಿಲ್ ಕಾಪ್ಪಾನ್' ಎಂದೂ ಕರೆದಿದ್ದಾಳೆ ಎಂದು ಅಭಿಪ್ರಾಯ.

ಹೀಗೆ ಇವರು ದ್ವಾರಪಾಲಕರ ಹೆಸರು ಹೇಳಿ ಕರೆಯದೆ ಅವರನ್ನು 'ಕೋಯಿಲ್ ಕಾಪ್ಪಾನೇ' 'ವಾಯಿಲ್ ಕಾಪ್ಪಾನೇ' ಎಂದು ಹೇಳಿರುವುದೇಕೆ ಎಂದರೆ - ಭಗವಂತನ ಕೈಂಕರ್ಯ ಮಾಡುವವರನ್ನು ಆ ಪವಿತ್ರವಾದ ಕೈಂಕರ್ಯಗಳ ಮೂಲಕ ಸಂಬೋಧನೆ ಮಾಡಿ ಕರೆಯುವುದು ಅವರಿಗೆ ಬಹಳ ಸಂತೋಷಕರವಾಗಿಯೂ, ಹೆಮ್ಮೆ ಉಂಟುಮಾಡುವಂತಹುದಾಗಿಯೂ ಇದೆ ಮತ್ತು ಚೇತನನು ಮಾಡುವ ಭಗವತ್ ಕೈಂಕರ್ಯದ ಮೂಲಕವಾಗಿ ಬರುವ ಹೆಸರೇ ಅವನಿಗೆ ಸ್ವರೂಪಾನುಗುಣವಾದುದಾಗಿದೆ ಎಂಬ ಶಾಸ್ತ್ರಾರ್ಥವೂ ಇದರಿಂದ ಪ್ರತಿಪಾದಿಸಲ್ಪಟ್ಟಿದೆ.

**ಆಯರ್‌ಶಿರುಮಿಯರೋಮುಕ್ಕುಅರೈಪರೈ ಮಾಯನ್ ಮಣಿವಣ್ಣನ್ ನೆನ್ನಲೇ ವಾಯ್‌ನೇರ್‌ನ್ದಾನ್** :- ಅಂದರೆ ನಾವು ಗೋಕುಲದ ಬಾಲಿಕೆಯರು; ನಮಗೆ ಆಶ್ಚರ್ಯಚೇಷ್ಟಿತನೂ, ನೀಲಮಣಿಯಂತೆ ಪ್ರಕಾಶವಾದ ಬಣ್ಣವುಳ್ಳವನೂ ಆದ ಶ್ರೀಕೃಷ್ಣನು ನಿನ್ನೆಯೇ ನಮ್ಮ ವ್ರತಕ್ಕಾಗಿ ಪರೈ ಎಂಬ ವಾದ್ಯವನ್ನು ಕೊಡುವುದಾಗಿ ಮಾತು ಕೊಟ್ಟಿದ್ದಾನೆ - ಎಂದು ಅರ್ಥ.

**ತೂಯೋಮಾಯ್ ವನ್ದೋಂ ತುಯಿಲೆಳಪಾಡುವಾನ್** :- ಅಂದರೆ ಕಾಯೇನವಾಚಾಮನಸಾ ನಾವು ಪರಿಶುದ್ಧರಾಗಿ, ಅನನ್ಯ ಪ್ರಯೋಜನರಾಗಿ, ಅಂದರೆ ಬೇರೆ ಏನನ್ನೂ ಅಪೇಕ್ಷಿಸದೆ ಭಗವಂತನಿಗೆ ಸುಪ್ರಭಾತ ಹಾಡಲು ಬಂದಿದ್ದೇವೆ ಎಂದು ಅರ್ಥ.

**ವಾಯಾಲ್ ಮುನ್ನಮುನ್ನಂ ಮಾತ್ತಾದೆ ಅಮ್ಮಾನೀ** :- ಅಂದರೆ ಸ್ವಾಮಿಯೇ ನೀವು ನಿಮ್ಮ ಬಾಯಿಂದ ಮೊಟ್ಟಮೊದಲು ಇಲ್ಲ ಎಂದು ಹೇಳಿ ಬಿಡಬೇಡಿರಿ-ಎಂದು ಅರ್ಥ.

**ನೇಶನಿಲೈಕ್ಕದವುಂನೀಕ್ಕು** :- ಅಂದರೆ ಭದ್ರವಾಗಿರುವ ಈ ಬಾಗಿಲನ್ನು ನೀವೇ ತೆಗೆಯಿರಿ - ಎಂದು ಅರ್ಥ - ಈ ಪಾಶುರದಲ್ಲಿ ಎಬ್ಬಿಸಲ್ಪಡುವವರು ನಿದ್ರೆಮಾಡುತ್ತಿರುವವರಲ್ಲ. ಅವರು ಭಗವಂತನ ವಾಸಸ್ಥಾನದ ಬಾಗಿಲು ಕಾಯುವವರಾಗಿರುವುದರಿಂದ ನಿದ್ರೆ ಮಾಡಲು ಅವರಿಗೆ ಅವಕಾಶವೇ ಇಲ್ಲ. ಆದ್ದರಿಂದ ಅವರನ್ನು 'ಎಳುಂದಿರಾಯ್' ಎಂದು ಹೇಳಿ ಎಬ್ಬಿಸದೆ - 'ಮಣಿಕ್ಕದವುಂ ತಾಳ್ ತಿರವಾಯ್' ಎಂದೂ 'ನೇಯನಿಲೈಕ್ಕದವುಂ ನೀಕ್ಕು' ಎಂದೂ ಬಾಗಿಲು ತೆಗೆದು ತಮಗೆ ಒಳಗೆ ಪ್ರವೇಶಿಸಲು ಅನುಮತಿ ನೀಡುವಂತೆ ಪ್ರಾರ್ಥಿಸುತ್ತಾರೆ.

**ಏಲೋ ಎಂಪಾವಾಯ್** :- ಹೀಗೆ ಮಾಡಿದರೆ ನಮ್ಮ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು.

ಈ ಪಾಶುರದಲ್ಲಿ ಆಚಾರ್ಯರನ್ನು ಜ್ಞಾನಾರ್ಜನೆಗಾಗಿ ಪ್ರಾರ್ಥಿಸುತ್ತಾರೆ ಎಂಬುದು ಇದರ ವಿಶೇಷಾರ್ಥ. ಪರಮಾತ್ಮನ ವಾಸಸ್ಥಾನವಾದ ತಿರುಮಂತ್ರವನ್ನು ಉಪದೇಶಿಸಿ ಕಾಪಾಡುತ್ತಿರುವ ಆಚಾರ್ಯರೇ, ನಮ್ಮ ಹೃದಯದ ಬಾಗಿಲು ತೆಗೆದು ನಮಗೆ ಆತ್ಮಪರಮಾತ್ಮರ ದರ್ಶನ ಮಾಡಿಸಿರಿ; 'ಮಾಯನ್ ಮಣಿವಣ್ಣನ್ ನೆನ್ನಲೇ ವಾಯ್‌ನೇರ್‌ನ್ದಾನ್' ಅಂದರೆ ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ 'ಯೋಗಕ್ಷೇಮಂವಹಾಮ್ಯಹಂ' ಎಂದೂ "ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ" ಎಂದೂ, ತನ್ನನ್ನು ಸದಾ ಧ್ಯಾನಿಸುವವರನ್ನೂ ತನಗೆ ಶರಣಾದವರನ್ನೂ ರಕ್ಷಿಸುವುದಾಗಿ ಹಿಂದೆಯೇ ಭರವಸೆ ನೀಡಿದ್ದಾನೆ. ಆದ್ದರಿಂದ ನಮ್ಮ ಅಜ್ಞಾನದ ಬಾಗಿಲನ್ನು ನೀವೇ ತೆಗೆದು ನಮಗೆ, ಭಗವಂತನನ್ನು ಧ್ಯಾನಿಸಿ ಅವನಲ್ಲಿ ಶರಣಾಗುವ ಮಾರ್ಗವನ್ನು ನೀವೇ

ಉಪದೇಶಿಸಿರಿ ಎಂದು ಪ್ರಾರ್ಥಿಸುತ್ತಾರೆ ಎಂಬುದು ಈ ಪಾಶುರದ ವಿಶೇಷಾರ್ಥದ ಸಾರಾಂಶ.

ಭಗವಂತನ ಕೃಪೆಗೆ ಸದಾಚಾರ್ಯರ ಸಂಬಂಧವು ಅತ್ಯಾವಶ್ಯಕ. ಅಂತಹ ಆಚಾರ್ಯರು ಲಭಿಸುವುದೂ ಪರಮಾತ್ಮನ ಕೃಪಾವಿಶೇಷದಿಂದಲೇ. ಅಂತಹ ಆಚಾರ್ಯರ ಹಿರಿಮೆಯು ಈ ಪಾಶುರದಲ್ಲಿ ಹೇಳಲ್ಪಟ್ಟಿದೆ. ಸ್ತೋತ್ರರತ್ನದಲ್ಲಿ ಶ್ರೀ ಯಾಮುನಾಚಾರ್ಯರು ಮೊದಲು ಆಚಾರ್ಯರಾದ ನಾಥಮುನಿಗಳನ್ನು ಮೂರು ಶ್ಲೋಕಗಳಲ್ಲಿ ಪ್ರಾರ್ಥಿಸಿ ಅನಂತರ ಭಗವಂತನನ್ನು ಸ್ತೋತ್ರ ಮಾಡಿದ್ದಾರೆ; ಕೊನೆಯಲ್ಲೂ 'ಪಿತಾಮಹಂ ನಾಥಮುನಿಂ ವಿಲೋಕ್ಯ' ಎಂದು ಮತ್ತೆ ಆಚಾರ್ಯರ ಅನುಗ್ರಹವನ್ನು ಪ್ರಾರ್ಥಿಸಿದ್ದಾರೆ. ಅದೇ ರೀತಿ ಗೋದಾದೇವಿಯು ಈ ಪಾಶುರದಲ್ಲಿ ಆಚಾರ್ಯರ ಅನುಗ್ರಹವನ್ನು ಮೊದಲು ಪ್ರಾರ್ಥಿಸಿದ್ದಾಳೆ. ಇದು ಶ್ರೀರಾಮಾನುಜಾಚಾರ್ಯರನ್ನು ಪ್ರಾರ್ಥಿಸುವ ಪಾಶುರವೆಂಬ ಮತ್ತೊಂದು ವಿಶೇಷಾರ್ಥವನ್ನೂ ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.

# ಪಾಶುರ - 17

ದ್ವಾರಪಾಲಕರ ಅನುಮತಿ ಪಡೆದು ನಂದಗೋಪನ ಅರಮನೆಯ ಒಳಗೆ ಪ್ರವೇಶಿಸಿದ ಗೋಪಿಯರು, ಶ್ರೀಕೃಷ್ಣನಿಗೆ ಅವತಾರ ಕಾಲದಲ್ಲಿ ತಂದೆ ತಾಯಿಗಳಾಗಿದ್ದ ನಂದಗೋಪನನ್ನೂ, ಯಶೋದೆಯನ್ನೂ ಮೊದಲು ಎಬ್ಬಿಸಿ, ಅನಂತರ ಶ್ರೀಕೃಷ್ಣ ಪರಮಾತ್ಮನನ್ನೂ, ಅವನಿಗೆ ಸರ್ವದಾ ಸೇವೆಸಲ್ಲಿಸುತ್ತಿದ್ದ ಅವನ ಅಣ್ಣ ಬಲರಾಮನನ್ನೂ ಎಬ್ಬಿಸುತ್ತಾರೆ ಎಂಬುದು ಈ ಪಾಶುರದ ವಾಕ್ಯಾರ್ಥ. ಆಚಾರ್ಯರನ್ನೂ, ಅವರು ಉಪದೇಶಿಸುವ ಭಗವನ್ನಾಮ ವಾಚಕವಾದ ತಿರುಮಂತ್ರವನ್ನೂ, ಮಂತ್ರ ಪ್ರತಿಪಾದ್ಯನಾದ ಪರಮಾತ್ಮನನ್ನೂ, ಅವನ ಕೈಂಕರ್ಯಪರರನ್ನೂ, ಭಾಗವತ ಕೈಂಕರ್ಯ ಪುರುಷಾರ್ಥವನ್ನು ತಮಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾರೆ ಎಂಬುದು ಇದರ ವಿಶೇಷಾರ್ಥ.

**ಅಂಬರಮೇ ತಣ್ಣೀರೇ ಶೋರೇಯರಂ ಶೆಯ್ಯುಂ**
**ಎಂಪೆರುಮಾನ್ ನಂದಗೋಪಾಲಾ ಎಳುಂದಿರಾಯ್**
**ಕೊಂಬನಾರ್ಕೆಲ್ಲಾಂ ಕೊಳುಂದೇ ಕುಲವಿಳಕ್ಕೇ**
**ಎಂಪೆರುಮಾಟ್ಟಿಯಶೋದಾಯರಿವುರಾಯ್**
**ಅಂಬರ ಮೂಡರುತ್ತು ಓಂಗಿಯುಲಹಳನ್ದ**
**ಉಂಬರ್‌ಕೋಮಾನೇ ಉರಂಗಾದೆಳುಂದಿರಾಯ್**
**ಶೆಂಪೊರ್ಕಳಲಡಿ ಚ್ಚೆಲ್ವಾಬಲದೇವಾ**
**ಉಂಬಿಯುಂ ನೀಯುಂ ಉರಂಗೇಲೋರೆಮ್ಬಾವಾಯ್.**

"(ಉಡಲು) ವಸ್ತ್ರಗಳನ್ನೂ, (ಕುಡಿಯಲು) ತಣ್ಣೀರನ್ನೂ, (ಭುಜಿಸಲು) ಅನ್ನವನ್ನೂ ಸಮೃದ್ಧವಾಗಿ ದಾನಮಾಡುವ, ನಮಗೆ ಸ್ವಾಮಿಯಾದ ನಂದಗೋಪಾಲರೇ, ಏಳಿರಿ. ಹೆಂಗಸರಿಗೆಲ್ಲಾ ನಾಯಕಿಯಾಗಿ, ಗೋಪಕುಲಕ್ಕೆ

ಕುಲದೀಪದಂತೆ ಪ್ರಕಾಶಿಸುತ್ತಿರುವ ಯಶೋದಾ ದೇವಿಯೇ, ಎಚ್ಚರಗೊಂಡು ಏಳುವವಳಾಗು. ಆಕಾಶವನ್ನು ಭೇದಿಸಿ, ಎತ್ತರವಾಗಿ ಬೆಳೆದು ಲೋಕಗಳನ್ನೆಲ್ಲಾ ಅಳೆದ ದೇವಾದಿ ದೇವನೇ (ಶ್ರೀಕೃಷ್ಣ ಪರಮಾತ್ಮನೇ)! ನಿದ್ರೆಯಿಂದ ಏಳುವವನಾಗು. ಕೆಂಪಾಗಿ ರಮ್ಯವಾಗಿರುವ ಪಾದಭೂಷಣವನ್ನು ಧರಿಸಿರುವ ಪಾದಗಳುಳ್ಳ ಶ್ರೀಮಂತನಾದ ಬಲರಾಮನೇ ! ನಿನ್ನ ತಮ್ಮನೂ ನೀನೂ ನಿದ್ರೆಯಿಂದ ಏಳಿರಿ - ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು''. ಇದು ಈ ಪಾಶುರದ ವಾಕ್ಯಾರ್ಥ.

**ಅಂಬರಮೇ ತಣ್ಣೀರೇ ಶೋರೇ ಅರಂ ಶೈಯ್ಯುಂ ಎಂಪೆರುಮಾನ್ ನಂದಗೋಪಾಲಾ ಎಳುಂದಿರಾಯ್:** :- ವಸ್ತ್ರಗಳನ್ನೇ, ತಣ್ಣೀರನ್ನೇ, ಅನ್ನವನ್ನೇ ದಾನಮಾಡುವ ಸ್ವಾಮಿಯಾದ ನಂದಗೋಪಾಲರೇ, ನೀವು ಏಳಿರಿ ಎನ್ನುತ್ತಾರೆ. ಶರೀರಕ್ಕೆ ಬೇಕಾಗುವ ವಸ್ತ್ರಗಳೇನು, ಧಾರಕವಾಗಿರುವ ನೀರೇನು, ಪೋಷಕವಾಗಿರುವ ಅನ್ನವೇನು ಇವುಗಳನ್ನೆಲ್ಲಾ ಫಲಾಪೇಕ್ಷೆ ಇಲ್ಲದೆ ಸತ್ಪಾತ್ರರಿಗೆ ದಾನಮಾಡುವವರೇ ಎಂದು ನಂದಗೋಪರನ್ನು ಕರೆಯುತ್ತಾರೆ. ಆದರೆ ಅವರು ಇವುಗಳನ್ನೆಲ್ಲಾ ದಾನ ಕೊಟ್ಟದ್ದಾಗಿ ಎಲ್ಲಿಯೂ ತಿಳಿದುಬಂದಿಲ್ಲ. ಅವರಿಗೆ ಪುತ್ರನಾದ ಶ್ರೀಕೃಷ್ಣ ಪರಮಾತ್ಮನು ದ್ರೌಪದಿಗೆ ವಸ್ತ್ರವನ್ನೂ, ಕುರುಕ್ಷೇತ್ರ ರಣರಂಗದಲ್ಲಿ ಅರ್ಜುನನ ರಥದ ಕುದುರೆಗಳಿಗೆ ನೀರನ್ನೂ ಮತ್ತು ಗೋಪಾಲಕರಿಗೆ, ಋಷಿ ಪತ್ನಿಯರು ತನಗೆ ಕೊಟ್ಟ ಅನ್ನಭಕ್ಷ್ಯ ಭೋಜ್ಯಗಳೆಲ್ಲ ವನ್ನೂ ಕೊಟ್ಟು ಅನುಗ್ರಹಿಸಿ ಕೃಪೆಮಾಡಿರುವ ಪ್ರಸಂಗಗಳು ಭಾಗವತದಲ್ಲಿ ಇವೆ. ಅಂತಹವನಿಗೆ ತಂದೆಯಾಗಿರುವುದರಿಂದ ಈ ಗುಣಗಳು ನಂದಗೋಪ ನಲ್ಲೂ ಇದ್ದಿರಬೇಕೆಂದು ಹಾಗೆ ಹೇಳುತ್ತಾರೆಂದು ಅಭಿಪ್ರಾಯ.

**'ಉಣ್ಣುಂ ಶೋರು ಪರುಹುಂ ನೀರ್ ತಿನ್ನುಂವೆತ್ತಿಲೈಯುಂ ಎಲ್ಲಾಂಕಣ್ಣನ್'** ಎಂದು ನಮ್ಮಾಳ್ವಾರ್ ಹೇಳಿರುವಂತೆ ಗೋಪಿಯರು ತಮಗೆ ಧಾರಕ ಪೋಷಕ ಮತ್ತು ಭೋಗ್ಯ ವಸ್ತುವಾಗಿರುವ ಶ್ರೀಕೃಷ್ಣಪರಮಾತ್ಮನನ್ನು ತಮಗೆ

ಅನುಗ್ರಹಿಸಬೇಕೆಂದು ನಂದಗೋಪರನ್ನು ಪ್ರಾರ್ಥಿಸುತ್ತಾರೆ ಎಂಬ ಅಭಿಪ್ರಾಯವೂ ಇಲ್ಲಿ ಸೂಚಿಸಲ್ಪಟ್ಟಿದೆ.

**ಕೊಂಬನಾರ್ಕೆಲ್ಲಾಂ ಕೊಳುಂದೇ ಕುಲವಿಳಕ್ಕೇ ಎಂಪೆರುಮಾಟ್ಟಿ ಯಶೋದಾಯ್ ಅರಿವುರಾಯ್**:- ಸ್ತ್ರೀಯರಿಗೆಲ್ಲಾ ಪ್ರಧಾನವಾದವಳಾಗಿಯೂ, ಗೋಪಕುಲಕ್ಕೆ ಮಂಗಳದೀಪದಂತೆ ಪ್ರಕಾಶಿಸುವವಳಾಗಿಯೂ, ನಮಗೆಲ್ಲಾ ಸ್ವಾಮಿನಿಯಾಗಿಯೂ ಇರುವ ಯಶೋದಾದೇವಿಯೇ ! ಎಚ್ಚರಗೊಂಡು ಏಳುವವಳಾಗು. ಶ್ರೀಕೃಷ್ಣಪರಮಾತ್ಮನಿಗೆ ಮಾತೆಯಾಗಿರುವ ನೀನು ನಮಗೆ ಶ್ರೀ ಕೃಷ್ಣನನ್ನು ಅನುಗ್ರಹಿಸಬೇಕು ಎಂದು ಪ್ರಾರ್ಥಿಸುತ್ತಾರೆ ಎಂದು ಅಭಿಪ್ರಾಯ.

**ಅಂಬರ ಮೂಡುರತ್ತು ಓಂಗಿ ಉಲಹಳನ್ದ ಉಂಬರ್‌ಕೋಮಾನೇ ಉರಂಗಾದೆಳುಂದಿರಾಯ್** :- ಆಕಾಶವನ್ನು ಭೇದಿಸಿ ಉನ್ನತವಾಗಿ ಬೆಳೆದು ಸಮಸ್ತಲೋಕಗಳನ್ನೂ ಅಳೆದ, ದೇವತೆಗಳಿಗೆಲ್ಲಾ ನಾಯಕನಾದ ಶ್ರೀ ಕೃಷ್ಣಪರಮಾತ್ಮನೇ! ನಿದ್ರೆಯಿಂದ ಎಚ್ಚತ್ತು ಏಳುವವನಾಗು -ಅಂದರೆ ಇಂದ್ರನಿಗೆ ಸಹಾಯಮಾಡುವುದಕ್ಕಾಗಿ ವಾಮನನಾಗಿ ಅವತರಿಸಿ, ಮಹಾಬಲಿಯನ್ನು "ದಾನಕೊಡು" ಎಂದು ಯಾಚಿಸಿ, ಅನಂತರ ಉನ್ನತವಾಗಿ ಬೆಳೆದು, ಸಮಸ್ತ ಲೋಕಗಳನ್ನೂ ಅಳೆದು ಇಂದ್ರನಿಗೆ ಸಹಾಯ ಮಾಡಿದಂತಹ ತ್ರಿವಿಕ್ರಮನಾದ ನೀನು, ಈಗ ಅಬಲೆಗಳಾದ ನಾವು ನಿನ್ನ ಬಳಿ ಬಂದು ಯಾಚಿಸುತ್ತಿರುವಾಗ, ನಿದ್ರೆಯಿಂದ ಎಚ್ಚತ್ತು ಬಂದು ನಮ್ಮನ್ನು ಅನುಗ್ರಹಿಸಬೇಕು ಎಂದು ಪ್ರಾರ್ಥಿಸುತ್ತಾರೆ.

**ಶೆಂಪೊರ್ಕ್ಕಳಲಡಿ ಶೆಲ್ವಾ ಬಲದೇವಾ ಉಂಬಿಯುಂ ನೀಯುಂ ಉರಂಗೇಲ್** : - ಕೆಂಪಾಗಿ ರಮ್ಯವಾದ ಮತ್ತು ಚಿನ್ನದಿಂದ ಮಾಡಲ್ಪಟ್ಟ ಕಾಲಿನ ಆಭರಣಗಳೊಡನೆ ಕೂಡಿದ ಪಾದಗಳನ್ನು ಹೊಂದಿದವನೂ, ಸಂಪತ್ತುಳ್ಳವನೂ ಆದ ಬಲರಾಮನೇ! ನಿನ್ನ ತಮ್ಮನಾದ ಶ್ರೀ ಕೃಷ್ಣನೂ ನೀನೂ

ನಿದ್ರಿಸಬೇಡಿರಿ, ನೀನೂ ಎದ್ದು, ನಿನ್ನ ತಮ್ಮನನ್ನೂ ಎಬ್ಬಿಸಿ, ಇಬ್ಬರೂ ನಮಗೆ ಅನುಗ್ರಹ ಮಾಡಿರಿ. ಬಲರಾಮನಿಗೆ ಭಗವತ್ ಕೈಂಕರ್ಯವೇ ಐಶ್ವರ್ಯ. ಲಕ್ಷ್ಮಣನಿಗೆ ರಾಮಸೇವೆ ಲಭಿಸಿದಾಗ ಅವನನ್ನು "ಲಕ್ಷ್ಮೀಸಂಪನ್ನ" ಎಂದು ಹೇಳಿರುವಂತೆ, ಇಲ್ಲಿಯೂ ಶೆಲ್ವಂ ಅಂದರೆ ಸಂಪತ್ತು ಎಂಬ ಪದಕ್ಕೆ ಭಗವತ್ಕೈಂಕರ್ಯವೆಂಬ ಅರ್ಥ ತಿಳಿಸಲ್ಪಟ್ಟಿದೆ. ಲಕ್ಷ್ಮಣನಂತೆ ಬಲರಾಮನಿಗೂ ಭಗವತ್ಕೈಂಕರ್ಯವೆಂಬ ಐಶ್ವರ್ಯವು ಲಭಿಸಿತ್ತು.

**ಏಲೋರೆಂಪಾವಾಯ್** : ಹೀಗೆ ನೀವೆಲ್ಲರೂ ಎದ್ದು ಬಂದು ನಮ್ಮನ್ನು ಅನುಗ್ರಹಿಸಿದರೆ ನಮ್ಮ ವ್ರತವು ಶುಭವಾಗಿ ಸಾಂಗವಾಗಿ ನೆರವೇರುವುದು ಎಂದು ಪ್ರಾರ್ಥಿಸುತ್ತಾರೆ.

ಈ ಪಾಶುರದಲ್ಲಿ ಸ್ವಗತ ಪರಗತ ಸ್ವೀಕಾರಗಳ ವಿಚಾರವೂ ಸೂಚಿಸಲ್ಪಟ್ಟಿದೆ. ನಾವು ಜಪತಪಾದಿಗಳನ್ನೂ ಯೋಗಸಾಧನೆಗಳನ್ನೂ ಮಾಡಿ ಪರಮಾತ್ಮನನ್ನು ಹೊಂದುವುದು ಸ್ವಗತ ಸ್ವೀಕಾರ. ಪರಮಾತ್ಮನೇ ನಮ್ಮನ್ನು ಅನುಗ್ರಹಿಸುವುದು ಪರಗತ ಸ್ವೀಕಾರ. ಇದು ದೇವಕಿ ವಸುದೇವರಲ್ಲೂ, ನಂದಗೋಪ ಯಶೋದೆಯವರಲ್ಲೂ ಕಾಣಬಹುದು. ದೇವಕಿ ವಸುದೇವರ ಪುಣ್ಯಫಲದಿಂದ ಶ್ರೀಕೃಷ್ಣಪರಮಾತ್ಮನು ಅವರಿಗೆ ಪುತ್ರನಾಗಿ ಜನಿಸಿದನು. ಶಂಖಚಕ್ರ ಧಾರಿಯಾಗಿ ತನ್ನ ನಿಜಸ್ವರೂಪವನ್ನು ಅವರಿಗೆ ತೋರಿಸಿ ಅನುಗ್ರಹಿಸಿದ್ದಾನೆ. ಆದರೆ ಮರುಕ್ಷಣವೇ ಗೋಕುಲದಲ್ಲಿ ನಂದಗೋಪ ಯಶೋದೆಯರ ಬಳಿಹೋಗಿ ಸೇರಿದನು. ಇದು ಅವರ ಪುಣ್ಯಫಲ ತೀರಿದುದರ ಪರಿಣಾಮ ಮತ್ತು ಸ್ವಗತ ಸ್ವೀಕಾರದ ಫಲ. ಆದರೆ ನಂದಗೋಪ, ಯಶೋದೆ, ಗೋಪಿಯರು ಇವರುಗಳು ಪರಗತ ಸ್ವೀಕಾರ ಪಡೆದಿದ್ದಾರೆ. ಕೃಷ್ಣಪರಮಾತ್ಮನು ತಾನೇ ಇಷ್ಟಪಟ್ಟು ಅವರುಗಳು ಇರುವ ಸ್ಥಳಕ್ಕೆ ತಾನೇಹೋಗಿ ಅವರಿಗೆ ಭಗವದನುಭವ ಉಂಟುಮಾಡಿ ಕರುಣಿಸಿದ್ದಾನೆ. ಇಂತಹ ಭಕ್ತ ಶಿರೋಮಣಿಗಳನ್ನು ಈ ಪಾಶುರದಲ್ಲಿ ಕೊಂಡಾಡಿದ್ದಾಳೆ.

ವಿಶೇಷಾರ್ಥದ ಪ್ರಕಾರ ಈ ಪಾಶುರದಲ್ಲಿ ಆಚಾರ್ಯರನ್ನೂ, ಮೂಲ ಮಂತ್ರವನ್ನೂ, ಮಂತ್ರಪ್ರತಿಪಾದ್ಯನಾದ ಪರಮಾತ್ಮನನ್ನೂ, ಪರಮಾತ್ಮನ ಅಂತರಂಗ ಕೈಂಕರ್ಯಪರರನ್ನೂ ಭಗವತ್‌ಕೈಂಕರ್ಯಪ್ರಾಪ್ತಿಗಾಗಿ ಪ್ರಾರ್ಥಿಸಿದ್ದಾರೆ.

**ಅಂಬರಮೇ ತಣ್ಣೀರೇ -------- ನಂದಗೋಪಾಲಾ ಎಳುಂದಿರಾಯ್ :** - ಆಕಾಶರೂಪಿಯಾದ, ಜಗತ್ತಿಗೆಲ್ಲಾ ನೀರಿನಂತೆ ಪ್ರಾಣಧಾರಕನಾದ, ಅನ್ನದಂತೆ ಸರ್ವರಿಗೂ ಪೋಷಕನಾದ ಪರಮಾತ್ಮನ ವಿಷಯಜ್ಞಾನವನ್ನು ಕೊಟ್ಟು ಅವನನ್ನು ನಮಗೆ ಪ್ರಕಾಶಪಡಿಸಿರುವ ಆಚಾರ್ಯರೇ ! ನೀವು ನಮಗೆ ಅನುಗ್ರಹ ಮಾಡಿರಿ.

**ಕೊಂಬನಾರ್ಕೆಲ್ಲಾಂಕೊಳುಂದೇ-----ಅರಿವುರಾಯ್ :-** ಭಗವನ್ಮಂತ್ರಗಳಲ್ಲೆಲ್ಲ ಶ್ರೇಷ್ಠವಾದ, ಪ್ರಪನ್ನರ ಕುಲಕ್ಕೇ ಬೆಳಕಿನಂತೆ ಪ್ರಕಾಶವಾಗಿರುವ, ಭಗವಂತನನ್ನು ಪ್ರತಿಪಾದಿಸುವ "ತಿರುಮಂತ್ರ"ವೇ ! ಮಂತ್ರಾರ್ಥವನ್ನು ನಮಗೆ ಪ್ರಕಾಶಗೊಳಿಸಿ ತಿಳಿಯಪಡಿಸು.

**"ಅಂಬರ ಮೂಡರುತ್ತು ------ ಎಳಿಂದಿರಾಯ್" :-** ಎತ್ತರವಾಗಿ ಬೆಳದು ತ್ರಿಲೋಕಗಳನ್ನೂ ತನ್ನ ಕಾಲಿನಿಂದ ಅಳೆದು ತನ್ನ ಪಾದಸ್ಪರ್ಶದಿಂದ ಸಮಸ್ತ ಚಿದಚಿದ್ವಸ್ತುಗಳೆಲ್ಲಕ್ಕೂ, ಮೋಕ್ಷವನ್ನು ದಯಪಾಲಿಸಿದ ತ್ರಿವಿಕ್ರಮ ರೂಪಿಯಾದ ಪರಮಾತ್ಮನೇ, ನೀನು ನಮಗೆ ಕೃಪೆ ಮಾಡಬೇಕು.

**ಶೆಂಪೊರ್ಕಳಲಡಿ ಶೆಲ್ವಾ------- ಉರಂಗೇಲ್ :-** ಭಕ್ತರಿಗೆಲ್ಲಾ ಸ್ವಾಮಿಯಾದ ಭಗವಂತನ ಕೈಂಕರ್ಯ ಸಂಪತ್ತನ್ನು ಪಡೆದಿರುವ ಭಾಗವತೋತ್ತಮರೇ! ಭಗವಂತನೂ, ನೀವೂ ನಮ್ಮನ್ನು ಅನುಗ್ರಹಿಸಿ ರಕ್ಷಿಸಬೇಕು ಎಂದು ಪ್ರಾರ್ಥಿಸುತ್ತಾರೆ.

ಹೀಗೆ, ಆಚಾರ್ಯರ, ಅವರು ಉಪದೇಶಿಸುವ ತಿರುಮಂತ್ರದ, ಮಂತ್ರವಾಚ್ಯನಾದ ಪರಮಾತ್ಮನ, ಮತ್ತು ಭಗವತ್‌ಕೈಂಕರ್ಯ ಸಂಪತ್ತನ್ನು ಪಡೆದಿರುವ ಭಗವತ್‌ಕೈಂಕರ್ಯಪರರ - ಇವರೆಲ್ಲರ ಅನುಗ್ರಹವನ್ನೂ ಪ್ರಾರ್ಥಿಸಿದ್ದಾರೆ ಎಂಬುದು ಈ ಪಾಶುರದ ವಿಶೇಷಾರ್ಥ.

# ಪಾಶುರ - 18

ಈ ಪಾಶುರದಲ್ಲಿ , ಕೃಷ್ಣಾವತಾರ ಕಾಲದಲ್ಲಿ ಪುರುಷಕಾರ ಭೂತೆಯಾದ ನಪ್ಪಿನ್ನೈ ಎಂಬ ನೀಳಾದೇವಿಯನ್ನು ಭಗವತ್‌ಕೈಂಕರ್ಯಪ್ರಾಪ್ತಿಗಾಗಿ ಪ್ರಾರ್ಥಿಸುತ್ತಾರೆ. ಪರಮಾತ್ಮನಲ್ಲಿ ಶರಣಾಗತಿ ಮಾಡಿ ಆತ್ಮಶ್ರೇಯಸ್ಸನ್ನು ಹೊಂದಲು ಶ್ರೀದೇವಿಯ ಪುರುಷಕಾರವಿರಬೇಕೆಂಬ ವಿಶೇಷಾರ್ಥವು ಈ ಪಾಶುರದಲ್ಲಿ ತಿಳಿಸಲ್ಪಟ್ಟಿದೆ.

**ಉನ್ದುಮದಗಳಿತ್ತನ್ ಓಡಾದ ತೋಳ್ವಲಿಯನ್**
**ನನ್ದಗೋಪಾಲನ್ ಮರುಮಹಳೇ ನಪ್ಪಿನ್ನಾಯ್**
**ಕನ್ದಂಕಮಳುಂಕುಳಲೀ ಕಡೈತಿರವಾಯ್**
**ವನ್ದೆಂಗುಂ ಕೋಳಿಯಳೈತ್ತನಕಾಣ್, ಮಾದವಿ**
**ಪನ್ದಲ್ ಮೇಲ್ ಪಲ್‌ಕಾಲ್ ಕುಯಿಲಿನಂಗಳ್ ಕೂವಿನಕಾಣ್**
**ಪನ್ದಾರ್ ವಿರಲಿ ಉನ್‌ಮೈತ್ತುನನ್ ಪೇರ್ ಪಾಡ**
**ಶೆನ್ದಾಮರೈ ಕ್ಕೈಯಾಲ್ ಶೀರಾರ್ ವಳೈಯೊಲಿಪ್ಪ**
**ವನ್ದುತಿರವಾಯ್ ಮಹಿಳ್‌ನ್ದೇಲೋರೆಮ್ಬಾವಾಯ್ .**

"ಮದಿಸಿದ ಆನೆಯನ್ನು ತಳ್ಳುವ ಬಲವುಳ್ಳವನೂ, ಯುದ್ಧರಂಗದಲ್ಲಿ ಹಿಂತಿರುಗದವನೂ ಆದ ಗೋಪಾಲನ ಸೊಸೆಯಾದ ನಪ್ಪಿನ್ನಾದೇವಿಯೇ, ಸುಗಂಧವನ್ನು ಬೀರುತ್ತಿರುವ ಕೇಶರಾಶಿ ಉಳ್ಳವಳೇ, ಬಾಗಿಲಿನ ಚಿಲುಕವನ್ನು ತೆಗೆಯುವವಳಾಗು. ಎಲ್ಲಾ ಕಡೆಯಲ್ಲೂ ಕೋಳಿಗಳು ಬಂದು ಕೂಗುತ್ತಿವೆ ನೋಡು. ಮಾಧವೀಲತೆಯ ಚಪ್ಪರದ ಮೇಲೆ ಅನೇಕಸಲ ಕೋಗಿಲೆಗಳ ಸಮೂಹಗಳು ಕೂಗುತ್ತಿವೆ ನೋಡು. ಚೆಂಡನ್ನು ಬೆರಳಿನಿಂದ

ಹಿಡಿದಿರುವವಳೇ ! ನಿನ್ನ ಪತಿಯ ನಾಮಗಳನ್ನು ನಾವು ಹಾಡುವುದಕ್ಕೋಸ್ಕರ, ಕಮಲ ಪುಷ್ಪದಂತೆ ಕೆಂಪಾಗಿರುವ ಕೈಗಳಿಂದ, ಸುಂದರವಾದ ನಿನ್ನ ಕೈ ಬಳೆಗಳು ಶಬ್ದ ಮಾಡುತ್ತಿರಲಾಗಿ, ಸಂತೋಷದಿಂದ ಬಂದು ಬಾಗಿಲನ್ನು ತೆಗೆ - ನಮ್ಮ ಅದ್ವಿತೀಯವಾದ ವ್ರತವೂ ಶುಭವಾಗಿ ನೆರವೇರುವುದು'' ಇದು ಈ ಪಾಶುರದ ವಾಕ್ಯಾರ್ಥ.

**ಉನ್ದುಮದಗಳಿತ್ತನ್ ಓಡಾದ ತೋಳ್ವಲಿಯನ್ ನಂದಗೋಪಾಲನ್ ಮರುಮಹಳೇ ನಪ್ಪಿನ್ನಾಯ್** :- ಮದಿಸಿದ ಆನೆಗಳನ್ನು ತಳ್ಳುವಷ್ಟು ಬಲ ಹೊಂದಿರುವವನೂ, ಯುದ್ಧದಲ್ಲಿ ಶತ್ರುಗಳಿಗೆ ಹೆದರಿ ಹಿಮ್ಮೆಟ್ಟದ ಭುಜಬಲವುಳ್ಳವನೂ ಆದ ನಂದಗೋಪನ ಸೊಸೆಯಾದ ನಪ್ಪಿನ್ನೈಯೇ ಎಂದು ಅವಳನ್ನು ಸಂಬೋಧನೆ ಮಾಡಿ ಕರೆಯುತ್ತಾರೆ.

ಸೀತಾದೇವಿಯು 'ಸ್ನುಷಾದಶರಥಸ್ಯಾಹಂ' ಅಂದರೆ ದಶರಥನ ಸೊಸೆ ತಾನೆಂದು ಹೇಳಿಕೊಂಡಂತೆ, ಇವಳನ್ನೂ ಮಾವನಾದ ನಂದಗೋಪನ ಹೆಸರು ಹೇಳಿ ಅವನ ಸೊಸೆ ಎಂದು ಸಂಬೋಧನೆ ಮಾಡಿ ಕರೆದರೆ ಇವಳಿಗೆ ಸಂತೋಷವಾಗಬಹುದೆಂದು ಹಾಗೆ ಕರೆಯುತ್ತಾರೆ. ಪ್ರಬಲವಾದ ಅಹಂಕಾರವನ್ನು ನಾಶಮಾಡುವ ಶಕ್ತಿಯನ್ನು ಪಡೆದವರೂ, ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದ ಜ್ಞಾನ ಬಲವುಳ್ಳವರೂ ಆಗಿ ಸದಾಚಾರ್ಯರೆನಿಸಿಕೊಂಡಿರುವ ನಂದಗೋಪರಿಗೆ ಸೊಸೆಯಾಗಿರುವ ನಪ್ಪಿನ್ನಾದೇವಿಯೇ ಎಂದು ಕರೆಯುತ್ತಾರೆ. ಭಗವಂತನಲ್ಲಿ ಭಕ್ತಿಭರಿತ ಜ್ಞಾನ ಹೊಂದಿ ಅವನ ದರ್ಶನ ಲಾಭ ಪಡೆದ ಆಚಾರ್ಯರಿಗೆ ಪರಮಾತ್ಮನನ್ನು ಪುತ್ರನಂತೆಯೂ, ಶ್ರೀದೇವಿಯನ್ನು ಅವರಿಗೆ ಸೊಸೆಯಂತೆಯೂ ಭಾವಿಸಿ ಹೀಗೆ ಕರೆಯುತ್ತಾರೆ ಎಂಬುದು ವಿಶೇಷಾರ್ಥ.

**ಕಂದಂಕಮಳುಂ ಕುಳಲೀ ಕಡೈ ತಿರವಾಯ್** :- ಸುವಾಸನೆಯನ್ನು ಬೀರುತ್ತಿರುವ ಕೇಶರಾಶಿ ಉಳ್ಳವಳೇ, ಬಾಗಿಲನ್ನು ತೆಗೆಯುವವಳಾಗು - ಅಂದರೆ

ನೀನು ಭಗವಂತನ ಪ್ರೀತಿ ಸಂಪಾದಿಸಲು ಬೇಕಾದ ಗುಣಗಳಿಂದ ಕೂಡಿರುವವಳೂ ಮತ್ತು ಚೇತನರಿಗೆ ಸಕಲ ಸೌಭಾಗ್ಯಗಳನ್ನು ಕೊಡುವವಳೂ ಆಗಿದ್ದೀಯೆ. ನಿನ್ನ ದರ್ಶನ ಪಡೆಯಲು ಅಡ್ಡಿಯಾಗಿರುವ ನಮ್ಮ ಅಜ್ಞಾನವನ್ನು ಹೋಗಲಾಡಿಸುವವಳಾಗು ಎಂದು ಪ್ರಾರ್ಥಿಸುತ್ತಾರೆ - ಭಗವದ್ವಿಷಯದಲ್ಲಿ ಭಕ್ತಿ ವ್ಯಾಮೋಹವುಳ್ಳವಳಾಗಿಯೂ, ಭಗವಂತನನ್ನು ಆಶ್ರಿತರ ಸಂರಕ್ಷಣೆ ಮಾಡುವಂತೆ ಪ್ರೇರೇಪಿಸುವವಳಾಗಿಯೂ ಇರುವ ನೀನು ಭಗವದನುಭವಕ್ಕೆ ವಿರೋಧಿಯಾಗಿರುವ ನಮ್ಮ ಅಜ್ಞಾನವನ್ನು ಹೋಗಲಾಡಿಸು ಎಂದು ಪ್ರಾರ್ಥಿಸುತ್ತಾರೆ ಎಂದು ಅಭಿಪ್ರಾಯ.

**ವಂದೆಂಗುಂಕೋೞಿ ಅೞೈತ್ತನಕಾಣ್** :- ಎಲ್ಲ ಕಡೆಯಲ್ಲೂ ಕೋಳಿಗಳು ಬಂದು ಕೂಗುತ್ತಿವೆ ನೋಡು.

ಅಂದರೆ ಸತ್ವೋತ್ತರವಾದ ಕಾಲವಾಗಿದೆ. ಎಲ್ಲಾ ದಿಕ್ಕುಗಳಲ್ಲೂ ಭಾಗವತರು ಬಂದು ಭಗವತ್ ಕೈಂಕರ್ಯಕ್ಕೆ ಒಬ್ಬರನ್ನೊಬ್ಬರು ಎಬ್ಬಿಸಿ ಕರೆಯುತ್ತಿದ್ದಾರೆ ನೋಡು ಎಂದು ಅಭಿಪ್ರಾಯ.

**ಮಾದವಿ ಪ್ಪಂದಲ್‌ಮೇಲ್ ಪಲ್‌ಕಾಲ್ ಕುಯಿಲಿನಂಗಳ್ ಕೂವಿನಕಾಣ್** : - ಮಾಧವಿ ಪುಷ್ಪದ ಚಪ್ಪರದ ಮೇಲೆ ಕೋಗಿಲೆಗಳ ಸಮೂಹಗಳು ಅನೇಕಸಲ ಕೂಗುತ್ತಿವೆ ನೋಡು - ಅಂದರೆ ಪರಮ ಭಾಗವತರು ಭಗವದ್ವಿಷಯವೆಂಬ ಚಪ್ಪರದ ಮೇಲೆ ಸಾಮೂಹಿಕವಾಗಿ ಕಲೆತು ಭಗವಂತನ ಗುಣಗಳನ್ನು ಇಂಪಾಗಿ ಹಾಡುತ್ತಿರುವರು ಎಂದು ಅಭಿಪ್ರಾಯ.

**ಪನ್ದಾರ್‌ವಿರಲಿ** :- ಕೈಯ್ಯಲ್ಲಿ ಚೆಂಡನ್ನು ಹಿಡಿದಿರುವವಳೇ - ಅಂದರೆ ಈ ಪ್ರಪಂಚವು ಭಗವಂತನ ಸ್ವತ್ತಾಗಿ ಅವನ ಲೀಲಾ ವಿಭೂತಿಯಾಗಿದೆ. ಆದ್ದರಿಂದ ಅದು ಅವನ ಪತ್ನಿಯಾದ ಶ್ರೀದೇವಿಗೂ ಸ್ವತ್ತಾಗಿದೆ. ತನ್ನ ಸ್ವತ್ತಾದ ಅದನ್ನು ಒಂದು ಚಂಡಿನಂತೆ ಕೈಯ್ಯಲ್ಲಿ ಇಟ್ಟುಕೊಂಡಿರುವ ನೀನು,

ಭಗವಂತನಲ್ಲಿ ಪುರುಷಕಾರ ಮಾಡಿ, ಈ ಲೀಲಾ ವಿಭೂತಿಯಲ್ಲಿರುವ ಚೇತನರಿಗೆ ಭಗವದನುಗ್ರಹ ಲಭಿಸುವಂತೆ ಮಾಡು. ಹೀಗೆ ಪರಮಾತ್ಮ ಮತ್ತು ಚೇತನರು ಇಬ್ಬರೊಂದಿಗೂ ಹತ್ತಿರದಲ್ಲಿರುವವಳಾಗಿ, ಪರಮಾತ್ಮನ ಮೂಲಕ ಚೇತನರ ರಕ್ಷಣೆ ಮಾಡಿಸುವವಳಾಗಿರುವ ನೀನು - ಎಂಬುದು ವಿಶೇಷಾರ್ಥ.

**ಉನ್‌ಮೈತ್ತುನನ್ ಪೇರ್‌ಪಾಡ** :- ನಾವು ನಿನ್ನ ಪತಿಯ ಗುಣಗಾನ ಮಾಡುವುದಕ್ಕಾಗಿ ಅಂದರೆ ನಾವು ಪರಮಾತ್ಮನ ನಾಮ ಸಂಕೀರ್ತನೆ ಮಾಡುವುದಕ್ಕಾಗಿ -

**ಶೆನ್ದಾಮರೈಕ್ಕೈಯ್ಯಾಲ್ ಶೀರಾರ್ ವಳೈಯೊಲಿಪ್ಪವನ್ದು ತಿರವಾಯ್ ಮಹಿಳ್‌ನ್ದು** :- ಕಮಲ ಪುಷ್ಪದಂತೆ ಕೆಂಪಾಗಿರುವ ನಿನ್ನ ಕೈಗಳಿಂದ, ಶ್ರೇಷ್ಠವಾದ ನಿನ್ನ ಕೈ ಬಳೆಗಳು ಶಬ್ದ ಮಾಡುತ್ತಿರಲಾಗಿ, ಸಂತೋಷದಿಂದ ನೀನೇ ಬಂದು ಬಾಗಿಲು ತೆಗೆದು ನಮಗೆ ನಿಮ್ಮಿಬ್ಬರ ದರ್ಶನ ಲಭಿಸುವಂತೆ ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ.

ಅಂದರೆ, ಕೆಂಪಾದ ಕಮಲ ಪುಷ್ಪದಂತೆ ವಿಕಸಿತವಾಗಿ, ನಿರತಿಶಯ ಪ್ರೇಮಭರಿತವಾದ, ಅಭಯಪ್ರದಾನ ಮಾಡುತ್ತಿರುವ ನಿನ್ನ ಹಸ್ತಗಳಿಂದ, ಕಲ್ಯಾಣಗುಣಗಳೆಂಬ ಬಳೆಗಳು ಶಬ್ದಮಾಡುತ್ತಾ ಜ್ವಲಿಸುತ್ತಿರಲಾಗಿ, ನಿಮ್ಮ ದರ್ಶನ ಪಡೆಯಲು ಅಡ್ಡಿಯಾಗಿರುವ ನಮ್ಮ ಅಜ್ಞಾನದ ಬಾಗಿಲನ್ನು ತೆಗೆದು ಅಂದರೆ ನಮ್ಮ ಅಜ್ಞಾನವನ್ನು ಹೋಗಲಾಡಿಸಿ, ನಮಗೆ ಬುದ್ಧಿಯನ್ನೂ, ಜ್ಞಾನವನ್ನೂ, ಭಗವಂತನಲ್ಲಿ ಪ್ರೀತಿಯಿಂದ ಕೂಡಿದ ಭಕ್ತಿಯನ್ನೂ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥ.

**ಏಲೋರೆಂಪಾವಾಯ್** : ಹೀಗೆ ನೀನು ಕೃಪೆ ಮಾಡಿದರೆ ನಮ್ಮ ವ್ರತವು ಸಾಂಗವಾಗಿ ನೆರವೇರುವುದು ಎಂದು ಶ್ರೀದೇವಿಯನ್ನು ಪ್ರಾರ್ಥಿಸುತ್ತಾರೆ.

ಈ ಪಾಶುರದ ವಿಶೇಷಾರ್ಥದ ತಾತ್ಪರ್ಯವೇನೆಂದರೆ - ಪ್ರಬಲವಾದ ಅಹಂಕಾರವನ್ನು ಗೆಲ್ಲುವ ವೈರಾಗ್ಯವನ್ನೂ, ಜ್ಞಾನವನ್ನೂ ಹೊಂದಿ ಶ್ರೀಕೃಷ್ಣಪರಮಾತ್ಮನಿಗೆ ಪಿತಾವಾಗಿರುವ, ಸದಾಚಾರ್ಯನೆನೆಸಿಕೊಂಡಿರುವ ನಂದಗೋಪಾಲನಿಗೆ ಸೊಸೆಯಾದ ನಪ್ಪಿನ್ನೆಯೇ - ಈಗ ಸತ್ತ್ವೋತ್ತರ ಕಾಲವಾಗಿದೆ. ಭಾಗವತರೆಲ್ಲರೂ ಎದ್ದು ಭಗವತ್ ಕೈಂಕರ್ಯಕ್ಕೇ ಒಬ್ಬರನ್ನೊಬ್ಬರು ಎಬ್ಬಿಸುತ್ತಿದ್ದಾರೆ. ವೇದಾಂತ ವಿಚಾರ ಮಾಡುತ್ತಾ ಸಮೂಹವಾಗಿ ನೆರೆದಿರುವ ಭಾಗವತರು ಸತ್ತ್ವಪ್ರಚುರವಾದ ಕಾಲದಲ್ಲಿ ಅನೇಕ ಸಲ ನಿನ್ನನ್ನು ಕೂಗಿ ಕರೆಯುತ್ತಿದ್ದಾರೆ. ಸೌಂದರ್ಯ, ಸೌಕುಮಾರ್ಯ, ಸೌಂಗಧ್ಯಾದಿಗಳಿಂದ ಕೂಡಿ ಕೆಂತಾಮರೈಯಂತಿರುವ ನಿನ್ನ ಜ್ಞಾನ ಕೈಯಿಂದ, ಶ್ರೀಸೂಕ್ತಿಗಳ ರಹಸ್ಯವಾದ ಅರ್ಥಗಳ ಶಬ್ದಮಾಡುತ್ತಾ ನೀನೇ ಬಂದು ನಮ್ಮಿಂದ ಕಾಣಲಾಗದಂತೆ ಪರಮಾತ್ಮನನ್ನು ಮರೆಸಿಕೊಂಡಿರುವ ಪುರುಷಾರ್ಥವಿರೋಧಿಗಳಾದ ನಮ್ಮ ಅಜ್ಞಾನವನ್ನು ಹೋಗಲಾಡಿಸಿ, ಜ್ಞಾನದ ಬಾಗಿಲನ್ನು ತೆಗೆಯುವವಳಾಗು. ನಿನ್ನ ಕೂದಲಿನ ಪುಷ್ಪಗಳ ಪರಿಮಳವನ್ನು ಮೂಗಿನಿಂಧಲೂ, ನಿನ್ನ ಬಳೆಗಳ ಶಬ್ದವನ್ನು ಕಿವಿಯಿಂದಲೂ, ತಾವರೆ ಪುಷ್ಪದಂತೆ ಸುಂದರವಾದ ನಿನ್ನ ಕೈಗಳ ಸೌಂದರ್ಯವನ್ನು ಕಣ್ಣಿನಿಂದಲೂ ಅನುಭವಿಸುತ್ತೇವೆ. ಹೀಗೆ ಎಲ್ಲಾ ಇಂದ್ರಿಯಗಳಿಂದ ನಿನ್ನ ಅನುಭವ ಪಡೆದು ಆನಂದ ಹೊಂದುತ್ತೇವೆ. ನೀನೇ ಬಂದು ಬಾಗಿಲು ತೆಗೆದು ನಾವು ನಿನ್ನ ಮತ್ತು ಪರಮಾತ್ಮನ ದರ್ಶನ ಪಡೆಯು ವಂತೆ ಮಾಡು ಎಂದು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥದ ತಾತ್ಪರ್ಯ.

ಇದು ಭಗವತ್ಪ್ರಾಪ್ತಿಗಾಗಿ ಶ್ರೀದೇವಿಯಲ್ಲಿ ಪುರುಷಕಾರವನ್ನು ಪ್ರಾರ್ಥಿಸಿ ಅವಳಲ್ಲಿ ಶರಣಾಗತಿ ಮಾಡುವ ಪಾಶುರವಾಗಿದೆ. ಗೋಪಿಯರು ಈ ವ್ರತವನ್ನು ಆಚರಿಸಿದ ಕಾಲದಲ್ಲಿ ಅಂದರೆ ಶ್ರೀಕೃಷ್ಣಪರಮಾತ್ಮನು ಗೋಕುಲದಲ್ಲಿದ್ದ ಕಾಲದಲ್ಲಿ ನಪ್ಪಿನ್ನೆಯೇ ಪ್ರಧಾನ ಮಹಿಷಿಯಾಗಿದ್ದುದರಿಂದ ಗೋಪಿಯರು ಶ್ರೀದೇವಿಯ ಅಂಶಭೂತಳಾದ ಅವಳನ್ನು ಸ್ತೋತ್ರ ಮಾಡುತ್ತಾರೆ. ಚೇತನನು

ಪರಮಾತ್ಮನಲ್ಲಿ ಶರಣಾಗತಿ ಮಾಡುವಾಗ ಮೊದಲು ಶ್ರೀದೇವಿಯ ಪುರುಷಕಾರವನ್ನು ಹೊಂದಿ ಅನಂತರ ಪರಮಾತ್ಮನಲ್ಲಿ ಶರಣಾಗತಿ ಮಾಡುವುದೇ ಸರಿಯಾದ ಕ್ರಮ. ಪುರುಷಕಾರವೆಂದರೆ ಚೇತನನು ಪರಮಾತ್ಮನ ಕೃಪೆಗೆ ಪಾತ್ರನಾಗುವಂತೆ ಮಾಡಿ, ಅವನನ್ನು ಪರಮಾತ್ಮನೊಂದಿಗೆ ಸೇರಿಸುವುದು. ದೋಷಭರಿತನಾದ ಚೇತನನು ಪರಮಾತ್ಮನಲ್ಲಿ ಶರಣಾದಾಗ, ಸ್ವತಂತ್ರನಾದ ಪರಮಾತ್ಮನು ಅವನ ದೋಷಗಳನ್ನು ಕಂಡು ಕುಪಿತನಾಗಿ ಅವನನ್ನು ನಿಗ್ರಹಿಸದಂತೆ ಪಕ್ಕದಲ್ಲಿರುವ ಶ್ರೀದೇವಿಯು ತಡೆಯುತ್ತಾಳೆ ಮತ್ತು ಅವನ ಹೃದಯದಲ್ಲಿರುವ ಕೃಪಾಗುಣವನ್ನು ಪ್ರಕಾಶಪಡಿಸಿ ಚೇತನನನ್ನು ರಕ್ಷಿಸುವಂತೆ ಮಾಡುತ್ತಾಳೆ. ಇದೇ ಅವಳ ಪುರುಷಕಾರ.

ಇದು ಕಾಕಾಸುರ, ರಾವಣ, ಹನುಮಂತ ಮತ್ತು ವಿಭೀಷಣ ಮುಂತಾದವರ ವಿಷಯದಲ್ಲಿ ಪುರಾಣಗಳಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ. ಕಾಕಾಸುರನು ಮಹಾಪರಾಧವನ್ನು ಮಾಡಿದ್ದಾಗ್ಯೂ ಅವನು ಸೀತಾದೇವಿಯ ಪುರುಷಕಾರ ಬಲದಿಂದ ರಕ್ಷಿಸಲ್ಪಟ್ಟನು. ಸೀತಾದೇವಿಯನ್ನು ಅಪಹರಿಸಿ ಶ್ರೀರಾಮನಿಂದ ಅಗಲಿಸಿದ ರಾವಣನು ಹತನಾದನು. ಇಬ್ಬರನ್ನೂ ಸೇರಿಸಲು ಪ್ರಯತ್ನಿಸಿದ ವಿಭೀಷಣನು ಉಜ್ಜೀವಿಸಿದನು. ಲಂಕೆಯಲ್ಲಿ ಸೀತಾದೇವಿಯ ದರ್ಶನ ಪಡೆದು ಅವಳನ್ನು ಆಶ್ರಯಿಸಿದ ಆಂಜನೇಯನಿಗೆ ಶ್ರೀರಾಮನ ಆಲಿಂಗನವೂ ಅನುಗ್ರಹವೂ ಲಭಿಸಿತು. ಆದ್ದರಿಂದ ಶ್ರೀದೇವಿಯ ಪುರುಷಾಕಾರವು ಭಗವದಾಶ್ರಯಣಕ್ಕೆ ಬಹಳ ಮುಖ್ಯವಾದುದು. ಬೆಂಕಿಯನ್ನು ಆರಿಸಲು ನೀರಿನ ಅವಶ್ಯಕತೆಬೇಕು. ಆದರೆ ಕಾದ ನೀರನ್ನು ಆರಿಸಲು ತಣ್ಣೀರೇ ಸಾಕು. ಅದೇ ರೀತಿ ಶ್ರೀದೇವಿಯ ಪುರುಷಕಾರಕ್ಕೆ ಅವಳ ನಿರ್ಹೇತುಕ ಕೃಪೆಯೇ ಸಾಕು. ಅದಕ್ಕೆ ಬೇರೆ ಯಾವುದರ ಅಪೇಕ್ಷೆಯೂ ಬೇಕಾಗಿಲ್ಲ.

ರಾವಣವಧೆ ಆದ ಮೇಲೆ ಹನುಮಂತನು ಸೀತೆಯ ಬಳಿಗೆ ಹೋಗಿ ಅವಳಿಗೆ ಹಿಂಸೆ ಕೊಡುತ್ತಿದ್ದ ರಾಕ್ಷಸಿಯರನ್ನೆಲ್ಲಾ ಕೊಲ್ಲಲು ಅನುಮತಿ ಕೇಳಿದಾಗ, ಸೀತಾದೇವಿಯು 'ನಕಶ್ಚಿತ್ ನಾಪರಾಧ್ಯತಿ' - ಅಂದರೆ ಜಗತ್ತಿನಲ್ಲಿ ಅಪರಾಧ ಮಾಡದವರಾರಿದ್ದಾರೆ ಎಂದು ಹೇಳಿ ತನಗೆ ಚಿತ್ರಹಿಂಸೆ ಕೊಟ್ಟ ರಾಕ್ಷಸಸ್ತ್ರೀಯರನ್ನೆಲ್ಲಾ ಕ್ಷಮಿಸಿ ರಕ್ಷಿಸಿದ್ದಾಳೆ. ರಾಕ್ಷಸ ಸ್ತ್ರೀಯರಾಗಲಿ, ಕಾಕಾಸುರನಾಗಲಿ ಅವಳಲ್ಲಿ ಶರಣಾಗತಿ ಮಾಡಲಿಲ್ಲ. ಆದರೂ ಅವರಿಗೆಲ್ಲಾ ಕೃಪೆ ತೋರಿಸಿ ರಕ್ಷಿಸಿರುವ ಮಹಾಗುಣ ಅವಳದಾಗಿದೆ. ಪರಮಾತ್ಮನ ಅಭಯಹಸ್ತಕ್ಕಿಂತ ಶ್ರೀದೇವಿಯ ಅಭಯಹಸ್ತಕ್ಕೆ ಅತಿಶಯ ಹೆಚ್ಚು. ಅವನು ತನ್ನನ್ನು ಆಶ್ರಯಿಸಿ ಶರಣಾಗತಿ ಮಾಡಿದವರನ್ನು ರಕ್ಷಿಸುವುದಾಗಿ ಹೇಳಿದ್ದಾನೆ. ಆದರೆ ಶ್ರೀದೇವಿಯು ತನಗೆ ಅಪಕಾರ ಮಾಡಿದವರನ್ನೂ ಕ್ಷಮಿಸಿ ಪರಮಾತ್ಮನಲ್ಲಿ ಪುರುಷಕಾರ ಮಾಡಿ ರಕ್ಷಿಸುವವಳಾಗಿದ್ದಾಳೆ. ಅವಳದು ಅತ್ಯಂತ ಪ್ರೇಮಮಯ ಅಭಯ ಹಸ್ತವಾಗಿದೆ. ಅದನ್ನೇ ಇಲ್ಲಿ ಶೆಂದಾಮರೈಕ್ಕೈ ಎಂದು ಹೇಳಿದ್ದಾರೆ.

ಆದ್ದರಿಂದಲೇ ಆಳ್ವಾರುಗಳು ಶ್ರೀಸಹಿತನಾದ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾರೆ. 'ಅಲರ್‌ಮೇಲ್‌ಮಂಗೈ ಉಱೈಮಾರ್ಬ' ಎಂದು ಹೇಳಿ ನಮ್ಮಾಳ್ವಾರ್ ಶರಣಾಗತಿ ಮಾಡಿದ್ದಾರೆ. ಶ್ರೀರಾಮಾನುಜರೂ, ಶರಣಾಗತಿ ಗದ್ಯದಲ್ಲಿ, ಮೊದಲು ಶ್ರೀದೇವಿಯಲ್ಲಿ ಶರಣಾಗತಿ ಮಾಡಿ ಅನಂತರ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾರೆ. ಹೀಗೆ ಆಳ್ವಾರುಗಳೂ, ಆಚಾರ್ಯರುಗಳೂ ಮಾಡಿರುವಂತೆಯೇ ಶ್ರೀ ಗೋದಾದೇವಿಯೂ ಈ ಪಾಶುರದಲ್ಲಿ ನಪ್ಪಿನ್ನೈಯಲ್ಲಿ ಮೊದಲು ಶರಣಾಗತಿ ಮಾಡಿ, ಮುಂದಿನ ಪಾಶುರದಲ್ಲಿ ಶ್ರೀ ಸಹಿತನಾದ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾಳೆ ಗುರುಪರಂಪರೆಯಲ್ಲಿ ಇದು 'ಶ್ರೀಯೈ ನಮಃ' ಎನ್ನುವುದನ್ನೂ, ಮುಂದಿನ ಪಾಶುರವು 'ಶ್ರೀಧರಾಯ ನಮಃ' ಎನ್ನುವುದನ್ನೂ ಸೂಚಿಸುತ್ತದೆ.

ಇದು ತಿರುಪ್ಪಾವೈಯಲ್ಲಿ 18ನೇ ಪಾಶುರವಾಗಿರುವುದರಿಂದಲೂ ಇದಕ್ಕೆ ಬಹಳ ಪ್ರಾಮುಖ್ಯತೆ ಇದೆ ಎಂದು ಹೇಳಿದ್ದಾರೆ. ಪುರಾಣಗಳಲ್ಲಿ 18 ಎಂಬ ಸಂಖ್ಯೆಗೆ ಬಹಳ ಮಹತ್ವವಿದೆ. ಮಹಾಭಾರತ ಯುದ್ಧ 18 ದಿನ ನಡೆದು ಅನಂತರ ಧರ್ಮಕ್ಕೆ ಜಯ ಉಂಟಾಯಿತೆಂಬುದೂ, ಭಗವದ್ಗೀತೆ 18 ಅಧ್ಯಾಯಗಳಿಂದ ಕೂಡಿದೆ ಎಂಬುದೂ ಸರ್ವರೂ ಅರಿತ ವಿಷಯವಾಗಿದೆ.

ಎಲ್ಲಕ್ಕಿಂತ ಹೆಚ್ಚಾಗಿ ಶ್ರೀರಾಮಾನುಜರಿಗೆ ಇದು ಬಹಳ ಪ್ರಿಯವಾದ ಪಾಶುರವಾಗಿದ್ದಿತು. ಅವರು ಇದನ್ನು ಸದಾ ಅನುಸಂಧಾನ ಮಾಡುತ್ತಿದ್ದರು. ಒಂದು ಸಲ ಅವರು ತಿರುಪ್ಪಾವೈಯ ಈ ಪಾಶುರವನ್ನು ಅನುಸಂಧಾನ ಮಾಡುತ್ತಾ ತಮ್ಮ ಆಚಾರ್ಯರಾದ ಪೆರಿಯನಂಬಿಯವರ ಮನೆ ಬಾಗಿಲಿಗೆ ಬಂದಾಗ ಅವರ ಪುತ್ರಿ ಅತ್ತುಳಾಯ್, ಓಡಿ ಬಂದು ಬಾಗಿಲು ತೆಗೆದಳು. ರಾಮಾನುಜರು ಅದಕ್ಕೆ ಸರಿಯಾಗಿ 'ಶೆಂದಾಮರೈಕ್ಕೈಯಾಲ್ ಶೀರಾರ್‌ವಳೈಯೊಲಿಪ್ಪವನ್ದು ತಿರವಾಯ್' - ಎಂದು ಅನುಸಂಧಾನ ಮಾಡು ತ್ತಿದ್ದುದರಿಂದ, ಅತ್ತುಳಾಯನ್ನು ನೋಡಿ ನೀಳಾದೇವಿಯನ್ನೇ ಸೇವಿಸಿದಂತೆ ಭಾವಿಸಿದವರಾಗಿ ಮೂರ್ಛೆ ಹೋದರೆಂದೂ, ಇದರಿಂದಾಗಿ ಈ ಪಾಶುರವು ಅವರಿಗೆ ಬಹಳ ಪ್ರಿಯ ವಾಗಿತ್ತೆಂದೂ ತಿಳಿಸಲ್ಪಟ್ಟಿದೆ. ತಿರುಪ್ಪಾವೈ ಅನುಸಂಧಾನದಲ್ಲಿ ಬಹಳ ಅಭಿಲಾಷೆಯಿದ್ದುದರಿಂದ ತಿರುಪ್ಪಾವೈಜೀಯರ್ ಎಂಬ ಹೆಸರು ಉಂಟಾಯಿತು.

# ಪಾಶುರ - 19

18ನೆಯ ಪಾಶುರದಲ್ಲಿ ಶ್ರೀದೇವಿಯನ್ನು ಪ್ರಾರ್ಥಿಸಿ ಅವಳ ಪುರುಷಕಾರ ಹೊಂದಿದವರಾಗಿ, ಈಗ 19ನೆಯ ಪಾಶುರದಲ್ಲಿ ಶ್ರೀಸಹಿತನಾದ ಪರಮಾತ್ಮನಲ್ಲಿ ಶರಣಾಗತಿ ಮಾಡುತ್ತಾರೆ.

**ಕುತ್ತು ವಿಳಕ್ಕೆರಿಯ ಕೋಟ್ಟುಕ್ಕಾಲ್ ಕಟ್ಟಿಲ್‌ಮೇಲ್**
**ಮೆತ್ತೆನ್ರಪಂಚಶಯನತ್ತಿನ್ ಮೇಲೇರಿ**
**ಕೊತ್ತಲರ್ ಪೂಙ್ಕುಳಲ್ ನಪ್ಪಿನ್ನೈ ಕೊಂಙ್ಗೈಮೇಲ್**
**ವೈತ್‌ಕ್ಕಿಡನ್ದ ಮಲರ್‌ಮಾರ್‌ಬಾ ವಾಯ್ ತಿರವಾಯ**
**ಮೈತ್ತಡಂ ಕಣ್ಣಿನಾಯ್ ನೀ ಉನ್‌ಮಣಾಳನ್ನೈ**
**ಎತ್ತನ್ನೈಪೋದುಂ ತುಯಿಲೆಳವೊಟ್ಟಾಯ್‌ಕಾಣ್**
**ಎತ್ತನ್ನೈಯೇಲುಂ ಪಿರಿವಾತ್ತಕಿಲ್ಲಾಯಾಲ್**
**ತತ್ತುವಮನ್ನು ತಕವೇಲೋರೆಮ್ಬಾವಾಯ್.**

"ದೀಪಗಳು ಪ್ರಕಾಶಿಸುತ್ತಾ ಉರಿಯುತ್ತಿರಲು, ದಂತದ ಕಾಲುಗಳುಳ್ಳ ಮಂಚದ ಮೇಲೆ ಮೆತ್ತಗಿರುವ ಹಾಸಿಗೆಯ ಮೇಲೆ ಹತ್ತಿ , ಹೂಗೊಂಚಲುಗಳಿಂದ ಅಲಂಕೃತವಾದ ಕೇಶ ಪಡೆದ ನೀಳಾದೇವಿಯ ಜ್ಞಾನ ಭಕ್ತಿಗಳನ್ನು ಆಶ್ರಯಿಸಿಕೊಂಡು ಶಯನಮಾಡಿಕೊಂಡಿರುವ, ವಿಶಾಲವಾದ ವಕ್ಷಸ್ಥಳವನ್ನು ಪಡೆದ ಪರಮಾತ್ಮನೇ ! ನೀನು ಬಾಯಿ ತೆರೆದು ಮಾತನ್ನಾಡು. ಅಂಜನವನ್ನು ಧರಿಸಿದ ನೇತ್ರವುಳ್ಳ ನಪ್ಪಿನ್ನಾದೇವಿಯೇ ! ನೀನು ನಿನ್ನ ಪತಿಯನ್ನು ಎಷ್ಟು ಹೊತ್ತಾದರೂ ಏಳಲು ಬಿಡುತ್ತಿಲ್ಲವೇ ? ಸ್ವಲ್ಪಕಾಲವೂ ಅವನ ಅಗಲಿಕೆಯನ್ನು ಸಹಿಸಲಾರದವಳಾಗಿರುವೆಯಾ ? ಇದು ನಿನ್ನ ಸ್ವರೂಪಕ್ಕೂ

ಸ್ವಭಾವಕ್ಕೂ ಯೋಗ್ಯವಾದುದಲ್ಲ. ನೀನು ಎದ್ದು ಬಂದು ಪರಮಾತ್ಮನು ನಮ್ಮನ್ನು ಅನುಗ್ರಹಿಸುವಂತೆ ಪುರುಷಕಾರ ಮಾಡಿದರೆ ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು''. ಇದು ಈ ಪಾಶುರದ ವಾಕ್ಯಾರ್ಥ.

ಶ್ರೀ ಸಹಿತನಾದ ಪರಮಾತ್ಮನನ್ನು ತಮಗೆ ಅಭಯ ವಚನ ನೀಡಬೇಕೆಂದು ಪ್ರಾರ್ಥಿಸುತ್ತಾರೆ ಮತ್ತು ಅದಕ್ಕೆ ಶ್ರೀದೇವಿಯ ಸಹಾಯವನ್ನೂ ಕೋರುತ್ತಾರೆ ಎಂಬುದು ಈ ಪಾಶುರದ ವಾಕ್ಯಾರ್ಥ. ಕ್ಷೀರಾಬ್ಧಿಶಾಯಿಯಾಗಿ ಯೋಗ ನಿದ್ರೆಯಲ್ಲಿರುವ ಪರಮಾತ್ಮನನ್ನು ಜಗದ್ರಕ್ಷಣ ಕಾರ್ಯ ಮಾಡಲು ಎಬ್ಬಿಸುತ್ತಾರೆ ಮತ್ತು ಅವನು ಚೇತನರನ್ನು ಅನುಗ್ರಹಿಸುವಂತೆ ಪುರುಷಕಾರ ಮಾಡಬೇಕೆಂದು ಅವನೊಂದಿಗೆ ನಿತ್ಯಯೋಗ ಪಡೆದಿರುವ ಶ್ರೀದೇವಿಯನ್ನು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥ.

**ಕುತ್ತುವಿಳಕ್ಕೆರಿಯ ------ ವಾಯ್‌ತಿರವಾಯ್** :- ನಂದಾದೀಪಗಳು ಉರಿಯುತ್ತಾ ಪ್ರಕಾಶವಾಗಿ ಬೆಳಗುತ್ತಿರಲು, ದಂತದ ಕಾಲುಗಳುಳ್ಳ ಮಂಚದ ಮೇಲೆ ಸೌಂದರ್ಯ, ಶೈತ್ಯ, ಮಾರ್ದವ, ಪರಿಮಳ, ಶ್ವೇತ ಎಂಬ ಐದು ಗುಣಗಳಿಂದ ಕೂಡಿರುವ ಹಾಸಿಗೆಯನ್ನು ಆಶ್ರಯಿಸಿ, ಗೊಂಚಲು ಗೊಂಚಲಾಗಿ ಅರಳಿರುವ ಪುಷ್ಪಗಳಿಂದ ಕೂಡಿ ಅಲಂಕರಿಸಲ್ಪಟ್ಟಿರುವ ಕೇಶರಾಶಿಯನ್ನು ಪಡೆದಿರುವ ನೀಳಾದೇವಿಯ ಜ್ಞಾನ ಭಕ್ತಿಗಳಿಂದ ವಿಕಸಿತವಾದ ವಿಶಾಲವಾದ ವಕ್ಷಸ್ಥಳ ಹೊಂದಿ ಶಯನಿಸುತ್ತಿರುವ ಪರಮಾತ್ಮನೇ ! ಬಾಯಿ ತೆರೆದು ನಮಗೆ ಅಭಯವಚನವನ್ನು ಹೇಳುವವನಾಗು ಎಂದು ಅರ್ಥ.

ಇದು ಪರಮಾತ್ಮನು ಪರಮಪದದಲ್ಲಿ ಮಹಾಮಣಿಮಂಟಪದಲ್ಲಿ ಶ್ರೀದೇವಿಯೊಂದಿಗೆ ಆದಿಶೇಷನ ಹಾಸಿಗೆಯ ಮೇಲಿರುವುದನ್ನು ತೋರಿಸುತ್ತದೆ ಎಂಬುದು ವಿಶೇಷಾರ್ಥ. ನಿತ್ಯಾನಪಾಯಿನಿಯಾಗಿರುವ ಶ್ರೀದೇವಿಯನ್ನು ವಕ್ಷಸ್ಥಳದಲ್ಲಿ ಸರ್ವದಾ ಧರಿಸಿದವನಾಗಿ ಪರಮಪದದಲ್ಲಿ

ಆದಿಶೇಷನ ಮೇಲೆ ಶಯನಿಸಿಕೊಂಡಿರುವ ಪರಮಾತ್ಮನೇ, ನೀನು ವಿಭೀಷಣನಿಗಾಗಿ - ''ಸಕೃದೇವ ಪ್ರಪನ್ನಾಯ------ ಅಭಯಂ ದದಾಮಿ'' ಎಂದೂ ಮತ್ತು ಅರ್ಜುನನಿಗೆ ''ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ'' ಎಂದೂ ಹೇಳಿದಂತೆ ನಮಗೂ ಅಭಯವಚನವನ್ನು ನೀಡಬಾರದೇ ಎಂದು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥದ ಸಾರಾಂಶ.

**ಮೈತ್ತಡಂಕಣ್ಣಿನಾಯ್------ ತಹವು ಏಲೋರೆಂಪಾವಾಯ್** : ಕಾಡಿಗೆ ಯನ್ನು ಧರಿಸಿಕೊಂಡು ವಿಶಾಲವಾದ ಕಣ್ಣುಗಳುಳ್ಳ ನೀಳಾದೇವಿಯೇ, ನೀನು ನಿನ್ನ ಪತಿಯನ್ನು ಇಷ್ಟು ಕಾಲವಾದ ಮೇಲೂ, ಸ್ವಲ್ಪ ಹೊತ್ತೂ ನಿದ್ರೆಯಿಂದ ಎಚ್ಚರಗೊಳಿಸದಿರುವೆಯಾ? ಸ್ವಲ್ಪಕಾಲವೂ ಅವನ ವಿಶ್ಲೇಷವನ್ನು ಸಹಿಸಲಾರದವಳಾಗಿ ಇರುವೆಯಾ? ಹಾಗಾದರೆ ಇದು ಪುರುಷಕಾರಭೂತೆಯಾದ ನಿನ್ನ ಸ್ವರೂಪಕ್ಕೂ ದಯಾಭರಿತವಾದ ನಿನ್ನ ಸ್ವಭಾವಕ್ಕೂ ತಕ್ಕುದಲ್ಲವಲ್ಲವೇ ಎಂದು ಅರ್ಥ.

ಅಂದರೆ ಯೋಗನಿದ್ರೆಯಲ್ಲಿರುವ ಪರಮಾತ್ಮನನ್ನು ಎಬ್ಬಿಸಿ ಚೇತನರಾದ ನಮ್ಮ ರಕ್ಷಣಾಕಾರ್ಯದಲ್ಲಿ ನಿರತನಾಗುವಂತೆ ಪ್ರೇರೇಪಿಸು ಎಂದು ಶ್ರೀದೇವಿಯನ್ನು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥ. ಜ್ಞಾನ ಭಕ್ತಿಗಳೆಂಬ ಅಂಜನವನ್ನು ಧರಿಸಿಕೊಂಡು ಸ್ವರೂಪಯಾಥಾತ್ಮ್ಯಜ್ಞಾನ ಹೊಂದಿರುವ ನೀನು, ನಿನಗೆ ವಲ್ಲಭನಾದ ಪರಮಾತ್ಮನನ್ನು ಇಷ್ಟು ಕಾಲವಾದ ಮೇಲೂ, ಯೋಗನಿದ್ರೆಯಿಂದ ಎಚ್ಚರಗೊಳಿಸಿ ನಮ್ಮನ್ನು ಕಟಾಕ್ಷಿಸಿ ರಕ್ಷಿಸುವಂತೆ ಪ್ರೇರೇಪಿಸಲಾರೆಯಾ? ಸ್ವಲ್ಪಕಾಲವೂ ಅವನ ವಿಶ್ಲೇಷವನ್ನು ಸಹಿಸಲಾರದವಳಾಗಿ ಇರುವೆಯಾದರೆ ದೇವದೇವದಿವ್ಯಮಹಿಷಿಯಾಗಿ, ಅಖಿಲಜಗನ್ಮಾತೆಯಾಗಿ, ಪುರುಷಕಾರ ಭೂತೆಯಾಗಿರುವ ನಿನ್ನ ಸ್ವರೂಪಕ್ಕೂ, ನಿನ್ನ ಕಾರುಣ್ಯ ಸ್ವಭಾವಕ್ಕೂ ಇದು ತಕ್ಕುದಲ್ಲವಲ್ಲವೇ ? ಆದ್ದರಿಂದ ನೀನು ನಿನ್ನ ಸ್ವರೂಪ ಸ್ವಭಾವಗಳಿಗೆ ಅನುಗುಣವಾಗಿ, ನಮ್ಮ ಅಜ್ಞಾನಗಳನ್ನು ಹೋಗಲಾಡಿಸಿ ನಮ್ಮನ್ನು ಕಟಾಕ್ಷಿಸಿ ರಕ್ಷಿಸುವಂತೆ ಪರಮಾತ್ಮನನ್ನು ಪ್ರೇರೇಪಿಸಿ, ನೀನೂ ಅವನೂ

ಇಬ್ಬರೂ ಸೇರಿ ನಮಗೆ ದರ್ಶನ ನೀಡಿದರೆ, ನಾವು ನಿಮಗೆ ಮಂಗಳ ಹಾಡುತ್ತೇವೆ ಮತ್ತು ನಮ್ಮ ವ್ರತವು ಸಾಂಗವಾಗಿ ಶುಭವಾಗಿ ನೆರವೇರುತ್ತದೆ ಎಂಬುದು ವಿಶೇಷಾರ್ಥದ ಸಾರಾಂಶ.

**'ನೀಳಾತುಂಗಸ್ತನಗಿರಿತಟೀಸುಪ್ತಂ ಉದ್ಬೋಧ್ಯಕೃಷ್ಣಂ । ಪಾರಾರ್ಥ್ಯಂಸ್ವಂಶ್ರುತಿ ಶತಶಿರ ಸಿದ್ಧಂ ಅಧ್ಯಾಪಯಂತೀಂ''।** ಎಂದು ಶ್ರೀ ಪರಾಶರ ಭಟ್ಟರು ರಚಿಸಿರುವ ತಿರುಪ್ಪಾವೈತನಿಯನ್ ಶ್ಲೋಕದಲ್ಲಿ ತಿಳಿಸಿರುವ ಅರ್ಥವು ಈ ಪಾಶುರದಲ್ಲಿ ತಿಳಿಸಲ್ಪಟ್ಟಿದೆ. ನಿತ್ಯಾನಪಾಯಿನಿಯಾದ ಶ್ರೀದೇವಿಯನ್ನು ಹೃದಯದಲ್ಲಿ ಧರಿಸಿ, ಜಗದ್ರಕ್ಷಣ ಚಿಂತೆಯನ್ನು ಮಾಡುತ್ತಾ ಯೋಗನಿದ್ರೆಯಲ್ಲಿರುವ ಪರಮಾತ್ಮನನ್ನು ಎಚ್ಚರಗೊಳಿಸಿ, ವೇದದಲ್ಲಿ ಪ್ರತಿಪಾದಿಸಿರುವ ಪರಮಾತ್ಮನ ಜಗದ್ರಕ್ಷಣಾ ಕಾರ್ಯವೆಂಬ ಪರಮತತ್ವಾರ್ಥವನ್ನು ಗೋದಾದೇವಿಯು ಅವನಿಗೆ ಬೋಧಿಸು ತ್ತಾಳೆ ಎಂಬ ಅರ್ಥವು ಈ ಪಾಶುರದಲ್ಲಿ ವ್ಯಕ್ತವಾಗಿ ವಿವರಿಸಲ್ಪಟ್ಟಿದೆ. ಶ್ರೀದೇವಿಯು ಚೇತನರಿಗೂ, ಪರಮಾತ್ಮನಿಗೂ ಉಪದೇಶ ಮಾಡುತ್ತಾಳೆ. ಚೇತನರಿಗೆ ಪರಮಾತ್ಮನನ್ನು ಆಶ್ರಯಿಸಿ ಉಜ್ಜೀವಿಸುವಂತೆಯೂ, ಪರಮಾತ್ಮನಿಗೆ ಚೇತನರನ್ನು ಅನುಗ್ರಹಿಸಿ ರಕ್ಷಿಸುವಂತೆಯೂ ಉಪದೇಶ ಮಾಡುತ್ತಾಳೆ. ಇದೇ ಅವಳ ಪುರುಷಕಾರ. ಇದನ್ನು ಶ್ರೀ ರಾಮಾಯಣದಲ್ಲಿ ಕಾಣಬಹುದು. ಸೀತಾದೇವಿಯು ರಾವಣನಿಗೆ 'ತೇನಮೈತ್ರೀಭವತುತೇ' ಶ್ರೀರಾಮನೊಂದಿಗೆ ಸ್ನೇಹ ಹೊಂದುವವನಾಗು ಎಂದು ಉಪದೇಶ ನೀಡಿದ್ದಾಳೆ. ಮತ್ತು ತನ್ನನ್ನು ಕ್ರೂರವಾಗಿ ಹಿಂಸಿಸಿದ ಕಾಕಾಸುರನಿಗೂ ಅನುಗ್ರಹ ಮಾಡಿ ರಕ್ಷಿಸುವಂತೆ ಶ್ರೀರಾಮನಿಗೂ ಉಪದೇಶ ನೀಡಿದ್ದಾಳೆ. ಇದೇ ರೀತಿ ಶ್ರೀಗೋದಾದೇವಿಯೂ ತಿರುಪ್ಪಾವೈಯಲ್ಲಿ ಚೇತನರಿಗೆ ಭಗವಂತನ ನಾಮ ಸಂಕೀರ್ತನೆ ಮಾಡಿ ಉಜ್ಜೀವಿಸಿರಿ ಎಂದೂ ಮತ್ತು ಪರಮಾತ್ಮನನ್ನು ಯೋಗನಿದ್ರೆಯಿಂದ ಎಬ್ಬಿಸಿ ಅವನಿಗೆ ಚೇತನರನ್ನು ಅನುಗ್ರಹ ಮಾಡಿ ರಕ್ಷಿಸು ಎಂದೂ ಉಪದೇಶ ನೀಡಿದ್ದಾಳೆ.

ಮೋಕ್ಷಕ್ಕೆ ಹೋಗುವ ಮುಕ್ತಾತ್ಮನು ಅಲ್ಲಿ ಮಹಾಮಣಿ ಮಂಟಪವನ್ನು ಹೋಗಿ ಸೇರಿ, ಅಲ್ಲಿ ಆದಿಶೇಷನ ಮೇಲೆ ಹತ್ತಿ ಶ್ರೀಸಹಿತನಾಗಿ ವಿರಾಜಿಸುತ್ತಿರುವ ಭಗವಂತನ ತೊಡೆಯ ಮೇಲೆ ಕುಳಿತುಕೊಳ್ಳುತ್ತಾನೆ ಎಂದು ವೇದದಲ್ಲಿ ತಿಳಿಸಿದೆ. ಅದನ್ನೇ ಇಲ್ಲಿ ಗೋಪಿಯರು ಪ್ರಾರ್ಥಿಸುತ್ತಾರೆ ಎಂಬ ಅಭಿಪ್ರಾಯವೂ ಸೂಚಿಸಲ್ಪಟ್ಟಿದೆ.

ಗೋದಾದೇವಿಯು ಶ್ರೀವಿಲ್ಲಿಪುತ್ತೂರಿನ . ವಟಪತ್ರಶಾಯಿಯಾದ ಅರ್ಚಾಮೂರ್ತಿಯನ್ನೇ ಶ್ರೀಕೃಷ್ಣ ಪರಮಾತ್ಮನನ್ನಾಗಿ ಭಾವಿಸಿಕೊಂಡು ಅವನ ದರ್ಶನ ಮಾಡುತ್ತಿದ್ದುದರಿಂದ ಅವಳು ಈ ಪಾಶುರದಲ್ಲಿ ಶ್ರೀದೇವಿಯನ್ನು ವಕ್ಷಸ್ಥಲದಲ್ಲಿ ಧರಿಸಿಕೊಂಡು ಆದಿಶೇಷನ ಮೇಲೆ ಶಯನಿಸುತ್ತಿರುವ ವ್ಯೂಹ ಮೂರ್ತಿಯಲ್ಲಿ ಶರಣಾಗತಿ ಮಾಡಿದ್ದಾಳೆ ಎಂಬ ಅರ್ಥವೂ ಇಲ್ಲಿ ತಿಳಿಸಲ್ಪಟ್ಟಿದೆ.

ಒಬ್ಬ ಚೇತನನು ಆತ್ಮ ಶ್ರೇಯಸ್ಸನ್ನು ಹೊಂದಲು ಶ್ರೀದೇವಿಯ ಪುರುಷಕಾರವೂ ಪರಮಾತ್ಮನ ಕೃಪೆಯೂ ಅತ್ಯವಶ್ಯಕವಾದವುಗಳಾಗಿವೆ. ಶ್ರೀದೇವಿಯೂ ಪರಮಾತ್ಮನೂ ಒಬ್ಬರೊಂದಿಗೆ ಒಬ್ಬರು ಸ್ಪರ್ಧಿಸಿಕೊಂಡು ಚೇತನರ ರಕ್ಷಣೆಯಲ್ಲಿ ನಿರತರಾಗಿದ್ದಾರೆ. ಪರಮಾತ್ಮನು ತಂದೆಯಂತೆ ಹಿತಪರನೂ, ಶ್ರೀದೇವಿಯು ತಾಯಿಯಂತೆ ಪ್ರಿಯಪರೆಯೂ ಆಗಿದ್ದಾರೆ. ಪರಮಾತ್ಮನ ಅನುಗ್ರಹಕ್ಕಿಂತ ಶ್ರೀದೇವಿಯು ಅನುಗ್ರಹ ಇನ್ನೂ ಮೇಲಾದುದಾಗಿಯೇ ಇದೆ. ಇದಕ್ಕೆ ನಿದರ್ಶನವನ್ನು ಶ್ರೀ ರಾಮಾಯಣದಲ್ಲಿ ಕಾಣಬಹುದು. ಶ್ರೀರಾಮನು ತನ್ನಲ್ಲಿ ಶರಣಾದವರಿಗೆಲ್ಲಾ ರಕ್ಷಣೆಯ ಭರವಸೆ ನೀಡಿದ್ದಾನೆ. "ಸಕೃದೇವ ಪ್ರಪನ್ನಾಯತವಾಸ್ಮೀತಿಚಯಾಚತೇ ಅಭಯಂ ಸರ್ವಭೂತೇಭ್ಯೋದದಾಮಿ ಏತತ್ ವ್ರತಂಮಮ" - ಅಂದರೆ ನನ್ನಲ್ಲಿ ಒಮ್ಮೆ ಶರಣಾಗಿ ನೀನೇ ಗತಿ ಎಂದು ಪ್ರಪತ್ತಿ ಮಾಡಿದವರಿಗೆಲ್ಲಾ ಅಭಯವನ್ನು ನೀಡುತ್ತೇನೆ; ಇದು ನನ್ನ ಸತ್ಯವಾದ ಮಾತು ಎಂದಿದ್ದಾನೆ ಶ್ರೀರಾಮ. ಅಷ್ಟೇ ಏಕೆ 'ಯದಿವಾ ರಾವಣಃ ಸ್ವಯಂ' - ಅಂದರೆ ಅಂತಹವನು ರಾವಣನೇ ಆಗಿದ್ದರೂ

ಸರಿ ಅವನು ನನ್ನಲ್ಲಿ ಶರಣಾದರೆ ಅವನನ್ನು ರಕ್ಷಿಸುತ್ತೇನೆ ಎಂದು ಪರಮಾತ್ಮನು ಭರವಸೆ ನೀಡಿದ್ದಾನೆ. ಆದರೆ ಸೀತಾದೇವಿಯಾದರೋ ತನಗೆ ಹಿಂಸೆ ಕೊಟ್ಟ ರಾಕ್ಷಸ ಸ್ತ್ರೀಯರಿಗೆಲ್ಲಾ ಅಭಯ ವಚನ ನೀಡಿದ್ದಾಳೆ. 'ನಕಶ್ಚಿನ್ನಾಪರಾಧ್ಯತಿ' - ಅಂದರೆ ಲೋಕದಲ್ಲಿ ಪಾಪ ಮಾಡದವರಾರಿದ್ದಾರೆ; ರಾಕ್ಷಸ ಸ್ತ್ರೀಯರು ತಮಗೆ ಯಜಮಾನನಾದ ರಾವಣನ ಆಜ್ಞೆಯನ್ನು ಪರಿಪಾಲಿಸಿ ತನ್ನನ್ನು ಹಿಂಸಿಸಿದರೇ ವಿನಹ ಅವರದೇನೂ ತಪ್ಪಿಲ್ಲ ಎಂದು ಹೇಳಿ ತನ್ನಲ್ಲಿ ಶರಣಾಗತಿ ಮಾಡದವರನ್ನೂ, ಅಷ್ಟು ಮಾತ್ರವಲ್ಲದೆ ತನ್ನನ್ನು ಅತಿಕ್ರೂರವಾಗಿ ಹಿಂಸಿಸಿದ ರಾಕ್ಷಸಿಯರನ್ನೂ, ಕಾಕಾಸುರನನ್ನೂ ರಕ್ಷಿಸಿದ್ದಾಳೆ. 'ಭವೇಯಂ ಶರಣಂ ಮಮ' ಅಂದರೆ ರಾಕ್ಷಸಿಯರೇ ನೀವು ಭಯಪಡಬೇಡಿರಿ, ನಾನು ನಿಮ್ಮನ್ನು ರಕ್ಷಿಸುತ್ತೇನೆ - ಎಂದು ಅಭಯ ವಚನವಿತ್ತು ರಕ್ಷಿಸಿದ್ದಾಳೆ. ಹೀಗೆ ಒಬ್ಬರೊಂದಿಗೆ ಒಬ್ಬರು ಸ್ಪರ್ಧಿಸಿಕೊಂಡು ಜಗತ್ತಿಗೆಲ್ಲಾ ಮಾತಾಪಿತರಾಗಿ ಚೇತನರಿಗೆಲ್ಲಾ ಪ್ರಿಯರೂ ಹಿತಪರರೂ ಆಗಿರುವ ಶ್ರೀದೇವಿ ಮತ್ತು ಪರಮಾತ್ಮರಲ್ಲಿ ಶರಣಾಗತರಾಗಿ ಅವರ ಅನುಗ್ರಹಕ್ಕೆ ಪಾತ್ರರಾದವರಿಗೆ ಯಾವ ಕೊರತೆಯೂ ಇಲ್ಲ; ಆದ್ದರಿಂದ ಶ್ರೀಸಹಿತನಾದ ಪರಮಾತ್ಮನಲ್ಲೇ ಚೇತನನು ಶರಣಾಗತಿ ಮಾಡಬೇಕು ಎಂಬುದು ದ್ವಯ ಮಂತ್ರದಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ.

ಅದರಂತೆ ಇಲ್ಲಿ ಗೋಪಿಯರು ತಮ್ಮ ರಕ್ಷಣೆಗಾಗಿ ಪರಮಾತ್ಮನನ್ನೂ ಪುರುಷಕಾರಕ್ಕಾಗಿ ಶ್ರೀದೇವಿಯನ್ನೂ, ಈ ಪಾಶುರದಲ್ಲಿ ಪ್ರಾರ್ಥಿಸಿ ಶ್ರೀಸಹಿತನಾದ ಪರಮಾತ್ಮನಲ್ಲಿ ಶರಣಾಗತಿ ಮಾಡಿರುವುದರಿಂದ - 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೆ' ಎಂಬ ಮಂತ್ರದ ಪೂರ್ವ ವಾಕ್ಯದ ಅನುಸಂಧಾನವು ಈ ಪಾಶುರದಲ್ಲಿ ಅಡಗಿದೆ ಎಂದು ತಿಳಿಸಿದ್ದಾರೆ. ಶ್ರೀನಮ್ಮಾಳ್ವಾರ್‌ರವರು 'ಅಹಲಹಿಲ್ಲೇನ್' ಎಂಬ ತಿರುವಾಯ್ಮೊಳಿ ಪಾಶುರದಲ್ಲಿ ಶ್ರೀದೇವಿಯು ಪರಮಾತ್ಮನೊಂದಿಗೆ ಅವನ ವಕ್ಷಸ್ಥಳದಲ್ಲಿ ನಿತ್ಯವಾಸಮಾಡಿಕೊಂಡು ನಿತ್ಯಾನಪಾಯಿನಿಯಾಗಿ ಇದ್ದುಕೊಂಡು ಚೇತನರನ್ನು

ಪುರುಷಕಾರ ಮಾಡಿ ರಕ್ಷಿಸುತ್ತಿದ್ದಾಳೆ ಎಂಬುದನ್ನು ತಿಳಿಸಿ, ಅವಳೊಂದಿಗೆ ಸೇರಿರುವ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾರೆ. ಶ್ರೀ ರಾಮಾನುಜರು ಶರಣಾಗತಿ ಗದ್ಯದಲ್ಲಿ 'ಓಂಭಗವನ್ನಾರಾಯಣಾಭಿಮತಾನುರೂಪ' ಎಂದು ಆರಂಭಿಸಿ ಮೊದಲು ಶ್ರೀದೇವಿಯಲ್ಲಿ ಶರಣಾಗತಿ ಮಾಡಿದ್ದಾರೆ. ಅನಂತರ ಶ್ರೀಮನ್ನಾರಾಯಣನಲ್ಲಿ ಶರಣಾಗತಿ ಮಾಡಿದ್ದಾರೆ. ಶ್ರೀ ನಮ್ಮಾಳ್ವಾರ್ರ ಶರಣಾಗತಿಯಂತೆ ಮತ್ತು ಶ್ರೀ ರಾಮಾನುಜರ ಶರಣಾಗತಿಯಂತೆ ಶ್ರೀ ಗೋದಾದೇವಿಯೂ ತಿರುಪ್ಪಾವೈಯಲ್ಲಿ ಮೊದಲು 19ನೆಯ ಪಾಶುರದಲ್ಲಿ ಶ್ರೀದೇವಿಯಲ್ಲಿ ಶರಣಾಗತಿ ಮಾಡಿ ಅನಂತರ 'ಕುತ್ತುವಿಳಕ್ಕೆರಿಯ' ಎಂಬ 20ನೆಯ ಪಾಶುರದಲ್ಲಿ ಶ್ರೀಸಹಿತನಾದ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾಳೆ. ತಮ್ಮ ರಕ್ಷಣೆಗಾಗಿ ಪರಮಾತ್ಮನನ್ನೂ, ಪುರುಷಕಾರಕ್ಕಾಗಿ ಶ್ರೀದೇವಿಯನ್ನೂ ಪ್ರಾರ್ಥಿಸಿ ಇಬ್ಬರಲ್ಲೂ ಶರಣಾಗತಿ ಮಾಡಿದ್ದಾಳೆ.

# ಪಾಶುರ - 20

ಗೋಪಿಯರು ಪರಮಾತ್ಮ ಮತ್ತು ಶ್ರೀದೇವಿ ಇಬ್ಬರಲ್ಲೂ ಶರಣಾಗತಿ ಮಾಡಿ, ಅವರಿಬ್ಬರನ್ನೂ ಎದ್ದು ಬಂದು ತಮ್ಮ ವ್ರತಾನುಷ್ಠಾನಕ್ಕೆ ಬೇಕಾದ ಸಲಕರಣೆಗಳನ್ನುಕೊಟ್ಟು, ತಮ್ಮ ವ್ರತವನ್ನು ಸಾಂಗವಾಗಿ ನೆರವೇರಿಸಿ ಕೊಡಬೇಕೆಂದು ಪ್ರಾರ್ಥಿಸುತ್ತಾರೆ ಎಂಬುದು ಈ ಪಾಶುರದ ವಾಕ್ಯಾರ್ಥ. ಇದು ಶ್ರೀಸಹಿತನಾದ ಭಗವಂತನಲ್ಲಿ ಕೈಂಕರ್ಯವನ್ನು ಪ್ರಾರ್ಥಿಸುವ ಪ್ರಾರ್ಥನೆ ಯಾಗಿದೆ ಎಂಬುದು ಇದರ ವಿಶೇಷಾರ್ಥ. 'ಉಂದುಮದಹಳಿತ್ತನ್' ಎಂಬ 18ನೆಯ ಪಾಶುರವು ಶ್ರೀಲಕ್ಷ್ಮೀದೇವಿಯಲ್ಲಿ ಪುರುಷಕಾರದ ಪ್ರಾರ್ಥನೆ ಯಾಗಿಯೂ; 'ಕುತ್ತುವಿಳಕ್ಕೆರಿಯ' - ಎಂಬ 19ನೆಯ ಪಾಶುರವು ಶ್ರೀಸಹಿತ ನಾದ ಪರಮಾತ್ಮನಲ್ಲಿ ಶರಣಾಗತಿ ಮಾಡುವ ಪಾಶುರವಾಗಿಯೂ ಇರುವುದ ರಿಂದ ದ್ವಯಮಂತ್ರದ ಪೂರ್ವವಾಕ್ಯವಾದ ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೆ' ಎಂಬುದರ ಅರ್ಥವನ್ನೂ; ಮತ್ತು ಈ 20ನೆಯ ಪಾಶುರವು ಶ್ರೀಸಹಿತನಾದ ಪರಮಾತ್ಮನಲ್ಲಿ ಕೈಂಕರ್ಯವನ್ನು ಪ್ರಾರ್ಥಿಸುವ ಪ್ರಾರ್ಥನೆ ಯಾಗಿರುವುದರಿಂದ ಇದು ದ್ವಯಮಂತ್ರದ ಉತ್ತರವಾಕ್ಯವಾದ 'ಶ್ರೀಮತೇ ನಾರಾಯಣಾಯನಮಃ' ಎಂಬುದರ ಅರ್ಥವನ್ನೂ ಪ್ರತಿ ಪಾದಿಸುತ್ತದೆ ಎಂದು ವಿಶೇಷಾರ್ಥವು ತಿಳಿಸುತ್ತದೆ.

ಮುಪ್ಪತ್ತು ಮೂವರ್ ಅಮರರ್‌ಕ್ಕು ಮುನ್‌ಶೆನ್ರು
ಕಪ್ಪಮ್ ತವಿರ್ಕುಂ ಕಲಿಯೇ ತುಯಿಲೆಳಾಯ್
ಶೆಪ್ಪಮುಡೈಯಾಯ್ ತಿರುಲುಡೈಯಾಯ್ ಶೆತ್ತಾರ್ಕ್ಕು
ವೆಪ್ಪಮ್ ಕೊಡುಕ್ಕುಂ ವಿಮಲಾ ತುಯಿಲೆಳಾಯ್
ಶೆಪ್ಪನ್ನ ಮೆನ್‌ಮುಲೈ ಚೆವ್ವಾಯ್ ಚ್ಚಿರುಮರುಙ್ಗುಲ್

ನಪ್ಪಿನ್ನೈ ನಂಗಾಯ್ ತಿರುವೇ ತುಯಿಲೆಳಾಯ್
ಉಕ್ಕಮುಮ್ ತಟ್ಟೊಳಿಯುಮ್ ತನ್ದುನ್‌ಮಣಾಳನ್ನೈ
ಇಪ್ಪೋದೇ ಎಮ್ಮೈ ನೀರಾಟ್ಟೇಲೋರೆಮ್ಬಾವಾಯ್.

"ಮೂವತ್ತು ಮೂರು ಕೋಟಿ ದೇವತೆಗಳಿಗೆ ನೀನೇ ಮುಂದಾಗಿ ಹೋಗಿ ಅವರ ಭಯವನ್ನು ನಿವಾರಣೆ ಮಾಡುವ ಸಾಮರ್ಥ್ಯವುಳ್ಳ ಪರಮಾತ್ಮನೇ ! ನಿದ್ರೆಯಿಂದ . ಏಳುವವನಾಗು. ಪರಾಕ್ರಮವುಳ್ಳವನೇ, ತೇಜಸ್ಸುಳ್ಳವನೇ, ಶತ್ರುಗಳಿಗೆಲ್ಲಾ ಭಯ ಉಂಟು ಮಾಡುವವನೇ, ನಿರ್ಮಲನಾದವನೇ, ನೀನು ನಿದ್ರೆಯಿಂದ ಏಳುವವನಾಗು. ಕಲಶದಂತೆ ಸ್ತನಗಳನ್ನು ಪಡೆದಿರುವ, ಕೆಂಪಾದ ಅಧರವುಳ್ಳ, ಸುಂದರವಾದ ಮಧ್ಯಪ್ರದೇಶವುಳ್ಳ ನಪ್ಪಿನ್ನಾ ದೇವಿಯೇ, ಶ್ರೀದೇವಿಯೇ! ನೀನು ನಿದ್ರೆಬಿಟ್ಟು ಏಳುವವಳಾಗು, (ನಮ್ಮ ವ್ರತಕ್ಕೆ ಬೇಕಾದ) ಬೀಸಣಿಗೆಯನ್ನೂ ಕನ್ನಡಿಯನ್ನೂ ನಮಗೆ ಕೊಟ್ಟು, ನಾವು ನಿನ್ನ ಪತಿಯಾದ ಪರಮಾತ್ಮನ ಅನುಭವವನ್ನು ಅಂದರೆ ಭಗವದನುಭವವನ್ನು ಈಗಲೇ ಪಡೆಯುವಂತೆ ಅನುಗ್ರಹಿಸು. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು" - ಇದು ಈ ಪಾಶುರದ ವಾಕ್ಯಾರ್ಥ.

ಈ ಪಾಶುರದಲ್ಲಿ ಮೊದಲು ಪರಮಾತ್ಮನನ್ನೂ ಅನಂತರ ಶ್ರೀದೇವಿಯನ್ನೂ ಪ್ರಾರ್ಥಿಸುತ್ತಾರೆ.

**ಮುಪ್ಪತ್ ಮೂವರ್ ಅಮರರ್‌ಕ್ಕು ಮುನ್‌ಶೆನ್ರು ಕಪ್ಪಮ್ ತವಿರ್ಕುಂ ಕಲಿಯೇ ತುಯಿಲೆಳಾಯ್** - ಮೂವತ್ತು ಮೂರು ಕೋಟಿ ದೇವತೆಗಳಿಗೆ ಕಷ್ಟವು ಬರುವುದಕ್ಕೆ ಮುಂಚೆಯೇ, ಅವರು ಪ್ರಾರ್ಥಿಸುವುದಕ್ಕೂ ಮುಂಚೆಯೇ, ನೀನಾಗಿಯೇ ಹೋಗಿ ಅವರ ಭಯವನ್ನೂ ಕಷ್ಟವನ್ನೂ, ನಿವಾರಿಸಿ ಅವರನ್ನು ರಕ್ಷಿಸುವ ಸಾಮರ್ಥ್ಯವುಳ್ಳ ಸ್ವಾಮಿಯಾದ ಪರಮಾತ್ಮನೇ, ನಿದ್ರೆಯಿಂದ ಏಳುವವನಾಗು - ಎಂದು ಅರ್ಥ. ನಿನ್ನನ್ನು ಪ್ರಾರ್ಥಿಸದೇ ಇದ್ದರೂ

ನೀನಾಗಿಯೇ ಹೋಗಿ ದೇವತೆಗಳಿಗೆ ಅವರ ವಿರೋಧಿಗಳನ್ನು ನಾಶಮಾಡಿ ಅವರ ಇಷ್ಟಾರ್ಥಗಳನ್ನು ಅನುಗ್ರಹಿಸುವಂತಹವನಾಗಿದ್ದೀಯೆ. ಅಂದ ಮೇಲೆ ನಾವೇ ನಿನ್ನ ಬಳಿ ಬಂದು ನಿನ್ನನ್ನು ಪ್ರಾರ್ಥಿಸುತ್ತಿರುವಾಗ ನೀನು ನಮ್ಮ ಇಷ್ಟಾರ್ಥಗಳನ್ನು ನೆರವೇರಿಸಕೂಡದೇ ಎಂದು ಗೋಪಿಯರು ಪ್ರಾರ್ಥಿಸುತ್ತಾರೆಂದು ಅಭಿಪ್ರಾಯ. ಅಸಂಖ್ಯಾತರಾದ ಮುಮುಕ್ಷುಗಳಿಗೆಲ್ಲಾ ಅಜ್ಞಾನವು ತಲೆ ಎತ್ತುವುದಕ್ಕೆ ಮುಂಚೆಯೇ ಅದನ್ನು ಹೋಗಲಾಡಿಸಿ ಅವರನ್ನು ರಕ್ಷಿಸಿ ಅನುಗ್ರಹಿಸಿರುವ ಪರಮಾತ್ಮನೇ ನೀನು ಎದ್ದುಬಂದು ನಮ್ಮನ್ನು ಅನುಗ್ರಹಿಸು ಎಂಬುದು ವಿಶೇಷಾರ್ಥ.

**ಶೆಪ್ಪಮುಡೈಯಾಯ್, ತಿರಲುಡೈಯಾಯ್ ಶೆತ್ತಾರ್ಕ್ಕು ವೆಪ್ಪಂ ಕೊಡುಕ್ಕುಂ ವಿಮಲಾ ತುಯಿಲೆಳಾಯ್** :- ಆಶ್ರಿತರು ತನ್ನನ್ನು ಅನುಭವಿಸುವಂತೆ ಸೌಂದರ್ಯಾದಿ ಕಲ್ಯಾಣ ಗುಣವುಳ್ಳವನೇ; ಮಹಾಪರಾಕ್ರಮಶಾಲಿಯಾಗಿ ಭಕ್ತರನ್ನು ರಕ್ಷಿಸುವ ಸಾಮರ್ಥ್ಯವುಳ್ಳವನೇ; ಶತ್ರುಗಳಿಗೆ ಭಯ ವೇದನೆಗಳನ್ನು ಉಂಟುಮಾಡುವವನೇ; ಮಲಾತೀತನಾಗಿ ದೋಷರಹಿತನಾಗಿ ಪರಮಪವಿತ್ರನಾದವನೇ, ನಿದ್ರೆಯಿಂದ ಎದ್ದು ಬಂದು ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸುತ್ತಾರೆ.

**ಶೆಪ್ಪನ್ನ ಮೆನ್ಮುಲೈ ಶೆವ್ವಾಯ್ ಚ್ಚಿರುಮರುಙ್ಗುಲ್ ನಪ್ಪಿನ್ನೈ ನಂಗಾಯ್ ತಿರುವೇ ತುಯಿಲೆಳಾಯ್**—ಸುಂದರವಾದ ಎದೆ ಮೈಕಟ್ಟುಗಳನ್ನು ಪಡೆದಿರುವ, ಕೆಂಪಾದ ಅಧರವುಳ್ಳನಪ್ಪಿನ್ನಾದೇವಿ ಎಂಬ ಶ್ರೀದೇವಿಯೇ, ನೀನು ನಿದ್ರೆಯಿಂದ ಎಚ್ಚತ್ತವಳಾಗು ಎಂದು ಅರ್ಥ. ಅಂದರೆ ಜ್ಞಾನಭಕ್ತಿ ವೈರಾಗ್ಯವುಳ್ಳವಳೇ ಅಂದರೆ ಭಗವಂತನಲ್ಲಿ ಭಕ್ತಿಯನ್ನೂ ವಿಷಯಾನ್ತರಗಳಲ್ಲಿ ವೈರಾಗ್ಯವನ್ನೂ ಪಡೆದಿರುವವಳಾಗಿ, ನಪ್ಪಿನ್ನೈ ಎಂದು ಹೆಸರುಳ್ಳ ಶ್ರೀದೇವಿಯ ಅಂಶ ಭೂತಳಾದ ನೀಳಾದೇವಿಯೇ, ಲೋಕಮಾತೆಯೇ, ನೀನು ಎದ್ದು ಬಂದು ನಮ್ಮನ್ನು ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥ.

ತಾನು ಸೆರೆಯಿದ್ದು ಭಕ್ತರನ್ನು ರಕ್ಷಿಸಿದ, ಸೀತಾದೇವಿಯಾಗಿ ಅವತರಿಸಿದ ಲಕ್ಷ್ಮೀದೇವಿಯ ಅಂಶಭೂತಳಲ್ಲವೇ ನೀನು; ಈಗ ನಮ್ಮನ್ನು ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ ಎಂದು ಅಭಿಪ್ರಾಯ.

**ಉಕ್ಕಮುಂ ತಟ್ಟೊಳಿಯುಂ ತಂದ್**:- ನಮ್ಮ ವ್ರತಕ್ಕೆ ಬೇಕಾದ ಬೀಸಣಿಗೆ, ಕನ್ನಡಿ ಮುಂತಾದ ಪದಾರ್ಥಗಳನ್ನೆಲ್ಲಾ ನಮಗೆ ತಂದುಕೊಟ್ಟು - ಎಂದು ಅರ್ಥ. ಅಂದರೆ ಕೈಂಕರ್ಯದಲ್ಲಿ ಅಹಂಕಾರ ಮಮಕಾರಗಳನ್ನು ಬೀಸಿ ಹೋಗಲಾಡಿಸುವ ಬೀಸಣಿಗೆಯನ್ನೂ, ನಮ್ಮ ಯಥಾವಸ್ಥಿತ ಸ್ವರೂಪಜ್ಞಾನವನ್ನು ನಮಗೆ ತೋರಿಸುವ ಕನ್ನಡಿಯನ್ನೂ ನಮಗೆ ಕೊಟ್ಟು - ಎಂಬುದು ವಿಶೇಷಾರ್ಥ.

**ಇಪ್ಪೋದೇ ಉನ್‌ಮಣಾಳನ್ನೈತಂದ್ ಎಮ್ಮೈ ನೀರಾಟ್ಟು** :- ಈಗಲೇ, ಈ ಕ್ಷಣವೇ ನಿನ್ನ ಪತಿಯಾದ ಪರಮಾತ್ಮನ ಅನುಗ್ರಹವನ್ನು ನಮಗೆ ಉಂಟುಮಾಡಿ, ನಾವು ಭಗವನ್ನಾಮಸಂಕೀರ್ತನೆಯಲ್ಲಿ ಮುಳುಗಿ, ಭಗವದನುಭವ ಪಡೆಯುವಂತೆ ಮಾಡು ಎಂದು ಅರ್ಥ. ಅಂದರೆ ನಾಮ ಸಂಕೀರ್ತನೆಯ ಮೂಲಕ ಭಗವದ್ಗುಣಸಾಗರದಲ್ಲಿ ಮುಳುಗುವ ನೀರಾಟ್ಟವೆಂಬ ನಮ್ಮ ಈ ವ್ರತರೂಪ ಕೈಂಕರ್ಯದಲ್ಲಿ, ಅಹಂಕಾರ ಮಮಕಾರ ನಿವೃತ್ತಿಯನ್ನು ಉಂಟುಮಾಡಿ, ಯಥಾವಸ್ಥಿತ ಸ್ವರೂಪ ಜ್ಞಾನವನ್ನು ನಮಗೆ ಕೊಟ್ಟು, ನಮ್ಮ ಈ ಕೈಂಕರ್ಯವನ್ನು ನೀವಿಬ್ಬರೂ ಸ್ವೀಕರಿಸಿ, ಪರಮಾತ್ಮನು ಈ ಕ್ಷಣವೇ ನಮ್ಮನ್ನು ಅನುಗ್ರಹಿಸಿ, ನಮಗೆ ಭಗವದನುಭವ ಲಭಿಸುವಂತೆ ಮಾಡು ಎಂದು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥ.

**ಏಲೋರೆಂಪಾವಾಯ್** : ಹೀಗೆ ನೀವಿಬ್ಬರೂ ಭಗವನ್ನಾಮ ಸಂಕೀರ್ತನೆ ಎಂಬ ಈ ವ್ರತರೂಪ ಕೈಂಕರ್ಯವನ್ನು ಸ್ವೀಕರಿಸಿ, ನಮ್ಮ ವಿರಹತಾಪ ಆರಿ, ನಮಗೆ ಭಗವತ್ ಜ್ಞಾನದರ್ಶನ ಪ್ರಾಪ್ತಿ ಲಭಿಸುವಂತೆ ಮಾಡಿರಿ; ನಿಮ್ಮಿಬ್ಬರ ಅನುಗ್ರಹದಿಂದ ನಮ್ಮ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು ಎಂದು ಪ್ರಾರ್ಥಿಸುತ್ತಾರೆ.

ತಾನು ಸೆರೆಯಿದ್ದು ಭಕ್ತರನ್ನು ರಕ್ಷಿಸಿದ, ಸೀತಾದೇವಿಯಾಗಿ ಅವತರಿಸಿದ ಲಕ್ಷ್ಮೀದೇವಿಯ ಅಂಶಭೂತಳಲ್ಲವೇ ನೀನು; ಈಗ ನಮ್ಮನ್ನು ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ ಎಂದು ಅಭಿಪ್ರಾಯ.

**ಉಕ್ಕಮುಂ ತಟ್ಟೊಳಿಯುಂ ತಂದ್**:- ನಮ್ಮ ವ್ರತಕ್ಕೆ ಬೇಕಾದ ಬೀಸಣಿಗೆ, ಕನ್ನಡಿ ಮುಂತಾದ ಪದಾರ್ಥಗಳನ್ನೆಲ್ಲಾ ನಮಗೆ ತಂದುಕೊಟ್ಟು - ಎಂದು ಅರ್ಥ. ಅಂದರೆ ಕೈಂಕರ್ಯದಲ್ಲಿ ಅಹಂಕಾರ ಮಮಕಾರಗಳನ್ನು ಬೀಸಿ ಹೋಗಲಾಡಿಸುವ ಬೀಸಣಿಗೆಯನ್ನೂ, ನಮ್ಮ ಯಥಾವಸ್ಥಿತ ಸ್ವರೂಪಜ್ಞಾನವನ್ನು ನಮಗೆ ತೋರಿಸುವ ಕನ್ನಡಿಯನ್ನೂ ನಮಗೆ ಕೊಟ್ಟು - ಎಂಬುದು ವಿಶೇಷಾರ್ಥ.

**ಇಪ್ಪೋದೇ ಉನ್‌ಮಣಾಳನ್ನೈತಂದ್ ಎಮ್ಮೈ ನೀರಾಟ್ಟು** :- ಈಗಲೇ, ಈ ಕ್ಷಣವೇ ನಿನ್ನ ಪತಿಯಾದ ಪರಮಾತ್ಮನ ಅನುಗ್ರಹವನ್ನು ನಮಗೆ ಉಂಟುಮಾಡಿ, ನಾವು ಭಗವನ್ನಾಮಸಂಕೀರ್ತನೆಯಲ್ಲಿ ಮುಳುಗಿ, ಭಗವದನುಭವ ಪಡೆಯುವಂತೆ ಮಾಡು ಎಂದು ಅರ್ಥ. ಅಂದರೆ ನಾಮ ಸಂಕೀರ್ತನೆಯ ಮೂಲಕ ಭಗವದ್ಗುಣಸಾಗರದಲ್ಲಿ ಮುಳುಗುವ ನೀರಾಟ್ಟ ವೆಂಬ ನಮ್ಮ ಈ ವ್ರತರೂಪ ಕೈಂಕರ್ಯದಲ್ಲಿ, ಅಹಂಕಾರ ಮಮಕಾರ ನಿವೃತ್ತಿ ಯನ್ನು ಉಂಟುಮಾಡಿ, ಯಥಾವಸ್ಥಿತ ಸ್ವರೂಪ ಜ್ಞಾನವನ್ನು ನಮಗೆ ಕೊಟ್ಟು, ನಮ್ಮ ಈ ಕೈಂಕರ್ಯವನ್ನು ನೀವಿಬ್ಬರೂ ಸ್ವೀಕರಿಸಿ, ಪರಮಾತ್ಮನು ಈ ಕ್ಷಣವೇ ನಮ್ಮನ್ನು ಅನುಗ್ರಹಿಸಿ, ನಮಗೆ ಭಗವದನುಭವ ಲಭಿಸುವಂತೆ ಮಾಡು ಎಂದು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥ.

**ಏಲೋರೆಂಪಾವಾಯ್** : ಹೀಗೆ ನೀವಿಬ್ಬರೂ ಭಗವನ್ನಾಮ ಸಂಕೀರ್ತನೆ ಎಂಬ ಈ ವ್ರತರೂಪ ಕೈಂಕರ್ಯವನ್ನು ಸ್ವೀಕರಿಸಿ, ನಮ್ಮ ವಿರಹತಾಪ ಆರಿ, ನಮಗೆ ಭಗವತ್ ಜ್ಞಾನದರ್ಶನ ಪ್ರಾಪ್ತಿ ಲಭಿಸುವಂತೆ ಮಾಡಿರಿ; ನಿಮ್ಮಿಬ್ಬರ ಅನುಗ್ರಹದಿಂದ ನಮ್ಮ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು ಎಂದು ಪ್ರಾರ್ಥಿಸುತ್ತಾರೆ.

ಈ ಪಾಶುರವು ಮೇಲೆ ತಿಳಿಸಿದಂತೆ ದ್ವಯಮಂತ್ರದ 'ಶ್ರೀಮತೇನಾರಾಯಣಾಯನಮಃ' ಎಂಬ ಉತ್ತರ ವಾಕ್ಯದ ಅರ್ಥವನ್ನು ಪ್ರತಿಪಾದಿಸುತ್ತದೆ ಎಂಬುದು ವಿಶೇಷಾರ್ಥದ ತಾತ್ಪರ್ಯ. ಚೇತನನು ಶ್ರೀ ಸಹಿತನಾದ ಪರಮಾತ್ಮನಿಗೇ ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲೂ ಸರ್ವವಿಧ ಕೈಂಕರ್ಯಗಳನ್ನೂ ಮಾಡಬೇಕು ಮತ್ತು ಅದನ್ನು ತನಗೆ ಅನುಗ್ರಹಿಸಬೇಕೆಂದು ಅವನಲ್ಲೇ ಶರಣಾಗತಿ ಮಾಡಿ ಪ್ರಾರ್ಥಿಸಬೇಕು ಎಂಬುದೇ ಮಂತ್ರರತ್ನದ ಸಾರವಾದ ಉಪದೇಶ. ಇದನ್ನೇ ಶ್ರೀ ರಾಮಾಯಣದಲ್ಲಿ ಲಕ್ಷ್ಮಣನು ಪ್ರಾರ್ಥಿಸಿ ಆಚರಿಸಿ ತೋರಿಸಿದ್ದಾನೆ. ಶ್ರೀರಾಮ ಸೀತಾಸಹಿತನಾಗಿ ದಂಡಕಾರಣ್ಯದಲ್ಲಿ ವಿಹರಿಸುತ್ತಿದ್ದಾಗ ಲಕ್ಷ್ಮಣನು 'ಅಹಂಸರ್ವಂಕರಿಷ್ಯಾಮಿ' ಎಂದು ಅವರಿಬ್ಬರಿಗೂ ಸೇವೆ ಸಲ್ಲಿಸುತ್ತಿದ್ದನೆಂಬುದು ಶ್ರೀರಾಮಾಯಣದಲ್ಲಿ ತಿಳಿಸಲ್ಪಟ್ಟಿದೆ. ಆದ್ದರಿಂದ ಲಕ್ಷ್ಮಣನು ಲಕ್ಷ್ಮೀಸಂಪನ್ನ ಅಂದರೆ ಕೈಂಕರ್ಯಲಕ್ಷ್ಮೀಸಂಪನ್ನನಾಗಿದ್ದನೆಂದು ವಾಲ್ಮೀಕಿ ಮುನಿ ತಿಳಿಸಿದ್ದಾರೆ. ಕೈಂಕರ್ಯ ಪುರುಷಾರ್ಥವನ್ನೇ ನಮ್ಮಾಳ್ವಾರ್‌ರವರು 'ಒಳಿವಿಲ್ ಕಾಲಮೆಲ್ಲಾಂ' ಎಂಬ ತಿರುವಾಯ್ಮೊಳಿ ಪಾಶುರದಲ್ಲಿ ಪ್ರಾರ್ಥಿಸಿದ್ದಾರೆ. ಅದೇ ರೀತಿ ಇಲ್ಲಿ ಗೋಪಿಯರು ನಪ್ಪಿನ್ನೈ ಸಹಿತನಾಗಿ ವಿರಾಜಿಸುತ್ತಿದ್ದ ಶ್ರೀಕೃಷ್ಣ ಪರಮಾತ್ಮನಿಗೆ ತಮ್ಮ ದಾಸ್ಯಸ್ವರುಪಾನುಗುಣವಾಗಿ ಕೈಂಕರ್ಯ ಮಾಡಿ ಅವರ ಆನಂದವನ್ನು ಕಂಡು ತಾವೂ ಸಂತೋಷಪಡ ಬೇಕೆಂದು ಆಸೆಪಟ್ಟು ಮಿಥುನಕೈಂಕರ್ಯ ಪುರುಷಾರ್ಥವನ್ನು ಈ ಪಾಶುರದಲ್ಲಿ ಪ್ರಾರ್ಥಿಸುತ್ತಾರೆ ಎಂಬುದು ಇದರ ವಿಶೇಷಾರ್ಥದ ಸಾರಾಂಶವಾಗಿದೆ.

ಸಾಧನದೆಶೆಯಲ್ಲಿ ಮಾಡುವ ಭಕ್ತಿ ಅವರವರ ಜ್ಞಾನಶಕ್ತ್ಯಾದಿಗಳಿಗೆ ಅನುಗುಣವಾಗಿ ಬೇರೆ ಬೇರೆಯಾಗಿರುತ್ತದೆ. ಆದರೆ ಭಗವಂತನ ಅನುಗ್ರಹ ಹೊಂದಿ ಭಗವದನುಭವ ಪಡೆಯುವಾಗ ಚೇತನರಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಆದ್ದರಿಂದ ಹಿಂದಿನ ಪಾಶುರಗಳಲ್ಲಿ ಗೋದಾದೇವಿಯು ಒಬ್ಬೊಬ್ಬರನ್ನಾಗಿ ಅವರವರ ಭಕ್ತಿಯ ತಾರತಮ್ಯಕ್ಕೆ ಸರಿಯಾಗಿ, ಬೇರೆ

ಬೇರೆಯಾಗಿ ಕರೆದಳು. ಆದರೆ ಈಗ ಪ್ರಾಪ್ಯ ದೆಶೆಯಲ್ಲಿ ಎಲ್ಲರಿಗೂ ಒಂದೇ ಆಗಿರುವ ಭಗವತ್ ಕೈಂಕರ್ಯ ಪುರುಷಾರ್ಥವನ್ನು ಪ್ರಾರ್ಥಿಸುವಾಗ 'ಎಮ್ಮೈ ನೀರಾಟ್ಟು' ನಮ್ಮನ್ನು ಅನುಗ್ರಹಿಸು ಎಂದು ಎಲ್ಲರನ್ನೂ ಒಟ್ಟಾಗಿ ಸೇರಿಸಿ ಪ್ರಾರ್ಥಿಸಿದ್ದಾಳೆ. ಸಾಧನ ಕಾಲದಲ್ಲಿ ಅಧಿಕಾರಿಗಳಲ್ಲಿ ತಾರತಮ್ಯವಿದ್ದರೂ ಭಗವದನುಭವ ಹೊಂದುವ ಕಾಲದಲ್ಲಿ ಯಾವ ತಾರತಮ್ಯವೂ ಇಲ್ಲ; ಎಲ್ಲರೂ ಒಂದೇ ಎಂಬ ಅಭಿಪ್ರಾಯ ಇಲ್ಲಿ 'ಎಮ್ಮೈನೀರಾಟ್ಟು' ಎಂಬುದಲ್ಲಿ ಸೂಚಿಸಲ್ಪಟ್ಟಿದೆ ಎಂದು ತಿಳಿಸಿದ್ದಾರೆ.

ಗುರುಪರಂಪರೆಯ ಪ್ರಕಾರ 18ನೆಯ ಪಾಶುರವು 'ಶ್ರೀಯೈನಮಃ' ಎಂಬುದನ್ನೂ 19 ಮತ್ತು 20 ಈ ಎರಡು ಪಾಶುರಗಳು 'ಶ್ರೀಧರಾಯನಮಃ' ಎಂಬುದನ್ನೂ ಪ್ರತಿಪಾದಿಸುತ್ತವೆ. 18ನೆಯ ಪಾಶುರದಲ್ಲಿ ಪುರುಷಕಾರವಾಗಿ ಶ್ರೀದೇವಿಯಲ್ಲಿ ಶರಣಾಗತಿ ಮಾಡಿದ್ದಾರೆ - 19ನೆಯ ಪಾಶುರದಲ್ಲಿ "ಶ್ರೀಮನ್ನಾರಾಯಣ ಚರಣೌಶರಣಂ ಪ್ರಪದ್ಯೆ" - ಎಂದು ಉಪಾಯವಾಗಿ ಶ್ರೀಸಹಿತನಾದ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾರೆ. ಈಗ 20ನೆಯ ಪಾಶುರದಲ್ಲಿ 'ಶ್ರೀಮತೇನಾರಾಯಣಾಯ ನಮಃ' ಎಂದು ಇಬ್ಬರಲ್ಲೂ ಕೈಂಕರ್ಯ ಪುರುಷಾರ್ಥ ಪ್ರಾಪ್ತಿಗಾಗಿ ಪ್ರಾರ್ಥನೆ ಮಾಡಿದ್ದಾರೆ. ಈ ಪಾಶುರದಲ್ಲಿ ಮೊದಲು ಪರಮಾತ್ಮನಲ್ಲೂ, ಅನಂತರ ಶ್ರೀದೇವಿಯಲ್ಲೂ ಶರಣಾಗತಿ ಮಾಡಿದ್ದಾರೆ. ಇದು ಮಿಥುನ ಕೈಂಕರ್ಯ ಅಂದರೆ ಪರಮಾತ್ಮ ಮತ್ತು ಶ್ರೀದೇವಿ ಇಬ್ಬರಿಗೂ ಕೈಂಕರ್ಯ ಮಾಡುವ ಪುರುಷಾರ್ಥವನ್ನು ಪ್ರಾರ್ಥಿಸುವ ಪಾಶುರವಾಗಿದೆ.

# 4ನೆಯ ವಿಭಾಗ

## ಪಾಶುರಗಳು 21 ರಿಂದ 29

ತಿರುಪ್ಪಾವೈಯ ಒಂದನೆಯ ವಿಭಾಗದಲ್ಲಿ ಅಂದರೆ ಮೊದಲ ಐದು ಪಾಶುರಗಳಲ್ಲಿ ಗೋದಾದೇವಿಯು ಭಗವನ್ನಾಮ ಸಂಕೀರ್ತನೆ ಮಾಡಿ, ಭಗವದ್ಗುಣ ಸಾಗರದಲ್ಲಿ ಮುಳುಗಿ ಭಗವದನುಭವ ಪಡೆಯುವ ನೀರಾಟ್ಟವೆಂಬ ತನ್ನ ವ್ರತಾನುಷ್ಠಾನಕ್ಕೆ ಬೇಕಾದ ಕಾಲ, ನಿಯಮ, ಅಧಿಕಾರ, ನಿಷ್ಠೆ, ವ್ರತಾಚರಣೆಯಿಂದ ಲಭಿಸುವ ಫಲ ಮತ್ತು ವ್ರತಾಚರಣೆಯ ವಿರೋಧಿಗಳ ನಿರಸನ ಇವುಗಳ ವಿಚಾರವನ್ನೆಲ್ಲಾ ವಿವರವಾಗಿ ತಿಳಿಸಿದ್ದಾಳೆ.

ಅನಂತರ 2ನೆಯ ವಿಭಾಗದಲ್ಲಿ ಅಂದರೆ 6ನೆಯ ಪಾಶುರದಿಂದ 16ನೆಯ ಪಾಶುರದವರೆಗಿನ 10 ಪಾಶುರಗಳಲ್ಲಿ ಭಾಗವತೋತ್ತಮರನ್ನು ತಮ್ಮ ವ್ರತಾನುಷ್ಠಾನದಲ್ಲಿ ತಮ್ಮೊಡನೆ ಕಲೆತು ಸಹಕರಿಸುವಂತೆ ಪ್ರಾರ್ಥಿಸಿದ್ದಾಳೆ.

ತದನಂತರ 3ನೆಯ ವಿಭಾಗದಲ್ಲಿ ಅಂದರೆ 16ನೆಯ ಪಾಶುರದಿಂದ 20ನೆಯ ಪಾಶುರದವರೆಗಿನ 5 ಪಾಶುರಗಳಲ್ಲಿ ಭಾಗವತರೊಂದಿಗೆ ಕಲೆತು ಎಲ್ಲರೂ ಒಟ್ಟಿಗೆ ಸೇರಿ ಮೊದಲು 16 ಮತ್ತು 17ನೆಯ ಪಾಶುರಗಳಲ್ಲಿ ಭಗವತ್ ಕೈಂಕರ್ಯಪರರ ಮತ್ತು ಆಚಾರ್ಯರುಗಳ ಸಹಕಾರವನ್ನು ಪ್ರಾರ್ಥಿಸಿ, ಅನಂತರ 18ನೆಯ ಪಾಶುರದಲ್ಲಿ ಭಗವಂತನಲ್ಲಿ ಪುರುಷಕಾರ ಮಾಡುವಂತೆ ಶ್ರೀದೇವಿ ಯಲ್ಲಿ ಶರಣಾಗತಿ ಮಾಡಿದ್ದಾರೆ. 19 ಮತ್ತು 20ನೆಯ ಪಾಶುರಗಳಲ್ಲಿ ಪುರುಷ ಕಾರಕ್ಕಾಗಿ ಮತ್ತೆ ಶ್ರೀದೇವಿಯಲ್ಲೂ, ರಕ್ಷಣೆಗಾಗಿ, ಉಪಾಯವಾಗಿ ಶ್ರೀಸಹಿತ ನಾದ ಪರಮಾತ್ಮನಲ್ಲೂ ಶರಣಾಗತಿ ಮಾಡಿದ್ದಾರೆ.

ಈಗ ಈ 4ನೆಯ ವಿಭಾಗದಲ್ಲಿ ಅಂದರೆ 21 ರಿಂದ 29ರವರೆಗಿನ 9 ಪಾಶುರಗಳಲ್ಲಿ ಭಾಗವತರುಗಳನ್ನೂ, ಆಚಾರ್ಯರುಗಳನ್ನೂ ಶ್ರೀದೇವಿಯನ್ನೂ ಮುಂದಿಟ್ಟುಕೊಂಡು ಎಲ್ಲರೂ ಒಟ್ಟಿಗೆ ಸೇರಿ ಭಗವತ್ಕೈಂಕರ್ಯ ಪುರುಷಾರ್ಥ ಪ್ರಾಪ್ತಿಗಾಗಿ ಭಗವಂತನಲ್ಲಿ ಶರಣಾಗತಿ ಮಾಡುತ್ತಾರೆ. ಈ ಪಾಶುರಗಳು ಶರಣಾಗತಿ ಮಾಡುವ ಪಾಶುರಗಳಾಗಿರುವುದರಿಂದ ಇವು ಬಹಳ ಮುಖ್ಯವಾದ ಪಾಶುರಗಳಾಗಿವೆ. ಇದರಲ್ಲಿ ಶರಣಾಗತಿ ತತ್ತ್ವವು ಚೆನ್ನಾಗಿ ವಿವರಿಸಲ್ಪಟ್ಟಿದೆ ಮತ್ತು ಭಗವಂತನನ್ನು ಹೊಂದಲು ಅವನಲ್ಲಿ ಶರಣಾಗತಿಯೇ ಉಪಾಯವೆಂಬುದು ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ.

30ನೆಯ ಪಾಶುರವು ಫಲಶ್ರುತಿಯಾಗಿದೆ.

# ಪಾಶುರ - 21

21 ಮತ್ತು 22ನೆಯ ಪಾಶುರಗಳಲ್ಲಿ ಗೋಪಿಗಳೆಲ್ಲರೂ ಅಹಂಕಾರ ಮಮಕಾರಗಳನ್ನು ತ್ಯಜಿಸಿ ಪರಮಾತ್ಮನಲ್ಲಿ ಶರಣಾಗತಿ ಮಾಡುತ್ತಾರೆ. ಈ 21ನೆಯ ಪಾಶುರದಲ್ಲಿ - ನಾವು ನಮ್ಮ ಅಹಂಕಾರವನ್ನು ತ್ಯಜಿಸಿ, ನಿನ್ನನ್ನೇ ನಂಬಿ ನಿನಗೆ ಸಂತೋಷದಿಂದ ಮಂಗಳಶಾಸನ ಮಾಡುತ್ತಾ ನಿನ್ನ ಬಳಿಗೆ ಬಂದಿದ್ದೇವೆ. ನೀನು ನಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸುತ್ತಾರೆ.

**ಏತ್ತ ಕಲಂಗಳ್ ಎದಿರ್ ಪೊಂಗಿ ಮೀದಳಿಪ್ಪ**
**ಮಾತ್ತಾದೇ ಪಾಲ್ ಶೊರಿಯುಂ ವಳ್ಳಲ್ ಪೆರುಂಪಶುಕ್ಕಳ್**
**ಆತ್ತಪ್ಪಡೈತ್ತಾನ್ ಮಗನೇ ! ಅರಿವುರಾಯ್**
**ಊತ್ತಮುಡೈಯಾಯ್ ! ಪೆರಿಯಾಯ್ ! ಉಲಹಿನಿಲ್**
**ತೋತ್ತಮಾಯ್ ನಿನ್ರ ಶುಡರೇ ತುಯಿಲೆಳಾಯ್**
**ಮಾತ್ತಾರ್ ಉನಕ್ಕು ವಲಿತುಲೈನ್ದುನ್‌ವಾಶಲ್‌ಕಣ್**
**ಆತ್ತಾದುವನ್ದುನ್ನಡಿ ಪಣಿಯುಮಾ ಪೋಲೇ**
**ಪೋತ್ತಿಯಾಂ ವನ್ದೋಂ ಪುಹಳ್‌ನ್ದೇಲೋ ರೆಮ್ಬಾವಾಯ್.**

"ಹಾಲು ಕರೆಯಲು ಇಟ್ಟ ಪಾತ್ರೆಗಳೆಲ್ಲಾ ಹಾಲು ತುಂಬಿ ಮೇಲೆ ಹರಿದು ಚೆಲ್ಲುವಂತೆ, ಎಡೆಬಿಡದೆ ಹಾಲನ್ನು ಪ್ರವಹಿಸುವ ಉದಾರ ಸ್ವಭಾವವುಳ್ಳ ದೊಡ್ಡ ಹಸುಗಳನ್ನು ಅನೇಕವಾಗಿ ಪಡೆದಿರುವ ನಂದಗೋಪನ ಮಗನೇ (ಶ್ರೀಕೃಷ್ಣನೇ) ನೀನು ತಿಳಿವಿನೊಂದಿಗೆ ಏಳುವವನಾಗು. ಆಶ್ರಿತ ವತ್ಸಲನಾದ ಪರಮಪುರುಷನೇ, ಭೂಮಿಯಲ್ಲಿ ಪ್ರಕಾಶದಿಂದ ಕೂಡಿ ಅವತರಿಸಿದ ತೇಜೋಮಯನಾದ ಶ್ರೀಕೃಷ್ಣ ಪರಮಾತ್ಮನೇ, ನಿದ್ರೆಯಿಂದ

ಎಚ್ಚರಗೊಳ್ಳುವವನಾಗು. ಶತ್ರುಗಳು ನಿನಗೆ ಸೋತವರಾಗಿ, ನಿನ್ನ ವಿಶ್ಲೇಷವನ್ನೂ ಸಹಿಸಲಾರದವರಾಗಿ ನಿನ್ನ ಅರಮನೆಯ ಬಾಗಿಲಲ್ಲಿ ಬಂದು ನಿನ್ನ ಪಾದಕಮಲಗಳನ್ನು ಆಶ್ರಯಿಸುವಂತೆ, ನಾವು ನಿನಗೆ ಮಂಗಳಾಶಾಸನ ಮಾಡುತ್ತಾ ಬಂದಿದ್ದೇವೆ. ಸಂತೋಷದಿಂದ ನಿನ್ನ ಗುಣಗಾನ ಮಾಡುತ್ತೇವೆ. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ಏತ್ತ ಕಲಂಗಳ್ ಎದಿರ್ ಪೊಂಗಿ ------ ಮಗನೇಅರಿವುರಾಯ್ :-** ಹಾಲು ತುಂಬಲು ಇಟ್ಟಕೊಡಗಳು ತುಂಬಿಹರಿದು ಮೇಲೆ ಚೆಲ್ಲುವಂತೆ ಎಡೆಬಿಡದೆ ಹಾಲುಕರೆಯುವ ಉದಾರಿಗಳಾದ ಒಳ್ಳೆಯ ಜಾತಿ ಹಸುಗಳನ್ನು ಅನೇಕವಾಗಿ ಪಡೆದಿರುವ ನಂದಗೋಪನ ಮಗನೇ - ಶ್ರೀಕೃಷ್ಣನೇ, ನೀನು ಯೋಗ ನಿದ್ರೆಯಿಂದ ಎಚ್ಚರಗೊಂಡು ನಮ್ಮನ್ನು ಕಣ್ಣುಬಿಟ್ಟು ಕಟಾಕ್ಷಿಸುವವನಾಗು. ಇಲ್ಲಿ ಸರ್ವಜ್ಞನಾದ ಪರಮಾತ್ಮನನ್ನು ಎಚ್ಚರಗೊಳಿಸುತ್ತಾರೆ - ಅಂದರೆ ಭಗವಂತನು ಜಗದ್ರಕ್ಷಣ ಚಿಂತೆಯಲ್ಲಿ ಯೋಗನಿದ್ರೆಯಲ್ಲಿ ಮಲಗಿದ್ದಾನೆ. ಅವನನ್ನು ಜಗದ್ರಕ್ಷಣ ಕಾರ್ಯದಲ್ಲಿ ಪ್ರವರ್ತಿಸುವಂತೆ ಪ್ರಾರ್ಥಿಸುತ್ತಾರೆ ಎಂದು ಅರ್ಥ.

ಇಲ್ಲಿ ನಂದಗೋಪನನ್ನು ಆಚಾರ್ಯನೆಂದು ಪರಿಗಣಿಸಿ, ಪಾಲ್ ಎಂದರೆ ಜ್ಞಾನವೆಂದೂ, ಕಲಂಗಳ್ (ಪಾತ್ರೆ) ಎಂದರೆ ಶಿಷ್ಯರೆಂದೂ, ಪಶು ಎಂದರೆ ಆಚಾರ್ಯರೆಂದೂ ವಿಶೇಷಾರ್ಥ ಹೇಳಿದ್ದಾರೆ. ಉಪದೇಶ ಪಡೆಯಲು ಯೋಗ್ಯ ರಾದ ಶಿಷ್ಯರುಗಳು, ಆಚಾರ್ಯರು ಉಪದೇಶಿಸಿದ ರಹಸ್ಯಾರ್ಥಗಳನ್ನೆಲ್ಲಾ ಚೆನ್ನಾಗಿ ಅರಿತು, ಪರಿಪೂರ್ಣ ಜ್ಞಾನಭರಿತರಾಗಿ, ಅವುಗಳನ್ನು ಇತರರಿಗೆ ಉಪದೇಶಿ ಸುವಷ್ಟು ಸಾಮರ್ಥ್ಯ ಪಡೆದ ಅನೇಕ ಶಿಷ್ಯರನ್ನು ಪಡೆದು, ಅವರು ಕೇಳದಿದ್ದರೂ, ಅವರಿಗೆ ತಾವಾಗಿಯೇ ಮೇಲೆ ಮೇಲೆ ಜ್ಞಾನವನ್ನು ಉಪದೇಶ ಮಾಡಿ ಅವರ ವೆಪ್ಪ ಅಂದರೆ ಅಜ್ಞಾನವನ್ನು ಹೋಗಲಾಡಿಸುವ ಉದಾರಿಯಾದ ಆಚಾರ್ಯನಿಗೆ ಪುತ್ರನಂತೆ ಭಾವಿಸಲ್ಪಟ್ಟು, ಅವನಿಗೆ ವಿಧೇಯನಾದ ಶ್ರೀಕೃಷ್ಣನೇ

ನೀನು ಯೋಗನಿದ್ರೆಯಿಂದ ಎಚ್ಚರಗೊಳ್ಳುವವನಾಗು; ನಮ್ಮ ರಕ್ಷಣೆಯ ಕಾಲ ಬಂದಿರುವಾಗ ರಕ್ಷಣಚಿಂತೆಯ ಈ ಯೋಗನಿದ್ರೆಯಿಂದ ಎಚ್ಚರಗೊಂಡು ನಮ್ಮನ್ನು ರಕ್ಷಿಸು, ಎಂದು ಪ್ರಾರ್ಥಿಸುತ್ತಾರೆ ಎಂಬುದು ವಿಶೇಷಾರ್ಥ.

ಕೃಷ್ಣಪರಮಾತ್ಮನು ಗೀತೆಯಲ್ಲಿ ಮೊದಲು 9 ಅಧ್ಯಾಯಗಳಲ್ಲಿ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗಗಳನ್ನೆಲ್ಲಾ ವಿವರವಾಗಿ ಹೇಳಿ ಮುಗಿಸಿದ್ದರೂ ಮತ್ತೆ 10ನೇ ಅಧ್ಯಾಯದ ಆರಂಭದಲ್ಲಿ "ಭೂಯ ಏವ ಮಹಾಬಾಹೋಶ್ರುಣು ಮೇ ವಚನಂ' - ಎಂದು ಹೇಳಿ ಮತ್ತೆ ಅರ್ಜುನ ಕೇಳದಿದ್ದರೂ ತಾನಾಗಿಯೇ ಇನ್ನೂ 8 ಅಧ್ಯಾಯಗಳಲ್ಲಿ ವಿವರವಾದ ಉಪದೇಶ ನೀಡಿದ್ದಾನೆ. ಅದೇ ರೀತಿ ಆಚಾರ್ಯರುಗಳು ತಮ್ಮ ಹೃದಯದಲ್ಲಿರುವ ಜ್ಞಾನವನ್ನು ತಾವಾಗಿಯೇ ಧಾರಾಳವಾಗಿ ಉಪದೇಶಿಸಬೇಕು ಎಂಬ ಅಭಿಪ್ರಾಯವು ಇಲ್ಲಿ ಸೂಚಿಸಲ್ಪಟ್ಟಿದೆ.

(ಇಲ್ಲಿ ಪೆರುಂಪಶುಕ್ಕಳ್ ಆತ್ತ ಪಡೈತ್ತಾನ್ ಮಹನೇ - ಎಂಬುದಕ್ಕೆ ಅನೇಕ ಶಿಷ್ಯರನ್ನು ಪಡೆದಿರುವ ಶ್ರೀರಾಮಾನುಜರ ಪುತ್ರನಾದ ಶೆಲ್ವಪಿಳ್ಳೆಯೇ (ಸಂಪತ್ಕುಮಾರನೇ) ಎಂದು ಕೆಲವರು ವಿಶೇಷಾರ್ಥ ಹೇಳಿದ್ದಾರೆ. ಶ್ರೀಗೋದಾದೇವಿಯು ಶ್ರೀರಾಮಾನುಜರಿಗೆ ಮುಂಚಿನವಳಾಗಿದ್ದರೂ ಅವಳ ಈ ಪಾಶುರ ಶ್ರೀರಾಮಾನುಜರಿಗೂ ತಿರುನಾರಾಯಣಪುರದ ಶ್ರೀ ಶೆಲ್ಲಪಿಳ್ಳೆ ಯವರಿಗೂ ಅನ್ವಯಿಸುವುದು ಬಹಳ ಶ್ಲಾಘನೀಯವಾದ ವಿಷಯವಾಗಿದೆ).

**ಊತ್ತಮುಡೈಯಾಯ್** :- ಅಪೌರುಷೇಯವೂ ಅನಾದಿಯೂ ಆದ ವೇದಪ್ರತಿಪಾದ್ಯನೇ ಎಂದು ಅರ್ಥ. ಇದಕ್ಕೆ ಆಶ್ರಿತರಕ್ಷಣೆಯಲ್ಲಿ ಅತ್ಯಂತ ಆಸಕ್ತಿ ಉಳ್ಳವನೇ ಎಂಬ ಇನ್ನೊಂದು ಅರ್ಥವೂ ಉಂಟು. ಇದಕ್ಕೆ ನಿದರ್ಶನ ಶ್ರೀ ರಾಮಾವತಾರದಲ್ಲಿ ವ್ಯಕ್ತವಾಗಿ ಕಾಣಲ್ಪಟ್ಟಿದೆ. 'ಅಪ್ಯಹಂ ಜೀವತಂಜಹ್ಯಂ' ಎಂಬ ಶ್ಲೋಕದಲ್ಲಿ ಶ್ರೀರಾಮ ಸೀತೆಗೆ 'ನಿನ್ನನ್ನು ಬಿಟ್ಟರೂ ಬಿಡಬಲ್ಲೆನು; ಲಕ್ಷ್ಮಣನನ್ನೂ ಬಿಡಬಲ್ಲೆನು, ಆದರೆ ನನ್ನನ್ನು ಆಶ್ರಯಿಸಿರುವ ಈ ದಂಡಕಾರಣ್ಯದ ಋಷಿಗಳನ್ನು ತ್ಯಜಿಸಲಾರೆ ಎಂದು ಹೇಳಿದ್ದಾನೆ. ವಿಭೀಷಣನಿಗೆ

ಅಭಯಪ್ರದಾನ ಮಾಡಿದಾಗ 'ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂಕಥಂಚನ'' ಅಂದರೆ ನನ್ನನ್ನು ಆಶ್ರಯಿಸಿದವರನ್ನು ಎಂದೂ ಕೈಬಿಡುವುದಿಲ್ಲ ಎಂದೂ ಹೇಳಿದ್ದಾನೆ.

**ಪೆರಿಯಾಯ್** :- ಮಹಾತ್ಮನೇ - ವಾಕ್ಕಿಗೂ, ಮನಸ್ಸಿಗೂ ಊಹಿಸಲಾರದಷ್ಟು ಮಹಿಮೆ ಉಳ್ಳವನೇ,

**ಉಲಹಿನಿಲ್ ತೋತ್ತಮಾಯ್‌ನಿನ್ರ ಶುಡರೇ** :- ಲೋಕದಲ್ಲಿ ಎಲ್ಲರ ಕಣ್ಣಿಗೂ ಸಾಕ್ಷಾತ್ಕಾರವಾಗಿ, ಅತ್ಯಂತ ಪ್ರಕಾಶಮಾನವಾಗಿ ಕಾಣಿಸಿಕೊಂಡು ಕೃಷ್ಣನಾಗಿ ಅವತರಿಸಿ ನಿಂತ ತೇಜೋರೂಪನೇ-

**ತುಯಿಲೆಳಾಯ್** :- ಯೋಗ ನಿದ್ರೆಯಿಂದ ಎಚ್ಚರಗೊಂಡು ನಮ್ಮನ್ನು ರಕ್ಷಿಸುವವನಾಗು.

**ಮಾತ್ತಾರ್ ಉನಕ್ಕು----- ಪಣಿಯುಮಾಪ್ಪೋಲೆ** :- ಅಹಂಕಾರ ಭರಿತರಾದ ನಿನ್ನ ಶತ್ರುಗಳು ನಿನ್ನ ಪರಾಕ್ರಮಕ್ಕೆ ಸೋತು ಅನನ್ಯಗತಿಕರಾಗಿ, ತಮ್ಮ ಅಹಂಕಾರ ಮಮಕಾರವನ್ನು ಬಿಟ್ಟು, ನಿನ್ನ ಬಾಗಿಲ ಬಳಿ ಬಲಹೀನರಾಗಿ ಬಂದು ನಿನ್ನನ್ನು ಆಶ್ರಯಿಸಿ, ನಿನ್ನ ಪಾದಗಳನ್ನು ಸೇವಿಸುವ ಹಾಗೆ - ಇದಕ್ಕೆ ನಿದರ್ಶನವನ್ನು ಶ್ರೀರಾಮಾಯಣದಲ್ಲಿ ಪರಶುರಾಮ, ಕಾಕಾಸುರರ ವೃತ್ತಾಂತ ದಲ್ಲಿ ಕಾಣಬಹುದು. ಕಾಕಾಸುರನು ಎಲ್ಲೆಲ್ಲೂ ಸುತ್ತಿ ದಾರಿ ಕಾಣದೆ ಕೊನೆಗೆ 'ತಮೇವ ಶರಣಂಗತಃ' - ಅಂದರೆ ಶ್ರೀರಾಮನಲ್ಲಿ ಶರಣಾಗತನಾದನು ಎಂದು ಹೇಳಿದೆ.

**ಪೋತ್ತಿಯಾಂ ವನ್ದೋಂ ಪುಹಳ್‌ನ್ದು** :- ನಾವು ನಿನ್ನನ್ನು ಕೊಂಡಾಡುತ್ತಾ ಸಂತೋಷದಿಂದ ಬಂದಿದ್ದೇವೆ ಅಂದರೆ, ನಾವು ಕಾಕಾಸುರ ಮುಂತಾದ ನಿನ್ನ ಪರಾಜಿತರಾದ ಶತ್ರುಗಳ ಹಾಗೆ ನಿನ್ನ ಪರಾಕ್ರಮಕ್ಕೆ ಸೋತು ದುಃಖಿತರಾಗಿ ಬಂದವರಲ್ಲ. ''ಗುಣೈರ್ದಾಸ್ಯಮುಪಾಗತಃ'' ಅಂದರೆ 'ನಾನು ಶ್ರೀರಾಮನ ಗುಣಗಳನ್ನು ಕಂಡು ಅವನಿಗೆ ದಾಸನಾಗಿದ್ದೇನೆ' ಎಂದು ಲಕ್ಷ್ಮಣನು

ಹೇಳಿರುವಂತೆ, ನಾವೂ ನಿನ್ನ ಕಲ್ಯಾಣಗುಣಗಳಿಗೆ ಸೋತವರಾಗಿ ನಿನಗೆ ದಾಸರಾಗಿದ್ದೇವೆ. ನಿನ್ನ ಕಲ್ಯಾಣಗುಣಸಾಗರದಲ್ಲಿ ಮುಳುಗಿ, ನಿನ್ನ ಅನುಭವ ಪಡೆಯಲು ಶಕ್ತರಾಗದೆ, ವಿಶ್ಲೇಷವನ್ನು ಸಹಿಸಲಾರದವರಾಗಿ, ದೀನರಾಗಿ ನಿನ್ನ ಬಳಿ ಬಂದಿದ್ದೇವೆ. ನಿನ್ನ ಶತ್ರುಗಳ ಹಾಗೆ ನಿನ್ನ ಪರಾಕ್ರಮಕ್ಕೆ ಸೋತು ಬಂದವರಲ್ಲ, ನಿನ್ನ ಗುಣಗಳಿಗೆ ಸೋತು, ನಿನಗೆ ದಾಸರಾಗಿ; ನಿನ್ನ ನಿರುಪಾಧಿಕ ಶೇಷತ್ವಕ್ಕೆ ಅಂದರೆ ನಿನ್ನ ಸ್ವಾಮಿತ್ವಕ್ಕೆ ಅಧೀನರಾಗಿ; ದೇಹಾತ್ಮಾಭಿಮಾನವನ್ನೂ, ಸ್ವಸ್ವಾತಂತ್ರ್ಯವನ್ನೂ, ಅನ್ಯಶೇಷತ್ವವನ್ನೂ ಅಂದರೆ ಇತರರಿಗೆ ದಾಸರಾಗಿರುವುದನ್ನು ಬಿಟ್ಟು , ನೀನೇ ಪರಮ ಪ್ರಾಪ್ಯ ಮತ್ತು ಪ್ರಾಪಕ (ಪುರುಷಾರ್ಥ ಮತ್ತು ಉಪಾಯ) ಎಂದು ಅರಿತು, ನಿನ್ನಲ್ಲಿ ಶರಣಾಗತರಾಗಿ ಬಂದಿದ್ದೇವೆ. ರಾಮಾವತಾರದಲ್ಲಿ ನೀನೇ ಕಾಡಿಗೆ ಹೋಗಿ ಸುಗ್ರೀವ, ವಿಭೀಷಣಾದಿಗಳನ್ನು ರಕ್ಷಿಸಿದ್ದೀಯೆ. ಕೃಷ್ಣಾವತಾರದಲ್ಲಿಯೂ ನೀನೇ ನಂದಗೋಕುಲಕ್ಕೆ ಹೋಗಿ ಗೋಪಿ ಗೋಪಾಲಕರನ್ನೆಲ್ಲಾ ರಕ್ಷಿಸಿದ್ದೀಯೆ. ಆದರೆ ಈಗ ನಾವೇ ನಿನ್ನ ಬಳಿಗೆ ಬಂದಿದ್ದೇವೆ. ಅದೂ ಅಲ್ಲದೆ ನಾವು ನಿನ್ನ ಶತ್ರುಗಳ ಹಾಗೆ ನಮ್ಮ ಸ್ವಂತ ಪ್ರಯೋಜನಕ್ಕಾಗಿ ಬಂದಿಲ್ಲ. ನಿನಗೆ ಸರ್ವದೇಶ ಸರ್ವ ಕಾಲದಲ್ಲೂ ಮಂಗಳಾಶಾಸನ ಮಾಡಬೇಕೆಂಬ ಸದುದ್ದೇಶ ಹೊಂದಿ, ಸಂತೋಷದಿಂದ ನಿನ್ನ ಕಲ್ಯಾಣ ಗುಣಗಳನ್ನು ಕೊಂಡಾಡುತ್ತಾ, ನಿನಗೆ ಮಂಗಳ ಹಾಡುತ್ತಾ ಬಂದಿದ್ದೇವೆ, - ನಾವು ನಿನ್ನ ಬಳಿ ಬಂದಾಯಿತು. ಇನ್ನು ನಮ್ಮ ರಕ್ಷಣೆಯು ನಿನಗೆ ಸೇರಿದ್ದು. ಕೃಪೆ ತೋರಿ ನಮ್ಮನ್ನು ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ ಎಂದು ಅಭಿಪ್ರಾಯ.

**ಏಲೋರೆಂಪಾವಾಯ್** : ಹೀಗೆ ನಿನ್ನ ಬಳಿ ಬಂದು ಸಂತೋಷದಿಂದ ನಿನ್ನ ಗುಣಗಾನ ಮಾಡಿ ನಿನ್ನ ಅನುಗ್ರಹ ಪಡೆದರೆ ಆಗ ನಮ್ಮ ಈ ಭಗವತ್ ಕೈಂಕರ್ಯರೂಪ ವ್ರತವು ಶುಭವಾಗಿ ನೆರವೇರುವುದು.

# ಪಾಶುರ - 22

ಈ ಪಾಶುರದಲ್ಲಿ ಗೋಪಿಯರು "ನಾವು ಮಮಕಾರ ರಹಿತರಾಗಿ ಬೇರೆ ಯಾರಿಗೂ ಶರಣಾಗದೆ ಅನನ್ಯ ಶರಣರಾಗಿ, ನಿನ್ನ ಬಳಿ ಬಂದು ನಿನ್ನಲ್ಲಿ ಶರಣರಾಗಿದ್ದೇವೆ. ನೀನು ನಿನ್ನ ಕೃಪಾಕಟಾಕ್ಷ ವನ್ನು ನಮ್ಮ ಮೇಲೆ ಬೀರಿ ನಮ್ಮನ್ನು ರಕ್ಷಿಸಬೇಕು" ಎಂದು ಪ್ರಾರ್ಥಿಸುತ್ತಾರೆ. ನಾವು ಇಂದಿನವರಗೆ ದೇಹಾತ್ಮಾಭಿಮಾನ ಹೊಂದಿ ನಾನು, ನನ್ನದು ಎಂಬ ಅಹಂಕಾರ ಮಮಕಾರದಿಂದ ಕೂಡಿದ್ದೆವು. ಇಂದು ನಾವು ನಮಗಾಗಲಿ ಇತರರಿಗಾಗಲಿ ಸೇರಿದವರಲ್ಲ, ನಿನಗೇ ಸೇರಿದವರೆಂಬ ನಿನ್ನ ಅಪೃಥಕ್ಸಿದ್ಧ (ಬೇರ್ಪಡಿಸಲಾಗದ) ಸಂಬಂಧಜ್ಞಾನ ಹೊಂದಿ, ನಮ್ಮ ಸ್ವಾರ್ಥ ಅಭಿಮಾನ ಅಹಂಕಾರಗಳನ್ನೆಲ್ಲಾ ತೊರೆದು ನಿನ್ನಲ್ಲಿ ಶರಣಾಗತರಾಗಿ ಬಂದಿದ್ದೇವೆ. ನೀನು ನಿನ್ನ ಪ್ರೀತಿಯುತ ಕೃಪಾಕಟಾಕ್ಷವನ್ನು ಬೀರಿ ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸುತ್ತಾರೆ ಎಂಬುದು ಈ ಪಾಶುರದ ವಿಶೇಷಾರ್ಥ.

ಅಙ್ಗಣ್‌ಮಾಞ್ಞಾಲತ್ತರಶರ್ ಅಭಿಮಾನ
ಭಙ್ಗಮಾಯ್ ವನ್ದು ನಿನ್ ಪಳ್ಳಿಕ್ಕಟ್ಟಿರ್‍ಕೀಳೇ
ಶಙ್ಗಮಿರುಪ್ಪಾರ್‌ಪೋಲ್ ವನ್ದುತಲೈಪ್ಪೆಯ್‌ದೋಮ್
ಕಿಙ್ಕಿಣಿ ವಾಯ್ ಚ್ಚೆಯ್‌ದ ತಾಮರೈಪ್ಪೂಪ್ಪೋಲೇ
ಶೆಙ್ಗಣ್ ಶಿರುಚ್ಚಿರಿದೇ ಯೆಮ್ಮೇಲ್ ವಿಳಿಯಾವೋ ?
ತಿಙ್ಗಳುಂ ಆದಿತ್ತಿಯನುಂ ಎಳುನ್ದಾಪ್ಪೋಲ್
ಅಙ್ಗಣಿರಣ್ಡುಂಕೊಂಡು ಎಙ್ಗಳ್‌ಮೇಲ್ ನೋಕ್ಕುದಿಯೇಲ್
ಎಙ್ಗಳ್ ಮೇಲ್ ಶಾಪಂ ಇಳಿನ್ದೇಲೋ ರೆಮ್ಬಾವಾಯ್.

''ಸುಂದರವಾದ, ವಿಶಾಲವಾದ ಭೂಪ್ರದೇಶದ ರಾಜರುಗಳು ಸೋತು, ಅಹಂಕಾರ ಭಂಗ ಹೊಂದಿದವರಾಗಿ ಬಂದು, ನೀನು ಮಲಗುವ ಮಂಚದ ಕೆಳಗೆ ಸಮೂಹವಾಗಿ ಸೇರಿ ಇರುವಂತೆ, ನಾವೂ ಬಂದು ನಿನ್ನನ್ನು ಆಶ್ರಯಿಸಿದ್ದೇವೆ. ಕಿಂಕಿಣಿ ಎಂಬ ಆಭರಣದಂತೆ ವಿಕಸಿತವಾದ, ಅರಳಿದ ತಾವರೆ ಪುಷ್ಪದಂತೆ ಕೆಂಪಾದ ಕಣ್ಣುಗಳಿಂದ ನಿನ್ನ ಕಟಾಕ್ಷವನ್ನು ನಮ್ಮ ಮೇಲೆ, ಸ್ವಲ್ಪ ಸ್ವಲ್ಪವಾಗಿ ಬೀರಲಾಗದೇ ? ಚಂದ್ರನೂ ಸೂರ್ಯನೂ ಉದಯಿಸಿದಂತೆ ನಿನ್ನ ರಮ್ಯವಾದ ಎರಡು ನೇತ್ರಗಳ ಮೂಲಕ ನಿನ್ನ ಕಟಾಕ್ಷವನ್ನು ನಮ್ಮ ಮೇಲೆ ಬೀರಿದರೆ (ಅಂದರೆ ನಮ್ಮನ್ನು ಕಟಾಕ್ಷಿಸಿದರೆ) ನಮ್ಮಲ್ಲಿರುವ ಪಾಪಗಳೆಲ್ಲವೂ ನಾಶವಾಗುತ್ತವೆ. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

ಚೇತನನು ಪರಮಾತ್ಮನಲ್ಲಿ ಶರಣಾಗತಿ ಮಾಡುವಾಗ ಅಹಂಕಾರ ಮಮಕಾರಗಳನ್ನು ತ್ಯಜಿಸಿ, ತನ್ನ ಆಕಿಂಚನ್ಯವನ್ನೂ ಅನನ್ಯಗತಿತ್ವವನ್ನೂ ಅಂದರೆ ತನ್ನನ್ನು ಸಂರಕ್ಷಿಸಿಕೊಳ್ಳಲು ತಾನು ಶಕ್ತನಲ್ಲ ಎಂಬುದನ್ನೂ ಮತ್ತು ತನಗೆ ಬೇರೆ ಯಾರೂ ರಕ್ಷಕರಿಲ್ಲ ಎಂಬುದನ್ನೂ ಮುಂದುಮಾಡಿಕೊಂಡು ಶರಣಾಗಬೇಕು. ಹಿಂದಿನ ಪಾಶುರದಲ್ಲಿ ತಮ್ಮ ಆಂಕಿಂಚನ್ಯವನ್ನು ತಿಳಿಸಿದರು ಅಂದರೆ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಶಕ್ತರಲ್ಲವೆಂದು ತಿಳಿಸಿ, ಅಹಂಕಾರವನ್ನು ತ್ಯಜಿಸಿ, ಪರಮಾತ್ಮನೇ ತಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿದರು. ಈಗ ಈ ಪಾಶುರದಲ್ಲಿ ತಮ್ಮ ಅನನ್ಯಾರ್ಹ ಶೇಷತ್ವವನ್ನೂ, ಅನನ್ಯಗತಿತ್ವವನ್ನೂ ತಿಳಿಸುತ್ತಾರೆ. ಅಂದರೆ ನಮಗೆ ಬೇರೆ ಇತರರಾರೂ ರಕ್ಷಕರಿಲ್ಲ, ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಶಕ್ತರಲ್ಲ, ಪರಮಾತ್ಮನೇ ನಮಗೆ ರಕ್ಷಕನೆಂಬ ಜ್ಞಾನ ಹೊಂದಿ, ''ನಾವು ತಲೆಬಾಗಿ ನಿನ್ನಲ್ಲಿ ಶರಣಾಗಿದ್ದೇವೆ, ನೀನು ನಮ್ಮನ್ನು ಕಟಾಕ್ಷಿಸಿ ರಕ್ಷಿಸು'' ಎಂದು ಪ್ರಾರ್ಥಿಸುತ್ತಾರೆ. ಚೇತನನು ತನಗಾಗಲಿ ಇತರರಾರಿಗೂ ಆಗಲಿ ಶೇಷಭೂತ (ದಾಸ)ನಲ್ಲ ಭಗವಂತನೊಬ್ಬನಿಗೇ ದಾಸನು ಎಂಬ ಜ್ಞಾನ

ಅವನಲ್ಲಿ ಪೂರ್ಣವಾಗಿ ಇರಬೇಕು. ಆಗ ಅವನ ಶರಣಾಗತಿ ಫಲಿಸಿ ಅವನು ಪರಮಾತ್ಮನ ಕೃಪಾಕಟಾಕ್ಷಕ್ಕೆ ಪಾತ್ರನಾಗುವನು ಎಂಬ ಶರಣಾಗತಿತತ್ವ ಈ ಪಾಶುರದಲ್ಲಿ ವಿವರಿಸಲ್ಪಟ್ಟಿದೆ.

**ಅಙ್ಗಣ್‌ಮಾಞ್ಞಾಲತ್ತು ಅರಶರ್ ಅಭಿಮಾನ ಭಂಗಮಾಯ್ ವನ್ದು ನಿನ್‌ಪಳ್ಳಿಕ್ಕಟ್ಟಿಲ್ ಕೀಳೆ ಶಂಗಮಿರುಪ್ಪಾರ್‌ಪ್ಪೋಲ್-**

ಸುಂದರವಾದ ಮತ್ತು ವಿಶಾಲವಾದ ಭೂಪ್ರದೇಶದ ರಾಜರುಗಳು ಇಷ್ಟುದಿನವೂ ತಮ್ಮಲ್ಲಿ ಇದ್ದ , ತಾವೇ ದೊಡ್ಡವರು, ತಾವೇ ಎಲ್ಲರಿಗೂ ಒಡೆಯರು ಎಂಬ ಅಹಂಕಾರವನ್ನು ಬಿಟ್ಟು ಬಂದು, ನೀನು ಮಲಗುವ ಮಂಚದ ಕೆಳಗೆ ಎಲ್ಲರೂ ಒಟ್ಟಿಗೆ ಸೇರಿ, ನಿನ್ನಲ್ಲಿ ಶರಣಾಗತರಾಗಿ ಇರುವಂತೆ-

**ವನ್ದುತ್ತಲೈ ಪೇಯ್‌ದೋಂ** :- ನಮ್ಮ ಅಹಂಕಾರ ಮಮಕಾರಗಳನ್ನು ಬಿಟ್ಟು ನಿನಗೆ ಶರಣಾಗತರಾಗಿ ನಿನ್ನ ಬಳಿ ಬಂದು ಸೇರಿದ್ದೇವೆ. ವಿಭೀಷಣನು "ತ್ಯಕ್ತ್ವಾಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂಗತಃ" ಅಂದರೆ ತನ್ನ ಮಕ್ಕಳು ಹೆಂಡತಿ ಎಲ್ಲರನ್ನೂ ಬಿಟ್ಟು ಶ್ರೀರಾಮನಲ್ಲಿ ಶರಣಾಗತಿ ಮಾಡಿದ್ದಾಗಿ ಶ್ರೀರಾಮಾಯಣದಲ್ಲಿ ತಿಳಿಸಿರುವಂತೆ, 'ಒರುನಾಯಹಮಾಯ್' ಎಂಬ ತಿರುವಾಯ್ಮೊಳಿ ಪಾಶುರದಲ್ಲಿ ತಾವೇ ಸಮಸ್ತಕ್ಕೂ ಒಡೆಯರೆಂದು ಅಹಂಕಾರ ಭರಿತರಾಗಿದ್ದ ಮಹಾರಾಜಾಧಿರಾಜರುಗಳೂ ತಮ್ಮ ರಾಜ್ಯಕೋಶಾದಿಗಳನ್ನೆಲ್ಲಾ ಕಳೆದುಕೊಂಡು, ಕೊನೆಗೆ ಭಿಕಾರಿಗಳಾಗಿ ತಿರಿದರೆಂದು ಶ್ರೀನಮ್ಮಾಳ್ವಾರ್‌ರವರು ಹೇಳಿರುವಂತೆ, ನಾವು ನಮ್ಮ ಅಹಂಕಾರ ಮಮಕಾರಗಳೆಲ್ಲವನ್ನೂ ಬಿಟ್ಟು ನಿನ್ನ ಬಳಿ ಬಂದು ಸೇರಿ ನಿನಗೆ ಶರಣಾಗತರಾಗಿದ್ದೇವೆ ಎಂದು ಹೇಳುತ್ತಾರೆ.

ಇಲ್ಲಿ ಕೇವಲ ರಾಜರ ವಿಷಯ ಮಾತ್ರ ಹೇಳಿಲ್ಲ, ಲೋಕದ ಸಮಸ್ತ ಜನರೂ ನಮ್ಮ ದೇಹವೇ ಆತ್ಮವೆಂಬ ಮತ್ತು ನಾನು, ನನ್ನದು, ನನ್ನವರು ಎಂಬ ಅಭಿಮಾನದಲ್ಲಿ ಸಿಕ್ಕಿಕೊಳ್ಳುತ್ತಾರೆ. ಈ ದೇಹಾಭಿಮಾನ, ಆತ್ಮಾಭಿಮಾನ,

ಸಂಸಾರಾಭಿಮಾನಾದಿ ಸಮಸ್ತ ಅಭಿಮಾನಗಳಾವುವೂ ಶಾಶ್ವತವಲ್ಲ. ಅವು ಭಂಗಹೊಂದಿಯೇ ಹೋಗುತ್ತವೆ. ಆದ್ದರಿಂದಲೇ 'ಮಿನ್ನಿನ್ನಿಲೈಯಿಲ ಮನ್ನುಯಿರ್ ಆಕ್ಕೈಹಳ್' ಅಂದರೆ ಈ ಜೀವವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಮಿಂಚಿನಂತೆ ಮಾಯವಾಗುತ್ತದೆ. ಆದ್ದರಿಂದ 'ಇರೈ ಉನ್ನುಮಿನೀರೇ' ಅಂದರೆ ಸರ್ವದಾ ನೀನು ಭಗವಂತನಿಗೆ ಸೇವೆ ಮಾಡು ಎಂದು ನಮ್ಮಾಳ್ವಾರ್ ಉಪದೇಶ ಮಾಡಿದ್ದಾರೆ. ಇಂದಿನವರೆಗೆ ನಾವು, ದೇಹವೇ ನಾನು ಅದಕ್ಕೆ ಸೇರಿರುವ ವಸ್ತುಗಳೆಲ್ಲವೂ ನನ್ನದು ಎಂಬ ದೇಹಾಭಿಮಾನ, ಸಂಸಾರಾಭಿಮಾನ ಹೊಂದಿದ್ದೆವು ಮತ್ತು ನಿನಗೂ ನಮಗೂ ಇರುವ ಬಿಡಿಸಲಾಗದ ಸಂಬಂಧದ ಅರಿವಿಲ್ಲದೆ ಅಭಿಮಾನ ಅಹಂಕಾರಭರಿತರಾಗಿದ್ದೆವು.

ಈಗ ನಿನ್ನ ಕೃಪೆಯಿಂದ ನಮ್ಮ ದೇಹಾತ್ಮಾಭಿಮಾನವು ತೊಲಗಿ ನಮ್ಮ ಈ ಶರೀರ ಮತ್ತು ಆತ್ಮ ಎರಡೂ ಪರಮಾತ್ಮನ ಸ್ವತ್ತು ಎಂಬ ಜ್ಞಾನಹೊಂದಿ, ಅಂತರ್ಯಾಮಿಯಾಗಿರುವ ನಿನಗೂ ನಮಗೂ ಇರುವ ಸಂಬಂಧವನ್ನು ಅರಿತು, ನಿನ್ನಲ್ಲಿ ಅಭಿರುಚಿ ಉಂಟಾಗಿ, ನಿನ್ನನ್ನು ಹೊಂದಲು ನೀನೇ ಉಪಾಯವೆಂದು ಅರಿತು, ನಿನ್ನ ಬಳಿ ಬಂದು ಸೇರಿದ್ದೇವೆ. ಅನ್ಯಶೇಷತ್ವವನ್ನೂ ಬಿಟ್ಟು ಅಂದರೆ ಇತರರಾರಿಗೂ ದಾಸರಾಗದೆ ನಿನ್ನೊಬ್ಬನಿಗೇ ದಾಸರಾಗಿ (ಶೇಷಭೂತರಾಗಿ) ಬಂದಿದ್ದೇವೆ. ಇಷ್ಟುದಿನವೂ ನಮಗೆ ನಿನ್ನೊಂದಿಗೆ ಬಿಡಿಸಲಾಗದ ಸಂಬಂಧವು ಇದ್ದೇ ಇದ್ದಿತು. ಆದರೆ ಅದನ್ನು ನಾವು ಅರಿತಿರಲಿಲ್ಲ. ನಿನ್ನ ಸಂಬಂಧ ಜ್ಞಾನ ನಮಗೆ ಉಂಟಾಗಿರಲಿಲ್ಲ. ಇಂದು ನಿನ್ನ ಕೃಪೆಯಿಂದ ನಿನ್ನ ಸಂಬಂಧಜ್ಞಾನ ಉಂಟಾಗಿ ನಮ್ಮ ದುರಭಿಮಾನವೆಲ್ಲವೂ ಹೋಗಿ, ನಮ್ಮ ಕಷ್ಟವೆಲ್ಲವೂ ತೀರಿದವು. ನಿನ್ನ ಸಾನ್ನಿಧ್ಯವನ್ನು ಸೇರಿದೆವು ಅಂದರೆ ನಾವು ನಮ್ಮ ಅಹಂಕಾರ ಮಮಕಾರಗಳೆಲ್ಲವನ್ನೂ ತ್ಯಜಿಸಿ ನಿನ್ನಲ್ಲಿ ಶರಣಾಗಿದ್ದೇವೆ ಎಂಬ ಅಭಿಪ್ರಾಯವು ಇಲ್ಲಿ ಸೂಚಿಸಲ್ಪಟ್ಟಿದೆ. ಆದರೆ ಅಷ್ಟೇ ಸಾಕೆ ಎಂದರೆ ಸಾಲದು. ನಾವು ನಿನ್ನ ಬಳಿಗೆ ಬಂದಾಯಿತು. ನಿನ್ನಲ್ಲಿ ಶರಣಾಗತಿ ಮಾಡಿ ಆಯಿತು. ಇನ್ನು ನೀನು ನಮ್ಮನ್ನು ಕಟಾಕ್ಷಿಸಿ ರಕ್ಷಿಸಬೇಕೆಂದು ಮುಂದೆ ಪ್ರಾರ್ಥಿಸುತ್ತಾರೆ.

ಕಿಙ್ಗಣಿ ವಾಯ್ಚ್ಚೆಯ್ದ ತಾಮರೈಪ್ಪೂಪ್ಪೋಲೆ
ಶೆಙ್ಗಣ್ ಶಿರುಚ್ಚಿರಿದೇ ಎಮ್ಮೇಲ್ ವಿಳಿಯಾವೋ !

ಕಿಂಕಿಣಿ ಎಂಬ ಕಿರು ಆಭರಣದಂತೆ ಅರ್ಧವಿಕಸಿತವಾಗಿರುವ ನಿನ್ನ ಸುಂದರವಾದ ಕಣ್ಣುಗಳನ್ನು ತಾವರೆ ಹೂವಿನಂತೆ ಸ್ವಲ್ಪ ಸ್ವಲ್ಪವಾಗಿ ತೆರೆದು ನಮ್ಮನ್ನು ಕಟಾಕ್ಷಿಸಬೇಕು ಎಂದು ಪ್ರಾರ್ಥಿಸುತ್ತಾರೆ. ಸಾಧಾರಣವಾಗಿ ಮನುಷ್ಯರು ತುಂಬಾ ಆಶ್ಚರ್ಯವಾದಾಗ, ತುಂಬಾ ಕೋಪ ಬಂದಾಗ ಕಣ್ಣನ್ನು ಕೆಂಪಗೆ ಮಾಡಿಕೊಂಡು ದೊಡ್ಡದಾಗಿ ಬಿಡುತ್ತಾರೆ. ಹಾಗಿರದೆ ನಿನ್ನ ಕಣ್ಣು ಅರ್ಧವಿಕಸಿತವಾದ ತಾವರೆ ಹೂವಿನಂತೆ ಇರಬೇಕು ಮತ್ತು ನೀನು ಅದನ್ನು ಸ್ವಲ್ಪ ಸ್ವಲ್ಪವಾಗಿ ತೆರೆದು ನಮ್ಮ ಮೇಲೆ ಬೀರಬೇಕು. ಅಂದರೆ ಅದು ಕೋಪದ ನೋಟವಾಗಿರದೆ ಪ್ರೇಮದ ನೋಟವಾಗಿರಬೇಕು. ಪ್ರೀತಿಯ ಕಣ್ಣಿನಿಂದ ನಮ್ಮನ್ನು ಕಟಾಕ್ಷಿಸು ಎಂದು ಪ್ರಾರ್ಥಿಸುತ್ತಾರೆ. ಬಹಳ ದಿವಸ ಉಪವಾಸ ಇರುವವನಿಗೆ ಸ್ವಲ್ಪ ಸ್ವಲ್ಪವಾಗಿ ಆಹಾರ ಕೊಡಬೇಕೇ ವಿನಹ ಒಟ್ಟಿಗೆ ಒಂದೇ ಸಲ ಹೆಚ್ಚಾಗಿ ಆಹಾರ ಕೊಡಬಾರದು. ಹುಟ್ಟಿದ ಮಗುವಿಗೆ ಮೊದಲು ಹಾಲು ಕೊಟ್ಟು ಅನಂತರ ಕ್ರಮೇಣ ಸ್ವಲ್ಪಸ್ವಲ್ಪವಾಗಿ ಅನ್ನ ಕೊಡಬೇಕು. ಅದೇ ರೀತಿ ನಾವು ಬಹಳ ದಿವಸದಿಂದ ನಿನ್ನ ದರ್ಶನ ಪಡೆಯದೆ ಉಪವಾಸದಿಂದ ಬಹಳ ಹಸಿದಿದ್ದೇವೆ. ಏನೂ ಅರಿಯದ ಎಳೆಯ ಮಗುವಿನಂತೆ ಇದ್ದೇವೆ. ನಮ್ಮ ಮೇಲೆ ತಕ್ಷಣ ಒಂದೇ ಸಲಕ್ಕೆ ನಿನ್ನ ಪೂರ್ಣ ಕಟಾಕ್ಷ ಬೀರಿದರೆ ಅದರ ಪ್ರಭಾವವನ್ನು ತಡೆದುಕೊಳ್ಳಲು ನಾವು ಸಮರ್ಥರಾಗಿಲ್ಲ. ಆದ್ದರಿಂದ ನಮ್ಮ ಮೇಲೆ ಸ್ವಲ್ಪ ಸ್ವಲ್ಪವಾಗಿ ನಿನ್ನ ಪ್ರೇಮದ ಕಟಾಕ್ಷವನ್ನು ಬೀರಿ ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸುತ್ತಾರೆ.

ಶ್ರೀಕೃಷ್ಣಪರಮಾತ್ಮನು ತನ್ನಲ್ಲಿ ಶರಣಾಗತನಾದ ಅರ್ಜುನನಿಗೆ, ಗೀತೆಯಲ್ಲಿ ಆರಂಭದಲ್ಲೇ 'ಸರ್ವಧರ್ಮಾನ್ ಪರಿತ್ಯಜ್ಯ ಮಾಂ ಏಕಂ ಶರಣಂ ವ್ರಜ' ಎಂದು ಶರಣಾಗತಿ ಮಾರ್ಗವನ್ನು ಉಪದೇಶಿಸದೆ, ಮೊದಲು ಕರ್ಮ, ಜ್ಞಾನ,

ಭಕ್ತಿಮಾರ್ಗಗಳನ್ನೆಲ್ಲಾ ತಿಳಿಸಿ, ಅನಂತರ 18ನೆಯ ಅಧ್ಯಾಯದ ಕೊನೆಯಲ್ಲಿ ಶರಣಾಗತಿ ಮಾರ್ಗವನ್ನು ಉಪದೇಶ ಮಾಡಿದ್ದಾನೆ. ಪರಮಾತ್ಮನು ನಾಸ್ತಿಕನನ್ನು ಮೊದಲು ಆಸ್ತಿಕನನ್ನಾಗಿ ಮಾಡಿ, ಅವನಲ್ಲಿರುವ ಸ್ವಾತಂತ್ರ್ಯಾಭಿಮಾನವನ್ನೂ ಅನ್ಯಶೇಷತ್ವವನ್ನೂ ಹೋಗಲಾಡಿಸಿ, ಭಗವದೇಕೋಪಾಯನನ್ನಾಗಿ ಮಾಡಿ, ಅನಂತರ ಪರಮಭಕ್ತನನ್ನಾಗಿ ಮಾಡಿ, ತದನಂತರ ಪರಿಪೂರ್ಣ ಭಗವದನುಭವವನ್ನು ಕೊಡುತ್ತಾನೆ. ಅದೇ ರೀತಿ ನಮಗೆ ನಿನ್ನ ಅನುಭವವನ್ನು ಸ್ವಲ್ಪ ಸ್ವಲ್ಪವಾಗಿ ಕರುಣಿಸಿ ನಮ್ಮನ್ನು ಉದ್ಧಾರಮಾಡು ಎಂದು ಗೋಪಿಗಳು ಪ್ರಾರ್ಥಿಸುತ್ತಾರೆ ಎಂದು ಅಭಿಪ್ರಾಯ.

**ತಿಙ್ಗಳುಂ ಆದಿತ್ತಿಯನುಂ ಎಳುನ್ದಾರ್ಪೋಲ್ ಅಙ್ಗಣ್**
**ಇರಂಡುಂಕೊಂಡು ಎಙ್ಗಳ್ ಮೇಲ್ ನೋಕ್ಕುದಿಯೇಲ್**
**ಎಙ್ಗಳ್‌ಮೇಲ್ ಶಾಪಂ ಇಳಿನ್ದ್।**

ಆಶ್ರಿತರಿಗೆ ಚಂದ್ರನಂತೆ ತಂಪಾಗಿಯೂ ಶತ್ರುಗಳಿಗೆ ಸೂರ್ಯನಂತೆ ತಾಪ ಉಂಟುಮಾಡುವಂತಹುದಾಗಿಯೂ ಇರುವ ನಿನ್ನ ಕಣ್ಣುಗಳೆರಡರ ಮೂಲಕ ನಮ್ಮನ್ನು ಕಟಾಕ್ಷಿಸಿದೆಯಾದರೆ 'ಎಂಗಳ್ ಮೇಲ್ ಶಾಪಂ ಇಳಿಂದ್' ಆಗ ನಮ್ಮ ಪಾಪಗಳೆಲ್ಲವೂ ನಾಶವಾಗಿ ನಾವು ಆತ್ಮ ಶ್ರೇಯಸ್ಸನ್ನು ಹೊಂದುವೆವು.

ನಿನ್ನ ಕಟಾಕ್ಷ ನಮ್ಮ ಪಾಪಗಳನ್ನು ಸೂರ್ಯನ ಕಿರಣದಂತೆ ದಹಿಸಲಿ ಮತ್ತು ಅದು ನಮ್ಮ ಮೇಲೆ ಚಂದ್ರನಂತೆ ತಂಪಾಗಿ ಆನಂದದಾಯಕವಾಗಿರಲಿ. ಆಗ ನಮ್ಮ ಮೇಲಿರುವ ಶಾಪಗಳೆಲ್ಲವೂ ನಾಶವಾಗುತ್ತವೆ. ಅನುಭವಿಸಿಯೇ ತೀರಬೇಕಾಗಿರುವ ಪಾಪಗಳೇ ಶಾಪಗಳು. ನಿನ್ನನ್ನು ಆಗಲಿ ಅಂದರೆ ನಿನ್ನ ಸಂಬಂಧ ಜ್ಞಾನ ಹೊಂದದೆ ನಾವು ಪಡುತ್ತಿರುವ ತಾಪವೇ ನಮಗೆ ಶಾಪ. ನಿನ್ನ ಮಂಗಳಕರವಾದ ಸುಂದರವಾದ ಎರಡು ಕಣ್ಣುಗಳಿಂದ ನಮ್ಮನ್ನು ಕಟಾಕ್ಷಿಸಿದೆಯಾದರೆ ನಮ್ಮ ಈ ಶಾಪಗಳೆಲ್ಲವೂ ನಾಶವಾಗುತ್ತವೆ. ಅನಾದಿಕಾಲದಿಂದ ನಿನ್ನ ಸಂಬಂಧಜ್ಞಾನ ಹೊಂದದೆ, ನಿನ್ನನ್ನು ನೆನೆಸದೆ, ಲೌಕಿಕ ಜೀವನದಲ್ಲಿ ಆಸೆ

ಹೊಂದಿ ನಮ್ಮ ಇಷ್ಟದಂತೆ ವರ್ತಿಸುತ್ತಿದ್ದೆವು. ಇದೇ ನಮ್ಮ ಮೇಲಿರುವ ಶಾಪ. ಈ ಶಾಪವನ್ನು ಇಷ್ಟು ದಿನವೂ ಅರಿತಿರಲಿಲ್ಲ. ಇಂದು ಅದನ್ನು ಅರಿತು ಅದನ್ನು ಪರಿಹರಿಸಲು ಶಕ್ತರಾಗದೆ ಶೋಕಗೊಂಡು ನಿರ್ಗತಿಕರಾಗಿ ನಿನ್ನ ಬಳಿ ಬಂದಿದ್ದೇವೆ. ನಿನ್ನ ಕೃಪಾಕಟಾಕ್ಷಬೀರಿ ನಮ್ಮ ಈ ಶಾಪರೂಪ ಪಾಪ ತಾಪಾದಿಗಳೆಲ್ಲವನ್ನೂ ಪರಿಹರಿಸು ಎಂದು ಪ್ರಾರ್ಥಿಸುತ್ತಾರೆ.

**ಏಲೋರೆಂಪಾವಾಯ್** :- ಹೀಗೆ ನಿನ್ನ ಕೃಪಾಕಟಾಕ್ಷ ಹೊಂದಿ ನಿನ್ನ ಕೃಪೆಗೆ ನಾವು ಪಾತ್ರರಾದವರಾದರೆ ನಮ್ಮ ದೇಹಾತ್ಮಾಭಿಮಾನವು ಹೋಗಿ ನಿನ್ನಲ್ಲಿ ಶೇಷತ್ವ ಅಂದರೆ ನೀನೇ ನಮಗೆ ಸ್ವಾಮಿ ಎಂಬ ಜ್ಞಾನವು ಹುಟ್ಟಿ ನಿನ್ನ ಕಲ್ಯಾಣಗುಣಾನುಭವವೂ ಉಂಟಾಗಿ ಭಗವದ್ವಿಶ್ಲೇಷದುಃಖವು ಹೋಗಿ ನಮ್ಮ ಅದ್ವಿತೀಯವಾದ ಭಗವತ್ಕೈಂಕರ್ಯರೂಪವಾದ ಈ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು.

ಇಂದು ನಾವು ನಿನ್ನ ಸಂಬಂಧಜ್ಞಾನ ಹೊಂದಿದವರಾಗಿ, ಅನನ್ಯ ಶೇಷರಾಗಿ ನಿನ್ನ ಬಳಿ ಬಂದಿದ್ದೇವೆ. ನಿನ್ನ ಪ್ರೇಮಪೂರಿತಕೃಪಾಕಟಾಕ್ಷವನ್ನು ನಮ್ಮ ಮೇಲೆ ಬೀರಿ ಅನನ್ಯ ಶೇಷತ್ವ ಮತ್ತು ಅನನ್ಯ ಭೋಗ್ಯತ್ವಾದಿ ಅಂದರೆ ಬೇರೆಯಾರಿಗೂ ದಾಸರಾಗದೆ ಮತ್ತು ಬೇರೆಯಾವ ಫಲವನ್ನೂ ಆಸೆ ಪಡದೇ ಇರುವ ಜ್ಞಾನವನ್ನು ನಮಗೆ ಕ್ರಮಕ್ರಮವಾಗಿ ಉಂಟುಮಾಡಿ ನಮ್ಮ ಶಾಪಗಳನ್ನೂ, ತಾಪತ್ರಯಗಳನ್ನೂ ಹೋಗಲಾಡಿಸಿ, ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾರೆ. ಅಂದರೆ ನಿನ್ನ ಸಂಬಂಧಜ್ಞಾನ ಹೊಂದಿ, ನಿನ್ನ ಬಳಿ ಬಂದು ನಿನ್ನಲ್ಲಿ ಶರಣಾಗತರಾಗಿರುವ ನಮ್ಮ ಮೇಲೆ ನಿನ್ನ ಪ್ರೀತಿಪೂರ್ವಕವಾದ ಕೃಪಾಕಟಾಕ್ಷವನ್ನು ಬೀರಿದರೆ, ಆಗ ನಮಗೆ ನಾವು ಸ್ವತಂತ್ರರು ಎಂಬ ಅಜ್ಞಾನವು ಹೋಗಿ, ನಾನು ಪರಮಾತ್ಮನ ಸ್ವತ್ತು ಇತರರಾರಿಗೂ ಸೇರಿದವನಲ್ಲ, ನನಗೆ ನಾನು ಸ್ವತಂತ್ರನಲ್ಲ , ಪರಮಾತ್ಮನಿಗೆ ನಾನು ಶೇಷಭೂತನು (ದಾಸನು), ಇತರರಾರಿಗೂ, ನನಗೂ ನಾನು ಸೇರಿದವನಲ್ಲ ಮತ್ತು ದಾಸನಲ್ಲ

ಎಂಬ ಭಗವದನನ್ಯಾರ್ಹ ಶೇಷತ್ವಜ್ಞಾನವೂ; ನನ್ನನ್ನು ನಾನು ರಕ್ಷಿಸಿಕೊಳ್ಳಬಲ್ಲೆನು ಎಂಬ ಅಜ್ಞಾನವು ಹೋಗಿ, ಇತರರಾರೂ ನನಗೆ ರಕ್ಷಕರಲ್ಲ, ನನಗೆ ನಾನೂ ರಕ್ಷಕನಲ್ಲ, ಪರಮಾತ್ಮನಾದ ನೀನೇ ನನಗೆ ಸ್ವಾಮಿಯು ಮತ್ತು ರಕ್ಷಕನು ಎಂಬ ಭಗವದನನ್ಯಾರ್ಹಶರಣ್ಯತ್ವಜ್ಞಾನವೂ; ಸ್ವಾಮಿಯಾದ ನಿನಗೆ ಕೈಂಕರ್ಯ ಮಾಡುವುದೇ ದಾಸನಾದ ನನಗೆ ಪರಮ ಪುರುಷಾರ್ಥವು ಎಂಬ ಭಗವದನನ್ಯಾರ್ಹ ಭೋಗ್ಯತ್ವಜ್ಞಾನವೂ ಮತ್ತು ಸಮಸ್ತ ಕಲ್ಯಾಣಗುಣ ಪರಿಪೂರ್ಣನಾದ ನಿನ್ನ ಅನುಭವವೂ, ನಿನಗೆ ಪ್ರೀತಿಕಾರಿತ ಕೈಂಕರ್ಯ ಮಾಡಬೇಕೆಂಬ ಇಚ್ಛೆಯೂ ಕ್ರಮಕ್ರಮವಾಗಿ ನನ್ನಲ್ಲಿ ಉಂಟಾಗಿ ನನ್ನ ಸಾಂಸಾರಿಕ ತಾಪತ್ರಯಗಳೆಲ್ಲವೂ ನಾಶವಾಗುವುವು ಎಂದು ಪ್ರಾರ್ಥಿಸುತ್ತಾರೆ ಎಂಬುದು ಇದರ ವಿಶೇಷಾರ್ಥ.

# ಪಾಶುರ - 23

ಈ ಪಾಶುರದಲ್ಲಿ ಪರಮಾತ್ಮನನ್ನು ಪೂಜಾಪೀಠದಲ್ಲಿ ಬಂದು ಕುಳಿತು ತಮ್ಮ ಕೋರಿಕೆಗಳನ್ನು ಕೇಳಿ ವಿಚಾರ ಮಾಡಿ ಕೃಪೆಮಾಡಿ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾರೆ. ಅವನ ಬರುವಿಕೆಯನ್ನು ವೀರ್ಯವುಳ್ಳ ಸಿಂಹದ ಗಂಭೀರ ನಡಿಗೆಗೆ ಹೋಲಿಸಿದ್ದಾರೆ.

**ಮಾರಿಮಲ್ಶೈ ಮುಳ್ಳೆಂಜಿಲ್ ಮನ್ನಿಕ್ಕಿಡನ್ದುರಂಗುಮ್**
**ಶೀರಿಯಶಿಂಗಂ ಅರಿವುತ್ತು ತೀವಿಳಿತ್ತು**
**ವೇರಿಮಯಿರ್ ಪೊಂಗ ಎಪ್ಪಾಡುಂ ಪೇರ್‌ನ್ದುದರಿ**
**ಮೂರಿನಿಮಿರ್‌ನ್ದು ಮುಳಂಗಿ ಪುರಪ್ಪಟ್ಟು**
**ಪೋದರು ಮಾಪ್ಪೋಲೆ ನೀ ಪೂವೈ ಪೂವಣ್ಣಾ ಉನ್**
**ಕೋಯಿಲ್ ನಿನ್ರುಮಿಂಗನೇ ಪೋನ್ದರುಳಿಕೋಪ್ಪುಡೈಯ**
**ಶೀರಿಯ ಶಿಂಗಾಸನತ್ತಿರುಂದು ಯಾಮ್‌ವನ್ದ**
**ಕಾರಿಯಮಾರಾಯ್‌ನ್ದರುಳೇಲೋರೆಂಬಾವಾಯ್**

"ಮಳೆಗಾಲದಲ್ಲಿ ಪರ್ವತದ ಗುಹೆಯಲ್ಲಿ ಹೆಣ್ಣು ಸಿಂಹದೊಂದಿಗೆ ನೆಲೆಸಿ, ಮಲಗಿ ನಿದ್ರಿಸುತ್ತಿರುವ ವೀರ್ಯವುಳ್ಳ ಸಿಂಹವು, ಎಚ್ಚರಗೊಂಡು, ಕೋಪಾಗ್ನಿ ಜ್ವಾಲೆಯಿಂದ ಕೂಡಿದ ಕಣ್ಣುಗಳನ್ನು ತೆರೆದು, ಶರೀರವು ರೋಮಾಂಚಿತವಾಗಲು ಎಲ್ಲಾ ಕಡೆಗೂ ಮೈಯ್ಯನ್ನು ಒದರಿಕೊಂಡು, ಮೈಮುರಿದುನಿಂತು, ಗರ್ಜಿಸುತ್ತಾ ಹೊರಗೆ ಹೊರಟು ಬರುವಂತೆ, ಆತಸೀ ಪುಷ್ಪದ ಬಣ್ಣವುಳ್ಳ ನೀನು ನಿನ್ನ ದಿವ್ಯ ವಾಸಸ್ಥಾನದಿಂದ ಹೊರಟು ಇಲ್ಲಿಗೆ ಬಂದು, ಶ್ರೇಷ್ಠವಾದ ಸಿಂಹಾಸನದಲ್ಲಿ ಮಂಡಿಸಿ, ನಾವು ಬಂದಿರುವ ನಮ್ಮ

ಕಾರ್ಯವನ್ನು ವಿಚಾರಿಸಿ, ಪರ್ಯಾಲೋಚಿಸಿ ನಮಗೆ ಕೃಪೆ ಮಾಡು. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಎಂಬುದು ಈ ಪಾಶುರದ ವಾಕ್ಯಾರ್ಥ.

ಇದು ನರಸಿಂಹಾವತಾರ ವೈಭವಸೂಚಕವಾದ ಪಾಶುರವಾಗಿಯೂ ಪರಿಗಣಿಸಲ್ಪಟ್ಟಿದೆ.

**ಮಾರಿಮಲೈ ಮುಳ್ಳೆಂಜಿಲ್ ಮನ್ನಿಕಿಡಂನ್ದುರಂಗುಮ್ ಶೀರಿಯ ಶಿಂಗಂ** - ಮಳೆಗಾಲದಲ್ಲಿ ಪರ್ವತದ ಗುಹೆಯಲ್ಲಿ ಹೆಣ್ಣು ಸಿಂಹದೊಂದಿಗೆ ನೆಲೆಸಿ ವಾಸಮಾಡಿಕೊಂಡು ನಿದ್ರಿಸುತ್ತಿರುವ ವೀರ್ಯವುಳ್ಳ ಸಿಂಹವು -

**ಅರಿವುತ್ತುತ್ತೀವಿಳಿತ್ತು** : ಮಳೆಗಾಲವು ಕಳೆದ ಮೇಲೆ ಎಚ್ಚರಗೊಂಡು ಕಣ್ಣಿನಲ್ಲಿ ಬೆಂಕಿ ಸುರಿಸುವಂತೆ ಕೋಪದಿಂದ ಕೆಂಪಗೆ ಕಣ್ಣು ಬಿಟ್ಟುಕೊಂಡು -

**ವೇರಿಮಯಿರ್ ಪೊಂಗ ಎಪ್ಪಾಡುಂ ಪೇರ್‌ನ್ದುದರಿ** - ಶರೀರವು ರೋಮಾಂಚಿತವಾಗಲು ಎಲ್ಲಾ ಕಡೆಗೂ ಮೈಯನ್ನೂ ಎಲ್ಲಾ ಅಂಗಗಳನ್ನೂ ಒದರಿಕೊಂಡು -

**ಮೂರಿನಿಮಿರ್‌ನ್ದು** - ಶರೀರದ ಜೋಗುತನ ಹೋಗುವಂತೆ ಮೈಮುರಿದು

**ಮುಳಂಗಿ** - ಗರ್ಜಿಸುತ್ತಾ

**ಪುರಪ್ಪಟ್ಟು ಪೋದರುಮಾಪೋಲೆ** - ಗುಹೆಯಿಂದ ಹೊರಗೆ ಹೊರಟು ಬರುವಂತೆ

**ನೀಪೂವೈಪ್ಪೂವಣ್ಣಾ** - ಅತಸೀಪುಷ್ಪದ ವರ್ಣವುಳ್ಳ ನೀನು ಅಂದರೆ ಸಿಂಹದಂತೆ ಕ್ರೂರನಾಗಿದ್ದರೂ ಸೌಂದರ್ಯವುಳ್ಳ ನೀನು - ಅಂದರೆ ದುಷ್ಟರಿಗೆ ಸಿಂಹದಂತೆ ಕ್ರೂರಿಯಾಗಿಯೂ, ಸಜ್ಜನರಿಗೆ ಸುಂದರರೂಪಿಯಾಗಿಯೂ, ದರ್ಶನ ಕೊಡುವ ನೀನು ಎಂದು ಅರ್ಥ. ಇದಕ್ಕೆ ಶ್ರೀಸಹಿತನಾಗಿರುವ ನೀನು ಎಂದೂ ಅರ್ಥ ಹೇಳಿದ್ದಾರೆ.

ಉನ್‌ಕೋಯಿಲ್‌ನಿನ್ರುಮಿಂಗನೇಪ್ಪೋನ್ದರುಳಿಕೋಪ್ಪುಡ್ಯೆಯಶೀರಿಯಶಿಂಗಾಸನತ್ತಿರುಂದು ಯಾಂವನ್ದ ಕಾರ್ಯಂ ಆರಾಯಿನ್ದು ಅರುಳ್ : ನಿನ್ನ ದಿವ್ಯವಾದ ವಾಸಸ್ಥಾನದಿಂದ ಇಲ್ಲಿಗೆ ಸಿಂಹದಂತೆ ಗಂಭೀರವಾಗಿ ಹೊರಟು ಬಂದು, ಮಹಿಮೆಯುಳ್ಳ ಶ್ರೇಷ್ಠವಾದ ಸಿಂಹಾಸನದಲ್ಲಿ ಮಂಡಿಸಿ, ನಾವು ಬಂದಿರುವ ನಮ್ಮ ಕಾರ್ಯವನ್ನು (ನಮ್ಮ ಉದ್ದೇಶವನ್ನು) ವಿಚಾರಿಸಿ, ನೀನು ಪರ್ಯಾಲೋಚಿಸಿ ನಮಗೆ ಕೃಪೆ ಮಾಡು.

ಏಲೋರೆಂಪಾವಾಯ್ : ಆಗ ನಮ್ಮ ಈ ವ್ರತವು. ಸಾಂಗವಾಗಿ ಶುಭವಾಗಿ ನೆರವೇರುವುದು ಎಂದು ಪ್ರಾರ್ಥಿಸುತ್ತಾರೆ.

ಈ ಪಾಶುರದಲ್ಲಿ ಯೋಗನಿದ್ರೆಯಿಂದ ಎಚ್ಚರಗೊಂಡು ನಿನ್ನ ದಿವ್ಯವಾದ ಸ್ವವಾಸಸ್ಥಾನದಿಂದ ಸಿಂಹದಂತೆ ವೀರ್ಯದಿಂದಲೂ, ಗಂಭೀರದಿಂದಲೂ ನಡೆದು ಬಂದು ನಾವು ಅಲಂಕರಿಸಿ ಪೂಜೆಗಾಗಿ ಇಟ್ಟಿರುವ ಸಿಂಹಾಸನದಲ್ಲಿ ಮಂಡಿಸಿ, ನಮ್ಮ ಕೋರಿಕೆಗಳನ್ನು ವಿಚಾರಿಸಿ ಕೃಪೆಮಾಡಿ ಅನುಗ್ರಹಿಸುವಂತೆ ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ ಎಂಬುದು ಇದರ ವಿಶೇಷಾರ್ಥ.

ಹಿಂದಿನ ಪಾಶುರದಲ್ಲಿ ವಂದು ತಲೈಪ್ಪೆಯ್‌ದೋಂ – ನಾವು ನಿನ್ನ ಬಳಿ ಬಂದು ಶರಣಾಗತರಾಗಿದ್ದೇವೆ ಎಂದು ಹೇಳಿದ್ದಾರೆ. ಪರಮಾತ್ಮನು ಎಲ್ಲೆಲ್ಲೂ ವ್ಯಾಪಿಸಿಕೊಂಡು ಸರ್ವವ್ಯಾಪಿಯಾಗಿರುವಾಗ, ಇವರು ಇಲ್ಲಿಗೆ ಬಂದು ಅವನಿಗೆ ನಮಸ್ಕಾರ ಮಾಡುತ್ತಾರೆ ಎಂದರೆ 'ನಾವು ನಿನ್ನೊಂದಿಗೆ ಸರ್ವದಾ ಸೇರಿದ್ದೇವೆ. ಆದರೆ ಇಂದಿನವರೆಗೆ ನಮಗೆ ಅದರ ಜ್ಞಾನ ಉಂಟಾಗಿರಲಿಲ್ಲ, ಇಂದು ನಮಗೂ ನಿನಗೂ ಬಿಡಿಸಲಾಗದ ಸಂಬಂಧ ಇದೆ ಎಂಬುದನ್ನು ಅರಿತು ಶರಣಾಗತರಾಗಿದ್ದೇವೆ ಎಂದು ಅಭಿಪ್ರಾಯ. ಅದೇ ರೀತಿ ಎಲ್ಲೆಲ್ಲೂ ವ್ಯಾಪಿಸಿಕೊಂಡಿರುವ ನೀನು ಯೋಗನಿದ್ರೆಯಲ್ಲಿ ಮಲಗಿರುವ ಜಾಗದಿಂದಲೇ ನಮ್ಮ ಪ್ರಾರ್ಥನೆಗಳನ್ನು ಕೇಳದೆ, ನಿನ್ನ ಏಕಾಂತ ಸ್ಥಳವನ್ನು ಬಿಟ್ಟು ನಮ್ಮ

ಪೂಜಾಗೃಹಕ್ಕೆ ಬಂದು, ನಮ್ಮ ದಿವ್ಯ ಆಸ್ಥಾನಮಂಟಪದ ಪೀಠದಲ್ಲಿ ಸುಖಾಸೀನನಾಗಿ ಕುಳಿತು ನಮ್ಮ ಕೋರಿಕೆಗಳನ್ನು ಕೇಳಬೇಕು. ನ್ಯಾಯಾಧಿಪತಿಯಾದವನು ನ್ಯಾಯಾಲಯದ ಧರ್ಮಪೀಠದ ಮೇಲೆ ಕುಳಿತು ನ್ಯಾಯ ವಿಚಾರ ಮಾಡುವಂತೆ ನೀನೂ ನಮ್ಮ ಸಿಂಹಾಸನದ ಮೇಲೆ ಕುಳಿತು ನಮ್ಮ ಇಷ್ಟಾರ್ಥಗಳನ್ನು ವಿಚಾರ ಮಾಡಿ ನಮಗೆ ಅನುಗ್ರಹಿಸಬೇಕು. ಅಂದರೆ ನಮಗೆ ಯಾವುದು ಒಳ್ಳೆಯದು ಎಂಬುದು ನಿನಗೆ ತಿಳಿದಿರುವುದರಿಂದ ನೀನೇ ಅದನ್ನು ವಿಚಾರಮಾಡಿ, ಆಲೋಚಿಸಿ ನಮಗೆ ಶ್ರೇಯಸ್ಸನ್ನು ಉಂಟುಮಾಡಿ, ನಮ್ಮ ಪ್ರಾರ್ಥನೆಗಳನ್ನು ಸಫಲಗೊಳಿಸಿ ಕೃಪೆ ಮಾಡಬೇಕೆಂದು ಪ್ರಾರ್ಥಿಸುತ್ತಾರೆ.

ಚೇತನನು ಮಾಡುವ ಕರ್ಮ, ಜ್ಞಾನ, ಭಕ್ತಿ ಯೋಗ ಸಾಧನೆಗಳಾಗಲಿ, ಶರಣಾಗತಿಯೇ ಆಗಲಿ ಅವನ ರಕ್ಷಣೆಗೆ ಉಪಾಯವಾಗಲಾರದು. ಸಿದ್ಧ ಧರ್ಮನಾದ ಪರಮಾತ್ಮನೇ, ಅವನ ಕೃಪೆಯೇ ಉಪಾಯ, ಅವನೇ ಕೃಪೆ ಮಾಡಿ ಅನುಗ್ರಹಿಸಬೇಕು. ಆದ್ದರಿಂದ ತಮ್ಮ ಕೋರಿಕೆಗಳನ್ನು ಅವನೇ ಬಂದು ವಿಚಾರಿಸಿ ತಮ್ಮ ಶ್ರೇಯಸ್ಸಿಗೆ ಬೇಕಾದುದನ್ನು ಆಲೋಚಿಸಿ ಕೃಪೆ ಮಾಡಿ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾರೆ ಎಂಬ ವಿಶೇಷಾರ್ಥವು ಇಲ್ಲಿ ಸೂಚಿಸಲ್ಪಟ್ಟಿದೆ.

ಈ ಪಾಶುರಕ್ಕೆ ಇನ್ನೂ ಕೆಲವು ವಿಶೇಷಾರ್ಥಗಳು ತಿಳಿಸಲ್ಪಟ್ಟಿವೆ. ಪ್ರಳಯಕಾಲದಲ್ಲಿ ಪರಮಾತ್ಮನು ಅಡಗಿಕೊಂಡಿದ್ದು, ಸೃಷ್ಟಿ ಕಾಲವು ಬಂದ ತಕ್ಷಣ ಎಚ್ಚರಗೊಂಡು ಜಗತ್‌ಸೃಷ್ಟಿಕಾರ್ಯದಲ್ಲಿ ನಿರತನಾಗಿ, ತನ್ನೊಂದಿಗೆ ಅವಿಭಕ್ತ ನಾಮರೂಪಗಳನ್ನು ಹೊಂದಿರುವ ಚೇತನಾಚೇತನರುಗಳನ್ನು ವಿಭಕ್ತ ನಾಮರೂಪಗಳನ್ನುಳ್ಳವರನ್ನಾಗಿ ಮಾಡಿ ತಾನೇ ಜಗತ್‌ಶರೀರವಿಶಿಷ್ಟನಾಗಿ ಬೆಳೆದು ಎಲ್ಲೆಲ್ಲೂ ವ್ಯಾಪಿಸಿಕೊಂಡು, ಬಹಳ ಸಂಭ್ರಮದಿಂದ ಕೂಡಿ ಬೆಳಗುತ್ತಿರುವಂತೆ, ಈಗಲೂ ನಿನ್ನ ದಿವ್ಯ ವಾಸಸ್ಥಾನದಿಂದ ಹೊರಟು ಬಂದು

ನಮ್ಮ ಪೂಜಾಪೀಠದಲ್ಲಿ ಮಂಡಿಸಿ ನಿನಗೆ ದಾಸರಾದ ನಮ್ಮ ಕೋರಿಕೆಗಳನ್ನು ವಿಚಾರಿಸಿ ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ ಎಂಬುದು ಒಂದು ವಿಶೇಷಾರ್ಥ.

ಈ ಪಾಶುರದಲ್ಲಿ ಕಾಡಿನ ಗುಹೆಯಲ್ಲಿರುವ ಸಿಂಹದಂತೆ ಜಗತ್ತಿನ ಚರಾಚರ ವಸ್ತುಗಳಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿ ಇದ್ದಾನೆ ಎಂಬ ತತ್ವವನ್ನು ಪ್ರತಿಪಾದಿಸಿದ್ದಾಳೆ ಗೋದೆ ಎಂಬ ಮತ್ತೊಂದು ವಿಶೇಷಾರ್ಥವನ್ನು ಹೇಳಿದ್ದಾರೆ. ಶರೀರವೆಂಬ ಕಾಡಿನಲ್ಲಿ , ಹೃದಯವೆಂಬ ಬೆಟ್ಟದ ಮೇಲಿರುವ ಜೀವಾತ್ಮವೆಂಬ ಗುಹೆಯಲ್ಲಿ , ಸಿಂಹವೆಂಬ ಪರಮಾತ್ಮನು ಶ್ರೀಸಹಿತ ಯೋಗ ನಿದ್ರೆಯಲ್ಲಿದ್ದಾನೆ ಎಂಬ ಅರ್ಥವು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಕಾಡಿನ ಗುಹೆಯಲ್ಲಿ ಒಳ್ಳೆಯ ಮೃಗಗಳೊಂದಿಗೆ ದುಷ್ಟ ಮೃಗಗಳೂ ಸರ್ಪಗಳೂ ಇರುವಂತೆ ಚೇತನನ ಹೃದಯದಲ್ಲಿ ಒಳ್ಳೆಯ ಗುಣಗಳೊಂದಿಗೆ ದುರ್ಗುಣಗಳೂ ಕೋಪತಾಪಗಳೂ ಅಡಗಿವೆ. ಕಾಡಿನ ಗುಹೆಯಲ್ಲಿ ಸಿಂಹವಿರುವಂತೆ, ಶರೀರದಲ್ಲಿ ಹೃದಯದಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿ ಇದ್ದಾನೆ. ಮಳೆಗಾಲದಲ್ಲಿ ಸಿಂಹವು ಗುಹೆಯಿಂದ ಹೊರಗೆ ಬರದೆ ಮಲಗಿರುವಂತೆ ನಮ್ಮ ಹೃದಯದಲ್ಲಿ ಅಜ್ಞಾನದ ಮಳೆ ಸುರಿಯುತ್ತಿರುವ ಕಾಲದಲ್ಲಿ ಪರಮಾತ್ಮನು ಜೀವಾತ್ಮನ ಒಳಗೆ ಅಂತರಾತ್ಮನಾಗಿ ಶ್ರೀಸಹಿತ ಅಡಗಿರುತ್ತಾನೆ ಮತ್ತು ಚೇತನನ ಹೃದಯದ ಒಳಗೆ ಇದ್ದರೂ ಅವನ ಅರಿವಿಗೆ ಪ್ರಕಾಶಿಸುವುದಿಲ್ಲ. ಅಜ್ಞಾನದ ಮಳೆನಿಂತು ಜ್ಞಾನೋದಯವಾಗಿ ವಸಂತಕಾಲ ಬಂದು ಚೇತನನ ಹೃದಯದಲ್ಲಿ ಭಕ್ತಿ ಪುಷ್ಪಗಳು ಅರಳಿ ಅವನು ಭಕ್ತಿಯಿಂದ ಕೂಗಿದಾಗ, ಒಳಗೆ ಅಡಗಿರುವ ಪರಮಾತ್ಮನು ಎಚ್ಚರಗೊಂಡು ತನ್ನ ಕೃಪಾಕಟಾಕ್ಷ ಬೀರುತ್ತಾನೆ. ತನ್ನ ಭಕ್ತನು ತನ್ನನ್ನು ಪ್ರೀತಿಯಿಂದ ಕೂಗಿದನಲ್ಲ ಎಂದು ಪುಳಕಿತನಾಗಿ ಆನಂದ ಹೊಂದುತ್ತಾನೆ ಮತ್ತು ತನ್ನ ಭಕ್ತನ ರಕ್ಷಣೆಗಾಗಿ ತನ್ನ ಸ್ವರೂಪವನ್ನೇ ಮರೆತುಬರುತ್ತಾನೆ. ತನ್ನ ಮೈಮುರಿದು ಸಿದ್ಧನಾಗಿ ತನ್ನ ಕೃಪಾಧ್ವನಿ ಕಿಂಕಿಣಿ

ನಾದದಿಂದ ಕೂಡಿದ ಶಂಖಧ್ವನಿಯೊಡನೆ ಓಡಿ ಬರುತ್ತಾನೆ. ಅಂದರೆ ಸಿಂಹ ಎದ್ದು ಹೊರಟು, ಗುಹೆಯ ಮಹಾದ್ವಾರದ ಬಳಿ ಬಂದು ನಿಲ್ಲುವಂತೆ ಜ್ಞಾನಿಗಳಾದ ಭಕ್ತರ ಹೃದಯದಲ್ಲಿ ಭಗವಂತನ ಸಾಕ್ಷಾತ್ಕಾರವಾಗುತ್ತದೆ. ಅದನ್ನೇ ಇಲ್ಲಿ ಗೋಪಿಗಳು ತಮ್ಮಲ್ಲಿ ಅಂತರಾತ್ಮನಾಗಿರುವ ಪರಮಾತ್ಮನನ್ನು ತಮ್ಮ ಹೃದಯಗುಹೆಯಿಂದ ಹೊರ ಬಂದು, ತಮ್ಮ ಮನೋಮಂದಿರದಲ್ಲಿ ಶ್ರೀಸಹಿತ ಪ್ರತ್ಯಕ್ಷನಾಗಿ, ''ನಮ್ಮ ಕೆಟ್ಟ ಪ್ರವೃತ್ತಿಗಳನ್ನೆಲ್ಲಾ ನಾಶಮಾಡಿ, ನಮ್ಮ ಇಷ್ಟಾರ್ಥಗಳನ್ನು ವಿಚಾರ ಮಾಡಿ ಕೃಪೆಯಿಂದ ಅನುಗ್ರಹಿಸು'' ಎಂದು ಪ್ರಾರ್ಥಿಸುತ್ತಾರೆ ಎಂಬ ವಿಶೇಷಾರ್ಥವನ್ನು ಇಲ್ಲಿ ತಿಳಿಸಿದ್ದಾರೆ.

ತಿರುಪ್ಪಾವೈಯ ಮೊದಲನೆಯ ಪಾಶುರದಲ್ಲೇ ಗೋದಾದೇವಿಯು ಪರಮಾತ್ಮನನ್ನು 'ಯಶೋದೆ ಇಳಂ ಶಿಂಗಂ' ಎಂದು ಮೃಗರಾಜನೆನಿಸಿಕೊಂಡಿರುವ ಸಿಂಹಕ್ಕೆ ಹೋಲಿಸಿದ್ದಾಳೆ. ಮತ್ತೆ ಈ 23ನೇ ಪಾಶುರದಲ್ಲಿ 'ಶೀರಿಯ ಶಿಂಗಂ' ಎಂದು ಅವನ ನಡಿಗೆಯ ವೀರ್ಯ ಗಾಂಭೀರ್ಯಾದಿಗಳನ್ನು ಸಿಂಹದ ನಡಿಗೆಗೆ ಹೋಲಿಸಿದ್ದಾಳೆ. ಪರಮಾತ್ಮನು ಏಳುವ, ನಡೆದು ಬರುವ ನಡಿಗೆಯ ಮತ್ತು ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಸೌಂದರ್ಯಾತಿಶಯವನ್ನೆಲ್ಲಾ ದರ್ಶಿಸಬೇಕೆಂದು ಆಸೆ ಪಡುತ್ತಾಳೆ. ಈ ಪಾಶುರದಲ್ಲಿ ಅವಳು ಸಿಂಹದ ನಡಿಗೆಯನ್ನು ಬಹಳ ಚೆನ್ನಾಗಿ ವರ್ಣಿಸಿರುವುದರಿಂದ ಇಲ್ಲಿ ಅವಳ ಭಾವನಾಪ್ರಕರ್ಷದ ಹಿರಿಮೆಯು ಪ್ರಕಾಶವಾಗಿದೆ.

ಈ ಪಾಶುರವು ಭಗವಂತನ ವಿಭವ ರೂಪಕ್ಕೆ ಅಂದರೆ ಇಲ್ಲಿ ನರಸಿಂಹಾವತಾರಕ್ಕೆ ಮಂಗಳಾಶಾಸನಪರವಾದ ಪಾಶುರವೆಂದು ಪರಿಗಣಿಸಲ್ಪಟ್ಟಿದೆ. ಭಗವಂತನು ಭಕ್ತರಕ್ಷಣಕಾರ್ಯಕ್ಕೆ ಪ್ರವರ್ತಿಸುವಾಗ, ಸಿಂಹವು ನಿದ್ದೆಯಿಂದ ಎದ್ದು, ಗುಹೆಯಿಂದ ಹೊರಗೆ ಬಂದು, ನಾಲ್ಕು ಕಡೆಯೂ ನೋಡುತ್ತಾ, ಕೋಪದಿಂದ ಗರ್ಜಿಸುತ್ತಾ, ಇತರ ಪ್ರಾಣಿಗಳ ಮೇಲೆ

ಬೀಳುವಂತೆ, ಪರಮಾತ್ಮನು ಆಶ್ರಿತರ ಆರ್ತನಾದ ಕೇಳಿ, ಯೋಗನಿದ್ರೆಯಿಂದ ಎಚ್ಚರಗೊಂಡು, ತನ್ನ ಭಕ್ತರ ಕಷ್ಟಗಳನ್ನು ನಿವಾರಿಸುವ ಸಲುವಾಗಿ ಓಡಿ ಬಂದು ಭೂಲೋಕದಲ್ಲಿ ಅವತರಿಸಿ, ಕೋಪದಿಂದ ದುಷ್ಟ ನಿಗ್ರಹ ಮಾಡಿ ಭಕ್ತರನ್ನು ರಕ್ಷಿಸಿದ್ದಾನೆ. ನರಸಿಂಹಾವತಾರದಲ್ಲಿ ನರಸಿಂಹನಾಗಿ ಹಿರಣ್ಯಕಶಿಪುವನ್ನು ಸಂಹರಿಸಿ ಪ್ರಹ್ಲಾದನನ್ನು ರಕ್ಷಿಸಿದ್ದಾನೆ. ರಾಮಾವತಾರದಲ್ಲಿ ರಾಘವಸಿಂಹನಾಗಿ ರಾವಣ ಕುಂಭಕರ್ಣಾದಿಗಳನ್ನೂ, ಕೃಷ್ಣಾವತಾರದಲ್ಲಿ ಯಾದವಸಿಂಹನಾಗಿ ಕಂಸ ಶಿಶುಪಾಲಾದಿಗಳನ್ನೂ ಸಂಹರಿಸಿ ತನ್ನ ಭಕ್ತರನ್ನೆಲ್ಲಾ ರಕ್ಷಿಸಿದ್ದಾನೆ ಎಂದು ಪುರಾಣಗಳು, ಇತಿಹಾಸಗಳು ತಿಳಿಸುತ್ತವೆ. ಅದೇ ರೀತಿ ನೀನು ನಮ್ಮಲ್ಲಿರುವ ರಾಕ್ಷಸೀ ಪ್ರವೃತ್ತಿಗಳನ್ನೆಲ್ಲಾ ನಾಶಮಾಡಿ, ಸಾತ್ವಿಕ ಪ್ರವೃತ್ತಿಗಳನ್ನು ಪ್ರಬಲಗೊಳಿಸಬೇಕು ಮತ್ತು ನಮ್ಮ ಇಷ್ಟಾರ್ಥಗಳನ್ನು ಕೃಪೆಮಾಡಿ ಪೂರ್ತಿಗೊಳಿಸಬೇಕು ಎಂದು ಪ್ರಾರ್ಥಿಸುತ್ತಾರೆ.

ಶ್ರೀರಾಮಾಯಣದಲ್ಲಿ ಸಮುದ್ರತೀರದಲ್ಲಿ ವಿಭೀಷಣನಿಗೆ ಅಭಯ ಪ್ರಧಾನಮಾಡಿದಂತೆ, ಗೀತೆಯಲ್ಲಿ ರಣರಂಗದಲ್ಲಿ ಅರ್ಜುನನಿಗೆ ಅಭಯ ಪ್ರದಾನ ಮಾಡಿದಂತೆ, ಈ ಸಿಂಹಾಸನದಲ್ಲಿ ಮಂಡಿಸಿ ನಮಗೆ ಅಭಯ ಪ್ರಧಾನ ಮಾಡು ಎಂದು ಪ್ರಾರ್ಥಿಸುತ್ತಾರೆ ಎಂಬುದು ಇದರ ಅಭಿಪ್ರಾಯ. ಆದರೆ ತಮ್ಮ ಇಷ್ಟಾರ್ಥ ಏನು ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಅದು ಭಗವತ್ಕೈಂಕರ್ಯಪ್ರಾಪ್ತಿ ಎಂಬುದನ್ನು ಮುಂದೆ 29ನೆ ಪಾಶುರದಲ್ಲಿ ವ್ಯಕ್ತವಾಗಿ ತಿಳಿಸುತ್ತಾರೆ. ಇಲ್ಲಿ ಅದನ್ನು ಮರೆಸಿ ಹೇಳಿದ್ದಾರೆ.

ಇದರಲ್ಲಿ ಇಷ್ಟೊಂದು ವಿಶೇಷಾರ್ಥಗಳು ಅಡಕವಾಗಿರುವುದರಿಂದಲೂ, ಇದು ನರಸಿಂಹಾವತಾರದ ವೈಭವವನ್ನು ಸೂಚಿಸಿರುವುದರಿಂದಲೂ ಇದು ತಿರುಪ್ಪಾವೈಯಲ್ಲಿ ಒಂದು ಮುಖ್ಯವಾದ ಪಾಶುರವಾಗಿ ಪರಿಗಣಿಸಲ್ಪಟ್ಟಿದೆ.

# ಪಾಶುರ - 24

ಈ ಪಾಶುರದಲ್ಲಿ ಗೋಪಿಯರು ಭಗವಂತನಿಗೆ ಮಂಗಳಾಶಾಸನ ಮಾಡಿದ್ದಾರೆ. ಗೋಪಿಗಳೊಂದಿಗೆ ಸೇರಿ ಗೋದಾದೇವಿಯು ಪ್ರಾರ್ಥಿಸಿದಂತೆ ಪರಮಾತ್ಮನು ದಿವ್ಯಸ್ಥಾನದಿಂದ ಇವರ ಪೂಜಾಮಂಟಪದ ಪೀಠಕ್ಕೆ ನಡೆದು ಬಂದು ಮಂಡಿಸಲು, ಅವನ ದಿವ್ಯ ದರ್ಶನ ಪಡೆದು, ಅವನ ಸೌಂದರ್ಯದಲ್ಲಿ ಮೈಮರೆತು, ತಮ್ಮ ಮನೋರಥಗಳನ್ನೆಲ್ಲಾ ಮರೆತು, ಅವನ ದಿವ್ಯ ಪಾದಗಳಿಗೂ, ಶಕ್ತಿಸಾಮರ್ಥ್ಯಕ್ಕೂ, ಆಶ್ರಿತ ರಕ್ಷಣ ಕಾರ್ಯಕ್ಕೂ, ಕಲ್ಯಾಣ ಗುಣಗಳಿಗೂ, ಅವನ ಕೈಯ್ಯಲ್ಲಿರುವ ವೇಲಾಯುಧಕ್ಕೂ ಮಂಗಳಾಶಾಸನ ಮಾಡುತ್ತಾರೆ ಮತ್ತು ತಮ್ಮನ್ನು ಅನುಗ್ರಹಿಸುವಂತೆ ಪ್ರಾರ್ಥಿಸುತ್ತಾರೆ. ಇದು ಪರಮಾತ್ಮನಿಗೆ ಮಂಗಳಾಶಾಸನ ಮಾಡುವ ಪಾಶುರವಾಗಿದೆ.

**ಅನ್ರಿವ್ವುಲಹಮಳನ್ದಾಯಡಿ ಪೋತ್ತಿ**
**ಶೆನ್ರಂಗು ತ್ತೆನ್ನಿಲಂಗೈ ಶೆತ್ತಾಯ್ ತಿರಲ್‌ಪೋತ್ತಿ**
**ಪೊನ್ರಚ್ಚಕಡ ಮುದೈತ್ತಾಯ್ ! ಪುಹಳ್ ಪೋತ್ತಿ**
**ಕನ್ರು ಕುಣಿಲಾವೆರಿನ್ದಾಯ್ ! ಕಳಲ್ ಪೋತ್ತಿ**
**ಕುನ್ರು ಕುಡೈಯಾ ವೆಡುತ್ತಾಯ್ ! ಗುಣಂ ಪೋತ್ತಿ**
**ವೆನ್ರು ಪಹೈ ಕೆಡುಕ್ಕುಂ ನಿನ್ ಕೈಯಿಲ್‌ವೇಲ್ ಪೋತ್ತಿ**
**ಎನ್ರೆನ್ರುನ್ ಶೇವಹಮೇ ಯೇತ್ತಿಪ್ಪರೈಕೊಳ್ವಾನ್**
**ಇನ್ರು ಯಾಂ ವನ್ದೋಮಿರಂಗೇಲೋ ರೆಂಬಾವಾಯ್.**

"ಅಂದು (ವಾಮನಾವತಾರ ಕಾಲದಲ್ಲಿ) ಈ ಲೋಕವನ್ನು ಅಳೆದ ನಿನ್ನ ಪಾದಗಳಿಗೆ ಮಂಗಳವಾಗಲಿ. ಅಲ್ಲಿಂದ (ಅಯೋಧ್ಯೆಯಿಂದ) ಹೊರಟು ದಕ್ಷಿಣದಲ್ಲಿರುವ ಲಂಕಾನಗರದಲ್ಲಿ ರಾಕ್ಷಸರನ್ನು ಸಂಹರಿಸಿದ ನಿನ್ನ ಭುಜಬಲಕ್ಕೆ

(ಪರಾಕ್ರಮಕ್ಕೆ) ಮಂಗಳವಾಗಲಿ. ಚಿನ್ನದಂತೆ ಕಾಣುವ ಗಾಡಿಯ ರೂಪದಲ್ಲಿ ಬಂದ ಶಕಟಾಸುರನನ್ನು ಕಾಲಿನಿಂದ ಒದೆದ ನಿನ್ನ ಸಾಮರ್ಥ್ಯದ ಮಹಿಮೆಗೆ ಮಂಗಳವಾಗಲಿ. ಕರುವಿನ ರೂಪದಲ್ಲಿ ಬಂದ ವತ್ಸಾಸುರನೆಂಬ ರಾಕ್ಷಸನನ್ನು ಹಿಡಿದೆತ್ತಿ ಬಿಸಾಡಿದ ನಿನ್ನ ಪಾದಗಳಿಗೆ ಮಂಗಳವಾಗಲಿ. ಗೋವರ್ಧನ ಗಿರಿಯನ್ನು ಛತ್ರಿಯಂತೆ ಎತ್ತಿ ಹಿಡಿದ ನಿನ್ನ ಆಶ್ರಿತವಾತ್ಸಲ್ಯಗುಣಕ್ಕೆ ಮಂಗಳವಾಗಲಿ. ಶತ್ರುಗಳನ್ನು ಜಯಿಸಿ ನಿರಸನ ಮಾಡಿದ ನಿನ್ನ ಕೈಯ್ಯಲ್ಲಿರುವ ವೇಲಾಯುಧಕ್ಕೆ ಮಂಗಳವಾಗಲಿ. ಈ ರೀತಿಯಾಗಿ ನಿನ್ನ ಪರಾಕ್ರಮವನ್ನೆಲ್ಲಾ ಸ್ತುತಿಸುತ್ತಾ ನಮ್ಮ ಪುರುಷಾರ್ಥವನ್ನು ಪಡೆಯಲು ಇಂದು ನಾವು ಬಂದಿದ್ದೇವೆ. ನೀನು ನಮಗೆ ಕೃಪೆ ಮಾಡಿ ಅನುಗ್ರಹಿಸು. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ಅನ್ರು ಇವ್ವುಲಹವುಳನ್ದಾಯ್ ಅಡಿ ಪೋತ್ತಿ :** ಅಂದು ದೇವತೆಗಳು ಪ್ರಾರ್ಥಿಸಿದಾಗ (ವಾಮನನಾಗಿ ಅವತರಿಸಿ ತ್ರಿವಿಕ್ರಮನಾಗಿ ಬೆಳೆದು) ಈ ಲೋಕವನ್ನು ಅಳೆದ ನಿನ್ನ ದಿವ್ಯಚರಣ ಕಮಲಗಳಿಗೆ ಮಂಗಳವಾಗಲಿ.

ತ್ರಿವಿಕ್ರಮಾವತಾರದಲ್ಲಿ ತ್ರಿಲೋಕಗಳನ್ನೂ ತನ್ನ ಪಾದಗಳಿಂದ ಅಳೆದು 'ಅನಾದಿ ಮಾಯಯಾ ಸುಪ್ತಃ' ಎಂದು ಹೇಳಿರುವಂತೆ ಮಾಯೆಯಿಂದ ಮಲಗಿದ್ದ ಚೇತನರೆಲ್ಲರ ತಲೆಯ ಮೇಲೂ, ಅವರಿಗೆ ತಿಳಿಯದಂತೆ ತಾನಾಗಿಯೇ, ತನ್ನ ಪಾದಗಳನ್ನು ಇಟ್ಟು, ಅದರ ಸ್ಪರ್ಶದಿಂದ ಅವರೆಲ್ಲರನ್ನೂ ಪುನೀತರನ್ನಾಗಿ ಮಾಡಿದಂತಹ ಪರಮಾತ್ಮನ ದಿವ್ಯಪಾದಗಳಿಗೆ ಇಲ್ಲಿ ಮಂಗಳಾಶಾಸನ ಮಾಡಿದ್ದಾರೆ. ಇದು ತ್ರಿವಿಕ್ರಮಾವತಾರಕ್ಕೆ ಮಂಗಳಾಶಾಸನವಾಗಿದೆ.

**ಶೆನ್ರುಅಂಗು ತೆನ್ನಿಲಂಗೈಶೆತ್ತಾಯ್‌ತಿರಲ್‌ಪೋತ್ತಿ** - ಅಯೋಧ್ಯೆಯಿಂದ ದಕ್ಷಿಣದಲ್ಲಿರುವ ರಾವಣನ ರಾಜ್ಯವಾದ ಲಂಕೆಗೆ ಹೋಗಿ, ರಾಕ್ಷಸರೆಲ್ಲರನ್ನೂ ನಿರಸನ ಮಾಡಿದ ನಿನ್ನ ಪರಾಕ್ರಮಕ್ಕೆ (ತಿರಲ್) ಮಂಗಳವಾಗಲಿ - ಇದು

ರಾಮಾವತಾರಕ್ಕೆ ಮಂಗಳಾಶಾಸನ. ರಾಮಾವತಾರದಲ್ಲಿ ಪರಮಾತ್ಮನು ಅಯೋಧ್ಯೆಯಿಂದ ಲಂಕೆಯವರೆಗೂ ನಡೆದು ಹೋಗಿ, ರಾಕ್ಷಸರೆಲ್ಲರನ್ನೂ ನಿರಸನಮಾಡಿ ದಂಡಕಾರಣ್ಯದ ಋಷಿಗಳನ್ನು ರಕ್ಷಿಸಿದ್ದಾನೆ. ಅವನ ಭುಜಪರಾಕ್ರಮಕ್ಕೆ ಇಲ್ಲಿ ಮಂಗಳಾಶಾಸನ ಮಾಡಿದ್ದಾರೆ.

ಮುಂದಿನ ವಾಕ್ಯಗಳೆಲ್ಲವೂ ಕೃಷ್ಣಾವತಾರಕ್ಕೆ ಮಂಗಳಾಶಾಸನವಾಗಿವೆ

**ಪೊನ್ರ್‍ಚ್ಚಕಟಂ ಉದೈತ್ತಾಯ್ ಪುಹಳ್ ಪೋತ್ತಿ** - ಚಿನ್ನದಂತೆ ಕಾಣುವ ಗಾಡಿಯರೂಪದಲ್ಲಿ ಬಂದ ಶಕಟಾಸುರನನ್ನು ಕಾಲಿನಿಂದ ಒದೆದು ನಿರಸನ ಮಾಡಿದ ನಿನ್ನ ಪಾದಗಳ ಸಾಮರ್ಥ್ಯಕ್ಕೆ ಮಂಗಳವಾಗಲಿ.

**ಕನ್ರ್‍ಕುಣಲಾ ಎರಿಂದಾಯ್ ಕಳಲ್ ಪೋತ್ತಿ** - ಒಂದುಮುಳ್ಳಿನಿಂದ ಇನ್ನೊಂದು ಮುಳ್ಳನ್ನು ತೆಗೆದು ಎರಡನ್ನೂ ಬಿಸಾಡುವಂತೆ ಕರುವಿನ ರೂಪದಲ್ಲಿ ಬಂದ ವತ್ಸಾಸುರನೆಂಬ ರಾಕ್ಷಸನನ್ನು ಕೈಯಿಂದ ಎತ್ತಿ ಬೇಲದ ಹಣ್ಣಿನ ರೂಪದಲ್ಲಿ ಇದ್ದ ಮತ್ತೊಬ್ಬ ರಾಕ್ಷಸನಮೇಲೆ ಎಸೆದು ಇಬ್ಬರು ರಾಕ್ಷಸರುಗಳನ್ನೂ ಕೊಂದ ನಿನ್ನ ಪಾದಗಳಿಗೆ ಮಂಗಳವಾಗಲಿ. ಇಲ್ಲಿ ಅವನ ಸಾಮರ್ಥ್ಯವನ್ನು ಕೊಂಡಾಡುತ್ತಾರೆ.

**ಕುನ್ರ್‍ಕುಡೈಯಾಯ್ ಎಡುತ್ತಾಯ್ ಗುಣಂಪೋತ್ತಿ**-ಗೋವರ್ಧನಗಿರಿಯನ್ನು ಛತ್ರಿಯಾಗಿ ಎತ್ತಿ ಹಿಡಿದು (ಗೋವುಗಳನ್ನು, ಗೋಕುಲದ ಬಾಲಕರನ್ನು) ಎಲ್ಲರನ್ನೂ ರಕ್ಷಿಸಿದ ನಿನ್ನ ಕರುಣಾಗುಣಕ್ಕೆ ಮಂಗಳವಾಗಲಿ.

ಇಲ್ಲಿ ಅವನ ಸೌಲಭ್ಯ, ಸೌಶೀಲ್ಯಾದಿ ಗುಣಗಳಿಗೆ ಮಂಗಳಾಶಾಸನ ಮಾಡುತ್ತಾರೆ. ಒಂದುಸಲ ಕೃಷ್ಣನ ಮೇಲೆ ಕೋಪಗೊಂಡು ಇಂದ್ರನು ಏಳು ದಿವಸ ನಿಲ್ಲದಂತೆ ಮಳೆಸುರಿಸಿ, ಎಲ್ಲರೂ ಕಷ್ಟಪಟ್ಟು ಪರಿತಪಿಸುವಂತೆ ಮಾಡಲು, ಶ್ರೀಕೃಷ್ಣಪರಮಾತ್ಮನು ತನ್ನ ಕಿರುಬೆರಳಿನಲ್ಲಿ ಗೋವರ್ಧನ ಗಿರಿಯನ್ನೇ ಛತ್ರಿಯ ಹಾಗೆ ಎತ್ತಿ ಹಿಡಿದು ಎಲ್ಲರನ್ನೂ ಕಾಪಾಡಿ ಇಂದ್ರನಿಗೆ ಗರ್ವಭಂಗ ಮಾಡಿದನು. ಆಗ ಇಂದ್ರನಿಗೆ ಜ್ಞಾನೋದಯವಾಗಿ ಅವನೇ ಬಂದು ಶ್ರೀಕೃಷ್ಣನಿಗೆ ಶರಣಾಗಿ ಅವನಿಗೆ 'ಗೋವಿಂದ' ಪಟ್ಟಾಭಿಷೇಕ ಮಾಡಿದನೆಂದು ಭಾಗವತದಲ್ಲಿ ತಿಳಿಸಿದೆ.

**ವೆನ್ರು ಪಹೈಕೆಡುಕ್ಕುಂನಿನ್‌ಕೈಯಿಲ್ ವೇಲ್ ಪೋತ್ತಿ** - ಶತ್ರುಗಳನ್ನು ಜಯಿಸಿ ನಿರಸನಮಾಡುವ ನಿನ್ನ ಕೈಯಲ್ಲಿರುವ ವೇಲಾಯುಧಕ್ಕೆ ಮಂಗಳವಾಗಲಿ - ಪೆರಿಯಾಳ್ವಾರ್ರು "ಅಪ್ಪಾಂಚಕ್ಕೆನ್ನಿಯಮುಂ ಪಲ್ಲಾಂಡೇ" ಎಂದು ಭಗವಂತನ ಕೈಯಲ್ಲಿರುವ ಆಯುಧಕ್ಕೆ ಮಂಗಳಾಶಾಸನ ಮಾಡಿರುವಂತೆ ಗೋದಾದೇವಿಯೂ ಇಲ್ಲಿ ವೇಲಾಯುಧಕ್ಕೆ ಮಂಗಳಾಶಾಸನ ಮಾಡಿದ್ದಾಳೆ.

**ಎನ್ರೆನ್ರ್ ಉನ್ ಶೇವಹಮೇ ಏತ್ತಿ ಪರೈಕೊಳ್ವಾನ್** - ಈ ರೀತಿಯಾಗಿ ನಿನ್ನ ಪರಾಕ್ರಮವನ್ನೆಲ್ಲಾ ಸ್ತುತಿಸುತ್ತಾ ಪುರುಷಾರ್ಥವನ್ನು ಪಡೆಯುವುದಕ್ಕಾಗಿ.

**ಇನ್ರು ಯಾಂವನ್ದೋಂ** - ಇಂದು ನಾವು ಬಂದಿದ್ದೇವೆ.

**ಇರಂಗು** - ನೀನು ಕೃಪೆಮಾಡು ಅಂದರೆ ನಿನಗೆ ಪಲ್ಲಾಂಡು ಪಾಡಿ ಮಂಗಳಾಶಾಸನ ಮಾಡುವುದೇ ನಮಗೆ ಪುರುಷಾರ್ಥ. ಅದನ್ನು ಹೊಂದಲು ಅಂದು, ಅಂದರೆ ಹಿಂದೆ ನೀನು ಮಾಡಿದ ಕರುಣಾಕಾರ್ಯಗಳಿಗೂ, ಪರಾಕ್ರಮಗಳಿಗೂ, ಕಲ್ಯಾಣಗುಣಗಳಿಗೂ, ಇಂದು ನಾವು ಪಲ್ಲಾಂಡುಪಾಡಿ ಮಂಗಳಾಶಾಸನ ಮಾಡಲು ಬಂದಿದ್ದೇವೆ. ನಿನ್ನ ಬರುವಿಕೆಗೆ ಕಾಯದೇ ನಾವೇ ನಿನ್ನ ಬಳಿ ಬಂದಿದ್ದೇವೆ. ಕೃಪೆ ಮಾಡು ಎಂದು ಪ್ರಾರ್ಥಿಸುತ್ತಾರೆ.

**ಏಲ್‌ಓರ್ ಎಂಪಾವಾಯ್** - ಹೀಗೆ ಮಾಡಿದರೆ ನಮ್ಮ ವ್ರತವು ಶುಭವಾಗಿಯೂ ಸಾಂಗವಾಗಿಯೂ ನೆರವೇರುವುದು.

ಈ ಪಾಶುರದ ಪ್ರತಿ ಒಂದು ಸಾಲಿನ ಮೊದಲು 'ಅನ್ರು' ಎಂಬುದನ್ನು ಸೇರಿಸಿ, ಕೊನೆಯಲ್ಲಿ 'ಇನ್ರುಯಾಂವನ್ದೋಂ ಇರಂಗು' ಎಂದು ಸೇರಿಸಿ ಅನುಸಂಧಾನ ಮಾಡಿದರೆ ಅನ್ರು - ಅಂದು ನೀನು ವಾಮನನಾಗಿ, ತ್ರಿವಿಕ್ರಮನಾಗಿ, ರಾಮನಾಗಿ, ಕೃಷ್ಣನಾಗಿ ಅವತರಿಸಿದ ಕಾಲದಲ್ಲಿ ಮಾಡಿದ್ದನ್ನೆಲ್ಲಾ ಇನ್ರು - ಇಂದು ನಾವು ಬಂದು ನಿನಗೆ ಮಂಗಳಾಶಾಸನ ಮಾಡುತ್ತೇವೆ. ನಮಗೆ ಕೃಪೆತೋರಿಸಿ ಕಾಪಾಡು ಎಂದು ಪ್ರಾರ್ಥಿಸಿದ್ದಾರೆ. ನಿನ್ನ ಬರುವಿಕೆಗಾಗಿ ಕಾಯದೆ ನಾವೇ ನಿನಗೆ ಮಂಗಳಾಶಾಸನ

ಮಾಡಲು ನಿನ್ನ ಬಳಿಗೆ ಬಂದಿದ್ದೇವೆ. ಕೃಪೆ ಮಾಡು. ನಮ್ಮ ಪ್ರಾರ್ಥನಾದಿಗಳು ಕೇವಲ ನಿನ್ನ ಕೈಂಕರ್ಯವಾಗಿ ಆಚರಿಸಲ್ಪಟ್ಟಿವೆಯೇ ವಿನಃ, ಅವು ನಮ್ಮ ಇಷ್ಟಾರ್ಥಸಿದ್ಧಿಗಾಗಿ ಸಾಧನೆಯಾಗಿ ಮಾಡಿದವುಗಳಲ್ಲ, ಅವು ಸಾಧನವೂ ಅಲ್ಲ. ನೀನೇ ನಿನ್ನ ಕೃಪಾಕಟಾಕ್ಷ ಬೀರಿ ನಮ್ಮನ್ನು ಕಾಪಾಡಬೇಕು ಎಂದು ಭಗವಂತನಿಗೆ ಮಂಗಳಾಶಾಸನ ಮಾಡಿ, ನಮಸ್ಕರಿಸಿ, ಅವನಲ್ಲಿ ಶರಣಾಗತಿ ಮಾಡುತ್ತಾರೆ.

## ಮಂಗಳಾಶಾಸನ

ಪರಮಾತ್ಮನ ಸಾಕ್ಷಾತ್ಕಾರ ಲಭಿಸುವುದಕ್ಕೆ ಮೊದಲು ಅವನನ್ನು ತಮಗೆ ಅದು ಬೇಕು, ಇದು ಬೇಕು ಎಂದು ಕೇಳಬೇಕೆಂದಿರುತ್ತಾರೆ. ಆದರೆ ಅವನ ದರ್ಶನ ಭಾಗ್ಯ ಲಭಿಸಿದ ಒಡನೆ ಅವನ ಸೌಂದರ್ಯ ನೋಡಿ, ಮೋಹಾವಿಷ್ಟರಾಗಿ ತಾವು ಕೇಳಬೇಕೆಂದಿರುವುದನ್ನೆಲ್ಲಾ ಮರೆತು, ಅವನಿಗೆ ಮಂಗಳಾಶಾಸನ ಮಾಡುವುದರಲ್ಲಿ ಪರವಶರಾಗುತ್ತಾರೆ ಎಂಬುದನ್ನು ಈ ಪಾಶುರವು ಸೂಚಿಸುತ್ತದೆ.

ಭಗವಂತನಿಗೆ ಎಲ್ಲಾ ಮಂಗಳವೂ ಉಂಟಾಗಲಿ ಎಂದು ಪ್ರಾರ್ಥಿಸುವುದೇ ಮಂಗಳಾಶಾಸನವು. ಇದೇ ಪಲ್ಲಾಂಡು ಎಂದೂ ಹೇಳಲ್ಪಟ್ಟಿದೆ. ಆದರೆ ಇದು ವಿಚಿತ್ರವಾಗಿ ಕಾಣಿಸುತ್ತದೆ. ಏಕೆಂದರೆ ಅಲ್ಪರೂ, ಅಜ್ಞರೂ ಆದ ನಾವು (ಚೇತನರು) ಸರ್ವಜ್ಞನೂ, ಸರ್ವಶಕ್ತನೂ, ಮಂಗಳರೂಪನೂ, ಅಮಂಗಳ ರಹಿತನೂ ಆದ ಪರಮಾತ್ಮನಿಗೆ ಮಂಗಳಾಶಾಸನ ಮಾಡುವುದು ಎಂಬುದು ಹೇಗೆ ಸರಿಯಾದೀತು ! ಎಂದರೆ

ಪರಮಾತ್ಮನಿಗೆ ಸೌಂದರ್ಯ, ಲಾವಣ್ಯಾದಿ ರೂಪಗಳಿಂದ ಕೂಡಿದ ದಿವ್ಯಮಂಗಳ ವಿಗ್ರಹವೂ ಮತ್ತು ಜ್ಞಾನ, ಶಕ್ತಿ, ವಾತ್ಸಲ್ಯ, ಸೌಶೀಲ್ಯಾದಿಗುಣಗಳಿಂದ ಕೂಡಿದ ಸ್ವರೂಪವೂ ಇದೆ. ಜ್ಞಾನಿಗಳಾದ ಭಕ್ತರು ಅವನ ರೂಪ, ಸ್ವರೂಪ ಎರಡನ್ನೂ ಅನುಭವಿಸುತ್ತಾರೆ. ಅವನ ಸ್ವರೂಪಗುಣಗಳಾದ ಜ್ಞಾನಶಕ್ತ್ಯಾದಿಗಳನ್ನು ಅನುಭವಿಸುವಾಗ ಅವನು ರಕ್ಷಕ,

ತಾವು ಅವನಿಂದ ರಕ್ಷಿಸಲ್ಪಡುವವರು ಎಂಬ ಸ್ಪಷ್ಟವಾದ ಜ್ಞಾನವುಳ್ಳವರಾಗಿ ತಮ್ಮನ್ನು ರಕ್ಷಿಸುವಂತೆ ಅವನನ್ನು ಪ್ರಾರ್ಥಿಸುತ್ತಾರೆ. ಇದು ಜ್ಞಾನ ದೆಶೆಯ ಕಾರ್ಯ. ಆದರೆ ಅವನ ರೂಪವನ್ನೂ, ಅವನ ದಿವ್ಯಮಂಗಳ ವಿಗ್ರಹದ ಸೌಂದರ್ಯಲಾವಣ್ಯಾದಿಗಳನ್ನೂ ಅನುಭವಿಸುವಾಗ, ಅವನ ಜ್ಞಾನಶಕ್ತ್ಯಾದಿಗಳನ್ನು ಮರೆತವರಾಗಿ, ಅವನ ಸುಕುಮಾರವಾದ ತಿರುಮೇನಿಗೆ ಯಾವುದಾದರೂ ತೊಂದರೆ ಉಂಟಾಗುವುದೋ ಎಂಬ ಭ್ರಮೆಹೊಂದಿ ಅವನಿಗೆ ಮಂಗಳಾಶಾಸನ ಮಾಡುತ್ತಾರೆ. ಇದು ಪ್ರೇಮದೆಶೆಯ ಕಾರ್ಯ.

ಜ್ಞಾನದ ದೆಶೆಯಲ್ಲಿ ಅವನು ರಕ್ಷಕ, ನಾವು ರಕ್ಷ್ಯರು; ಅವನು ಶೇಷಿ, ನಾವು ಶೇಷಭೂತರು ಎಂಬ ಭಾವ ಇರುತ್ತದೆ. ನವವಿಧ ಸಂಬಂಧದಲ್ಲಿ ಇವೆರಡೂ ಮುಖ್ಯವಾದವುಗಳು. ಆದರೆ ಪ್ರೇಮದೆಶೆಯಲ್ಲಿ ಶೇಷಿಯಾದ ಸ್ವಾಮಿಯಾದ ಅವನಿಗೆ ದಾಸರಾದ ನಾವು ನಮ್ಮ ಶೇಷತ್ವ ಸ್ವರೂಪಾನುಗುಣವಾಗಿ ಕೈಂಕರ್ಯಮಾಡಬೇಕು. ಮಂಗಳಾಶಾಸನಮಾಡುವುದೇ ನಾವು ಅವನ ಅವನಿಗೆ ಮಾಡುವ ಕೈಂಕರ್ಯ. ಇದು ಪ್ರೇಮದೆಶೆಯ ಕಾರ್ಯ. ರಕ್ಷಕರಕ್ಷ್ಯ ಭಾವ ಮಾರ್ಪಾಡಾಗಿ ಪರಮಾತ್ಮನಿಗೆ ಮಂಗಳಾಶಾಸನ ಮಾಡುತ್ತಾರೆ. ತಿರುಮಂತ್ರದಲ್ಲಿ 'ನಾರಾಯಣಾಯ' ಎಂಬ ಪದವು ಕೈಂಕರ್ಯವನ್ನು ತಿಳಿಸುತ್ತದೆ. ಅದನ್ನು ಕಾಯಾವಾಚಾಮನಸಾ ಮಾಡಬೇಕು. ಅದರಲ್ಲಿ ವಾಚಿಕ ಕೈಂಕರ್ಯವೇ ಮಂಗಳಾಶಾಸನ ಮಾಡುವುದು.

ಇದಕ್ಕೆ ನಿದರ್ಶನವನ್ನು ಅನೇಕ ಭಕ್ತರ ವಾಕ್ಯಗಳಲ್ಲಿ ಕಾಣಬಹುದು. ವೇದ ವೇದಾಂತವನ್ನು ಅರಿತ ಪೆರಿಯಾಳ್ವಾರ್ರವರು ಭಗವಂತನು ಗರುಡಾರೂಢನಾಗಿ ಬಂದು ಅವರಿಗೆ ದರ್ಶನವಿತ್ತಾಗ, ಅವನ ಸಾಕ್ಷಾತ್ಕಾರವನ್ನು ಪಡೆದ ತಕ್ಷಣ ಅವನ ದಿವ್ಯ ಮಂಗಳ ವಿಗ್ರಹದ ಸೌಂದರ್ಯದಲ್ಲಿ ಮುಳುಗಿದವರಾಗಿ, ಅವನ ಜ್ಞಾನಶಕ್ತ್ಯಾದಿಗಳನ್ನು ಮರೆತು, ಅವನಿಗೆ ಯಾವ ದೋಷವೂ ಉಂಟಾಗದಿರಲಿ ಎಂದು 'ಪಲ್ಲಾಂಡು ಪಲ್ಲಾಂಡು' ಎಂದು ಮಂಗಳಾಶಾಸನ ಮಾಡಿದ್ದಾರೆ.

ವಿಶ್ವಾಮಿತ್ರರು 'ಸ್ವಸ್ತಿರಾಘವಾಯ' ಎಂದು ಶ್ರೀರಾಮನಿಗೆ ಮಂಗಳಾಶಾಸನ ಮಾಡಿದ್ದಾರೆ. ಜಟಾಯು ಮಹಾರಾಜರು 'ಆಯುಷ್ಮಾನ್' ಎಂದು ಶ್ರೀರಾಮನನ್ನು ಹರಸಿದ್ದಾರೆ. ಇದೇ ರೀತಿ ಗೋಪಿಯರೂ ಶ್ರೀಕೃಷ್ಣನು ಎದುರಿಗೆ ಬರುತ್ತಲೇ ಅವನ ಸೌಂದರ್ಯದಲ್ಲಿ ಪರವಶರಾಗಿ ಮೈಮರೆತು ಕೂಡಲೇ ಅವನಿಗೆ ಅಡಿಪೋತ್ತಿ, ತಿರಲ್‌ಪೋತ್ತಿ ಎಂದೆಲ್ಲಾ ಹೇಳಿ ಈ ಪಾಶುರದಲ್ಲಿ ಮಂಗಳಾಶಾಸನ ಮಾಡಿದ್ದಾರೆ.

ಇದೂ ಅಲ್ಲದೆ ಶೇಷಿಯಾದ (ಸ್ವಾಮಿಯಾದ) ಪರಮಾತ್ಮನಿಗೆ ಒಳ್ಳೆಯದಾಗಲಿ ಎಂದು ಹಾರೈಸುವುದು ಶೇಷಭೂತನಾದ (ದಾಸನಾದ) ಚೇತನನ ಸ್ವರೂಪವಾಗಿದೆ. ಪರಮಾತ್ಮನಿಗೆ ಪಲ್ಲಾಂಡುಪಾಡುವುದೇ ಇವನಿಗೆ ಕೈಂಕರ್ಯವೂ ಪರಮ ಪುರುಷಾರ್ಥವೂ ಆಗಿದೆ. ಇಲ್ಲಿ ಗೋಪಿಯರು ಶ್ರೀಕೃಷ್ಣನ ಚರಣಕಮಲಗಳಿಗೂ, ಅವನ ಶೌರ್ಯ ಪರಾಕ್ರಮ, ಸೌಶೀಲ್ಯವಾತ್ಸಲ್ಯಾದಿ ಗುಣಗಳಿಗೂ ಮಂಗಳಾಶಾಸನ ಮಾಡಿದ್ದಾರೆ. ಅವುಗಳೆಲ್ಲಾ ಅವನ ಭಕ್ತರಕ್ಷಣಾಕಾರ್ಯಕ್ಕೆ ಸಹಕಾರಿಗಳಾಗಿವೆ ಮತ್ತು ಅವುಗಳಿಗೆ ಮಂಗಳಾಶಾಸನ ಮಾಡಿದರೆ ಅವುಗಳನ್ನು ಪಡೆದಿರುವ ಪರಮಾತ್ಮನಿಗೇ ಮಂಗಳಕೋರಿದಂತೆ ಆಗುತ್ತದೆ. ಆದ್ದರಿಂದ ಅವರು ಭಗವಂತನ ಅಡಿದಾವರೆಗಳಿಗೂ, ಅವನ ಕಲ್ಯಾಣಗುಣಗಳಿಗೂ, ಆಯುಧಗಳಿಗೂ ಈ ಪಾಶುರದಲ್ಲಿ ಮಂಗಳಾಶಾಸನ ಮಾಡಿದ್ದಾರೆ. ಇರಂಗು - ಕೃಪೆಮಾಡು ಎನ್ನುತ್ತಾರೆ. ಪರಮಾತ್ಮನೇ ಕೃಪೆ ಮಾಡಬೇಕೇ ವಿನಹ ಚೇತನರು ಮಾಡುವ ನಮಸ್ಕಾರ, ಮಂಗಳಾಶಾಸನ, ಶರಣಾಗತಿಗಳಾವುವೂ ಉಪಾಯವಾಗಲಾರವು. ಅವನೇ ಉಪಾಯ. ಅವನೇ ಕೃಪೆ ಮಾಡಿ ರಕ್ಷಿಸಬೇಕು. ಆದ್ದರಿಂದ ಗೋಪಿಯರು ಈ ಪಾಶುರದಲ್ಲಿ ಅವನ ಕೃಪೆಯನ್ನು ಪ್ರಾರ್ಥಿಸುತ್ತಾರೆ.

ಭಗವಂತನಿಗೆ ನಮಸ್ಕಾರ ಮಾಡುವಾಗ ಪೆರಿಯಾಳ್ವಾರ್‌ರವರ 'ಪಲ್ಲಾಂಡು' ಎಂಬ ಪಾಶುರವನ್ನೂ, ಗೋದಾದೇವಿಯ ತಿರುಪ್ಪಾವೈಯ 'ಅನ್ರು' ಎಂಬ ಈ 24ನೆಯ ಪಾಶುರವನ್ನೂ ಅನುಸಂಧಾನ ಮಾಡಬೇಕೆಂದು ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.

# ಪಾಶುರ - 25

ಈ ಪಾಶುರದಲ್ಲಿ ಕೈಂಕರ್ಯ ಪುರುಷಾರ್ಥವನ್ನು ಕರುಣಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ. 'ಉನ್ನೈ ಅರುತ್ತಿತ್ತಿವಂದೋಂ' ಅಂದರೆ ನಿನ್ನನ್ನೇ ಪರಮ ಪ್ರಯೋಜನವಾಗಿ ಹೊಂದಿ, ನಿನಗೆ ಕೈಂಕರ್ಯ ಮಾಡಲು ಬಂದಿದ್ದೇವೆ. ಅದೇ ನಮಗೆ ಪರಮ ಪುರುಷಾರ್ಥ. ನೀನೇ ನಮ್ಮ ಪಾಪಗಳನ್ನು ಹೋಗಲಾಡಿಸಿ ಆ ಪುರುಷಾರ್ಥವನ್ನು ನಮಗೆ ಕೃಪೆ ಮಾಡಿ ಅನುಗ್ರಹಿಸಬೇಕು ಎಂದು ಪ್ರಾರ್ಥಿಸುತ್ತಾರೆ.

ಒರುತ್ತಿ ಮಗನಾಯ್ ಪ್ಪಿರಂದ್ ಓರಿರವಿಲ್
ಒರುತ್ತಿ ಮಗನಾಯೊಳಿತ್ತ್ ವಳರ
ಧರಿಕ್ಕಿಲಾನಾಹಿತ್ತಾನ್ ತೀಂಗು ನಿನ್ನೆಂದ
ಕರುತ್ತೈ ಪ್ಪಿಳೈಪಿತ್ತ್ ಕಂಜನ್ ವಯಿತ್ತಿಲ್
ನೆರುಪ್ಪೆನ್ನ ನಿನ್ರ ನೆಡುಮಾಲೇ ಉನ್ನೈ
ಅರುತ್ತಿತ್ತುವನ್ದೋಂ ಪರೈತರುದಿಯಾಹಿಲ್
ತಿರುತ್ತಕ್ಕ ಶೆಲ್ವಮುಂ ಶೇವಹಮುಂ ಯಾಂಪಾಡಿ
ವರುತ್ತಮುಂ ತೀರ್ನ್ದ್ ಮಹಿಳ್ನ್ದೇಲೋ ರೆಮ್ಬಾವಾಯ್

"ಶ್ರೀಕೃಷ್ಣ ಪರಮಾತ್ಮನು ಅದ್ವಿತೀಯಳಾದ ದೇವಕಿಗೆ ಮಗನಾಗಿ ಜನಿಸಿ ಒಂದೇ ರಾತ್ರಿಯಲ್ಲಿ ಅದ್ವಿತೀಯಳಾದ ಯಶೋದೆಯ ಬಳಿ ಹೋಗಿ ಸೇರಿ ಅವಳ ಮಗನಂತೆ ರಹಸ್ಯವಾಗಿ ಬೆಳೆಯುತ್ತಿರಲು, ಅದನ್ನು ಸಹಿಸಲಾರದವನಾಗಿ (ಕೃಷ್ಣನಿಗೆ) ಕೇಡನ್ನು ಬಯಿಸಿದವನ (ಕಂಸನ) ಕೆಟ್ಟ ಮನೋಭಾವವನ್ನು ನಾಶಪಡಿಸಿ, ಕಂಸನ ಉದರದಲ್ಲಿ ಬೆಂಕಿಯಂತೆ ಸುಡುತ್ತಾ ನಿಂತ ಆಶ್ರಿತ

ವ್ಯಾಮೋಹವುಳ್ಳ ಶ್ರೀಕೃಷ್ಣನೇ ! ನಿನ್ನನ್ನು ಪ್ರಾರ್ಥಿಸುತ್ತಾ ನಿನ್ನ ಬಳಿಗೆ ಬಂದಿದ್ದೇವೆ. ನೀನು ಪರೈ ಎಂಬ ವಾದ್ಯವನ್ನು (ಕೈಂಕರ್ಯ ಪುರುಷಾರ್ಥವನ್ನು) ನಮಗೆ ಕೊಟ್ಟರೆ ಶ್ರೀದೇವಿಗೆ ಯೋಗ್ಯವಾದ ನಿನ್ನ ಸಂಪತ್ತನ್ನೂ ಪರಾಕ್ರಮವನ್ನೂ ನಾವು ಹಾಡಿ (ಕೀರ್ತನೆಮಾಡಿ) ನಮ್ಮ ದುಃಖಗಳನ್ನೆಲ್ಲಾ ಹೋಗಲಾಡಿಸಿಕೊಂಡು ಆನಂದವನ್ನು ಹೊಂದುವೆವು - ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

ಈ ಪಾಶುರದಲ್ಲಿ ಕೃಷ್ಣಾವತಾರದ ಮಹಾತ್ಮೆಯನ್ನು ವಿವರಿಸಿದ್ದಾರೆ.

**ಒರುತ್ತಿ ಮಗನಾಯ್ ಪಿರಂದ್** - ಅಸದೃಶಳಿಂದ ಒಬ್ಬ ತಾಯಿಗೆ (ದೇವಕಿಗೆ) ಪುತ್ರನಾಗಿ ಅವತರಿಸಿ (ಜನಿಸಿ) -

**ಓರ್ ಇರವಿಲ್ ಒರುತ್ತಿಮಗನಾಯ್ ಒಳಿತ್ತು ವಳರ** - ಅಸದೃಶವಾದ ಒಂದು ರಾತ್ರಿಯಲ್ಲಿ ಅಸದೃಶಳಾದ ಯಶೋದೆಗೆ ಮಗನಾಗಿ ರಹಸ್ಯವಾಗಿ ಬೆಳೆಯುತ್ತಿರಲು -

**ಒರುತ್ತಿ** - ದೇವಕಿ, ಯಶೋದೆ ಇಬ್ಬರೂ ಅನುಪಮರು, ಅವರ ಹಾಗೆ ಮತ್ತೊಬ್ಬರಿಲ್ಲ. ಇಬ್ಬರೂ ಪರಮಾತ್ಮನ ಸೌಲಭ್ಯವನ್ನು ಅನುಭವಿಸಿದ್ದಾರೆ. ಆದರೆ ಇಬ್ಬರ ಅನುಭವವೂ ಬೇರೆ ಬೇರೆಯಾಗಿದೆ. ದೇವಕಿ ತಪಸ್ಸು ಮಾಡಿ ಕೃಷ್ಣನನ್ನು ಮಗನಾಗಿ ಪಡೆದಳು. ಹುಟ್ಟುತ್ತಲೇ ಅವಳಿಗೆ ಮಗನಾಗಿ ಸೇವೆ ಮಾಡಿದ ಶ್ರೀಕೃಷ್ಣ, ಶಂಖ ಚಕ್ರ ಗದಾಧರನಾಗಿ ಹುಟ್ಟಿ, ಅವಳಿಗೆ ಪರಮಾತ್ಮನಾಗಿ ದರ್ಶನವಿತ್ತು, ಆವಳು ಹೇಳಿದಂತೆಯೇ ಅವುಗಳನ್ನು ಮರೆಸಿಕೊಂಡು ಅವಳಿಗೆ ಕಂಸನ ಭಯ ತಪ್ಪಿಸಲು ಅದೇ ರಾತ್ರಿ ನಂದಗೋಕುಲಕ್ಕೆ ಹೋಗಿ, ಅಲ್ಲಿ ಬೆಳೆದು, ಕೊನೆಗೆ ಕಂಸನನ್ನು ಸಂಹರಿಸಿ, ತನ್ನ ತಂದೆ ತಾಯಿಗಳ ಬಂಧನವನ್ನು ಬಿಡಿಸಿದನು. ಅವತಾರ ರಸಾನುಭವ ದೇವಕಿ ಒಬ್ಬಳಿಗೇ, ಇವಳ ವೈಭವ ಯಶೋದೆಗೆ ಇಲ್ಲ, ಆದ್ದರಿಂದ ಇವಳು ಒರುತ್ತಿ ಅಂದರೆ ಒಬ್ಬಳೇ ಅಂದರೆ ಅಸದೃಶಳಾದವಳು.

ಯಶೋದೆಗೆ ಶ್ರೀಕೃಷ್ಣನು ಮಗನಾಗಿ ಹುಟ್ಟದಿದ್ದರೂ ಅವಳ ಹತ್ತಿರ ಮಗನಂತೆ ಬೆಳೆದನು. ಅವನ ಬಾಲಲೀಲೆಗಳನ್ನೆಲ್ಲಾ ಅನುಭವಿಸಿ ಆನಂದ ಪಟ್ಟವಳು ಯಶೋದೆ. ಭಗವಂತನ ಬಾಲ ಲೀಲೆಗಳ ರಸಾನುಭವ ದೇವಕಿಗೆ ಇಲ್ಲ. ಇವಳ ವೈಭವ ಇವಳೊಬ್ಬಳಿಗೇ, ಆದ್ದರಿಂದ ಇವಳೂ ಒರುತ್ತಿ ಅಂದರೆ ಒಬ್ಬಳೇ ಅಂದರೆ ಅಸದೃಶಳಾದವಳು ಎಂದು ಅರ್ಥ.

ಪರಬ್ರಹ್ಮನು ಈ ಜಗತ್ತನ್ನು ಸೃಷ್ಟಿಸಿ ಅದರಲ್ಲಿರುವ ಎಲ್ಲಾ ಚೇತನಾಚೇತನ ವಸ್ತುಗಳಲ್ಲಿ ಅಂತರಾತ್ಮನಾಗಿ ಇದ್ದುಕೊಂಡು, ಎಲ್ಲವನ್ನು ಧರಿಸಿ ನಿಯಮಿಸುತ್ತಿದ್ದಾನೆಂದು ಉಪನಿಷತ್ತು ತಿಳಿಸುತ್ತದೆ. ಇದನ್ನೇ ಅಂದರೆ ಈ ಜಗತ್ತನ್ನೆಲ್ಲಾ ತಾನೇ ಸೃಷ್ಟಿಸಿ, ಒಂದೇ ಹಾರದಲ್ಲಿರುವ ಮಣಿಗಳನ್ನು ಒಂದು ದಾರವು ಧರಿಸಿರುವಂತೆ ಈ ಜಗತ್ತನ್ನೆಲ್ಲಾ ತಾನೇ ಧರಿಸಿ ರಕ್ಷಿಸುತ್ತಿರುವುದಾಗಿ ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ತಿಳಿಸಿರುವುದರಿಂದ ಶ್ರೀಕೃಷ್ಣನೇ ವೇದದಲ್ಲಿ ತಿಳಿಸಿರುವ ಪರಮಾತ್ಮನಾಗಿರಬೇಕೆಂದು ತಿಳಿಯ ಬರುತ್ತದೆ. ಇಂತಹ ಜಗತ್ಕಾರಣ ವಸ್ತುವನ್ನೇ ತನಗೆ ಪುತ್ರನನ್ನಾಗಿ ಪಡೆದ ದೇವಕಿಗೂ, ಅವನನ್ನು ಮಗನಾಗಿ ಆಡಿಸಿದ ಯಶೋದೆಗೂ ಸಮನಾದವರು ಬೇರೆಯಾರೂ ಇಲ್ಲ. ಆದ್ದರಿಂದ ಇಬ್ಬರನ್ನೂ ಒರುತ್ತಿ ಅಂದರೆ ಅಸದೃಶರು ಎಂದಿದ್ದಾರೆ.

**ಓರ್ ಇರವಿಲ್ ಒರುತ್ತಿ ಮಹನಾಯ್ ಒಳಿತ್ತು ವಳರ** - ಕೃಷ್ಣನು ಅವತರಿಸಿದ ರಾತ್ರಿ ಒಂದು ಅಸದೃಶವಾದ ರಾತ್ರಿ. ಒಂದೇ ರಾತ್ರಿಯಲ್ಲಿ ಯಶೋದೆಯ ಬಳಿಗ ಹೋಗಿ ಸೇರಿ ಅಲ್ಲಿ ರಹಸ್ಯವಾಗಿ ಬೆಳೆದನು.

**ಪಿರಂದ್** - ಹುಟ್ಟಿ - ದಶರಥನು ತಪಸ್ಸುಮಾಡಿ ನಾಲ್ವರು ಮಕ್ಕಳನ್ನು ಪಡೆದನು. ಆದರೆ ದೇವಕಿ, ವಸುದೇವ, ಯಶೋದೆ, ನಂದಗೋಪ ಈ ನಾಲ್ಕು ಜನರೂ ತಪಸ್ಸು ಮಾಡಿ ಒಬ್ಬ ಮಗ ಶ್ರೀಕೃಷ್ಣನನ್ನು ಪಡೆದರು. ಭಗವಂತನು ದುಷ್ಟಶಿಕ್ಷಣ ಶಿಷ್ಟಪರಿಪಾಲನಕ್ಕಾಗಿ ಅವತಾರ ಎತ್ತುವುದಾಗಿಯೂ ಅವನ ಅವತಾರ

ರಹಸ್ಯವನ್ನರಿತವರಿಗೆ ಪುನರ್ಜನ್ಮವಿಲ್ಲವೆಂದೂ ಗೀತೆಯಲ್ಲಿ ಹೇಳಿದೆ. ಭಕ್ತರನ್ನು ಪರಿಪಾಲಿಸುವುದಕ್ಕಾಗಿಯೇ ಪರಮಾತ್ಮನು ದೇವಕಿಗೆ ಪುತ್ರನಾಗಿ ಕೃಷ್ಣನಾಗಿ ಅವತರಿಸಿ, ನಂದಗೋಕುಲದಲ್ಲಿ ಯಶೋದೆಯ ಬಳಿ ರಹಸ್ಯವಾಗಿ ಬೆಳೆದನು.

**ಧರಿಕ್ಕ ಲಾನಾಹಿತ್ತಾನ್ ತೀಂಗುನಿನ್ನೆಂದ ಕರುತ್ತೈ ಪಿಳೈಪಿತ್ತು ಕಂಜನ್ ವಯಿತ್ತಿಲ್ ನೆರುಪ್ಪೆನ್ನನಿನ್ರ** :- ಕೃಷ್ಣನ ಜನನವನ್ನು ಸಹಿಸಲಾರದವನಾಗಿ, ಕೃಷ್ಣನಿಗೆ ಕೇಡನ್ನು ಬಯಸಿದ ಕಂಸನ ಕೆಟ್ಟ ಮನೋಭಾವದ ಪ್ರಯತ್ನಗಳನ್ನೆಲ್ಲಾ ವ್ಯರ್ಥಗೊಳಿಸಿ, ನಾಶಮಾಡಿ, ಅವನ ಉದರದಲ್ಲಿ ಬೆಂಕಿಯಂತೆ ಉರಿಯುತ್ತಾನಿಂತ ಶ್ರೀಕೃಷ್ಣನೇ:- ಕೃಷ್ಣನಿಗೆ ಕೇಡು ಬಯಸಿ ಕಂಸನು ಪೂತನಿ, ಶಕಟಾಸುರ, ವತ್ಸಾಸುರ, ಮುಂತಾಗಿ ಅನೇಕ ರಾಕ್ಷಸರುಗಳನ್ನು ಕಳುಹಿಸಿದರೂ ಅವರೆಲ್ಲರೂ ಸಂಹರಿಸಲ್ಪಟ್ಟು ಅವನ ಪ್ರಯತ್ನಗಳೆಲ್ಲವೂ ನಿಷ್ಫಲವಾದವು. ಇದರಿಂದ ಕಂಸನ ಹೃದಯದಲ್ಲಿ ಸದಾ ಕೃಷ್ಣನ ಭಯ ಇದ್ದೇ ಇದ್ದಿತು. ಅದು ಅವನನ್ನು ಬೆಂಕಿಯಂತೆ ದಹಿಸುತ್ತಿತ್ತು. ಹೀಗೆ ಪರಮಾತ್ಮನು ಶತ್ರುಗಳ ಹೃದಯದಲ್ಲಿ ಬೆಂಕಿಯಂತೆ ಇರುತ್ತಾನೆ.

**ನೆಡುಮಾಲೆ** :- ವ್ಯಾಮೋಹವುಳ್ಳ ಕೃಷ್ಣನೇ - ಆಶ್ರಿತರಲ್ಲಿ ಅತ್ಯಂತ ವ್ಯಾಮೋಹವುಳ್ಳವನೇ ಎಂದು ಗೋಪಿಗಳು ಕೃಷ್ಣನ್ನು ಕರೆಯುತ್ತಾರೆ. ಮಾಲ್ ಎಂದರೆ ಇಲ್ಲಿ ಪ್ರೇಮ ಅಥವಾ ಮೋಹ ಎಂದು ಅರ್ಥ. ನೆಡುಮಾಲ್ ಎಂದರೆ ಆಶ್ರಿತರಾದ ಭಕ್ತರಲ್ಲಿ ಮೋಹಗೊಳ್ಳುವುದನ್ನೇ ಸ್ವಭಾವವಾಗಿ ಉಳ್ಳವನೇ ಎನ್ನುತ್ತಾರೆ. ಅಂದರೆ ಪರಮಾತ್ಮನು ಆಶ್ರಿತರಾದ ಭಕ್ತರಲ್ಲಿ ಅತ್ಯಂತ ಪ್ರೇಮವುಳ್ಳವನಾಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಿದ್ದಾಳೆ.

**ಉನ್ನೈ ಅರುತ್ತಿತ್ತುವನ್ದೋಂ** - ನಿನ್ನನ್ನು ಪ್ರಾರ್ಥಿಸಿ ನಿನ್ನ ಬಳಿಗೆ ಬಂದಿದ್ದೇವ. ನಿನ್ನನ್ನೇ ಪ್ರಯೋಜನವಾಗಿ ಹೊಂದಿ ನಿನ್ನ ಬಳಿಗೆ ಬಂದಿದ್ದೇವೆ ಎನ್ನುತ್ತಾರೆ. ನಾವು ಪರೈ ಎಂಬ ವಾದ್ಯವನ್ನು ನಮಗೆ ದಯಪಾಲಿಸಬೇಕೆಂದು ಇಂದಿನವರೆಗೆ ಪ್ರಾರ್ಥಿಸುತ್ತಿರುವುದೆಲ್ಲಾ ಕೇವಲ ವ್ಯಾಜ ಮಾತ್ರವಾದುದಾಗಿದೆ. ನಮಗೆ

ಬೇಕಾಗಿರುವುದು ನೀನೇ. ನೀನು ಹೊಸದಾಗಿ ಬೇರೆ ಅವತಾರ ಮಾಡಿ ರಾಕ್ಷಸರ ಸಂಹಾರ ಮಾಡಬೇಕಾಗಿಲ್ಲ; ನಮಗೆ ನಿನ್ನ ದರ್ಶನವಿತ್ತರೆ ಸಾಕು. ಅಂದರೆ ನಮಗೆ ನೀನೇ ನಿನ್ನನ್ನು ತೋರಿಸಿ, ನಿನ್ನ ದರ್ಶನವನ್ನು ನಮಗೆ ದಯಪಾಲಿಸಬೇಕು ಎನ್ನುತ್ತಾರೆ ಎಂಬುದು ಇದರಲ್ಲಿ ಅಡಗಿರುವ ವಿಶೇಷಾರ್ಥ.

ಗೀತೆಯಲ್ಲಿ ಶ್ರೀಕೃಷ್ಣನು ತನ್ನನ್ನು ಭಜಿಸುವ ಭಕ್ತರು ಆರ್ತ, ಅರ್ಥಾರ್ಥಿ ಜಿಜ್ಞಾಸು ಮತ್ತು ಜ್ಞಾನಿ ಎಂದು ನಾಲ್ಕು ವಿಧವಾಗಿ ಇದ್ದಾರೆ ಎಂದೂ, ಅವರಲ್ಲಿ ತನ್ನನ್ನು ಹೊಂದಲು ಆಸೆ ಪಡುವ ಜ್ಞಾನಿಯೇ ಎಲ್ಲರಿಗಿಂತ ಮೇಲಾದವನು ಎಂದೂ ತಿಳಿಸಿದ್ದಾನೆ. ಗೋಪಿಗಳು ಈ ನಾಲ್ಕನೆಯ ಜ್ಞಾನಿಗಳ ಗುಂಪಿಗೆ ಸೇರಿದವರು. ಅವರಿಗೆ ಭಗವದನುಭವವೇ ಪುರುಷಾರ್ಥವಾಗಿದ್ದಿತು. ಬೇರೆಯಾವುದನ್ನೂ ಅವರು ಅಪೇಕ್ಷಿಸಲಿಲ್ಲ. ಆದರೆ ಅವರಿಗೆ ಕೃಷ್ಣಾನುಭವ ಪರೋಕ್ಷನುಭವವಾಗಿರದೆ ಅಂದರೆ ಆಚಾರ್ಯ ಮುಖೇನ ಕಿವಿಯಲ್ಲಿ ಕೇಳಿದ ಅಥವಾ ಸದ್ಗ್ರಂಥಗಳ ಪಠಣ ಶ್ರವಣಾದಿಗಳಿಂದ ಉಂಟಾದ ಅನುಭವವಾಗಿರದೆ ಪ್ರತ್ಯಕ್ಷಾನುಭವವಾಗಿದ್ದಿತು. ಏಕೆಂದರೆ ಅದು ಶ್ರೀಕೃಷ್ಣನು ಅವತರಿಸಿದ ಕಾಲವಾಗಿದ್ದಿತು. ಆದ್ದರಿಂದ ಅವರು ನಿನ್ನನ್ನೇ ಪರಮ ಪ್ರಯೋಜನವಾಗಿ ಹೊಂದಿ ನಿನ್ನ ಆನಂದಕ್ಕಾಗಿಯೇ (ನಿನ್ನ ಮುಖೋಲ್ಲಾಸಕ್ಕಾಗಿಯೇ) ನಿನಗೆ ಸೇವೆ ಸಲ್ಲಿಸುವುದನ್ನೇ ನಿನ್ನ ಕೈಂಕರ್ಯವನ್ನೇ ಪರಮ ಪುರುಷಾರ್ಥವಾಗಿ ಆಸೆಪಟ್ಟು, ನಿನ್ನನ್ನೇ ಪ್ರಾರ್ಥಿಸಿ ಬಂದಿದ್ದೇವೆ ಎಂದು ತಮ್ಮ ಪುರುಷಾರ್ಥವನ್ನು ಇಲ್ಲಿ ಸೂಚಿಸಿದ್ದಾರೆ. ಅದು ಯಾವುದು ಎಂಬುದನ್ನು ಮುಂದೆ 29ನೇ ಪಾಶುರದಲ್ಲಿ ವ್ಯಕ್ತವಾಗಿ ತಿಳಿಸುತ್ತಾರೆ .

**ಪರೈತರುದಿಯಾಹಿಲ್** :- ನೀನು ಪರೈ ಎಂಬ ವಾದ್ಯವನ್ನು ನಮಗೆ ಕೊಟ್ಟರೆ – ಅಂದರೆ ನಮಗೆ ಭಗವತ್‌ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸಿದರೆ ಎಂಬುದು ವಿಶೇಷಾರ್ಥ.

**ತಿರುತ್ತಕ್ಕ ಶೆಲ್ವಮುಂ ಶೇವಹಮುಂಯಾಂಪಾಡಿ** :- ಶ್ರೀದೇವಿಗೆ ಯೋಗ್ಯವಾದ ನಿನ್ನ ಸಂಪತ್ತನ್ನೂ, ಪರಾಕ್ರಮವನ್ನೂ ನಾವು ಹಾಡಿ, ಸಂಕೀರ್ತನೆ ಮಾಡಿ, ಶ್ರಿಯಃಪತಿಯಾದ ನಿನ್ನ ಉಭಯವಿಭೂತಿ, ಐಶ್ವರ್ಯ-ಶೌರ್ಯ ವೀರ್ಯಾದಿಗುಣಗಳನ್ನು ರಾಗ ಪ್ರೇರಿತರಾಗಿ ಹಾಡಿ. –

**ವರುತ್ತಮುಂತೀರ್ನ್ದ್ ಮಹಿಳ್ನ್ದ್** :- ನಿನ್ನ ವಿಯೋಗದಿಂದ ಉಂಟಾಗಿರುವ ನಮ್ಮ ದುಃಖಗಳನ್ನು ಹೋಗಲಾಡಿಸಿಕೊಂಡು, ಆನಂದವನ್ನು ಹೊಂದುವಂತೆ ನೀನು ಅನುಗ್ರಹಮಾಡು ಎಂದು ಪ್ರಾರ್ಥಿಸುತ್ತಾರೆ. ಕಂಸನನ್ನು ಸಂಹರಿಸಿದಂತೆ ನಮ್ಮ ಪಾಪಗಳನ್ನೂ ದುಃಖಗಳನ್ನೂ ನಾಶಮಾಡಿ, ನಾವು ನಿನ್ನನ್ನು ಹೊಂದಿ ಸಂತೋಷಗೊಳ್ಳುವಂತೆ ಅನುಗ್ರಹಿಸು ಎಂದು ಪರಮಪುರಷಾರ್ಥವನ್ನು ಪ್ರಾರ್ಥಿಸುತ್ತಾರೆ.

**ಏಲೋ ಎಂಪಾವಾಯ್** :- ಹೀಗೆ ಮಾಡಿದೆಯಾದರೆ ನಮ್ಮ ವ್ರತವು ಶುಭವಾಗಿ ನೆರವೇರುವುದು, ಈ ಪಾಶುರದಲ್ಲಿ 'ಒರುತ್ತಿಮಹನಾಯ್ ಪಿರಂದ್ ಒರುತ್ತಿಮಹನಾಯ್ ಒಳಿತ್ತ್‌ವಳರ' ಎಂಬುದಕ್ಕೆ 'ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರ ಮಂತ್ರದಲ್ಲಿ ಅವತರಿಸಿ, 'ಓಂ ನಮೋ ಭಗವತೇ ವಾಸುದೇವಾಯ' ಎಂಬ ದ್ವಾದಶಮಂತ್ರದಲ್ಲಿ ಪ್ರತಿಪಾದ್ಯನಾಗಿ, ಸರ್ವರಿಗೂ ಕಾಣಿಸದಂತೆ ಸರ್ವರಲ್ಲಿಯೂ ಅಂತರಾತ್ಮನಾಗಿ ಪ್ರಕಾಶಿಸುತ್ತಾ ವಿಮುಖರಾಗಿರುವ ಶತ್ರುಗಳಿಗೆ ಬೆಂಕಿಯಂತೆ ಸುಡುತ್ತಲೂ, ಆಶ್ರಿತರಾದ ಭಕ್ತರಲ್ಲಿ ಅತ್ಯಂತ ಪ್ರೇಮ ಮತ್ತು ವ್ಯಾಮೋಹವುಳ್ಳವನಾಗಿಯೂ ಇರುವ ನಿನ್ನನ್ನೇ ಪ್ರಾರ್ಥಿಸಿ, ನಿನ್ನ ಬಳಿಗೆ ಬಂದಿದ್ದೇವೆ. ನೀನು ನಮಗೆ ಪರಮ ಪುರುಷಾರ್ಥವನ್ನು ಕರುಣಿಸಿದೆಯಾದರೆ, ಆಗ ನಮ್ಮ ವ್ರತವು ಶುಭವಾಗಿ ನೆರವೇರುವುದು ಎಂದು ಪ್ರಾರ್ಥಿಸುತ್ತಾರೆ ಎಂಬ ಒಂದು ವಿಶೇಷಾರ್ಥವು ಇಲ್ಲಿ ತಿಳಿಸಲ್ಪಟ್ಟಿದೆ.

## ಪಾಶುರ - 26

ಈ ಕೊನೆಯ ಐದು ಪಾಶುರಗಳು ಅಂದರೆ - ಮಾಲೆ ಮಣಿವಣ್ಣಾ ಎಂಬ ಈ 26ನೇ ಪಾಶುರದಿಂದ 30ನೇ ಪಾಶುರದವರೆಗಿನ 5 ಪಾಶುರಗಳು ಪರಮಾತ್ಮನಲ್ಲಿ ಕೈಂಕರ್ಯವನ್ನು ಪ್ರಾರ್ಥಿಸುವ ಪಾಶುರಗಳಾಗಿವೆ. ತಿರುಮಂತ್ರದ 'ನಾರಾಯಣಾಯ' ಎಂಬ ಪದದ ಅರ್ಥವನ್ನು ವಿವರಿಸುತ್ತವೆ.

ಈಗ ಈ 26ನೇ ಪಾಶುರದಲ್ಲಿ ಭಗವತ್ಕೈಂಕರ್ಯರೂಪವಾಗಿ ಆಚರಿಸುವ ಈ ವ್ರತಾನುಷ್ಠಾನಕ್ಕೆ ತಮಗೆ ಬೇಕಾದ ಅಪೇಕ್ಷಿತಗಳನ್ನು (ಉಪಕರಣಗಳನ್ನು) ಅನುಗ್ರಹಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ.

**ಮಾಲೇ ! ಮಣಿವಣ್ಣಾ ! ಮಾರ್ಗಳಿ ನೀರಾಡುವಾನ್**
**ಮೇಲೈಯಾರ್ ಶೆಯ್‌ವನಹಳ್ ವೇಣ್ಣು ವನಕೇಟ್ಟಿಯೇಲ್**
**ಞಾಲತ್ತೈಯೆಲ್ಲಾಂ ನಡುಂಗ ಮುರಲ್ವನ**
**ಪಾಲನ್ನ ವಣ್ಣತ್ತುನ್ ಪಾಂಚಜನ್ನಿಯಮೇ**
**ಪೋಲ್ವನ ಶಂಗಂಗಳ್ ಪೋಯ್‌ಪ್ಪಾಡುಡೈಯನವೇ**
**ಶಾಲಪ್ಪೆರುಂಪರೈಯೇ ಪಲ್ಲಾಂಡಿ ಶೈಪ್ಪಾರೇ**
**ಕೋಲವಿಳಕ್ಕೇ ಕೊಡಿಯೇ ವಿತಾನಮೇ**
**ಆಲಿನಿಲೈಯಾಯ್ ! ಅರುಳೇಲೋ ರೆಂಬಾವಾಯ್**

"ಆಶ್ರಿತರಲ್ಲಿ ವ್ಯಾಮೋಹವುಳ್ಳವನೇ ! ಮಾಣಿಕ್ಯ ಮಣಿಯಂತೆ ಪ್ರಕಾಶವಾದ ಬಣ್ಣವುಳ್ಳವನೇ ! ಮಾರ್ಗಳಿ ನೀರಾಟ್ಟವೆಂಬ ವ್ರತವನ್ನು ಆಚರಿಸಲು ಬಂದಿದ್ದೇವೆ. ಹಿರಿಯರು ಆಚರಿಸಿದ ಈ ವ್ರತಕ್ಕೆ ಬೇಕಾದವುಗಳು ಏನು ಎಂದು ಕೇಳಿದರೆ - ಈ ಭೂಮಂಡಲವೆಲ್ಲವೂ ನಡುಗುವಂತೆ ಘೋಷಿಸುವ, ಹಾಲಿನ ಬಣ್ಣದಂತೆ

ಬೆಳ್ಳಗಿರುವ ನಿನ್ನ ಪಾಂಚಜನ್ಯವನ್ನು ಹೋಲುವ ಶಂಖಗಳೂ, ಒಳಗೆ ವಿಶಾಲವಾದ ಬಹಳ ದೊಡ್ಡದಾದ ಭೇರಿ ವಾದ್ಯವೂ, ಭಗವಂತನಿಗೆ ಮಂಗಳಾಶಾಸನ ಮಾಡುವವರೂ, ಮಂಗಳ ದೀಪಗಳೂ, ಬಾವುಟಗಳೂ, ಮೇಲು ಹೊದಿಕೆಗಳೂ ಇವುಗಳೆಲ್ಲವನ್ನೂ, ಆಲದೆಲೆಯಮೇಲೆ ಮಲಗಿರುವ ವಟಪತ್ರ ಶಾಯಿಯೇ ! ನೀನು ಕೃಪೆ ತೋರಿಸಿ ನಮಗೆ ಅನುಗ್ರಹಿಸು. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ **ವಾಕ್ಯಾರ್ಥ.**

**ಮಾಲೇ ಮಣಿವಣ್ಣಾ - ಮಾಲೇ** :- ಆಶ್ರಿತರಲ್ಲಿ ಅತ್ಯಂತ ವ್ಯಾಮೋಹ ವುಳ್ಳವನೇ - ಇಲ್ಲಿಯವರೆಗೆ ಗೋಪಿಯರು ಕೃಷ್ಣನನ್ನು 'ನಾರಾಯಣ' - 'ಪಾರ್ಕಡಲುಳ್ ಪೈಯ್ಯತ್ತುಯಿನ್ರ ಪರಮನ್' - 'ಓಂಗಿ ಉಲಹಳನ್ದಉತ್ತಮನ್' ಎಂದೆಲ್ಲಾ ಅವನ ಪರತ್ವ, ವ್ಯೂಹ, ವಿಭವಾದಿ ರೂಪಗಳನ್ನು ಕೊಂಡಾಡಿ ಕರೆದರು. ಈಗ ಅವನ ಬಳಿ ಬಂದ ಮೇಲೆ ಅವನ ಪರತ್ವಾದಿ ರೂಪಗಳಿಗಿಂತ ಅವನ ಸೌಶೀಲ್ಯ, ಸೌಲಭ್ಯ, ವಾತ್ಸಲ್ಯಾದಿಗುಣಗಳ ಮಹತ್ವವು ಅರಿವಾಯಿತು. ಅವನ ಆಶ್ರಿತ ವ್ಯಾಮೋಹವೆಂಬ ಕಲ್ಯಾಣ ಗುಣವು ಅವರ ಹೃದಯವನ್ನು ಸೂರೆಗೊಂಡಿತು.

**ಮಾಲ್** :- ಎಂಬ ಪದಕ್ಕೆ ಈಶ್ವರ, ಸ್ವಭಾವ, ಪ್ರೇಮ, ವ್ಯಾಮೋಹ, ಎಂದೆಲ್ಲಾ ಅರ್ಥಗಳುಂಟು. ಗೋಪಿಯರು ಈ ಎಲ್ಲ ಅರ್ಥದಲ್ಲೂ ಅವನನ್ನು ಸಂಬೋಧನೆ ಮಾಡಿ ಕರೆಯುತ್ತಾರೆ. 'ಎಲೈ ಸ್ವಾಮಿಯೇ' ಎಂದೂ, 'ಪ್ರೇಮಮಯನೇ' ಎಂದೂ 'ನಮ್ಮಲ್ಲಿ ಅತ್ಯಂತ ವ್ಯಾಮೋಹವುಳ್ಳವನೇ' ಎಂದೆಲ್ಲಾ ಅವನನ್ನು ಕರೆಯುತ್ತಾರೆ. ಇಂದಿನವರೆಗೆ ತಮಗೆ ಅವನಲ್ಲಿ ಅತ್ಯಂತ ಪ್ರೀತಿಯಿದೆ ಎಂದು ಭಾವಿಸಿಕೊಂಡಿದ್ದ ಗೋಪಿಯರಿಗೆ ಇಂದು ಅವನ ಬಳಿ ಬಂದ ಮೇಲೆ, ಅವನಿಗೆ ಅದಕ್ಕಿಂತ ಹೆಚ್ಚಾಗಿ ಇವರ ಮೇಲೆ ಪ್ರೀತಿಯೂ, ವ್ಯಾಮೋಹವೂ ಇದೆ ಎಂಬುದರ ಅರಿವಾಯಿತು. ತನ್ನನ್ನು ಪ್ರೀತಿಸುವವರನ್ನು ಅವನು ಅತ್ಯಂತ ಪ್ರೀತಿಸುತ್ತಾನೆ ಎಂಬುದನ್ನು ಅರಿತರು.

"ಪ್ರಿಯೋಹಿ ಜ್ಞಾನಿನೋತ್ಯರ್ಥಂ ಅಹಂಸಚ ಮಮ ಪ್ರಿಯಃ" - ಅಂದರೆ ಜ್ಞಾನಿಯಾದ ಭಕ್ತನಿಗೆ ನಾನು ಅತ್ಯಂತ ಪ್ರಿಯನಾಗಿದ್ದೇನೆ, ಅವನೂ ಸಹ ನನಗೆ ಅತ್ಯಂತ ಪ್ರಿಯನಾಗಿದ್ದಾನೆ" ಎಂದೂ "ಜ್ಞಾನಿತು ಆತ್ಮೈವ ಮೇ, ಮತಂ" - ಅಂದರೆ ನನ್ನನ್ನು ಪ್ರೀತಿಸುವ ಜ್ಞಾನಿಯಾದ ಭಕ್ತನನ್ನು ನನ್ನ ಆತ್ಮವೆಂದೇ ಭಾವಿಸುತ್ತೇನೆ' ಎಂದೂ ಗೀತೆಯಲ್ಲಿ ಹೇಳಿರುವಂತೆ ಪರಮಾತ್ಮನು ತನ್ನನ್ನು ಪ್ರೀತಿಸಿ ತನ್ನಲ್ಲಿ ಶರಣಾಗತರಾದ ಭಕ್ತರಲ್ಲಿ ಅತ್ಯಂತ ವ್ಯಾಮೋಹವುಳ್ಳವನಾಗಿದ್ದಾನೆ.

ಇದಕ್ಕೆ ಅನೇಕ ನಿದರ್ಶನಗಳನ್ನು ರಾಮಕೃಷ್ಣಾದಿ ಅವತಾರಗಳಲ್ಲಿ ಕಾಣಬಹುದು. ಸೀತೆ "ನಾನು ರಾಮನನ್ನು ಬಿಟ್ಟು ಒಂದು ತಿಂಗಳ ಮೇಲೆ ಬದುಕಲಾರೆ" ಎಂದು ಹನುಮಂತನ ಹತ್ತಿರ ಹೇಳಿ ಕಳುಹಿಸುತ್ತಾಳೆ. ಅದನ್ನು ಕೇಳಿ 'ನಜೀವೇಯಂಕ್ಷಣಮಪಿ' - ಅಂದರೆ 'ಅವಳನ್ನು ಬಿಟ್ಟು ನಾನು ಒಂದು ಕ್ಷಣವೂ ಬದುಕಿರಲಾರೆನು' ಎನ್ನುತ್ತಾನೆ ಶ್ರೀರಾಮ. ಅವನ ಪ್ರೀತಿ ಅತ್ಯಧಿಕವಾದುದು. ಅವನು ಶರಣಾಗತವತ್ಸಲ. ರಾಮವತಾರದಲ್ಲಿ ವಿಭೀಷಣನನ್ನು ಅನುಗ್ರಹಿಸಲು ಅಯೋಧ್ಯೆಯಿಂದ ಲಂಕೆಗೆ ಬರುತ್ತಾನೆ. ಕೃಷ್ಣಾವತಾರದಲ್ಲಿ ಆಶ್ರಿತವತ್ಸಲನಾಗಿ ಅರ್ಜುನನಿಗೆ ಸಾರಥಿಯಾಗಿ ಯುದ್ಧರಂಗದಲ್ಲಿ ರಥದಲ್ಲಿ ಕುಳಿತಿದ್ದಾನೆ. ಇದೆಲ್ಲಾ ಅವನ ಸೌಲಭ್ಯವನ್ನೂ, ಭಕ್ತರ ಮೇಲಿನ ವ್ಯಾಮೋಹವನ್ನೂ ತೋರಿಸುತ್ತದೆ. ಭಕ್ತರಿಗೆ ಭಗವಂತನಲ್ಲಿರುವ ಪ್ರೀತಿಗಿಂತ ಭಗವಂತನಿಗೆ ಭಕ್ತರ ಮೇಲೆ ಅಧಿಕವಾದ ಪ್ರೀತಿ, ವ್ಯಾಮೋಹವಿದೆ ಎಂಬುದನ್ನು ಇಂದು ಅರಿತವರಾಗಿ ಗೋಪಿಯರು ಅವನನ್ನು 'ಮಾಲೀ' ನಮ್ಮಲ್ಲಿ ಅತ್ಯಂತ ವ್ಯಾಮೋಹವುಳ್ಳ, ಪ್ರೀತಿ ಉಳ್ಳ ಸ್ವಾಮಿಯೇ ಎಂದು ಸಂಬೋಧನೆ ಮಾಡಿ ಅವನನ್ನು ಅತ್ಯಂತ ವಿಶ್ವಾಸದಿಂದ ಕರೆಯುತ್ತಾರೆ. ಇದು ಭಗವಂತನ ಸೌಲಭ್ಯ, ವಾತ್ಸಲ್ಯಾದಿಗುಣಗಳನ್ನು ಪ್ರಕಾಶಪಡಿಸುವ ನಾಮವಾಗಿದೆ. ಅವನ ಆಶ್ರಿತ ವ್ಯಾಮೋಹತ್ವ ಶರಣಾಗತ ವತ್ಸಲತ್ವಗಳನ್ನು ತಿಳಿಸುತ್ತದೆ.

ಮಣಿವಣ್ಣಾ :- ಮಾಣಿಕ್ಯದಂತೆ ಪ್ರಕಾಶಮಾನವಾದ ಬಣ್ಣವುಳ್ಳವನೇ - ದೋಷರಹಿತವಾಗಿ ಪ್ರಕಾಶಿಸುವ ನೀಲಮಣಿಯ ಬಣ್ಣದಿಂದ ಕೂಡಿದ ರೂಪಲಾವಣ್ಯ ಉಳ್ಳವನೇ ಎಂದು ಪರಮಾತ್ಮನ ದಿವ್ಯ ಮಂಗಳ ವಿಗ್ರಹವನ್ನು ವರ್ಣಿಸುತ್ತಾರೆ. ಭಕ್ತರು ಆಶ್ರಯಿಸಿ ಆನಂದಪಡುವುದಕ್ಕಾಗಿ ಪರಮಾತ್ಮನು ದಿವ್ಯಮಂಗಳ ವಿಗ್ರಹದೊಂದಿಗೆ ಪ್ರಕಾಶಿಸುತ್ತಾನೆ. ಅಲ್ಲದೆ 'ಸೂತ್ರೇಮಣಿಗಣಾ ಇವ' ಎಂದು ಗೀತೆಯಲ್ಲಿ ಹೇಳಿರುವಂತೆ ಪರಮಾತ್ಮನು ಎಲ್ಲರ ಹೃದಯದಲ್ಲಿಯೂ ಪ್ರಕಾಶಿಸುತ್ತಿದ್ದಾನೆ. ಮಾಣಿಕ್ಯ ಮಣಿಯಲ್ಲಿ ಕಾಣುವ ಗುಣಗಳೆಲ್ಲವನ್ನೂ ಅವನಲ್ಲಿ ಕಂಡು ಅವನನ್ನು ಮಣಿವಣ್ಣಾ ಎನ್ನುತ್ತಾರೆ (ಮಾಣಿಕ್ಯ ಮಣಿಯು ಅತ್ಯಂತ ಸುಂದರವಾಗಿಯೂ, ಪ್ರಕಾಶಮಾನವಾಗಿಯೂ, ಬಹಳ ಪ್ರಶಸ್ತವಾದುದಾಗಿಯೂ, ಅತ್ಯಂತ ಲಾಭದಾಯಕವಾದುದಾಗಿಯೂ, ಅತ್ಯಂತ ಬೆಲೆ ಉಳ್ಳದ್ದಾಗಿಯೂ, ಬಹಳ ಪ್ರಶಂಸನೀಯವಾದುದಾಗಿಯೂ, ಅತ್ಯಂತ ಜಾಗರೂಕತೆಯಿಂದ ರಕ್ಷಿಸಲ್ಪಡತಕ್ಕುದಾಗಿಯೂ, ಎಣೆ ಇಲ್ಲದ್ದಾಗಿಯೂ, ಅದನ್ನು ಪಡೆದ ಮೇಲೆ ಅದನ್ನು ಅತ್ಯಂತ ಸುಲಭವಾಗಿ ನಮ್ಮಬಳಿ ಇಟ್ಟುಕೊಂಡು ಅನುಭವಿಸಿ ಆನಂದಪಡುವಂತಹುದಾಗಿಯೂ ಇದೆ. ಈ ಗುಣಗಳೆಲ್ಲವನ್ನೂ ಪರಮಾತ್ಮನಲ್ಲಿ ಕಂಡು ಅವನನ್ನು ಮಣಿವಣ್ಣಾ ಎಂದು ಕರೆಯುತ್ತಾರೆ).

ಪರಮಾತ್ಮನು ದೂರದಲ್ಲಿರುವವರೆಗೂ ಅವನ ಕಲ್ಯಾಣಗುಣಗಳನ್ನು ಇವರು ಕಂಡಿರಲಿಲ್ಲ. ಕೇವಲ ಅವನ ಪರತ್ವ, ವ್ಯೂಹಾದಿ ರೂಪಗಳನ್ನು ಕೇಳಿ ಅರಿತಿದ್ದ ಇವರು ಅದನ್ನೇ ಕೊಂಡಾಡುತ್ತಿದ್ದರು. ಈಗ ಅವನ ಬಳಿ ಬಂದ ಮೇಲೆ ಅವನ ಸೌಲಭ್ಯ, ವಾತ್ಸಲ್ಯ, ಲಾವಣ್ಯಾದಿಗಳನ್ನೆಲ್ಲಾ ನೋಡಿ, ಅನುಭವಿಸಿ, ಅವನ ಕಲ್ಯಾಣಗುಣಗಳನ್ನು ಸಂಕೀರ್ತನೆ ಮಾಡುತ್ತಾರೆ. ಮಾಲೇ ಮಣಿವಣ್ಣಾ ಎಂದು ಕರೆಯುತ್ತಾರೆ. ಮಾಲೇ ಎಂದು ಅವನ ಸೌಲಭ್ಯವನ್ನೂ, ಮಣಿವಣ್ಣಾ ಎಂದು ಅವನ ದಿವ್ಯಮಂಗಳವಿಗ್ರಹ ಸೌಂದರ್ಯಾದಿಗಳನ್ನು ಕೊಂಡಾಡುತ್ತಾರೆ.

**ಮಾರ್ಗಳಿ ನೀರಾಡುವಾನ್** :- ಮಾರ್ಹಳಿ ನೀರಾಟ್ಟವೆಂಬ ಈ ವ್ರತವನ್ನು ವ್ಯಾಜವಾಗಿ ಇಟ್ಟುಕೊಂಡು ನಿನ್ನ ಕಲ್ಯಾಣಗುಣ ಸಾಗರದಲ್ಲಿ ಮುಳುಗಲು, ನಿನಗೆ ಮಂಗಳ ಹಾಡಿ ನಿನ್ನ ಕೈಂಕರ್ಯಮಾಡಲು ಬಂದಿದ್ದೇವೆ ಎನ್ನುತ್ತಾರೆ.

**ಮೇಲೆಯಾರ್ ಶೈವನಗಳ್** :- ಮಾರ್ಹಳಿ ನೀರಾಟ್ಟವೆಂಬ ಈ ವ್ರತವು ಹಿರಿಯರು ಆಚರಿಸಿ ತೋರಿಸಿಕೊಟ್ಟಿರುವ ವ್ರತವು. ಇದು ಶಿಷ್ಟಾನುಷ್ಠಾನವಾದುದಾಗಿದೆ. ಹಿರಿಯರೂ, ಮಹಾತ್ಮರುಗಳೂ ಆಚರಿಸುವ ವ್ರತವಾಗಿರುವುದರಿಂದ ಇದನ್ನು ಆಚರಿಸಬೇಕು ಎನ್ನುತ್ತಾರೆ. **"ಯದ್ಯದಾಚರತಿಶ್ರೇಷ್ಠಃ ತತ್ತದೇವ ಇತರೋಜನಃ"** :- ಅಂದರೆ ಧರ್ಮವನ್ನು ಅರಿತವರು ಆಚರಿಸುವುದನ್ನೇ ಇತರ ಜನರು ಅನುಕರಿಸಿ ಆಚರಿಸುವರು ಎಂದು ಕೃಷ್ಣಪರಮಾತ್ಮನು ಗೀತೆಯಲ್ಲಿ ತಿಳಿಸಿದ್ದಾನೆ. ಆದ್ದರಿಂದ ನಾವು ನಮ್ಮ ಹಿರಿಯರ ಆಚರಣೆಯನ್ನು ಅನುಕರಿಸುತ್ತಿದ್ದೇವೆ. ಆದ್ದರಿಂದ ಇದು ಶಿಷ್ಟಾಚಾರವೆಂಬ ಪ್ರಬಲ ಪ್ರಮಾಣ ಸಿದ್ಧವಾದ ವ್ರತವು ಎನ್ನುತ್ತಾರೆ.

**ವೇಂಡುವನ ಕೇಟ್ಟಿಯೇಲ್** :- ನಮಗೆ ಈ ವ್ರತಕ್ಕೆ ಬೇಕಾದವುಗಳನ್ನು ನೀನು ಕೇಳುವುದಾದರೆ ಹೇಳುತ್ತೇವೆ ಕೇಳು ಎಂದು ಹೇಳುತ್ತಾರೆ. ಮಾರ್ಹಳಿ ನೀರಾಟ್ಟವೆಂಬ ಈ ಭಜನ ಸಮಾರಂಭಕ್ಕೆ ಬೇಕಾದವುಗಳನ್ನು ತಿಳಿಸುತ್ತಾರೆ.

**(1) ಇಲತ್ತೈ ಎಲ್ಲಾಂ ನಡುಂಗಮುರಲ್ವನ ಪಾಲನ್ನ ವಣ್ಣತ್ತು ಉನ್‌ಪಾಂಚಜನ್ನಿಯಮೇ ಪೋಲ್ವನ ಶಂಖಂಗಳ್** :- ಈ ಭೂ ಮಂಡಲವೆಲ್ಲವೂ ನಡುಗುವಂತೆ ಘೋಷಿಸುವ, ಹಾಲಿನ ಬಣ್ಣದಂತೆ ಬೆಳ್ಳಗಿರುವ ನಿನ್ನ ಪಾಂಚಜನ್ಯವನ್ನು ಅಂದರೆ ದಿವ್ಯ ಶಂಖವನ್ನು ಹೋಲುವ ಶಂಖಗಳೂ; (ಇದರಿಂದ ದೂರದಲ್ಲಿ ಇರುವವರಿಗೆಲ್ಲಾ ನಮ್ಮ ವ್ರತಾಚರಣೆ ಆರಂಭವಾಗುವ ಕಾಲ ತಿಳಿದು ಅದರಲ್ಲಿ ಇಚ್ಛೆ ಉಳ್ಳವರೆಲ್ಲರೂ ಬಂದು ನಮ್ಮೊಡನೆ ಕಲೆತು ಭಗವನ್ನಾಮ ಸಂಕೀರ್ತನೆಮಾಡಲು ಅನುಕೂಲವಾಗುತ್ತದೆ. ಆದ್ದರಿಂದಲೇ

ವ್ರತಾರಂಭಕ್ಕೆ ಮುಂಚೆ ಶಂಖ ಊದುತ್ತಾರೆ. ಶಂಖಧ್ವನಿಯು ಇದರಲ್ಲಿ ಆಸೆ ಇರುವವರಿಗೆ ಆನಂದವನ್ನೂ, ವಿರೋಧಿಗಳಿಗೆ ಭಯದಕಂಪನವನ್ನೂ ಉಂಟುಮಾಡುತ್ತದೆ.)

**ಪೋಯ್‌ಪಾಡುಡೈಯನವೇ ಶಾಲಪೆರುಂಪರೈಯೇ** :- ನಮ್ಮ ವ್ರತದ ಆಚರಣೆ ಯನ್ನು ಎಲ್ಲರಿಗೂ ತಿಳಿಸುವಂತಹ ಬಹಳ ದೊಡ್ಡದಾದ ಪರೈ ಎಂಬ ಭೇರಿ ವಾದ್ಯವೂ;

**ಪಲ್ಲಾಂಡು ಇಸೈಪ್ಪಾರೇ** :- ಭಗವಂತನಿಗೆ ಮಂಗಳಾಶಾಸನ ಮಾಡುವವರೂ ಬೇಕು. ನಮಗೆ ಕೇವಲ ಮಂತ್ರತಿಳಿದ ಆಚಾರ್ಯರುಗಳಿಗಿಂತ ಭಗವದ್ಭಕ್ತಿ ಉಳ್ಳ ಕೈಂಕರ್ಯಪರರಾದ ಪೆರಿಯಾಳ್ವಾರ್, ನಮ್ಮಾಳ್ವಾರ್‌ರಂತಹ ಭಗವಂತನಿಗೆ ಮಂಗಳಾಶಾಸನ ಮಾಡುವ ಆಚಾರ್ಯರುಗಳು ಬೇಕು. ಅಂತಹ ಭಾಗವತೋತ್ತಮರನ್ನು ನೀನು ನಮಗೆ ಕರುಣಿಸಿದರೆ ಆಗ ನಮ್ಮ ವ್ರತವು ಅತ್ಯಂತ ಸಂಭ್ರಮವುಳ್ಳದ್ದೂ, ಯಶಸ್ವಿಯೂ ಆಗುವುದು.

**ಕೋಲವಿಳಕ್ಕೇ** :- ಮಂಗಳ ದೀಪಗಳು ಬೇಕು, ನಮ್ಮ ವ್ರತಕ್ಕೆ ನಮಗೆ ದಾರಿ ಬೆಳಗಲು ಮಂಗಳ ದೀಪಗಳು ಬೇಕು. ಮಂಗಳ ದೀಪಗಳು ಬೆಳಗುತ್ತಿದ್ದರೆ ಅದರ ಜ್ಯೋತಿಯಿಂದ ನಮಗೆ ಅಂತರ ಬಾಹ್ಯ ಪ್ರಕಾಶವುಂಟಾಗುತ್ತದೆ.

(5) **ಕೊಡಿಯೇ** :- ಅಂದರೆ ಬಾವುಟ, ಧ್ವಜ - ಅತ್ಯಂತ ದೂರದಲ್ಲಿರುವವರಿಗೂ ಕಾಣಿಸುವಂತೆ ಎತ್ತರವಾದ ಬಾವುಟ ಇರಬೇಕು. ನಾವು ಭಗವನ್ನಾಮ ಸಂಕೀರ್ತನೆ ಮಾಡುತ್ತಿದ್ದೇವೆ ಎಂಬುದನ್ನು ಎತ್ತಿ ತೋರಿಸಲು ಬಾವುಟ ಬೇಕು.

(6) ವಿದಾನಮೇ :- ಮೇಲು ಕಟ್ಟುಗಳು - ನಮ್ಮ ತಲೆಯ ಮೇಲೆ ಬಿಸಿಲು ಮಳೆ ಬೀಳದಂತೆ ತಡೆಯಲು ಮೇಲು ಹೊದಿಕೆಗಳು ಬೇಕು.

ಭಗವಂತನ ಕಲ್ಯಾಣ ಗುಣಗಳನ್ನು ಹಾಡಿ ನಲಿದು ಆನಂದ ಸಾಗರದಲ್ಲಿ ಮುಳುಗಬೇಕೆಂಬುದೇ ಗೋಪಿಯರ ಆಸೆ. ಅದೇ ಮೋಕ್ಷಾನಂದ. ಅದನ್ನು ಇಲ್ಲೇ

ಇಂದೇ ಪಡೆಯಬೇಕೆಂದು ಆಸೆ ಪಡುತ್ತಾರೆ. ಈ ಭಕ್ತಿಪೂರಿತ ಹೃದಯಗೀತೆಗೆ ಮೆರುಗು ಕೊಡಲು ಶಂಖ, ಭೇರಿಗಳೂ, ಜೊತೆಯಲ್ಲಿ ಕಲೆತು ಹಾಡಲು ಭಕ್ತರ ಸಮೂಹ, ದಾರಿ ಬೆಳಗಲು ದೀಪ, ಬಾವುಟ, ಮೇಲು ಹೊದಿಕೆ ಇವುಗಳೆಲ್ಲವನ್ನೂ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾರೆ.

## ವಿಶೇಷಾರ್ಥ

ಈ ಪಾಶುರದಲ್ಲಿ ಮೂಲಮಂತ್ರವಾದ ತಿರುಮಂತ್ರಾರ್ಥದ ಜ್ಞಾನವು ತಮ್ಮ ಹೃದಯದಲ್ಲಿ ಪ್ರಕಾಶಿಸಬೇಕು ಎಂಬ ಪ್ರಾರ್ಥನೆಯು ಅಡಗಿದೆ ಎಂಬುದು ಇದರ ತತ್ವಾರ್ಥ. ಭಗವದ್ಗುಣಸಾಗರದಲ್ಲಿ ಮುಳುಗಿ, ಭಗವದನುಭವಜ್ಞಾನ ಹೊಂದಬೇಕಾದರೆ ಮೂಲಮಂತ್ರವಾದ ತಿರುಮಂತ್ರಾರ್ಥಜ್ಞಾನವು ಹೃದಯದಲ್ಲಿ ಉಂಟಾಗಬೇಕು. ಅದು ನಮ್ಮ ಹೃದಯದಲ್ಲಿ ಪ್ರಕಾಶಿಸುವಂತೆ ನೀನೇ ಮಾಡಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ.

**ಮಾಲೇಮಣಿವಣ್ಣಾ - - - - - ವೇಂಡುವನಕೇಟ್ಟಿಯೇಲ್ :-** ಭಗವತ್ ಗುಣಾನುಭವ ಹೊಂದಲು ಭಗವತ್ ಕೈಂಕರ್ಯವಾಗಿ, ಶಿಷ್ಟಾಚಾರವಾಗಿ ನಾವು ಆಚರಿಸುತ್ತಿರುವ ಈ ವ್ರತಾಚರಣೆಗೆ ಬೇಕಾದವುಗಳನ್ನೆಲ್ಲಾ ನೀನೇ ನಮಗೆ ಅನುಗ್ರಹಿಸಬೇಕು ಎಂದು ಪ್ರಾರ್ಥಿಸುತ್ತಾರೆ. ಅವುಗಳು ಯಾವುವೆಂದರೆ

(1) **ಜ್ಞಾನತ್ತೈ ಎಲ್ಲಾಂ - - - - - ಪಾಂಚಜನ್ನಿಯಮೇಪೋಲ್ವನ ಶಂಖಂಗಳ್ :-** ಅಂದರೆ ಓಂ ಎನ್ನುವ ಪ್ರಣವಾರ್ಥದ ಜ್ಞಾನ - ಭಗವಂತನೊಬ್ಬನೇ ಸ್ವಾಮಿ, ನಾನು ಅವನ ದಾಸ ಎಂಬ ಪ್ರಣವಾರ್ಥದ ಭಗವದನನ್ಯಾರ್ಹ ಶೇಷತ್ವದ ಜ್ಞಾನ ನಮಗೆ ಉಂಟಾಗಬೇಕು.

(2) **ಶಾಲಪೆರುಂಪರೈ :** ಎಂದರೆ ನಮಶ್ಶಬ್ದಾರ್ಥ - ಅಂದರೆ ಭಗವದತ್ಯಂತ ಪಾರತಂತ್ರ್ಯಜ್ಞಾನ - ಅಂದರೆ "ಭಗವಂತನೊಬ್ಬನೇ ರಕ್ಷಕನು; ಬೇರೆಯಾರೂ,

ನಾನೂ ನನಗೆ ರಕ್ಷಕರಲ್ಲ; ನಾನು ಭಗವಂತನ ಸ್ವತ್ತು; ಅವನೇ ನನಗೆ ರಕ್ಷಕ'' - ಎಂಬ ಭಗವದತ್ಯನ್ತ ಪಾರತಂತ್ರ್ಯದ ಜ್ಞಾನವು ನಮ್ಮಲ್ಲಿ ಉಂಟಾಗಬೇಕು.

ಈ ಓಂಕಾರದ ಅಂದರೆ ಭಗವದನನ್ಯಾರ್ಹ ಶೇಷತ್ವದ ಮತ್ತು ನಮಃ ಶಬ್ದಾರ್ಥದ ಅಂದರೆ ಭಗವತ್ಯನ್ತ ಪಾರತಂತ್ರ್ಯದ ಜ್ಞಾನವು ನಮ್ಮ ಹೃದಯದಲ್ಲಿ **ಮೊಳಗುವಂತೆ ಮಾಡು ಎಂದು ಪ್ರಾರ್ಥಿಸುತ್ತಾರೆ ಎಂಬುದೇ ಇದರ ತಾತ್ಪರ್ಯ.**

(3) **ಪಲ್ಲಾಂಡು ಇಶೈಪ್ಪಾರ್ತೈ** :- ಭಗವಂತನಿಗೆ ಮಂಗಳಾಶಾಸನ ಮಾಡುವ **ಭಾಗವತ್** ಕೈಂಕರ್ಯ ಪರರಾದ ಭಕ್ತರ ಸಹವಾಸ ತಮಗೆ ಉಂಟಾಗಬೇಕು. ಅವರ ಭಗವತ್ ಮಂಗಳಾಶಾಸನದ ಘೋಷವು ತಮ್ಮ ಹೃದಯದಲ್ಲಿ ಮೊಳಗಬೇಕು ಎಂದು ಪ್ರಾರ್ಥಿಸುತ್ತಾರೆ. ಇದೇ 'ನಾರಾಯಣಾಯ' ಎಂಬ ತಿರುಮಂತ್ರದ 3ನೆಯ ಪದದಲ್ಲಿ ತಿಳಿಸಿರುವ ಕೈಂಕರ್ಯ ಪ್ರಾರ್ಥನೆಯು.

(4) **ಕೋಲವಿಳಕ್ಕೇ** :- 'ಓಂ ನಮೋ ನಾರಾಯಣಾಯ' ಎಂಬ ತಿರುಮಂತ್ರದ 3 ಪದಗಳ ಅರ್ಥವೂ ಒಟ್ಟಿಗೆ ಸೇರಿ ನಮ್ಮ ಧರ್ಮಭೂತಜ್ಞಾನವು ಭಗವಂತನ ಮತ್ತು ಭಾಗವತರ ಅಡಿದಾವರೆಗಳಿಗೆ ಶರಣಾಗುವಂತೆ ಆಗಲಿ, ಅಂದರೆ ಭಗವಂತನ ಯಥಾರ್ಥಸ್ವರೂಪ ಜ್ಞಾನವನ್ನು ನಮಗೆ ಉಂಟುಮಾಡು. ಅದು ಶರಣಾಗತಿಗೆ ನಂದಾದೀಪವಾಗಿ ಪ್ರಕಾಶಿಸಲಿ.

(5) **ಕೊಡಿಯೇ** :- ಭಗವಂತನು ತನ್ನ ಸ್ವಾಮಿ, ತಾನು ಅವನ ದಾಸ ಎಂಬ ಭಗವತ್ ಶೇಷತ್ವ ಜ್ಞಾನವನ್ನು ಪಡೆದಮೇಲೆ ಭಾಗವತರೊಂದಿಗೆ ಕೂಡಿ ಭಗವಂತನಿಗೆ ಮಂಗಳಾಶಾಸನ ಮಾಡುವ ಕೈಂಕರ್ಯವು ನಮಗೆ ಲಭಿಸಬೇಕು. ಭಗವತ್ ಭಾಗವತರ ಸೇವೆ ಎಂಬ ಕೊಡಿಯನ್ನು ದಯಪಾಲಿಸು ಎಂದು ಪ್ರಾರ್ಥಿಸುತ್ತಾರೆ

(6) **ವಿದಾನಮೆ** :- ಭಗವತ್ ಕೈಂಕರ್ಯವನ್ನು ಮಾಡುವಾಗ ಸ್ವಾರ್ಥವೆಂಬ ಅಜ್ಞಾನದ ವುಳೆ ನಮ್ಮ ಮೇಲೆ ಬೀಳದಂತೆ ಜ್ಞಾನ ಚಪ್ಪರವನ್ನು ನಮಗೆ

ಹೊಂದುವುದೇ ಸಾಮ್ಯಾಪತ್ತಿ ಮೋಕ್ಷವು. ಅಂದರೆ ಅವನಿಗಿರುವ ವೈಭವಗಳನ್ನು ಇವನು ಹೊಂದಿ ಆನಂದ ಅನುಭವಿಸುವುದೇ ಸಾಮ್ಯಾಪತ್ತಿ ಮೋಕ್ಷವು. ಅದನ್ನೇ ಈ ಪಾಶುರದಲ್ಲಿ ಗೋಪಿಗಳು ಭಗವಂತನ ಸಾಮ್ಯಹೊಂದುವುದಕ್ಕಾಗಿ ಅವನ ಬಳಿ ಇರುವ ಶಂಖ ಚಕ್ರಾದಿ ವಿಭವಗಳನ್ನೆಲ್ಲಾ ಅನುಗ್ರಹಿಸುವಂತೆ ಪ್ರಾರ್ಥಿಸಿದ್ದಾರೆ ಎಂಬ ವಿಶೇಷಾರ್ಥವೂ ತಿಳಿಸಲ್ಪಟ್ಟಿದೆ. ಅದರ ಪ್ರಕಾರ ಈ ಪಾಶುರದಲ್ಲಿ ಭಗವತ್ ಸಾಮ್ಯಾಪತ್ತಿ ಎಂಬ ಮೋಕ್ಷವು ಹೇಳಲ್ಪಟ್ಟಿದೆ.

ಈ ಪಾಶುರದಲ್ಲಿ ಕೊನೆಯ ನಾಲ್ಕು ಸಾಲಿನಲ್ಲಿ ವರ್ಣಿಸಿರುವುದನ್ನೇ ಇಂದಿಗೂ ಶ್ರೀವೈಷ್ಣವ ದೇವಾಲಯಗಳಲ್ಲಿ ಬ್ರಹ್ಮೋತ್ಸವ ಮುಂತಾದ ಉತ್ಸವಗಳಲ್ಲಿ ದೇವರನ್ನು ಬೀದಿಯಲ್ಲಿ ಬಿಜಯ ಮಾಡಿಸುವಾಗ ಕಾಣಬಹುದು. ಮೊದಲು ಶಂಖ ವಾದ್ಯ ಘೋಷವೂ, ಆನಂತರ ಭೇರಿ ನಿನಾದವೂ, ಆನಂತರ ಮಂಗಳಾಶಾಸನ ಮಾಡುವವರ ಮತ್ತು ದಿವ್ಯ ಪ್ರಬಂಧಗಳನ್ನು ಹೇಳುವವರ ಗೋಷ್ಠಿಯೂ, ತದನಂತರ ಧೂಪ ದೀಪ ದೀವಟಿಗೆಗಳೂ, ತದನಂತರ ಛತ್ರಚಾಮರಾದಿಗಳೊಂದಿಗೆ ಪರಮಾತ್ಮನು ಸಂಭ್ರಮವಾಗಿ ಬಿಜಯ ಮಾಡುವುದನ್ನು ಸರ್ವರೂ ದರ್ಶನ ಮಾಡಿ ಆನಂದ ಪಡೆಯಬಹುದು.

## ಪಾಶುರ - 27

ಈ ವ್ರತವನ್ನು ಅನುಷ್ಠಿಸಿದಮೇಲೆ ಪರಮಾತ್ಮನಿಂದ ತಾವು ಪಡೆಯುವ ಸನ್ಮಾನಗಳನ್ನು ಈ ಪಾಶುರದಲ್ಲಿ ವರ್ಣಿಸಿದ್ದಾರೆ.

**ಕೂಡಾರೈ ವೆಲ್ಲುಮ್ ಶೀರ್ ಗೋವಿಂದಾ ಉನ್‌ತನ್ನೈ**
**ಪ್ಪಾಡಿಪ್ಪರೈಕೊಣ್ಣು ಯಾಮ್‌ಪೆರುಶಮ್ಮಾನಮ್**
**ನಾಡುಪುಹಳುಮ್ ಪರಿಶಿನಾಲ್ ನನ್ರಾಹ**
**ಶೂಡಹಮೇ ತೋಳ್‌ವಳೈಯೇ ತೋಡೇಶೆವಿಪ್ಪೂವೇ**
**ಪಾಡಹಮೇ ಎನ್‌ರನ್ನೈಯ ಪಲ್‌ಕಲನುಮ್ ಯಾಮಣಿವೋಮ್**
**ಆಡೈಯುಡುಪ್ಪೋಮ್ ಅತನ್‌ಪಿನ್ನೇಪಾಲ್‌ಶೋರು**
**ಮೂಡ ನೆಯ್ ಪೆಯ್‌ದು ಮುಳಂಗೈವಳಿವಾರ**
**ಕೂಡಿಯಿರುನ್ದು ಕುಳಿರ್‌ನ್ದೇಲೋರೆಮ್ಪಾವಾಯ್**

''ನಿನ್ನೊಂದಿಗೆ ಸೇರುವುದಿಲ್ಲವೆಂದಿರುವವರನ್ನು ಜಯಿಸುವಂತಹ ಕಲ್ಯಾಣಗುಣವುಳ್ಳವನೇ ! ಗೋವುಗಳನ್ನು ರಕ್ಷಿಸುವ ಗೋವಿಂದನೇ ! ನಿನ್ನನ್ನು ಸಂಕೀರ್ತನೆ ಮಾಡಿ, ಪರ್ರೈ ಎಂಬ ವಾದ್ಯವನ್ನು ಪಡೆದಮೇಲೆ ನಾವು ಹೊಂದುವ ಸನ್ಮಾನಗಳು ಯಾವುವೆಂದರೆ - ಲೋಕವೆಲ್ಲವೂ ಕೊಂಡಾಡುವಂತಹ ಚೆನ್ನಾಗಿರುವ ಉತ್ತಮವಾದ ಹಸ್ತಾಭರಣಗಳೂ, ತೋಳುಬಳೆಗಳೂ, ಕರ್ಣಾಭರಣಗಳೂ, ಕರ್ಣಪುಷ್ಪಗಳೂ, ಪಾದಾಭರಣಗಳೂ, ಮುಂತಾದ ಅನೇಕ ವಿಧವಾದ ಆಭರಣಗಳನ್ನು ನಾವು ಧರಿಸುವೆವು. ಒಳ್ಳೆಯ ವಸ್ತ್ರಗಳನ್ನು ನಾವು ಉಡುವೆವು. ಅದಾದಮೇಲೆ ಹಾಲಿನ ಅನ್ನವನ್ನು, ಅದು ಮುಳುಗುವಷ್ಟು ತುಪ್ಪಬೆರೆಸಿ, ನಿನ್ನೊಂದಿಗೆ ಸೇರಿ ಎಲ್ಲರೂ ಭುಜಿಸಿ ಸಂತೋಷ ಪಡುವೆವು. ನಮ್ಮ

ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ಕೂಡಾರೈ ವೆಲ್ಲುಮ್‌ಶೀರ್** :- ನಿನ್ನೊಂದಿಗೆ ಸೇರುವುದಿಲ್ಲವೆಂದಿರುವವರನ್ನು ಜಯಿಸುವಂತಹ ಕಲ್ಯಾಣಗುಣವುಳ್ಳವನೇ!- ಭಗವಂತನು ತನಗೆ ವಿರೋಧಿಗಳಾಗಿದ್ದ ರಾವಣ, ಶಿಶುಪಾಲ, ಜರಾಸಂಧ, ದುರ್ಯೋಧನಾದಿ ಗಳನ್ನೆಲ್ಲಾ ಜಯಿಸಿದ್ದಾನೆ. ಅವನನ್ನೇ ನಂಬಿದ್ದ ಪಾಂಡವರನ್ನೂ, ವಿಭೀಷಣ, ಸುಗ್ರೀವಾದಿಗಳನ್ನೆಲ್ಲಾ ರಕ್ಷಿಸಿದ್ದಾನೆ. ವಿರೋಧಿಗಳನ್ನು ತನ್ನ ಶೌರ್ಯದಿಂದಲೂ, ಬಿಲ್ಲುಬಾಣಗಳಿಂದಲೂ, ಅನುಕೂಲರನ್ನು ತನ್ನ ಶೀಲದಿಂದಲೂ ಅಂದರೆ ಸೌಂದರ್ಯ ಸೌಶೀಲ್ಯಾದಿ ಗುಣಗಳಿಂದಲೂ ಜಯಿಸುತ್ತಾನೆ. ಬಿಲ್ಲುಬಾಣಗಳು ವಿರೋಧಿಗಳ ಶರೀರವನ್ನು ನಿರಸನ ಮಾಡಿ ಮುಗಿಸುತ್ತವೆ. ಆದರೆ ಅವನ ಸೌಂದರ್ಯ ಸೌಶೀಲ್ಯಾದಿಗುಣಗಳ ಬಾಣಕ್ಕೆ ಸಿಕ್ಕಿದ ಭಕ್ತರೂ, ಆಳ್ವಾರ್‌ಗಳೂ, ಗೋಪಿಗಳೂ ವಿಶ್ಲೇಷ ತಾಪದಲ್ಲಿ ಬೆಂದು ನೋವು ಪಡುತ್ತಾರೆ. ಅದನ್ನು ಹೋಗಲಾಡಿಸಲು ಅವನ ಕೃಪೆಯನ್ನು ಪ್ರಾರ್ಥಿಸುತ್ತಾರೆ. ಪರಮಾತ್ಮನು ವಿರೋಧಿಗಳನ್ನು ಜಯಿಸುತ್ತಾನೆ. ಆದರೆ ಭಕ್ತರಿಗೆ ತಾನೇ ಸೋಲುವವನೂ ಆಗಿದ್ದಾನೆ.

**ಗೋವಿಂದ** :- ಗೋವುಗಳನ್ನು ರಕ್ಷಿಸಿದವನೇ - ನಿನ್ನನ್ನು ವಿರೋಧಿಸದೇ ಇದ್ದ ಗೋವುಗಳನ್ನು ನೀನಾಗಿಯೇ ರಕ್ಷಿಸಿದ್ದೀಯೆ. ನಿನ್ನನ್ನೇ ನಂಬಿ ನಿನ್ನೊಂದಿಗೆ ಸೇರಬೇಕೆಂದಿರುವ ನಮ್ಮನ್ನು ನೀನು ರಕ್ಷಿಸಬೇಡವೇ ಎಂದು ಪ್ರಾರ್ಥಿಸುತ್ತಾರೆ.

**ಉನ್‌ತನ್ನೈಪಾಡಿ** :- ನಿನ್ನನ್ನು ಸಂಕೀರ್ತನೆ ಮಾಡಿ - ಬಾಯಿ ಪಡೆದಿರುವುದಕ್ಕೆ ಸಾರ್ಥಕವಾಗಿ ನಿನ್ನ ಕಲ್ಯಾಣ ಗುಣಗಳನ್ನು ಹಾಡಬೇಕು.

**ಪರೈಗೊಂಡು** :- ನಿನಗೆ ಕೈಂಕರ್ಯ ಮಾಡುವ ಪುರುಷಾರ್ಥವನ್ನು ಪಡೆದು

ನಿನ್ನ ಕಲ್ಯಾಣ ಗುಣಗಳನ್ನು ಹಾಡಿ ನಿನಗೆ ಮಂಗಳಶಾಸನ ಮಾಡುವುದೇ ನಮಗೆ ಪುರುಷಾರ್ಥ. ಅದೇ ನಾವು ನಿನಗೆ ಈಗ ಮಾಡುವ ಕೈಂಕರ್ಯ.

ಯಾಂಪೆರುಸನ್ಮಾನಂ :- ನಿನಗೆ ಮಂಗಳ ಹಾಡಿ ಕೈಂಕರ್ಯ ಪುರುಷಾರ್ಥವನ್ನು ಪಡೆದಮೇಲೆ ನಾವು ಹೊಂದುವ ಸನ್ಮಾನಗಳು (ಬಹುಮಾನಗಳು) ಯಾವುವೆಂದರೆ -

**ನಾಡುಪುಕಳುಂ ಪರಿಶಿನಾಲ್ ನನ್ಸಾ್ರಕ** :- ಲೋಕವೆಲ್ಲಾ ಕೊಂಡಾಡುವಂತಹ ಉತ್ತಮವಾದ ಸನ್ಮಾನಗಳು ನಮಗೆಬೇಕು ಎನ್ನುತ್ತಾರೆ.

**ಶೂಡಕಮೇ, ತೋಳ್ವಳೈಯೇ, ತೋಡೇಶೆವಿಪ್ಪೂವೇ, ಪಾಡಕಮೇ ಎನ್ರನೈಯ ಪಲ್‌ಕಲನುಂ ಯಾಂ ಅಣಿವೋಂ** :- ಕೈಗೆ ಧರಿಸುವ ಹಸ್ತಾಭರಣಗಳೂ, ತೋಳು ಬಳೆಗಳೂ, ಕರ್ಣಾಭರಣಗಳೂ, ಕರ್ಣಪುಷ್ಪ, ಪಾದಾಭರಣಗಳೂ ಮುಂತಾದ ಅನೇಕ ವಿಧವಾದ ಆಭರಣಗಳನ್ನೂ ನಾವು ಧರಿಸುತ್ತೇವೆ.

**ಆಡೈ ಉಡುಪ್ಪೋಂ ಅದನ್ಪಿನ್ನೇ ಪಾಲ್‌ಶೋರುಮೂಡ ನೆಯ್ ಪೆಯ್ದ್ ಮುಳಂಗೈ ವಳಿವಾರ** :- ಹೊಸ ವಸ್ತ್ರಗಳನ್ನು ಧರಿಸುವೆವು - ಅದಾದ ಮೇಲೆ ಹಾಲಿನಲ್ಲಿ ಕಲೆಸಿದ ಅನ್ನವನ್ನು, ಅದು ಮುಳುಗುವಷ್ಟು, ಸಮೃದ್ಧಿಯಾಗಿ ಮೊಳಕೈವರೆಗೆ ಹರಿಯುವಷ್ಟು ತುಪ್ಪವನ್ನು ಬೆರೆಸಿ -

**ಕೂಡಿಯಿರುನ್ದು ಕುಳಿರ್ನ್ದ್** : ಅದನ್ನು ನೀನೂ ನಾವೂ ಒಟ್ಟಿಗೆ ಸೇರಿ ನಾವೆಲ್ಲರೂ ಭುಜಿಸಿ ಸಂತೋಷಪಡಬೇಕು ಎನ್ನುತ್ತಾರೆ.

ಗೋಪಿಯರು ಹಿಂದೆ 2ನೆಯ ಪಾಶುರದಲ್ಲಿ ಈ ವ್ರತವನ್ನು ಆರಂಭಿಸುವಾಗ ತುಪ್ಪ ಹಾಲು ತೆಗುದುಕೊಳ್ಳುವುದಿಲ್ಲವೆಂದೂ, ಹೂವು ಕಾಡಿಗೆಗಳನ್ನು ಧರಿಸುವುದಿಲ್ಲವೆಂದೂ, ಹೇಳಿದರು. ಈಗ ಅವರ ವ್ರತವು ಮುಗಿದು ಶ್ರೀಕೃಷ್ಣ ಪರಮಾತ್ಮನ ಬಳಿ ಬಂದ ಮೇಲೆ ತಾವು ಆಭರಣಗಳನ್ನೂ ಒಳ್ಳೆಯ ವಸ್ತ್ರಗಳನ್ನೂ

ಧರಿಸಿ, ಕ್ಷೀರಾನ್ನವನ್ನು ಭುಜಿಸಿ, ಪರಮಾತ್ಮನೊಂದಿಗೆ ಸೇರಿ ಸಂತೋಷದಿಂದ ಇರುವುದಾಗಿ ತಿಳಿಸಿದ್ದಾರೆ.

**ಎಲ್‌ಓರ್ ಎಂಪಾವಾಯ್** :- ಹೀಗೆ ಇಂದು ಪರಮಾತ್ಮನೊಂದಿಗೆ ಸೇರಿ ಅವನಿಂದ ಈ ಸನ್ಮಾನಗಳನ್ನೆಲ್ಲಾ ಪಡೆದು ತಮ್ಮ ವ್ರತವನ್ನು ಶುಭವಾಗಿಯೂ, ಸಂತೋಷವಾಗಿಯೂ, ನೆರವೇರಿಸುವುದಾಗಿ ತಿಳಿಸಿದ್ದಾರೆ.

## ವಿಶೇಷಾರ್ಥ

ಪರಮಾತ್ಮನೇ ನೀನು ಚೇತನರಿಗೆ ಶರೀರ, ಇಂದ್ರಿಯಗಳನ್ನೂ ಶಾಸ್ತ್ರಗಳನ್ನೂ ಕೊಟ್ಟಿದ್ದರೂ, ಅನೇಕರು ನಿನಗೆ ಕೈಂಕರ್ಯ ಮಾಡುವುದರಲ್ಲಿ ನಿರತರಾಗುತ್ತಿಲ್ಲ. ನಿನಗೆ ಕೈಂಕರ್ಯ ಮಾಡುವುದಿಲ್ಲವೆಂದು ಹಟ ಹಿಡಿಯುವವರನ್ನೂ ಕೂಡ ನೀನು ನಿನ್ನ ಸೌಶೀಲ್ಯ, ಶೌರ್ಯಾದಿಗುಣಗಳಿಂದ ನಿನ್ನ ಕಡೆಗೆ ತಿರುಗಿಸಿ ಕೊಳ್ಳುವ ಕಲ್ಯಾಣ ಗುಣವುಳ್ಳವನಾಗಿದ್ದೀಯೆ. ನಾವು ನಿನ್ನ ಬಳಿ ಬಂದು ನಿನಗೆ ಮಂಗಳಾಶಾಸನ ಮಾಡಿ ಕೈಂಕರ್ಯ ಪುರುಷಾರ್ಥವನ್ನು ಪಡೆದಮೇಲೆ ನಾವು ಹೊಂದುವ ಸನ್ಮಾನಗಳು ಯಾವುವೆಂದರೆ -

**ಶೂಡಹಮೇ, ತೋಳ್ವಳೆಯೇ, ತೋಡೇ ಶೆವಿಪ್ಪೂವೇ, ಪಾಡಹಮೇ ಎನ್ರನೈಯ ಪಲ್ ಕಲನುಂಯಾಂಅಣಿವೋಂ** :- ಭಗವತ್ಪಾದಾಕೃತಿ ಎಂಬ ಊರ್ಧ್ವ - ಪುಂಡ್ರವನ್ನು ಧರಿಸಿ, ಶಂಖ ಚಕ್ರಾಂಕಗಳನ್ನು ತೋಳಿಗೆ ಆಭರಣವಾಗಿ ಧರಿಸಿ, ಆತ್ಮಸ್ವರೂಪಯಾಥಾತ್ಮ್ಯ ಜ್ಞಾನವನ್ನು ತಿಳಿಸುವ ನಿತ್ಯವಕ್ತವ್ಯವಾದ ಅಂದರೆ ನಿತ್ಯವೂ ಸದಾ ಹೇಳುತ್ತಿರಬೇಕಾದ 'ಓಂ ನಮೋ ನಾರಾಯಣಾಯ' ಎಂಬ ಮಂತ್ರೋಪದೇಶವನ್ನು ಕಿವಿಗೆ ಆಭರಣವಾಗಿ ಪಡೆದು, ತಿರುಮಂತ್ರಾರ್ಥವನ್ನು ಪ್ರತಿಪಾದಿಸುವ ಭಕ್ತಿ ಉಂಟುಮಾಡುವ ನಿತ್ಯಜಪ್ತವ್ಯವಾದ 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ' ಎಂಬ ದ್ವಯಾನುಸಂಧಾನವನ್ನು ಕರ್ಣಪುಷ್ಪವಾಗಿ

ಹೊಂದಿ, ಕಾಲಿಗೆ ಆಭರಣವಾಗಿ ದಿವ್ಯದೇಶಯಾತ್ರೆಯ ಭಾಗ್ಯವನ್ನು ಪಡೆದು, 'ಸರ್ವಧರ್ಮಾನ್ ಪರಿತ್ಯಜ್ಯ ಮಾಂ ಏಕಂ ಶರಣಂ ವ್ರಜ' ಎಂಬ ಚರಮ ಶ್ಲೋಕಾರ್ಥವು ಪ್ರತಿಪಾದಿಸುವಂತೆ ಕರ್ಮ,ಜ್ಞಾನ ಭಕ್ತಿ ಸಾಧನೆಗಳನ್ನೆಲ್ಲಾ ಭಗವತ್ಪ್ರಾಪ್ತಿಗೆ ಕಾಲ್ಕಟ್ಟುಗಳೆಂದರಿತು, ಅವುಗಳೆಲ್ಲದರಲ್ಲೂ ಉಪಾಯ ಬುದ್ಧಿಯನ್ನು ತ್ಯಜಿಸಿ, ಅವುಗಳೆಲ್ಲವನ್ನೂ ಭಗವತ್ಕೈಂಕರ್ಯವಾಗಿ ಆಚರಿಸುತ್ತಾ ಭಗವಂತನಲ್ಲಿ ಶರಣಾಗತಿ ಮಾಡುವ ಈ ಆತ್ಮಾನುಗುಣವಾದ ಆಭರಣಗಳನ್ನೆಲ್ಲಾ ನೀನೇ ನಮಗೆ ಅನುಗ್ರಹಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ.

ಈ ಪಾಶುರದಲ್ಲಿ ಕುಲಶೇಖರ ಆಳ್ವಾರ್ರವರು ಮುಕುಂದ ಮಾಲೆಯಲ್ಲಿ 'ಜಿಹ್ವೇಕೀರ್ತಯ ಕೇಶವಂ' - ಎಂಬ ಶ್ಲೋಕದಲ್ಲಿ ತಿಳಿಸಿರುವಂತೆ ತತ್ತ್ವಾರ್ಥ ತಿಳಿಸಲ್ಪಟ್ಟಿದೆ. ಬಾಯಿಗೆ ಭಗವನ್ನಾಮ ಹೇಳುವುದನ್ನೂ, ಮನಸ್ಸಿಗೆ ಭಗವಂತನನ್ನು ಸ್ಮರಿಸುತ್ತಾ ಭಜಿಸಿವುದನ್ನೂ, ಕೈಗಳಿಗೆ ಭಗವಂತನಿಗೆ ಕೈಂಕರ್ಯ ಮಾಡುವುದನ್ನೂ, ಕಿವಿಗಳಿಗೆ ಭಗವನ್ನಾಮ ಕೇಳುವುದನ್ನೂ, ಕಣ್ಣಿಗೆ ಭಗವಂತನ ದಿವ್ಯ ಮೂರ್ತಿಯನ್ನು ನೋಡುವುದನ್ನೂ, ಮೂಗಿಗೆ ಭಗವಂತನ ಪಾದಲ್ಲಿ ಸಮರ್ಪಿಸಿರುವ ತುಳಸೀ ಪುಷ್ಪಾದಿಗಳ ಪರಿಮಳದ ವಾಸನೆ ನೋಡುವುದನ್ನೂ, ತಲೆಗೆ ಭಗವಂತನಿಗೆ ನಮಸ್ಕಾರ ಮಾಡುವುದನ್ನೂ - ಇವೆಲ್ಲವನ್ನೂ ಆಭರಣವಾಗಿ ಹೊಂದಿ ಭಗವಂತನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಭಗವದನುಭವ ಪಡೆಯುವಂತೆ ಗೋದಾದೇವಿಯು ಉಪದೇಶ ನೀಡಿದ್ದಾಳೆ ಎಂಬ ತತ್ತ್ವಾರ್ಥವೂ ತಿಳಿಸಲ್ಪಟ್ಟಿದೆ.

**ಆಡೈ ಉಡುಪ್ಪೋಂ ಅದನ್ಪಿನ್ನೈಪಾಲ್‌ಶೋರು ಮೂಡ ನೆಯ್ ಪೆಯ್ದು ಮುಳಂಗೈವಳಿವಾರ** :- ಆತ್ಮಶ್ರೇಯಸ್ಸನ್ನು ಉಂಟುಮಾಡುವ ಜ್ಞಾನ ಭಕ್ತಿ ವೈರಾಗ್ಯಾದಿಗಳ ಮತ್ತು ನಾವು ದಾಸರು ನೀನು ಸ್ವಾಮಿ ಎಂಬ ಜ್ಞಾನದ ಹೊದಿಕೆ ಹೊಂದಿ, ತದನಂತರ ಪರಮ ಭಕ್ತಿಯಿಂದ ಕೂಡಿದವರಾಗಿ ನಿನಗೆ ಕೈಂಕರ್ಯ ಮಾಡುವ ಭಾಗ್ಯವನ್ನು ದಯಪಾಲಿಸು ಎಂದು ಪ್ರಾರ್ಥಿಸುತ್ತಾರೆ. ಇಲ್ಲಿ ಆಡೈ -

ಎಂಬುದಕ್ಕೆ ದಿವ್ಯ ಜ್ಞಾನದ ಹೊದಿಕೆ ಎಂದೂ, ಪಾಲ್ - ಎಂಬುದಕ್ಕೆ ಭಗವತ್ ಕೈಂಕರ್ಯವೆಂದೂ, ನೆಯ್ - ಎಂಬುದಕ್ಕೆ ಭಕ್ತಿಯೆಂದೂ ವಿಶೇಷಾರ್ಥವನ್ನು ಹೇಳಿದ್ದಾರೆ. ಅಂದರೆ ನಾವು ದಿವ್ಯಜ್ಞಾನ ಪಡೆದು ನಿನ್ನಲ್ಲಿ ಪರಮ ಭಕ್ತಿ ಹೊಂದಿ ನಿನಗೆ ಕೈಂಕರ್ಯಮಾಡುತ್ತಾ ಆನಂದ ಪಡುವವರಾಗಬೇಕು. ಅಂಥಹ ಮನೋಭಾವನೆ ನಮಗೆ ಉಂಟುಮಾಡು ಎಂದು ಪ್ರಾರ್ಥಿಸುತ್ತಾರೆ ಎಂಬ ವಿಶೇಷಾರ್ಥವೂ ತಿಳಿಸಲ್ಪಟ್ಟಿದೆ.

**ಕೂಡಿಯಿರುಂದ್‌ಕುಳಿರ್‌ನ್ದ್** :- ಹೀಗೆ ನಿನ್ನೊಂದಿಗೆ ಜ್ಞಾನಪುರಸ್ಸರವಾಗಿ ಸೇರಿಕೊಂಡ ಮೇಲೆ ನಮ್ಮ ವಿಶ್ಲೇಷವ್ಯಸನವು ನೀಗಿ ಸಂತೋಷವಾಗಿ ಇರುತ್ತೇವೆ.

**ಏಲೋರೆಂಪಾವಾಯ್** :- ಇಂದು ನಾವು ನಿನ್ನಿಂದ ಈ ವಿಶೇಷವಾದ ಸನ್ಮಾನಗಳನ್ನು ಪಡೆದು ನಮ್ಮ ವ್ರತವನ್ನು ಸಾಂಗವಾಗಿ ನೆರವೇರಿಸಿದ್ದೇವೆ ಎನ್ನುತ್ತಾರೆ-

'ಕೂಡಿಯಿರನ್ದು ಕುಳಿರ್‌ನ್ದು' ಎಂಬುದಕ್ಕೆ ಇನ್ನೊಂದು ತತ್ತ್ವಾರ್ಥವನ್ನೂ ತಿಳಿಸಿದ್ದಾರೆ - "ಅಹಮನ್ನಂ ಅಹಮನ್ನಂ ಅಹಮನ್ನಂ । ಅಹಮನ್ನಾದೋ ಅಹಮನ್ನಾದೋ ಅಹಮನ್ನಾದಃ"। ಅಂದರೆ ಮುಕ್ತನು ಮೋಕ್ಷದಲ್ಲಿ ಭಗವಂತನಿಗೆ ಅನ್ನವು ಅಂದರೆ ಭೋಗ್ಯವಸ್ತುವು ಎಂದೂ; ಭಗವಂತನು ಮುಕ್ತನಿಗೆ ಅನ್ನವು ಅಂದರೆ ಭೋಗ್ಯವಸ್ತುವು ಎಂದೂ ಶ್ರುತಿಯಲ್ಲಿ ಹೇಳಿದೆ. ಮುಕ್ತನಿಂದ ಸಕಲ ಕೈಂಕರ್ಯಗಳನ್ನೂ ಮಾಡಿಸಿಕೊಂಡು ಅನುಭವಿಸುವುದೇ ಭಗವಂತನಿಗೆ ಭೋಗ್ಯವಾದುದು. ಅದೇ ರೀತಿ ಭಗವಂತನಿಗೆ ಎಲ್ಲಾ ಕೈಂಕರ್ಯಗಳನ್ನೂ ಮಾಡಿ ಅವನನ್ನು ಸಂತೋಷಗೊಳಿಸುವುದೇ, ಮುಕ್ತನಿಗೆ ಭೋಗ್ಯವಾದುದಾಗಿದೆ. ಇದೇ 'ಕೂಡಿಯಿರಂದ್ ಕುಳಿನ್ರ್ದು' ಎಂಬುದರ ಅರ್ಥ. ಅಂದರೆ ಚೇತನ ಮತ್ತು ಪರಮಾತ್ಮ ಇಬ್ಬರೂ ಒಬ್ಬರೊಂದಿಗೆ ಒಬ್ಬರು ಕಲೆತು ಸಂತೋಷಗೊಳ್ಳುವುದು; ಇವನು ಕೈಂಕರ್ಯಮಾಡಿ, ಅವನು ಕೈಂಕರ್ಯಗೊಂಡು ಸಂತೋಷಿಸುವುದು ಎಂದು ಅರ್ಥ ಹೇಳಿದ್ದಾರೆ.

''ಸೋಽಶ್ನುತೇ ಸರ್ವಾನ್ ಕಾಮಾನ್ ಸಹಬ್ರಹ್ಮಣಾ ವಿಪಶ್ಚಿತಾ'' ಎಂಬುದು ಶ್ರುತಿವಾಕ್ಯ. ಪರಮ ಪದದಲ್ಲಿ ಬ್ರಹ್ಮನನ್ನು ಉಪಾಸಿಸುವುದೇ ಮತ್ತು ಭಗವಂತನೊಂದಿಗೆ ಕೂಡಿ (ಸೇರಿ) ಆನಂದವನ್ನು ಅನುಭವಿಸುವುದೇ ಮುಕ್ತನಿಗೆ ಫಲವು. ಅವನಿಗೆ ಅದೇ ಉದ್ದೇಶ; ಇತರ ಪುರುಷಾರ್ಥಗಳಲ್ಲಿ ಮನಸ್ಸು ಹೋಗಲಾರದು.

ಹಿಂದಿನ 26ನೇ ಪಾಶುರದಲ್ಲಿ ಸಾಮ್ಯಾಪತ್ತಿಯು ಅಂದರೆ ಮೋಕ್ಷ ಹೊಂದುವ ಜೀವನು ಪಡೆಯುವ ಭಗವತ್ ಸಾರೂಪ್ಯವು ತಿಳಿಸಲ್ಪಟ್ಟಿದೆ. ಅಂದರೆ ಮುಕ್ತನಾದ ಜೀವಾತ್ಮನು ಪರಮಾತ್ಮನೊಂದಿಗೆ ಆನಂದದಲ್ಲಿ ಪರಮಸಾಮ್ಯ ಹೊಂದುತ್ತಾನೆ ಎಂಬ ಸಾಮ್ಯಾಪತ್ತಿ ಎಂಬ ಮೋಕ್ಷವು ತಿಳಿಸಲ್ಪಟ್ಟಿದೆ. ಈಗ ಈ 27ನೇ ಪಾಶುರದಲ್ಲಿ ಸಾಯುಜ್ಯಾಪತ್ತಿಯು ತಿಳಿಸಲ್ಪಟ್ಟಿದೆ. ಅಂದರೆ ಭಗವಂತನ ಕಲ್ಯಾಣ ಗುಣಗಳನ್ನೂ ಭಗವದನುಭವದ ಆನಂದವನ್ನೂ ಅವನೊಂದಿಗೆ ಕೂಡಿ ಇದ್ದು ಅನುಭವಿಸುತ್ತಾನೆ. ಇದೇ ಸಾಯುಜ್ಯ ಮೋಕ್ಷವು. ಇದು ಈ ಪಾಶುರದಲ್ಲಿ ತಿಳಿಸಲ್ಪಟ್ಟಿದೆ. ಗೋಪಿಗಳು ಕೃಷ್ಣ ಪರಮಾತ್ಮನು ಅವತರಿಸಿದ ಕಾಲದಲ್ಲಿ ಇದ್ದುದರಿಂದ ಅವರಿಗೆ ಕೃಷ್ಣನು ಇದ್ದ ಸ್ಥಳವೇ ಪರಮಪದವಾಗಿದ್ದಿತು. ಗೋಪಿಗಳೇ ಮುಕ್ತಾತ್ಮರಾಗಿದ್ದರು. ಇವರಿಗೆ ಅವನೊಂದಿಗೆ ಕೂಡಿ ಇದ್ದು, ಅವನಿಗೆ ಸಂತೋಷವಾಗಿ ಕೈಂಕರ್ಯ ಮಾಡುವುದೇ ಪರಮಪುರುಷಾರ್ಥವಾಗಿದ್ದಿತು. ಅದನ್ನೇ ಇಲ್ಲಿ ಕೂಡಿಯಿರನ್ದುಕುಳಿರ್ನ್ದ' ಎಂದು ಗೋದಾದೇವಿಯು ಹೇಳಿದ್ದಾಳೆ ಮತ್ತು ಅದನ್ನೇ ಈ ಪಾಶುರದಲ್ಲಿ ಅನುಭವಿಸಿ ಪ್ರಾರ್ಥಿಸಿದ್ದಾಳೆ ಎಂಬ ವಿಶೇಷಾರ್ಥವನ್ನು ನಮ್ಮ ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.

ಈ ಪಾಶುರದಲ್ಲಿ 'ಕೂಡಿ ಇರುನ್ದು ಕುಳಿರ್‌ನ್ದು' ಎಂದು ಹೇಳಿರುವುದು ಸಾರವತ್ತಾದ ವಿಷಯವಾಗಿದೆ. ಹಿಂದೆ ವೈಯ್ಯತ್ತುವಾಳ್ವೀರ್‌ಹಾಳ್' ಎಂಬ 2ನೆಯ ಪಾಶುರದಲ್ಲಿ ವ್ರತವನ್ನು ಆರಂಭಿಸುವಾಗ ಹಾಲು, ತುಪ್ಪ ಮುಂತಾದ ಭೋಗ್ಯ ಪದಾರ್ಥಗಳನ್ನೂ, ಹೂವು, ಕಾಡಿಗೆ, ಬೆಲೆ ಬಾಳುವ ವಸ್ತ್ರಾದಿ ಅಲಂಕಾರಗಳನ್ನೂ ತ್ಯಜಿಸುವುದಾಗಿ ಹೇಳಿದರು. ಆದರೆ ಈಗ ಈ 28ನೇ ಪಾಶುರದಲ್ಲಿ ಭಗವನ್ನಾಮ

ಸಂಕೀರ್ತನೆ ಮಾಡಿ, ಭಗವಂತನ ಬಳಿ ಬಂದು ಅವನ ಕೈಂಕರ್ಯ ಪುರುಷಾರ್ಥವನ್ನು ಪಡೆದಮೇಲೆ, ತಮ್ಮ ವ್ರತವು ಶುಭವಾಗಿ ನೆರವೇರಿ ತಮಗೆ ಭಗವದನುಭವ ಲಭಿಸಿ ಭಗವತ್ಕೈಂಕರ್ಯ ಪುರುಷಾರ್ಥವನ್ನು ಪಡೆದಮೇಲೆ, ಪರಮಾತ್ಮನೊಂದಿಗೆ ಕಲೆತ ಮೇಲೆ ತಾವು ಆಭರಣಗಳನ್ನೂ, ಒಳ್ಳೆಯ ವಸ್ತ್ರಗಳನ್ನೂ ಧರಿಸುವುದಾಗಿಯೂ, ಹಾಲಿನಲ್ಲಿ ಮಾಡಿದ ಅನ್ನಕ್ಕೆ ಅದು ಮುಳುಗಿ ಕೆಳಗೆ ಹರಿಯುವಷ್ಟು ಯಥೇಚ್ಛವಾಗಿ ತುಪ್ಪ ಬೆರೆಸಿ ಸೇವಿಸುವುದಾಗಿಯೂ, ಇವೆಲ್ಲವನ್ನೂ ಅನುಭವಿಸಿ ಆನಂದ ಪಡುವುದಾಗಿಯೂ ತಿಳಿಸಿದ್ದಾರೆ. ಇದೇ ಕೂಡಿ ಇರನ್ದು ಕುಳಿರ್‌ನ್ದ್' ಎಂಬುದರ ಅರ್ಥ.

ಸೀತಾದೇವಿಯು ರಾಮನನ್ನು ಬಿಟ್ಟು ವಿಶ್ಲೇಷ ದೆಶೆಯಲ್ಲಿರುವಾಗ ಒಳ್ಳೆಯ ವಸ್ತ್ರಗಳನ್ನಾಗಲಿ, ಆಭರಣಗಳನ್ನಾಗಲಿ ಧರಿಸದೆ ಸದಾ ರಾಮಧ್ಯಾನದಲ್ಲಿಯೇ ಕಾಲ ಕಳೆಯುತ್ತಿದ್ದುದಾಗಿ ಶ್ರೀರಾಮಾಯಣದಲ್ಲಿ ತಿಳಿಸಿದೆ. ಅದೇ ರೀತಿ ಗೋಪಿಗಳೂ ಕೃಷ್ಣನನ್ನು ಬಿಟ್ಟಿದ್ದ ಕಾಲದಲ್ಲಿ ಇವೆಲ್ಲವನ್ನೂ ಬಿಟ್ಟಿರುವುದಾಗಿಯೂ, ಕೃಷ್ಣನ ಬಳಿ ಬಂದ ಮೇಲೆ ಅವನೊಡನೆ ಕಲೆತು ಇವೆಲ್ಲವನ್ನೂ ಸಂತೋಷವಾಗಿ ಧರಿಸುವುದಾಗಿಯೂ, ಭುಜಿಸುವುದಾಗಿಯೂ ತಿಳಿಸಿದ್ದಾರೆ.

ಇದನ್ನೇ ಈಶಾವಾಸ್ಯೋಪನಿಷತ್ತಿನ ಮೊದಲನೆಯ ಶ್ಲೋಕವು ತಿಳಿಸುತ್ತದೆ.

**ಈಶಾವಾಸ್ಯಮಿದಂಸರ್ವಂ**
**ಯತ್ಕಿಂಚ ಜಗತ್ಯಾಂಜಗತ್**
**ತೇನತ್ಯಕ್ತೇನ ಭುಂಜೀಥಾಃ**
**ಮಾಗೃಧಃ ಕಸ್ಯ ಚಿತ್‌ಧನಂ ||**

ಅಂದರೆ ''ಈ ಜಗತ್ತೆಲ್ಲವೂ, ನೀನೂ ಕೂಡ ಈಶ್ವರನ ಸ್ವತ್ತು. ಆದ್ದರಿಂದ ನಿನಗೆ ಲಭಿಸುವುದನ್ನೆಲ್ಲಾ, ಭಗವಂತನು ನಿನಗೆ ಅನುಗ್ರಹಿಸಿರುವ ವರಪ್ರಸಾದವೆಂದು ಭಾವಿಸಿ, ಭಕ್ತಿಯಿಂದ ಸ್ವೀಕರಿಸಿ, ಭಗವತ್ ಸ್ಮರಣೆಯೊಂದಿಗೆ ಅನುಭವಿಸು'' ಎಂದು ಹೇಳಿದೆ.

ಭಗವದ್ಗೀತೆಯ 9ನೇ ಅಧ್ಯಾಯದ 27ನೇ ಶ್ಲೋಕದಲ್ಲಿ ಇದನ್ನೇ ತಿಳಿಸಿದೆ.

ಯತ್ಕರೋಷಿಯದಶ್ನಾಸಿ
ಯಜ್ಜುಹೋಸಿ ದದಾಸಿಯತ್
ಯತ್ತಪಸ್ಯಸಿ ಕೌಂತೇಯ
ತತ್ಕುರುಷ್ವ ಮದರ್ಪಣಂ ॥

ಅಂದರೆ ''ನೀನು ಯಾವ ಯಾವ ಕಾರ್ಯಗಳನ್ನು ಮಾಡುವೆಯೋ, ಏನೇನು ತಿನ್ನುವೆಯೋ (ಅನುಭವಿಸುವೆಯೋ) ಎಲ್ಲವನ್ನೂ ನನಗೆ ಅರ್ಪಿತವಾಗಿ ಮಾಡು'' ಎಂದು ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಉಪದೇಶಮಾಡಿದ್ದಾನೆ. ಅಂದರೆ ನಾವು ನಮಗೂ ಪರಮಾತ್ಮನಿಗೂ ಇರುವ ನಿಕಟ ಸಂಬಂಧಜ್ಞಾನ ಪಡೆದವರಾಗಿ, ಅನನ್ಯಾರ್ಹ ಶೇಷತ್ವಜ್ಞಾನ ಅಂದರೆ ನಾವು ಅವನಿಗೆ ಶೇಷಭೂತರು, ದಾಸರು ಎಂಬ ಜ್ಞಾನದೊಂದಿಗೆ ನಾವು ಮಾಡುವ ಸಕಲ ಕರ್ತವ್ಯಗಳನ್ನೂ ಅವನ ಕೈಂಕರ್ಯವೆಂಬುದಾಗಿ ಮಾಡಬೇಕು ಮತ್ತು ನಾವು ಅನುಭವಿಸುವ ಅನ್ನಪಾನ ಭಕ್ಷ್ಯ ಭೋಜ್ಯಾದಿಗಳೆಲ್ಲವನ್ನೂ ಅವನ ಪ್ರಸಾದವೆಂದರಿತು ಅವನ ಸ್ಮರಣೆಯೊಂದಿಗೆ ಕಲೆಸಿ ಭಕ್ತಿ ಸಂತೋಷಗಳಿಂದ ಅನುಭವಿಸಬೇಕು ಎಂದು ಅರ್ಥ. ಇದನ್ನೇ ಇಲ್ಲಿ ಗೋದಾದೇವಿಯು 'ಕೂಡಿಯಿರನ್ದುಕುಳಿರ್‌ನ್ದು' ಎಂದು ಹೇಳಿದ್ದಾಳೆ.

ಇಂದು ದೇವಸ್ಥಾನಗಳಲ್ಲಿ ನಡೆಯುವ ಉತ್ಸವಗಳಲ್ಲಿ ಕೂಡ 'ಕೂಡಿಯಿರನ್ದು ಕುಳಿರ್‌ನ್ದು' ಎಂಬುದರ ಅಭಿಪ್ರಾಯವು ಕಂಡುಬರುತ್ತದೆ. ದೇವಸ್ಥಾನಗಳಲ್ಲಿ ಅನೇಕ ಭಕ್ತರು ಒಟ್ಟಿಗೆ ಸೇರಿ ಭಗವಂತನ ರಥೋತ್ಸವ, ಬ್ರಹ್ಮೋತ್ಸವ, ಕಲ್ಯಾಣೋತ್ಸವ ಮುಂತಾದ ಉತ್ಸವಗಳ ಸಂಭ್ರಮವನ್ನು ಅನುಭವಿಸಿ, ವಿಶೇಷವಾದ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಆನಂದಪಡುವುದೂ- ''ಕೂಡಿಯಿರನ್ದು ಕುಳಿರ್‌ನ್ದು'' ಎಂದು ಅವನೊಂದಿಗೆ ಸೇರಿ ಆನಂದ ಪಡುವುದಕ್ಕಾಗಿಯೇ ಎಂದು ತಿಳಿಸಿದ್ದಾರೆ. ಈ ಆನಂದಾನುಭವವನ್ನು ಪಡೆಯುವುದಕ್ಕಾಗಿಯೇ ಗೃಹಗಳಲ್ಲಿಯೂ ಕೂಡ ಹಬ್ಬಗಳು ಆಚರಿಸಲ್ಪಡುತ್ತವೆ ಎಂದೂ ತಿಳಿಸಿದ್ದಾರೆ.

# ಪಾಶುರ - 28

28, 29ನೇ ಪಾಶುರಗಳು ಶರಣಾಗತಿ ಪಾಶುರಗಳಾಗಿವೆ. ಈ 28ನೇ ಪಾಶುರವು ದ್ವಯಮಂತ್ರದ ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೆ'' ಎಂಬ ಪೂರ್ವ ವಾಕ್ಯವನ್ನು ವಿವರಿಸುತ್ತದೆ.

ಈ ಪಾಶುರದಲ್ಲಿ ಗೋಪಿಯರು ತಮ್ಮ ಆಕಿಂಚನ್ಯವನ್ನು ಉಪಾಯಾಂತರ ರಾಹಿತ್ಯವನ್ನು ಅಂದರೆ ಭಗವಂತನನ್ನು ಹೊಂದಲು, ಅವನನ್ನು ಬಿಟ್ಟು ತಮ್ಮ ಹತ್ತಿರ ಬೇರೆಯಾವ ಉಪಾಯವೂ ಇಲ್ಲ, ಅವನೇ ಉಪಾಯವೆಂಬುದನ್ನು ತಿಳಿಸುತ್ತಾರೆ ಮತ್ತು ಪರಮಾತ್ಮನನ್ನು ಹೊಂದಲು ಮಾಡಬೇಕಾದ ಸಾಧನಗಳಾವುದನ್ನೂ ಅನುಷ್ಠಿಸುವ ಯೋಗ್ಯತೆಯನ್ನು ತಾವು ಪಡೆದಿಲ್ಲವೆಂದೂ, ತಮಗೆ ಪರಮಾತ್ಮನೇ ಪರಮ ಪುರುಷಾರ್ಥವನ್ನು ಕರುಣಿಸಬೇಕೆಂದೂ ಅವನನ್ನು ಪ್ರಾರ್ಥಿಸುತ್ತಾರೆ. ಇದು ಪ್ರಾರ್ಥನಾ ಪರವಾದ ಪಾಶುರವಾಗಿದೆ.

ಕರವೈಹಳ್ ಪಿನ್ ಶೆನ್ರು ಕಾನಮ್ ಶೇರ್‌ನ್ದುಣ್ಬೋಂ
ಅರಿವೊನ್ರುಮಿಲ್ಲಾದ ಆಯ್‌ಕುಲತ್ತು ಉನ್‌ತನ್ನೈ
ಪ್ಪಿರವಿ ಪೆರುನ್ದನೈ ಪುಣ್ಣಿಯಮ್ ಯಾಮುಡೈಯೋಮ್
ಕುರೈವೊನ್ರುಮಿಲ್ಲಾದ ಗೋವಿಂದಾ ! ಉನ್ ತನ್ನೋಡು
ಉರವೇಲ್ ನಮಕ್ಕಿಙ್ಗೊಳಿಕ್ಕ ವೊಳಿಯಾದು
ಅರಿಯಾದ ಪಿಳ್ಳೈಹಳೋಮನ್ಬಿನಾಲ್ ಉನ್ ತನ್ನೈ
ಚ್ಚಿರುಪೇರಳೈತ್ತನವುಮ್ ಶೀರಿಯರುಳಾದೇ
ಇರೈವಾ ನೀತಾರಾಯ್ ಪರೆಯೇಲೋರೆಮ್ಬಾವಾಯ್.

''ಹಸುಗಳ ಹಿಂದೆ ಹೋಗಿ, ಕಾಡನ್ನು ಸೇರಿ, ಊಟ ಮಾಡುವೆವು. ಸ್ವಲ್ಪವೂ ತಿಳಿವಳಿಕೆ ಇಲ್ಲದ ನಮ್ಮ ಗೋಪಕುಲದಲ್ಲಿ ನೀನು ಜನ್ಮ ಪಡೆದಿರುವ ಮಹಾಪುಣ್ಯವನ್ನು ನಾವು ಪಡೆದಿದ್ದೇವೆ. ಯಾವ ಕೊರತೆಯೂ ಇಲ್ಲದ ಗೋವಿಂದನೇ ! ನಿನ್ನೊಂದಿಗೆ ನಮಗೆ ಇರುವ ಸಂಬಂಧವನ್ನು ಬೇರ್ಪಡಿಸಲಾಗುವುದಿಲ್ಲ. ನಾವು ಏನೂ ಅರಿಯದ ಬಾಲೆಯರು. ಪ್ರೀತಿಯಿಂದ ನಿನ್ನನ್ನು ಚಿಕ್ಕ ಹೆಸರಿನಿಂದ ಕರೆದಿದ್ದೇವೆ. ಕೋಪಿಸಿಕೊಳ್ಳಬೇಡ. ಸ್ವಾಮಿಯೇ ! ನಮ್ಮ ಇಷ್ಟಾರ್ಥಗಳನ್ನು ನೀನೇ ಅನುಗ್ರಹಿಸು. ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

**ಕರವೈಹಳ್ ಪಿನ್‌ಶೆನ್ರು ಕಾನಂ ಶೇರ್‌ನ್ದು ಉಣ್ಬೋ** :- ಹಸುಗಳ ಹಿಂದೆ ಹೋಗಿ ಕಾಡನ್ನು ಸೇರಿ ತಿನ್ನುವೆವು - ಅಂದರೆ ನಮ್ಮ ಶರೀರ ಪೋಷಣೆ ಮಾಡುವೆವು. ನಮಗೆ ಹಸುಗಳೇ ಆಚಾರ್ಯರು. ''ಜ್ಞಾನೇನ ಹೀನಃ ಪಶುಭಿಃ ಸಮಾನಃ'' ಅಂದರೆ ಜ್ಞಾನವಿಲ್ಲದವನು ಹಸುವಿಗೆ ಸಮಾನನು ಎಂದು ಹೇಳಿರುವಂತೆ ಜ್ಞಾನವಿಲ್ಲದ ಹಸುಗಳನ್ನು ಹಿಂಬಾಲಿಸಿ ಹೋಗುವವರು ನಾವು. ನಾವು ನೈಮಿಷಾರಣ್ಯ ಮುಂತಾದ ಯಾವ ಪುಣ್ಯ ಕ್ಷೇತ್ರವನ್ನು ಹುಡುಕಿಕೊಂಡು ಹೋಗುತ್ತಿಲ್ಲ; ಕೇವಲ ಹಸುಗಳ ಹಿಂದೆ ಅವುಗಳು ಹೋಗುವ ಅರಣ್ಯಕ್ಕೆ ಹೋಗುತ್ತಿದ್ದೇವೆ. ಗೋಪಕುಲದ ಧರ್ಮಕಾರ್ಯವೆಂದು ಹಸುಗಳನ್ನು ಮೇಯಿಸುತ್ತಿಲ್ಲ. ಕೇವಲ ಹೊಟ್ಟೆಪಾಡಿಗಾಗಿ ಅದನ್ನು ಮಾಡುತ್ತಿದ್ದೇವೆ. ಕಾಡನ್ನು ಸೇರಿ ಅಲ್ಲೇ ಊಟ ಮಾಡಿ ನಮ್ಮ ಶರೀರ ಪೋಷಣೆ ಮಾಡಿಕೊಳ್ಳುತ್ತಿದ್ದೇವೆ. ಸ್ನಾನ ಮಾಡಿ, ದೇವರಿಗೆ ಅರ್ಪಣೆ ಮಾಡಿ ಊಟಮಾಡಬೇಕೆಂಬ ಯಾವ ನಿಯಮವನ್ನೂ ಅರಿತು ಆಚರಿಸುವವರಲ್ಲ ನಾವು, ಅಂದರೇನು, ಯಾವ ಕರ್ಮಾನುಷ್ಠಾನವೂ ನಮ್ಮಲ್ಲಿ ಇಲ್ಲ ಎನ್ನುತ್ತಾರೆ.

ಇಲ್ಲಿ ಹಸುಗಳು ಎಂಬುದಕ್ಕೆ ವಿಶೇಷಾರ್ಥದ ಪ್ರಕಾರ ಸಂಸಾರಿಗಳು ಎಂದೂ ಕಾನಂ ಎಂಬುದಕ್ಕೆ ಸಂಸಾರ ಎಂದೂ ಅರ್ಥ ಹೇಳಿದ್ದಾರೆ. ನಾವು ಸಂಸಾರಿಗಳ ಹಿಂದೆ ಹೋಗಿ, ಅಂದರೆ ಅವರ ಅನುಕರಣೆ ಮಾಡುತ್ತಾ, ಸಂಸಾರ ತಾಪತ್ರಯ

ದಲ್ಲಿ ಸಿಕ್ಕಿ ನಮ್ಮ ಶರೀರ ಪೋಷಣೆಯಲ್ಲಿ ನಿರತರಾಗಿದ್ದೇವೆಯೇ ಹೊರತು ಬೇರೆ ಯಾವ ಕರ್ಮಾನುಷ್ಠಾನವನ್ನೂ ಅರಿತು ಆಚರಿಸುತ್ತಿಲ್ಲ. ಉದರ ಪೋಷಣ ಪರರಾಗಿ ಹೊಟ್ಟೆ ತುಂಬಿಸಿಕೊಳ್ಳುವುದೇ ನಮಗೆ ಪುರುಷಾರ್ಥ ಎನ್ನುತ್ತಾರೆ.

**ಅರಿವೊನ್ರುಮಿಲ್ಲಾದ ಆಯ್‌ಕುಲಂ :-** ಸ್ವಲ್ಪವೂ ತಿಳಿವಳಿಕೆ ಇಲ್ಲದ ಗೋಪಕುಲ ನಮ್ಮದು.

ಅರಿವು ಇಲ್ಲಾದ
ಅರಿವೊನ್ರು ಇಲ್ಲಾದ — **ಅತಿ ಸ್ವಲ್ಪವೂ ಅರಿವಿಲ್ಲದ ಗೋಪಕುಲ**
ಅರಿವೊನ್ರುಂ ಇಲ್ಲಾದ

ಜೀವನು ಅನಾದಿಕಾಲದಿಂದ ಪ್ರಕೃತಿ ಸಂಬಂಧ ಹೊಂದಿದವನಾಗಿ ಇರುವುದರಿಂದ ಅವನಿಗೆ ಪ್ರಕೃತಿ ಬೇರೆ, ಆತ್ಮ ಬೇರೆ ಎಂಬ ಜ್ಞಾನವಿಲ್ಲ. ಶರೀರವೇ ಆತ್ಮ ಎಂಬ ಜ್ಞಾನ ನಮ್ಮಲ್ಲಿ ಬೇರೂರಿದೆ. ಆತ್ಮನ ಯಥಾರ್ಥ ಜ್ಞಾನ ಬೋಧಿಸಲು ನಮಗೆ ಸರಿಯಾದ ಆಚಾರ್ಯರಾರೂ ಇಲ್ಲ, ಜ್ಞಾನ ರಹಿತವಾದ ಹಸುಗಳನ್ನೇ ನಾವು ಹಿಂಬಾಲಿಸುತ್ತಿರುವುದರಿಂದ, ನಮಗೆ ಆತ್ಮ ಪರಮಾತ್ಮರ ಜ್ಞಾನ ಉಂಟಾಗಲು ಅವಕಾಶವೇ ಇಲ್ಲ, ಹೀಗಾಗಿ ನಮಗೆ ಜ್ಞಾನವೂ ಇಲ್ಲ, ಕರ್ಮಾನುಷ್ಠಾನವೂ ಇಲ್ಲ, ನಾವಾಗಿ ಆಚರಿಸುವ ಯಾವ ಪುಣ್ಯವೂ ಇಲ್ಲ ಎನ್ನುತ್ತಾರೆ.

**ಉನ್‌ತನ್ನೈ ಪಿರವಿ ಪೆರುಂದನ್ನೈ ಪುಣ್ಣಿಯಂಯಾಂ ಉಡ್ಡೈಯೋಂ :-** ಆದರೆ ನಮ್ಮ ಗೋಪಕುಲದಲ್ಲಿ ನೀನು ಹುಟ್ಟಿರುವುದರಿಂದ ಸಾಕ್ಷಾತ್ ಧರ್ಮನಾದ ನಿನ್ನನ್ನು ಪಡೆದಿರುವ ಮಹಾ ಪುಣ್ಯವನ್ನು ನಾವು ಹೊಂದಿದ್ದೇವೆ.

26ನೇ ಪಾಶುರದಲ್ಲಿ ವ್ರತಕ್ಕೆ ಬೇಕಾದ ಸಲಕರಣೆಗಳನ್ನೂ, 27ನೇ ಪಾಶುರದಲ್ಲಿ ವ್ರತಾಚರಣೆಯಿಂದ ಲಭಿಸುವ ಸನ್ಮಾನಗಳನ್ನೂ ತಿಳಿಸಿದ್ದಾರೆ. ತತ್ವಾರ್ಥದ ಪ್ರಕಾರ ತಮಗೆ ಸಾಮ್ಯಾಪತ್ತಿ ಮೋಕ್ಷವನ್ನೂ, ಸಾಯುಜ್ಯ ಮೋಕ್ಷವನ್ನೂ ದಯಪಾಲಿಸ ಬೇಕೆಂದು ಪ್ರಾರ್ಥಿಸಿದ್ದಾರೆ. ಹೀಗೆ ಐಹಿಕ ಆಮುಷ್ಮಿಕ ಮೋಕ್ಷಹೊಂದಲು ನಿಮ್ಮ

ಹತ್ತಿರ ಇರುವ ಉಪಾಯವೇನು ? ಜ್ಞಾನ ಭಕ್ತಿ ಅನುಷ್ಠಾನಗಳು ಏನಾದರೂ ಇವೆಯೇ ? ಎಂದು ಕೇಳಿದರೆ; ನಮ್ಮ ಬಳಿ ಕರ್ಮಜ್ಞಾನ ಯೋಗಸಾಧನೆಗಳಿಲ್ಲ ವೆಂಬುದು ನಿಜ, ಸ್ವಪ್ರಯತ್ನದಿಂದ ನಾವಾಗಿ ಪಡೆದ ಪುಣ್ಯವಾವುದೂ ಇಲ್ಲ; ಆದರೆ ನಮ್ಮ ಗೋಪಕುಲದಲ್ಲಿ ನೀನು ಹುಟ್ಟಿರುವುದರಿಂದ ನಮಗೆ ಒಂದು ದೊಡ್ಡ ಪುಣ್ಯವಿದೆ, 'ಕೃಷ್ಣಂಧರ್ಮಂಸನಾತನಂ' ಎಂದು ಹೇಳಿರುವ ಸಾಕ್ಷಾತ್ ಧರ್ಮನಾದ ನಿನ್ನನ್ನು ಪಡೆದಿರುವ ಮಹಾಪುಣ್ಯವು ತಾನಾಗಿಯೇ ನಿನ್ನ ಕೃಪೆಯಿಂದ ನಮಗೆ ಲಭಿಸಿದೆ ಎಂದು ಗೋಪಿಗಳು ಹೇಳುತ್ತಾರೆ.

ಇಂದಿಗೂ, ನಮಗೂ ಈ ಮಹಾಪುಣ್ಯವುಂಟು. ಪ್ರತಿಜೀವಿಯಲ್ಲೂ ಪರಮಾತ್ಮನು ಅಂತರ್ಯಾಮಿಯಾಗಿ ನೆಲೆಸಿದ್ದಾನೆ. ಪರಮಾತ್ಮನನ್ನು ಅಂತರಾತ್ಮನಾಗಿ, ಸ್ವಾಮಿಯಾಗಿ ಪಡೆದಿದ್ದೇವೆ. ಅವನಿಗೆ ಶರೀರವಾಗಿ, ಅವನಿಂದ ನಿಯಮಿಸಲ್ಪಡುವರಾಗಿದ್ದೇವೆ. ಆದ್ದರಿಂದ ನಮಗೆ ಪರಮಾತ್ಮನೊಂದಿಗೆ ನಿತ್ಯ ಸಂಬಂಧ ಇದ್ದೇ ಇದೆ. ಇಂತಹ ಮಹಾಪುಣ್ಯವನ್ನು ನಾವು ಪಡೆದಿದ್ದೇವೆ. ಆದರೆ ಇದರ ಅರಿವು ನಮಗೆ ಉಂಟಾಗಬೇಕು ಅಷ್ಟೆ.

**ಕುರೈವೊನ್ರುಮಿಲ್ಲಾದ ಗೋವಿಂದ :-** ಯಾವ ಕೊರತೆಯೂ ಇಲ್ಲದ ಗೋವಿಂದನೇ - ನಿನಗೆ ಯಾವ ಕೊರತೆಯೂ ಇಲ್ಲ, ನೀನು ಪೂರ್ಣನು

ಕುರೈ ಇಲ್ಲಾದ
ಕುರೈ ಒನ್ರು ಇಲ್ಲಾದ — **ಅತಿ ಸ್ವಲ್ಪವೂ ಕೊರತೆ ಇಲ್ಲದವನು ನೀನು**
ಕುರೈ ಒನ್ರುಂ ಇಲ್ಲಾದ

ಅರಿವೊಂದೂ ಇಲ್ಲದವರು ತಾವು ಎಂದು ತಮ್ಮ ಕೀಳುತನವನ್ನೂ, ಕೊರತೆ ಒಂದೂ ಇಲ್ಲದ ಪರಿಪೂರ್ಣನು ನೀನು ಎಂದು ಅವನ ಹಿರಿಮೆಯನ್ನೂ ಇಲ್ಲಿ ಭಗವಂತನಿಗೆ ಅರಿಕೆ ಮಾಡುತ್ತಾರೆ. ಇದು ಶರಣಾಗತಿಗೆ ಬೇಕಾದ ಒಂದು ಅಂಶವಾಗಿದೆ. ಶರಣಾಗತನಾಗುವ ಭಕ್ತನು ತನ್ನ ಆಕಿಂಚನ್ಯವನ್ನೂ, ಅಂದರೆ ತನ್ನ ಬಳಿ ಯಾವ ಸಾಧನಾನುಷ್ಠಾನವೂ ಇಲ್ಲ ಎಂಬುದನ್ನೂ, ಅನನ್ಯಗತಿತ್ವವನ್ನೂ,

ಅಂದರೆ ತನಗೆ ಬೇರೆ ಯಾರೂ ಗತಿ ಇಲ್ಲ ಎಂಬುದನ್ನೂ, ಪರಮಾತ್ಮನ ಸರ್ವಜ್ಞತ್ವ ಸರ್ವಶಕ್ತಿತ್ವಾದಿ ಹಿರಿಮೆಯನ್ನೂ, ಪರಮಾತ್ಮನಲ್ಲಿ ಅರಿಕೆ ಮಾಡಿಕೊಳ್ಳಬೇಕು.

**ಗೋವಿಂದ** : ಗೋವಿಂದನೇ ! ನೀನು ಕೊರತೆ ಒಂದೂ ಇಲ್ಲದೆ ಪರಿಪೂರ್ಣನಾಗಿದ್ದಾಗ್ಯೂ, ನಮ್ಮ ಗೋಪಕುಲದಲ್ಲಿ ಅವತರಿಸಿ ಗೋಪಾಲರನ್ನೂ, ಗೋವುಗಳನ್ನೂ ರಕ್ಷಿಸುತ್ತಿರುವ ಗೋವಿಂದನೇ ಎಂದು ಅವನನ್ನು ಸಂಬೋಧನೆ ಮಾಡಿ ಕರೆಯುತ್ತಾರೆ.

ಪರಮಾತ್ಮನ ಸಹಸ್ರನಾಮಗಳಲ್ಲಿ 'ಓಂ ನಮೋ ನಾರಾಯಣಾಯ' ಎಂಬ ಚಿಕ್ಕ ಅಷ್ಟಾಕ್ಷರ ಮಂತ್ರವು ಶ್ರೇಷ್ಠವಾಗಿದೆ. ಅದಕ್ಕಿಂತ ಇನ್ನೂ ಚಿಕ್ಕದಾದ 3 ಅಕ್ಷರದ ಗೋವಿಂದನಾಮವು ನಮಗೆ ಅತ್ಯಂತ ಶ್ರೇಷ್ಠವಾದ ಮತ್ತು ಪ್ರಿಯವಾದ ನಾಮವಾಗಿದೆ ಎಂದು ಅಭಿಪ್ರಾಯ.

ಭಗವಂತನು ಸಿದ್ಧಧರ್ಮ, ಅವನೇ ಸಿದ್ಧೋಪಾಯ, ಅವನು ಕೊರತೆ ಇಲ್ಲದ ಉಪಾಯ. ಇತರ ಕರ್ಮ, ಜ್ಞಾನ, ಭಕ್ತ್ಯಾದಿ ಉಪಾಯಗಳಿಗೆಲ್ಲಾ ಕೊರತೆ ಉಂಟು. ಅದೇನೆಂದರೆ ಇತರ ಸಾಧನೆಗಳಿಂದ ಲಭಿಸುವ ಫಲವು ಅವರವರು ಅನುಷ್ಠಿಸುವ ಸಾಧನೆಗಳಿಗೆ ತಕ್ಕಂತೆ ಲಭಿಸುತ್ತದೆ. ಮತ್ತು ಅದಕ್ಕೆ ತಕ್ಕಂತೆ ಅಲ್ಪವೂ ಅಸ್ಥಿರವೂ ಆಗಿರುತ್ತದೆ. ಅವುಗಳನ್ನು ಪೂರ್ತಿಯಾಗಿ ಅನುಷ್ಠಿಸದಿದ್ದರೆ ಫಲವು ಲಭಿಸುವುದಿಲ್ಲ. ಅವುಗಳನ್ನು ಅನುಷ್ಠಿಸಲು ಚೇತನನ ಪ್ರಯತ್ನವಿರಬೇಕು ಮತ್ತು ಫಲ ಕೊಡಲು ಪರಮಾತ್ಮನ ಇಚ್ಛೆ ಇರಬೇಕು, ಈ ಕೊರತೆಗಳೆಲ್ಲಾ ಸಿದ್ಧೋಪಾಯನಾದ ಪರಮಾತ್ಮನಿಗೆ ಇಲ್ಲ. ಅವನು ಕೊರತೆ ಒಂದೂ ಇಲ್ಲದ ಗೋವಿಂದನು.

**ಉನ್‌ತನ್ನೋಡು ಉರವೇಲ್ ನಮಕ್ಕು ಇಂಗು ಒಳಿಕ್ಕ ಒಳಿಯಾದ್** : ನಿನಗೂ ನಮಗೂ ಇರುವ ಸಂಬಂಧವನ್ನು ಇಲ್ಲಿ ಯಾರೂ ಬೇರ್ಪಡಿಸಲಾಗುವುದಿಲ್ಲ. ನಿನ್ನಿಂದಲೂ ಸಾಧ್ಯವಿಲ್ಲ, ನಮ್ಮಿಂದಲೂ ಸಾಧ್ಯವಿಲ್ಲ. (ಏಕೆಂದರೆ ನಿನಗೂ ನಮಗೂ ಅನಾದಿಯಾದ ಸಂಬಂಧವಿದೆ.)

ಜೀವಾತ್ಮನಿಗೂ ಪರಮಾತ್ಮನಿಗೂ ಅತ್ಯಂತ ನಿಕಟವಾದ ಸಂಬಂಧವಿದೆ. ಶರೀರಕ್ಕೆ ಆತ್ಮನಂತೆ, ಆತ್ಮನಿಗೆ ಪರಮಾತ್ಮ ಅಂತರಾತ್ಮನಾಗಿದ್ದಾನೆ. "ಉಡನ್ ಮಿಶೈ ಉಯಿರೆನ ಕರಂದೆಂಗುಂಪರಂದುಳನ್" ಅಂದರೆ ಶರೀರಕ್ಕೆ ಆತ್ಮನಿರುವಂತೆ, ಪರಮಾತ್ಮನು ಅಂತರಾತ್ಮನಾಗಿ ಎಲ್ಲೆಲ್ಲೂ ವ್ಯಾಪಿಸಿದ್ದಾನೆ ಎಂದು ಶ್ರೀ ನಮ್ಮಾಳ್ವಾರ್ರವರು ತಿರುವಾಯ್ಮೊಳಿಯಲ್ಲಿ ಹೇಳಿದ್ದಾರೆ. ಪರಮಾತ್ಮನಿಗೂ ಚೇತನರಿಗೂ ಬಹು ಪ್ರಕಾರವಾದ ಸಂಬಂಧವಿದ್ದರೂ ಅದರಲ್ಲಿ ಮುಖ್ಯವಾಗಿ ನವವಿಧ ಸಂಬಂಧವುಂಟು. ಅವನು ಚೇತನರಿಗೆ ಪಿತಾ, ರಕ್ಷಕ, ಶೇಷಿ (ಯಜಮಾನ), ಭರ್ತಾ, ಜ್ಞೇಯ (ತಿಳಿಯಲ್ಪಡತಕ್ಕವನು), ಸ್ವಾಮಿ, ಆಧಾರ, ಆತ್ಮ, ಭೋಕ್ತ ಆಗಿದ್ದಾನೆ. ಚೇತನರು ಅವನಿಗೆ ಮಕ್ಕಳು, ರಕ್ಷ್ಯರು (ರಕ್ಷಿಸಲ್ಪಡುವವರು), ಶೇಷಭೂತರು (ದಾಸರು), ಭಾರ್ಯೆಯರು, ಜ್ಞಾತೃಗಳು, ಸ್ವತ್ತು, ಆಧೇಯರು, ಶರೀರಗಳು, ಭೋಗ್ಯರು ಆಗಿದ್ದಾರೆ. ಹೀಗೆ ಚೇತನರು ಪರಮಾತ್ಮನೊಂದಿಗೆ ನಿಕಟಸಂಬಂಧ ಹೊಂದಿದ್ದಾರೆ, ಆದ್ದರಿಂದ ಅವನೇ ನಮಗೆ ಅತ್ಯಂತ ಹತ್ತಿರದ ಬಂಧುವು.

ಹೀಗೆ ತಂದೆ, ರಕ್ಷಕ, ಸ್ವಾಮಿ ಮುಂತಾಗಿ ನಮಗೆ ಸಮಸ್ತ ಬಂಧುವು ನೀನೇ ಆಗಿರುವುದರಿಂದ ನೀನು ನಮ್ಮ ಇಷ್ಟಾರ್ಥಗಳನ್ನು ಕರುಣಿಸಬೇಕೆಂದು ಪ್ರಾರ್ಥಿಸುತ್ತಾರೆ. ನಿನ್ನ ಸ್ವತ್ತಾದ, ಮಕ್ಕಳಾದ ನಮ್ಮನ್ನು ಕಾಪಾಡುವುದು ನಿನಗೇ ಸೇರಿದೆಯಲ್ಲವೇ ಎಂದು ಹೇಳುತ್ತಾರೆಂದು ಅಭಿಪ್ರಾಯ. ನಮ್ಮ ಮತ್ತು ನಿನ್ನ ಸಂಬಂಧ ನೋಡಿದರೆ ನೀನೇ ನಮ್ಮ ಇಷ್ಟಾರ್ಥಗಳನ್ನು ನೆರವೇರಿಸ ಬೇಕಾಗುತ್ತದೆಯಲ್ಲವೇ ! ಎನ್ನುತ್ತಾರೆ.

**ಅರಿಯಾದ ಪಿಳ್ಳೈ ಹಳೋಂ ಅನ್ಬಿನಾಲ್ ಉನ್‌ತನ್ನೈ ಶಿರುಪ್ಪೇರ್ ಅಳೈತ್ತನವುಂ ಶೀರಿ ಅರುಳಾದೆ :-** ನಾವು ಏನೂ ಅರಿಯದ ಬಾಲೆಯರು, ಪ್ರೀತಿಯಿಂದ ನಿನ್ನನ್ನು ಚಿಕ್ಕ ಹೆಸರಿನಿಂದ ಕರೆದಿದ್ದೇವೆ, ಕೋಪಗೊಳ್ಳಬೇಡ ಎನ್ನುತ್ತಾರೆ.

ಇಂದಿನವರೆಗೆ ಅವನ ಪರತ್ವವ್ಯೂಹಾದಿಗಳನ್ನು ಸೂಚಿಸುವ 'ನಾರಾಯಣ' 'ಪಾರ್ಕಡಲುಳ್‌ಪ್ಪೆಯ್ಯ ತುಯಿನ್ರ ಪರಮನ್' ಎಂದೆಲ್ಲಾ ಕರೆಯುತ್ತಿದ್ದ ಗೋಪಿಗಳು ಈಗ ಅವನ ಬಳಿ ಬಂದ ಮೇಲೆ 'ಮಾಲೇ' ಎಂದೂ 'ಗೋವಿಂದ' ಎಂದೂ ಅವನ ಸೌಶೀಲ್ಯ,ಸೌಲಭ್ಯ, ವಾತ್ಸಲ್ಯ, ಆಶ್ರಿತವ್ಯಾಮೋಹಾದಿ ಕಲ್ಯಾಣ ಗುಣಗಳನ್ನು ತಿಳಿಸುವ ನಾಮಗಳಿಂದ ಕರೆಯಲು ಪ್ರಾರಂಭಿಸಿದ್ದಾರೆ. ವಾಸ್ತವದಲ್ಲಿ ಪರತ್ವ ಸೂಚಕ ನಾಮಗಳಾದ ನಾರಾಯಣಾದಿ ನಾಮಗಳೇ ಮೇಲಾದ ನಾಮಗಳು. ಆದರೆ ಭಗವಂತನೊಂದಿಗೆ ಪ್ರೀತಿಯಿಂದ ಮಾತಾಡುವಾಗ ಅವನ ಸಂಬಂಧ ಸೂಚಕವಾದ ನಾಮಗಳನ್ನು ಹೇಳಿ ಕರೆಯದೆ ಅವನ ಹಿರಿತನವನ್ನು ಸೂಚಿಸುವ ನಾಮಗಳಿಂದ ಕರೆಯುವುದು ಹಿತವೆನಿಸುವುದಿಲ್ಲ, ಹೇಗೆಂದರೆ ತಂದೆ, ತಾಯಿಯವರನ್ನು ಮಕ್ಕಳು ಅಪ್ಪ, ಅಮ್ಮ ಎಂದು ಕರೆದರೆ ತೃಪ್ತಿಯಾಗುತ್ತದೆಯೇ ವಿನಃ ಅವರನ್ನು ಮರ್ಯಾದೆಯಿಂದ ಅವರ ಹೆಸರನ್ನಾಗಲಿ, ಅವರ ದೊಡ್ಡ ಉದ್ಯೋಗಗಳನ್ನಾಗಲಿ ಹೇಳಿ ಕರೆದರೆ ಅವರಿಗೆ ಎಂದಿಗೂ ತೃಪ್ತಿಯಾಗುವುದಿಲ್ಲವಲ್ಲವೇ !

ಅದೂ ಅಲ್ಲದೆ ನಿನ್ನ ಮಹಿಮೆಯನ್ನು ತಿಳಿಯದೆ ಅಜ್ಞಾನದಿಂದಲೂ, ಮಹಿಮೆ ತಿಳಿದರೂ ಕೆಲವು ವೇಳೆ ಪ್ರೀತಿಯಿಂದಲೂ, ನಿನ್ನನ್ನು ಏಕವಚನದಲ್ಲಿ ಗೌರವ ವಿಲ್ಲದೆ ನಿನ್ನ ಹೆಸರು ಹಿಡಿದು ಕೂಗಿ ನಾವು ತಪ್ಪು ಮಾಡಿದ್ದೇವೆ. ಅದನ್ನೆಲ್ಲಾ ನೀನು ಸಹಿಸಿಕೊಂಡು ನಮ್ಮ ಮೇಲೆ ಕೋಪಗೊಳ್ಳದೆ, ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಬೇಕು, ನಾವು ಮಾಡಿರುವ ತಪ್ಪುಗಳನ್ನೆಲ್ಲಾ ಸಹಿಸಿಕೊಂಡು ನಮ್ಮನ್ನು ಕ್ಷಮಿಸು ಎಂದು ಅಪರಾಧಕ್ಷಮಾಪಣವನ್ನು ಪ್ರಾರ್ಥಿಸುತ್ತಾರೆ.

**ಇರೈವಾ ನೀತಾರಾಯ್ ಪರೈ** :- ಸ್ವಾಮಿಯೇ ! ನಮ್ಮ ಇಷ್ಟಾರ್ಥಗಳನ್ನು ನೀನೇ ಅನುಗ್ರಹಿಸು, ನಮ್ಮಿಂದ ಯಾವುದನ್ನೂ ಅಪೇಕ್ಷಿಸದೆ, ನಮ್ಮ ಇಷ್ಟಾರ್ಥಗಳನ್ನು ನೆರವೇರಿಸಿ ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ- ಮೋಕ್ಷಪ್ರದತ್ವ ಅಂದರೆ ಮೋಕ್ಷವನ್ನು ಕೊಡುವುದು ಭಗವಂತನೊಬ್ಬನಿಗೇ ಸಾಧ್ಯವಾದುದು, ಬೇರೆ

ಯಾರೂ ಅದನ್ನು ಅನುಗ್ರಹಿಸಲು ಶಕ್ತರಲ್ಲ. ಇದನ್ನೇ 'ನಾರಾಯಣನೇ ನಮಕ್ಕೇ ಪರೈತರುವಾನ್' ಎಂದು ಮೊದಲನೆಯ ಪಾಶುರದಲ್ಲೇ ಸ್ಪಷ್ಟವಾಗಿ ತಿಳಿಸಿದ್ದಾರೆ. ಅನಂತರ ಇವರು 'ಮುಪ್ಪತ್ತು ಮೂವರ್' ಎಂಬ 20ನೇ ಪಾಶುರದಲ್ಲಿ 'ಉಕ್ಕಮುಂ ತಟ್ಟೊಳಿಯಂ ತಂದ್, ಉನ್‌ಮಣಾಳನ್ನೈ' ಎಂದು ಪುರುಷಕಾರಕ್ಕಾಗಿ ಶ್ರೀದೇವಿಯನ್ನು ಪ್ರಾರ್ಥಿಸಿದ್ದಾರೆ. ಅವಳಿಗೆ ಪುರುಷಕಾರತ್ವ ಅಂದರೆ ಚೇತನನನ್ನು ರಕ್ಷಿಸುವಂತೆ ಪರಮಾತ್ಮನನ್ನು ಪ್ರೇರೇಪಿಸುವ ಶಕ್ತಿ ಮಾತ್ರ ಉಂಟು, ಮೋಕ್ಷ ಪ್ರದತ್ವ ಶಕ್ತಿ ಪರಮಾತ್ಮನೊಬ್ಬನಿಗೇ ಉಂಟು. ಆದ್ದರಿಂದ ಇಲ್ಲಿ 'ಇರೈವಾ ನೀತಾರಾಯ್ ಪರೈ' ಎಂದು ಅವನನ್ನೇ ಇಷ್ಟಾರ್ಥಸಿದ್ಧಿಗೆ ಪ್ರಾರ್ಥಿಸಿದ್ದಾರೆ.

ಏಲೋ ಎಂಪಾವಾಯ್ :- ನೀನು ನಮಗೆ ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸಿದರೆ ನಮ್ಮ ವ್ರತವು ಶುಭವಾಗಿ ನೆರವೇರುವುದು.

ಪರಮಾತ್ಮನಲ್ಲಿ ಶರಣಾಗತಿ ಮಾಡುವ ಕ್ರಮವು ಈ ಪಾಶುರದಲ್ಲಿ ವಿವರವಾಗಿ ತಿಳಿಸಲ್ಪಟ್ಟಿದೆ. ಮುಖ್ಯವಾಗಿ 6 ವಿಷಯಗಳನ್ನು ಈ ಪಾಶುರವು ತಿಳಿಸುತ್ತದೆ.

1. **'ಕರವೈಹಳ್ ಪಿನ್‌ಶೆನ್ರು ಕಾನಂ ಶೇರ್ನ್ದು ಉಣ್ಬೋಂ'** - ಎಂದು ತಮ್ಮ ಆಕಿಂಚನ್ಯವನ್ನು ಅರಿಕೆ ಮಾಡಿದ್ದಾರೆ. ಮೊದಲು ಭಗವಂತನ ಮುಂದೆ ತಮ್ಮ ಬಳಿ ಕರ್ಮ ಜ್ಞಾನ ಭಕ್ತ್ಯಾದಿ ಕರ್ಮಾನುಷ್ಠಾನವಾವುದೂ ಇಲ್ಲವೆಂಬ ಆಕಿಂಚನ್ಯ ನಿರೂಪಣೆ ಮಾಡಿಕೊಂಡಿದ್ದಾರೆ.

2. **'ಅರಿವೊನ್ರು ಮಿಲ್ಲಾದ ಆಯ್‌ಕುಲಂ'** - ಎಂದು ತಮ್ಮ ಅಯೋಗ್ಯತೆಯ ನಿರೂಪಣೆ ಮಾಡಿದ್ದಾರೆ. ನಮಗೆ ಜ್ಞಾನ ಪಡೆಯುವ ಶಕ್ತಿ ಇಲ್ಲ, ನಮ್ಮಲ್ಲಿ ಯಾವ ಜ್ಞಾನ ನಿಷ್ಠೆಯೂ ಇಲ್ಲ, ನಾವು ಕೇವಲ ಜ್ಞಾನಹೀನವಾದ ಪಶುಗಳ ಹಿಂದೆ ಹೋಗುವವರು ಎಂಬ ತಮ್ಮ ಅಯೋಗ್ಯತೆಯನ್ನು ನಿರೂಪಣೆ ಮಾಡಿಕೊಂಡಿದ್ದಾರೆ.

3. **'ಉನ್‌ತನ್ನೈ ಪಿರವಿಪೆರುಂದನ್ನೈ ಪುಣ್ಣಿಯಂ ಯಾಂ ಉಡ್ಯೈಯೋಂ'** :- ಎಂದು ತಾವು ಪರಮಾತ್ಮನ ನಿತ್ಯ ಸಂಬಂಧ ಪಡೆದಿರುವ ಪುಣ್ಯ ಪ್ರಾಪ್ತಿಯನ್ನೂ ಮತ್ತು 'ಉನ್‌ತನ್ನೋಡು ಉರವೇಲ್ ನಮಕ್ಕು ಇಂಗು ಒಳಿಕ್ಕ ಒಳಿಯಾದು' ಎಂದು ತಮಗೂ ಪರಮಾತ್ಮನಿಗೂ ಇರುವ ಈ ಸಂಬಂಧವು ಯಾರಿಂದಲೂ ಬೇರ್ಪಡಿಸಲಾಗದಂತಹ ಅತ್ಯಂತ ನಿಕಟವಾದ ಸಂಬಂಧವೆಂಬುದನ್ನೂ ಅನುಸಂಧಾನ ಮಾಡಿದ್ದಾರೆ. ಇಲ್ಲಿ ಪರಮಾತ್ಮನು ತಮ್ಮ ಗೋಪಕುಲದಲ್ಲಿ ಅವತರಿಸಿರುವುದರಿಂದ, ತಮಗೆ ಅವನ ಸಂಬಂಧ ಪಡೆದ ಪುಣ್ಯವು ತಾನಾಗಿಯೇ ಲಭಿಸಿದೆ ಎಂದೂ ಮತ್ತು ತಮಗೂ ಅವನಿಗೂ ಇರುವ ಈ ಸಂಬಂಧವು ಯಾರಿಂದಲೂ ಬೇರ್ಪಡಿಸಲಾಗದಂತಹ ಅತ್ಯಂತ ನಿಕಟವಾದ ಸಂಬಂಧವಾಗಿದೆ ಎಂದೂ ತಿಳಿಸಿದ್ದಾರೆ.

4. **'ಕುರೈ ಒನ್ರುಂ ಇಲ್ಲಾದ ಗೋವಿಂದ'** :- ಎಂದು ಪರಮಾತ್ಮನ ಗುಣಪೂರ್ತಿಯನ್ನು ಅನುಸಂಧಾನ ಮಾಡಿದ್ದಾರೆ.

ನೀನು ಯಾವ ಕೊರತೆಯೂ ಇಲ್ಲದವನಾಗಿಯೂ, ಗುಣ ಪೂರ್ತಿ ಉಳ್ಳವ ನಾಗಿಯೂ ಇದ್ದೀಯೆ ಎಂದು ಅವನ ಗುಣ ಪೂರ್ತಿಯನ್ನು ಕೊಂಡಾಡುತ್ತಾರೆ.

5. **'ಅರಿಯಾದ ಪಿಳ್ಳೈಹಳೋಂ ಅನ್ಬಿನಾಲ್ ಉನ್‌ತನ್ನೈ ಶಿರುಪ್ಪೇರ್ ಅಳೈತ್ತನವುಂ ಶೀರಿ ಅರುಳಾದೆ'**- ಎಂದು ಅಪರಾಧ ಕ್ಷಮಾಪಣೆಯ ಪ್ರಾರ್ಥನೆ ಮಾಡಿದ್ದಾರೆ. ನಾವು ಮಾಡಿರುವ ಪೂರ್ವಕೃತ ಅಪರಾಧಗಳನ್ನೆಲ್ಲಾ ಕ್ಷಮಿಸ ಬೇಕೆಂದು ಪ್ರಾರ್ಥಿಸುತ್ತಾರೆ.

6. **'ಇರೈವಾನೀತಾರಾಯ್ ಪರೈ'** :- ಎಂದು ಕೈಂಕರ್ಯ ಪುರುಷಾರ್ಥ ಪ್ರಾಪ್ತಿಗಾಗಿ ಪರಮಾತ್ಮನಲ್ಲಿ ಪ್ರಾರ್ಥನೆ ಮಾಡಿದ್ದಾರೆ. ನೀನೇ ನಮ್ಮ ಸ್ವಾಮಿ, ನೀನೇ ಕೃಪೆ ಮಾಡಿ ನಮ್ಮ ಇಷ್ಟಾರ್ಥಗಳನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಒಟ್ಟಿನಲ್ಲಿ ಈ ಪಾಶುರದಲ್ಲಿ ನಮ್ಮ ಆಕಿಂಚನ್ಯತ್ವವನ್ನೂ, ಅನನ್ಯಗತಿತ್ವವನ್ನೂ

ನೋಡಿದರೂ; ನಿನ್ನ ಸರ್ವಜ್ಞತ್ವ ಸರ್ವಶಕ್ತಿತ್ವವನ್ನೂ ನೋಡಿದರೂ; ನಮ್ಮಿಬ್ಬರಿಗೂ ಇರುವ ಯಾರಿಂದಲೂ ಬೇರ್ಪಡಿಸಲಾಗದಂತಹ ನಿಕಟ ಸಂಬಂಧವನ್ನು ನೋಡಿದರೂ, ನೀನೇ ನಮಗೆ ಕೃಪೆ ಮಾಡಿ, ನಮ್ಮ ಪಾಪಗಳನ್ನು ಹೋಗಲಾಡಿಸಿ ನಮ್ಮ ಇಷ್ಟಾರ್ಥವನ್ನು ಅನುಗ್ರಹಿಸಬೇಕು ಎಂದು ಪ್ರಾರ್ಥಿಸಿದ್ದಾರೆ. ಇವೆಲ್ಲವೂ ಶರಣಾಗತನು ಪರಮಾತ್ಮನಲ್ಲಿ ಮಾಡುವ ಪ್ರಾರ್ಥನೆಯಾಗಿದೆ.

ಈ ಪಾಶುರದಲ್ಲಿ ಪ್ರಾಪಕವು - (ಅಂದರೆ ಹಿತವು ಅಂದರೆ ಪರಮಾತ್ಮನನ್ನು ಹೊಂದಲು ಚೇತನನು ಆಚರಿಸಬೇಕಾದ ಉಪಾಯವು) ತಿಳಿಸಲ್ಪಟ್ಟಿದೆ. ಹಿತವು ಅಥವಾ ಉಪಾಯವು ಹಿತ, ಹಿತಕರ ಮತ್ತು ಹಿತತಮ ಎಂದು ಮೂರು ವಿಧವಾಗಿದೆ.

(1) **ಹಿತ** :- ಕರ್ಮ, ಜ್ಞಾನ, ಭಕ್ತಿ ಯೋಗಗಳನ್ನು ಆಚರಿಸುವುದು ಹಿತ ಅಥವಾ ಉಪಾಯವು.

(2) **ಹಿತಕರ** :- ಅಂದರೆ ಪ್ರಪತ್ತಿಯು - ಪರಮಾತ್ಮನಲ್ಲಿ ನನ್ನನ್ನು ನೀನು ರಕ್ಷಿಸು ಎಂದು ಪ್ರಪತ್ತಿ ಮಾಡುವುದು. ಇದು ಹಿತಕರವಾದುದು ಅಂದರೆ ಕರ್ಮ ಜ್ಞಾನ ಭಕ್ತಿಯೋಗಗಳಿಗಿಂತ ಮೇಲಾದುದು.

(3) **ಹಿತತಮ - ಶರಣಾಗತಿ** :- ಶರಣಾಗತಿ ಎಂದರೆ ಪರಮಾತ್ಮನೇ ಉಪಾಯ, ನಾವು ಮಾಡುವ ಕರ್ಮ ಜ್ಞಾನ, ಭಕ್ತಿ, ಪ್ರಪತ್ತಿ ಯಾವುದೂ ಉಪಾಯವಲ್ಲ, ಅವನೇ ಅಂದರೆ ಪರಮಾತ್ಮನೇ ಉಪಾಯ ಎಂದು ಅವನಲ್ಲಿ ಶರಣಾಗತಿ ಮಾಡುವುದು. ಇದು ಹಿತತಮ ಅಂದರೆ ಎಲ್ಲಕ್ಕಿಂತ ಮೇಲಾದ ಉಪಾಯವು.

ಗೋಪಿಯರಿಗೆ ಹಿತವೆಂಬ ಭಕ್ತಿಯಾಗಲಿ, ಹಿತಕರವೆಂಬ ಪ್ರಪತ್ತಿಯಾಗಲಿ ಉಪಾಯವಾಗಿರಲಿಲ್ಲ. ಹಿತತಮವಾದ ಶರಣಾಗತಿ ಒಂದನ್ನೇ ಅವರು

ಉಪಾಯವಾಗಿ ಅನುಷ್ಠಿಸಿದರು. ನಮ್ಮಲ್ಲಿ ಯಾವ ಅನುಷ್ಠಾನವೂ ಇಲ್ಲ. ನಮಗೆ ನೀನೇ ಉಪಾಯ, ಆದ್ದರಿಂದ ಇರ್ರೈವಾ ನೀತಾರಾಯ್ ಪರೈ ಎಂದು ಪ್ರಾರ್ಥಿಸಿದ್ದಾರೆ. ಅವನ ಕೃಪೆಯೇ ಉಪಾಯವೆಂದಿರುವುದೇ ಶರಣಾಗತಿಯು. ಶರಣಾಗತಿಯನ್ನೂ (ಅಂದರೆ ನಾವು ಅವನನ್ನು ಆಶ್ರಯಿಸಿರುವುದನ್ನೂ) ಉಪಾಯವಾಗಿ ನೆನೆಸಕೂಡದು. ನಾವು ಅವನನ್ನು ಆಶ್ರಯಿಸುವಂತೆ ಮಾಡಿರುವವನೂ ಅವನೇ ಅಲ್ಲವೇ; ಅವನೇ ನಮಗೆ ಉಪಾಯ, ಅವನ ಕೃಪೆಯೇ ಉಪಾಯವೆಂದಿರಬೇಕು. ಇತರ ಕರ್ಮ, ಜ್ಞಾನ, ಭಕ್ತಿ ಪ್ರಪತ್ತಿ ಶರಣಾಗತಿ ಮುಂತಾದ ನಾವು ಮಾಡುವ ಸಾಧನಗಳಾವುವೂ ಉಪಾಯವಲ್ಲ. ಹಾಗೆಂದು ನಾವು ಶರಣಾಗತಿ ಮಾಡದೇ ಇರಕೂಡದು. ಅವನ ಕೃಪೆಗೆ ಅರ್ಹತೆ ಪಡೆಯಲು ನಾವು ನಮ್ಮ ಆಕಿಂಚನ್ಯ ಅನನ್ಯಗತಿತ್ವವನ್ನು ಅಂದರೆ ನಾವು ಯಾವ ಸಾಧನೆಗಳನ್ನೂ ಮಾಡಿಲ್ಲ ಮತ್ತು ನಮಗೆ ಬೇರೆ ಯಾರೂ ರಕ್ಷಕರಿಲ್ಲ ಎಂಬುದನ್ನು ಅವನಿಗೆ ಅರಿಕೆ ಮಾಡಿಕೊಂಡು, ಅವನ ಸರ್ವಜ್ಞತ್ವ, ಸರ್ವ ಶಕ್ತಿತ್ವಾದಿ ಗುಣಗಳನ್ನೂ ಅವನ ಹಿರಿಮೆಯನ್ನೂ ಕೊಂಡಾಡಿ, ಹಾಡಿ, ಅವನಿಗೂ ನಮಗೂ ಇರುವ ಬೇರ್ಪಡಿಸಲಾಗದಂತಹ ನಿಕಟ ಸಂಬಂಧವನ್ನು ಅರಿಕೆಮಾಡಿ, ನಮ್ಮ ಅಪರಾಧಗಳನ್ನು ಕ್ಷಮಿಸುವಂತೆ ಪ್ರಾರ್ಥಿಸಿ ಅವನಲ್ಲಿ ಶರಣಾಗತಿ ಮಾಡಬೇಕೆಂದು ಈ ಪಾಶುರವು ತಿಳಿಸುತ್ತದೆ.

ಜಾಯಮಾನಕಟಾಕ್ಷವೂ, ಸದಾಚಾರ್ಯಸಮಾಗಮವೂ ಇಲ್ಲದವರಿಗೆ, ಭಗವಂತನಲ್ಲಿಶರಣಾಗತಿ ಒಂದೇ ಮಾರ್ಗ ಎಂಬುದನ್ನು ಈ ಪಾಶುರವು ತಿಳಿಸುತ್ತದೆ. ಚೇತನನು ಇಂದಿನ ಜನ್ಮದಲ್ಲಿ ಮಾಡುವ ಸತ್ಕಾರ್ಯಗಳೂ, ಭಗವದ್ಭಕ್ತಿ ಪೂಜಾದಿಗಳೂ ಮುಂದಿನ ಜನ್ಮದಲ್ಲಿ ಜಾಯಮಾನ ಕಟಾಕ್ಷಕ್ಕೂ ಸದಾಚಾರ್ಯ ಸಮಾಗಮಕ್ಕೂ ಕಾರಣವಾಗಬಲ್ಲವು. ಜಾಯಮಾನಕಟಾಕ್ಷವೆಂದರೆ ''ಜಾಯಮಾನಂ ಹಿ ಪುರುಷಂ ಯಃ ಪಶ್ಯೇತ್ ಮಧುಸೂದನಃ'' ಎಂದು ಹೇಳಿರುವಂತೆ ಹಿಂದಿನ ಜನ್ಮದಲ್ಲಿ ಅವನು ಮಾಡಿರುವ ಸತ್ಕರ್ಮ ಪೂಜಾದಿಗಳ

ಫಲವಾಗಿ ಚೇತನನು ಹುಟ್ಟುವುದಕ್ಕೆ ಮುಂಚೆಯೇ ಗರ್ಭವಾಸದಲ್ಲೇ ಅವನಿಗೆ ಭಗವತ್‌ಕಟಾಕ್ಷವುಂಟಾಗುತ್ತದೆ. ಅವನು ಹುಟ್ಟುವಾಗಲೇ ಸತ್ವಗುಣ ಭರಿತನಾಗಿ, ಭಾಗವತರ ಸಮಾಗಮ, ಸದಾಚಾರ್ಯ ಉಪದೇಶಾದಿಗಳನ್ನು ಹೊಂದಿ, ಆದರಿಂದ ಭಗವಂತನಲ್ಲಿ ಪ್ರೀತಿ, ಭಕ್ತಿ ಹೊಂದಿ, ಭಗವತ್ ಕೈಂಕರ್ಯದಲ್ಲಿ ರುಚಿ ಹೊಂದಿ ಕೊನೆಗೆ ಅವನು ಜ್ಞಾನಿಯಾದ ಭಕ್ತನಾಗ ಬಲ್ಲನು. ಈ ಜಾಯಮಾನ ಕಟಾಕ್ಷಕ್ಕೆ ನಮ್ಮಾಳ್ವಾರ್ ಮುಂತಾದ ಆಳ್ವಾರುಗಳೂ ಪ್ರಹ್ಲಾದ ನಾರದಾದಿಗಳೂ ಪಾತ್ರರಾಗಿ ಅವರು ಹುಟ್ಟುವಾಗಲೇ ಭಗವದ್ಭಕ್ತರಾಗಿದ್ದಾರೆ.

ಆದರೆ ಇದು ಸುಲಭ ಸಾಧ್ಯವಾದುದಲ್ಲ; ಅನೇಕ ಜನ್ಮಗಳಲ್ಲಿ ಸತ್ಕಾರ್ಯಗಳನ್ನು ಮಾಡಿದವರಿಗೆ ಮಾತ್ರ ಲಭಿಸುವಂತಹುದು. ಆದ್ದರಿಂದ ಜಾಯಮಾನ ಕಟಾಕ್ಷವೂ, ಸದಾಚಾರ್ಯ ಸಮಾಗಮವೂ ಇಲ್ಲದವರಿಗೆ ಶರಣಾಗತಿ ಒಂದೇ ಮಾರ್ಗ ಎಂಬುದನ್ನು ಈ ಪಾಶುರದಲ್ಲಿ ಗೋಪಿಯರು ಅರಿಕೆ ಮಾಡಿದ್ದಾರೆ. ಅರಿವಿಲ್ಲದ ಹಸುಗಳೇ ಅಂದರೆ ಸಂಸಾರಿಗಳೇ ತಮಗೆ ಮಾರ್ಗದರ್ಶಕರೆಂದೂ, ಅವರನ್ನು ಅನುಕರಣೆ ಮಾಡುತ್ತಾ ಸಾಂಸಾರಿಕ ತಾಪತ್ರಯಗಳಿಗೆ ಸಿಕ್ಕಿ ಶರೀರ ಪೋಷಣೆಯಲ್ಲಿ ತಾವು ನಿರತರಾಗಿರುವುದಾಗಿಯೂ, ತಮಗೆ ಯಾವ ಶಾಸ್ತ್ರಜ್ಞಾನವೂ ಇಲ್ಲವೆಂದೂ, ತಮ್ಮನ್ನು ಭಗವಂತನೇ ರಕ್ಷಿಸಬೇಕೆಂದೂ ಹೇಳುತ್ತಾ ಅವನಲ್ಲಿ ಶರಣಾಗತಿ ಮಾಡಿದ್ದಾರೆ. ತಮ್ಮ ಆಕಿಂಚನ್ಯವನ್ನೂ, ಅನನ್ಯಗತಿತ್ವವನ್ನೂ, ಅವನಿಗೂ ತಮಗೂ ಇರುವ ನಿಕಟ ಸಂಬಂಧವನ್ನೂ, ಅರಿಕೆ ಮಾಡಿಕೊಂಡು, ಅವನ ಹಿರಿಮೆಯನ್ನು ಕೊಂಡಾಡಿ, ತಮ್ಮ ಅಪರಾಧಗಳನ್ನು ಕ್ಷಮಿಸುವಂತೆ ಪ್ರಾರ್ಥಿಸಿ, 'ಇರೈವಾ ನೀತಾರಾಯ್ ಪರೈ' ನೀನೇ ನಮ್ಮ ಇಷ್ಟಾರ್ಥಗಳನ್ನು ಅನುಗ್ರಹಿಸಿ ಕಾಪಾಡಬೇಕು ಎಂದು ಅವನಲ್ಲಿ ಶರಣಾಗತಿ ಮಾಡುತ್ತಾರೆ ಎಂಬುದು ಈ ಪಾಶುರದಲ್ಲಿ ತಿಳಿಸಲ್ಪಟ್ಟಿದೆ.

ಇಲ್ಲಿ ಶರಣಾಗತಿಗೆ ಮುಖ್ಯವಾಗಿ ಇರಬೇಕಾದ ಎರಡು ವಿಷಯಗಳು ತಿಳಿಸಲ್ಪಟ್ಟಿವೆ.

1) ಉಪಾಯಾಂತರಗಳಲ್ಲಿ ಪ್ರವೃತ್ತಿ ಇರಕೂಡದು. ಅಂದರೆ ಪರಮಾತ್ಮನನ್ನು ಬಿಟ್ಟರೆ ಬೇರೆ ಯಾವುದನ್ನೂ ಉಪಾಯವಾಗಿ ನೆನೆಸಕೂಡದು ಮತ್ತು (2) ತಾನು ಮಾಡುವ ಶರಣಾಗತಿಯನ್ನೂ ಅಂದರೆ ಶರಣವರಣವನ್ನೂ ಉಪಾಯವಾಗಿ ನೆನೆಸಕೂಡದು, ಪರಮಾತ್ಮನೇ ಉಪಾಯವೆಂದಿರಬೇಕು, ಅವನ ಕೃಪೆಯನ್ನೇ ಪ್ರಾರ್ಥಿಸುತ್ತಿರಬೇಕು ಎಂದು ಇಲ್ಲಿ ತಿಳಿಸಿದೆ.

ಗೋಪಿಯರು ಇದನ್ನೆಲ್ಲಾ ಸ್ಪಷ್ಟವಾಗಿ ಈ ಪಾಶುರದಲ್ಲಿ ತಿಳಿಸಿದ್ದಾರೆ. ಈ ಶರಣಾಗತಿ ಉಪಾಯವನ್ನೇ ತಾವು ಆಚರಿಸುತ್ತಿರುವುದಾಗಿಯೂ, ಇದನ್ನು ಬಿಟ್ಟರೆ ಬೇರೆಯಾವ ಯೋಗನಿಷ್ಠೆಯೂ ತಮ್ಮಲ್ಲಿ ಇಲ್ಲದಿದ್ದರೂ ತಾವು ಪರಮಾತ್ಮನೊಂದಿಗೆ ನಿಕಟ ಸಂಬಂಧ ಹೊಂದಿರುವ ಭಾಗ್ಯ ಪಡೆದಿರುವುದರಿಂದ ಪರಮಾತ್ಮನೇ ತಮ್ಮನ್ನು ರಕ್ಷಿಸ ಬೇಕೆಂದೂ ಪ್ರಾರ್ಥಿಸಿ ಅವನಲ್ಲಿ ಶರಣಾಗತಿ ಮಾಡಿದ್ದಾರೆ.

ಭಗವದ್ಗೀತೆ, ಮಂತ್ರರತ್ನ ಮತ್ತು ಸ್ತೋತ್ರರತ್ನ ಇವುಗಳಲ್ಲಿ ತಿಳಿಸಿರುವ ಶರಣಾಗತಿ ತತ್ತ್ವವನ್ನು ಈ ಪಾಶುರವು ತಿಳಿಸುತ್ತದೆ.

'ಸರ್ವಧರ್ಮಾನ್ ಪರಿತ್ಯಜ್ಯ ಮಾಂ ಏಕಂ ಶರಣಂ ವ್ರಜ' - ಅಂದರೆ ಸಮಸ್ತ ಧರ್ಮಗಳನ್ನೂ ಪರಿತ್ಯಜಿಸಿ, ನನ್ನೊಬ್ಬನನ್ನೇ ಶರಣು ಹೊಂದು (ಉಪಾಯವಾಗಿ ಆಶ್ರಯಿಸು) ಎಂದು ಶ್ರೀಕೃಷ್ಣಪರಮಾತ್ಮನು ಭಗವದ್ಗೀತೆಯಲ್ಲಿ ವಿಧಿಸಿರುವುದನ್ನೇ ತಿರುಪ್ಪಾವೈಯ ಮೊದಲನೆಯ ಪಾಶುರದಲ್ಲಿ 'ನಾರಾಯಣನೇ ನಮಕ್ಕೇ ಪರೈತರುವಾನ್' ಎಂದು ತಿಳಿಸಿ, ಅದನ್ನನುಸರಿಸಿ ಈಗ ಈ 28ನೇ ಪಾಶುರದಲ್ಲಿ 'ಇರೈವಾ ನೀತಾರಾಯ್ ಪರೈ' ಅಂದರೆ ಸ್ವಾಮಿಯೇ ನೀನೇ ನಮಗೆ ಪುರುಷಾರ್ಥವನ್ನು ಕರುಣಿಸಬೇಕು ಎಂದು ಗೋಪಿಯರು ಪ್ರಾರ್ಥಿಸಿದ್ದಾರೆ.

ಚರಮ ಶ್ಲೋಕದಲ್ಲಿ ವಿಧಿಸಿರುವುದನ್ನು ಅನುಷ್ಠಾನವಾಗಿ ಅನುಸಂಧಾನ ಮಾಡುವ ಮಂತ್ರವಾದ ದ್ವಯ ಮಂತ್ರದ "ಶ್ರೀಮನ್ನಾರಾಯಣ ಚರಣೌ

ಶರಣಂ ಪ್ರಪದ್ಯೇ'' ಎಂಬ ಪೂರ್ವ ವಾಕ್ಯದ ಅರ್ಥವನ್ನೇ ಈ ಪಾಶುರವು ಪ್ರಾರ್ಥನಾ ರೂಪದಲ್ಲಿ ವಿವರಿಸುತ್ತದೆ.

ಶ್ರೀಯಾಮುನಾಚಾರ್ಯರು ರಚಿಸಿರುವ ಸ್ತೋತ್ರ ರತ್ನದಲ್ಲಿ

**ನಧರ್ಮ ನಿಷ್ಠೋಸ್ಮಿ ನ ಚಾತ್ಮ ವೇದೀ**
**ನ ಭಕ್ತಿ ಮಾನ್‌ತ್ವತ್ ಚರಣಾರವಿಂದೇ ।**
**ಅಕಿಂಚನೋ ಅನನ್ಯ ಗತಿ ಶರಣ್ಯ**
**ತ್ವತ್‌ಪಾದ ಮೂಲಂ ಶರಣಂ ಪ್ರಪದ್ಯೇ ॥**

ಅಂದರೆ ನಾನು ಕರ್ಮ ಜ್ಞಾನ ಭಕ್ತಿ ಯೋಗಾದಿಗಳನ್ನು ಆಚರಿಸಿದವನಲ್ಲ, ನಿನ್ನನ್ನು ಬಿಟ್ಟರೆ ನನಗೆ ಬೇರೆ ಯಾವ ಉಪಾಯವೂ ಇಲ್ಲ. ನಿನ್ನ ಪಾದ ಕಮಲಗಳಿಗೇ ಶರಣಾಗಿ ನಿನ್ನನ್ನೇ ಆಶ್ರಯಿಸಿದ್ದೇನೆ' ಎಂದು ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾರೆ. ಅದೇ ರೀತಿ ಗೋಪಿಯರು ಈ ಪಾಶುರದಲ್ಲಿ ತಮ್ಮ ಬಳಿ ಯಾವ ಕರ್ಮಾನುಷ್ಠಾನವೂ ಇಲ್ಲ, ಪರಮಾತ್ಮನೇ ತಮಗೆ ಪುರುಷಾರ್ಥವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಈ ಪಾಶುರದಲ್ಲಿ ಗೋದಾದೇವಿಯು ಪ್ರಾರ್ಥಿಸಿ ತಿಳಿಸಿರುವ ಶರಣಾಗತಿ ತತ್ವವು ಭಗವದ್ಗೀತೆ, ಮಂತ್ರ ರತ್ನ, ಸ್ತೋತ್ರ ರತ್ನಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿವೆ. ಇದು ಶರಣಾಗತಿ ಪ್ರಾರ್ಥನೆಯಾಗಿ ಬಹಳ ಮುಖ್ಯವಾದ ಮತ್ತು ಸರ್ವದಾ ಅನುಸಂಧಾನ ಮಾಡಬೇಕಾದ ಪಾಶುರವಾಗಿದೆ.

# ಪಾಶುರ - 29

ಇದೂ ಶರಣಾಗತಿ ಪಾಶರುವಾಗಿದೆ. ದ್ವಯ ಮಂತ್ರದ ''ಶ್ರೀಮತೇ ನಾರಾಯಣಾಯ ನಮಃ'' ಎಂಬ ಉತ್ತರ ವಾಕ್ಯವನ್ನು ವಿವರಿಸುತ್ತದೆ.

ಶಿತ್ತಂಶಿರುಕಾಲೈ ಎಂಬ 29ನೇ ಪಾಶುರದಲ್ಲಿ ಗೋಪಿಯರು ಭಗವತ್ ಕೈಂಕರ್ಯದಲ್ಲಿ ತಮಗೆ ಇರುವ ರುಚಿಯನ್ನೂ, ಅದನ್ನು ಹೊಂದಲು ತಮಗೆ ಇರುವ ತ್ವರೆಯನ್ನೂ (ಆತುರವನ್ನು) ತಿಳಿಸಿದ್ದಾರೆ. ಪ್ರಾಪ್ಯವಾದುದು ಅಂದರೆ ತಮಗೆ ಬೇಕಾಗಿರುವುದು ಇದುವರೆಗೂ ತಾವು ತಿಳಿಸಿದ ಕೇವಲ 'ಪರೈ' ಎಂಬ ವಾದ್ಯವಲ್ಲ, ಅದು ಭಗವತ್ ಕೈಂಕರ್ಯವು ಎಂಬುದನ್ನೂ ಮತ್ತು ವಿರೋಧಿಗಳ ನಿರಸನಮಾಡಿ ಅದನ್ನು ಪರಮಾತ್ಮನೇ ತಮಗೆ ಅನುಗ್ರಹಿಸಬೇಕು ಎಂಬುದನ್ನೂ ತಿಳಿಸುತ್ತಾರೆ. ಹಿಂದಿನ ಪಾಶುರದಲ್ಲಿ ಪ್ರಾಪಕ ಅಥವಾ ಉಪಾಯ ಅಂದರೆ ತಾವು ಆಚರಿಸುವ ಸಾಧನೆಯನ್ನು ತಿಳಿಸಿದರು. ಈ ಪಾಶುರದಲ್ಲಿ ಪ್ರಾಪ್ಯ ಅಥವಾ ಉಪೇಯ ಅಂದರೆ ತಾವು ಪಡೆಯುವ ಫಲವನ್ನು ತಿಳಿಸುತ್ತಾರೆ. ಭಗವಂತನ ಕೃಪೆಯೇ ಆತ್ಮಶ್ರೇಯಸ್ಸಿಗೆ ಸಾಧನವಾಗಿರುವುದರಿಂದ ಅವನಲ್ಲಿ ಶರಣಾಗತಿಯೇ ಉಪಾಯ ಎಂದು ಅಲ್ಲಿ ತಿಳಿಸಿದ್ದಾರೆ. ಇಲ್ಲಿ ಚೇತನನು ಮಾಡುವ ಭಗವತ್ ಕೈಂಕರ್ಯವೇ ಪುರುಷಾರ್ಥ ಎಂಬುದನ್ನು ತಿಳಿಸಿದ್ದಾರೆ. ಸ್ವಾರ್ಥರಹಿತವಾಗಿ ಮಾಡುವ ಭಗವತ್ ಕೈಂಕರ್ಯವೇ ಪರಮ ಪುರುಷಾರ್ಥವೆಂದೂ, ಅದರ ಪ್ರಾಪ್ತಿಗಾಗಿಯೂ ಮತ್ತು ಅದಕ್ಕೆ ವಿರೋಧಿಗಳಾದ ತಮ್ಮಲ್ಲಿರುವ ಇತರ ಸ್ವಾರ್ಥ ಆಸೆಗಳನ್ನೆಲ್ಲಾ ಮಾರ್ಪಡಿಸುವುದಕ್ಕಾಗಿಯೂ ಪರಮಾತ್ಮನನ್ನು ಈ ಪಾಶುರದಲ್ಲಿ ಪ್ರಾರ್ಥಿಸುತ್ತಾರೆ. ಆದ್ದರಿಂದ ಇದು ಪರಮ ಪುರುಷಾರ್ಥ ಪ್ರಾಪ್ತಿಗಾಗಿ ಮಾಡುವ ಪ್ರಾರ್ಥನೆಯಾಗಿದೆ.

ಶಿತ್ತಂ ಶಿರುಕಾಲ್ಲೆ ವನ್ದುನ್ನೈ ಚ್ಚೇವಿತ್ತು ಉನ್
ಪೊತ್ತಾಮರೈಯಡಿಯೇ ಪೋತ್ತುಂ ಪೊರುಳ್ ಕೇಳಾಯ್
ಪೆತ್ತಂ ಮೇಯ್‌ತ್ತುಣ್ಣುಂ ಕುಲತ್ತಿಲ್‌ಪಿರನ್ದುನೀ
ಕುತ್ತೇವಲೆಜ್ಗಳೈ ಕೊಳ್ಳಾಮಲ್ ಪೋಹಾದು
ಇತ್ತೈ ಪ್ಪರೈ ಕೊಳ್ವಾನನ್ರು ಕಾಣ್ ಗೋವಿಂದಾ !
ಎತ್ತೈಕ್ಕುಮೇಳೇಳ್ ಪಿರವಿಕ್ಕುಂ ಉನ್‌ತನ್ನೋಡು
ಉತ್ತೋ ಮೇ ಯಾವೋಮ್ ಉನಕ್ಕೇನಾಮಾಳ್‌ಚ್ಚೆಯ್‌ವೋಮ್
ಮತ್ತೈನಮ್‌ಕಾಮಜ್ಗಳ್ ಮಾತ್ತೇಲೋರೆಂಮ್ಬಾವಾಯ್

"ಬೆಳ್ಳಂ ಬೆಳಗಿನಜಾವದಲ್ಲಿ ಬಂದು ನಿನ್ನನ್ನು ನಮಸ್ಕರಿಸಿ, ಪೂಜಿಸಿ, ನಿನ್ನ ದಿವ್ಯವಾದ ಕಮಲದಂತೆ ಇರುವ ಪಾದಗಳನ್ನು ಹೊಗಳಿ ಮಂಗಳಾಶಾಸನ ಮಾಡುವುದರ ಪ್ರಯೋಜನವನ್ನು (ಅಭಿಪ್ರಾಯವನ್ನು) ಕೇಳುವವನಾಗು. ಹಸುಗಳನ್ನು ಮೇಯಿಸಿ ತಿಂದು ಜೀವಿಸುವ ನಮ್ಮ ಗೋಕುಲದಲ್ಲಿ ಹುಟ್ಟಿರುವ ನೀನು ನಮ್ಮಿಂದ ಕೈಂಕರ್ಯಗಳನ್ನು (ಸೇವಾಕಾರ್ಯಗಳನ್ನು) ಅಂಗೀಕರಿಸದೇ ಇರಕೂಡದು. ಗೋವಿಂದನೇ ! ನಾವು ಈ ಪರೈ ಎಂಬ ವಾದ್ಯವನ್ನು ಯಾಚಿಸಿ ಬಂದವರಲ್ಲ. ಎಂದೆಂದಿಗೂ ಏಳೇಳು ತಲೆಮರೆಗಳ ಜನ್ಮ ಪರಂಪರೆಗಳಲ್ಲಿಯೂ ನಿನ್ನೊಂದಿಗೆ ಸಂಬಂಧ ಹೊಂದಿದವರಾಗಿ ಇರುತ್ತೇವೆ. ನಿನಗೇ ನಾವು ದಾಸರಾಗಿ ಕೈಂಕರ್ಯ (ಸೇವೆ) ಮಾಡುತ್ತೇವೆ. ನಮ್ಮ ಇತರ ಸ್ವಾರ್ಥ ಆಸೆಗಳನ್ನೆಲ್ಲಾ ನಿನ್ನನ್ನು ಹೊಂದುವ ಕಾಮವಾಗಿ (ಆಸೆಯಾಗಿ) ಮಾರ್ಪಡಿಸು.ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು" - ಇದು ಈ ಪಾಶುರದ ವಾಕ್ಯಾರ್ಥ.

ಈ ಪಾಶುರವು ಕೈಂಕರ್ಯ ಪುರುಷಾರ್ಥ ಪ್ರಾಪ್ತಿಯ ಪ್ರಾರ್ಥನೆಯಾಗಿದೆ ಮತ್ತು ದ್ವಯ ಮಂತ್ರದ ಉತ್ತರ ವಾಕ್ಯಾರ್ಥವನ್ನು ಅಂದರೆ ಶ್ರೀಮತೇ ನಾರಾಯಣಾಯ ನಮಃ ಎಂಬುದರ ಅರ್ಥವನ್ನು ವಿವರಿಸುತ್ತದೆ.

**ಶಿತ್ತಂ ಶಿರುಕಾಲ್ಲೈ ವನ್ದುನ್ನೈ ಚ್ಚೇವಿತ್ತು ಉನ್ ಪೊತ್ತಾಮರೈ ಅಡಿಯೇ ಪೋತ್ತುಂ ಪೊರುಳ್ ಕೇಳಾಯ್** :- ಬೆಳ್ಳಂಬೆಳಗಿನ ಜಾವದಲ್ಲಿ ಬಂದು ನಿನ್ನನ್ನು ಪೂಜಿಸಿ, ನಿನ್ನ ದಿವ್ಯವಾದ, ಪ್ರಕಾಶಮಾನವಾದ ಮತ್ತು ಕಮಲದಂತೆ ಇರುವ ಪಾದಗಳನ್ನು ಹೊಗಳಿ ಮಂಗಳಾಶಾಸನ ಮಾಡುವುದರ ಪ್ರಯೋಜನವನ್ನು ಕಿವಿಗೊಟ್ಟು ಕೇಳುವವನಾಗು ಎನ್ನುತ್ತಾರೆ. ಇಲ್ಲಿ ಅವರಿಗೆ ಭಗವದನುಭವ ಪಡೆಯಬೇಕೆಂಬ ಪ್ರಾಪ್ಯದಲ್ಲಿರುವ ತ್ವರೆಯು (ಆತುರವು) ತಿಳಿಸಲ್ಪಟ್ಟಿದೆ. ಭಗವದನುಭವ ಪಡೆಯುವುದರಲ್ಲಿ ವಿಶೇಷ ತ್ವರೆ ಇರಬೇಕೆಂಬುದನ್ನು ಇಲ್ಲಿ ತಿಳಿಸಿದ್ದಾರೆ.

**ಶಿತ್ತಂ ಶಿರುಕಾಲ್ಲೈವನ್ದು** :- ಶಿತ್ತಂಶಿರುಕಾಲ್ಲೈ ಅಂದರೆ ಬೆಳಗ್ಗೆ ಬ್ರಹ್ಮಮುಹೂರ್ತದಲ್ಲಿ ಅಂದರೆ ಸತ್ತ್ವಗುಣವು ತಲೆ ಎತ್ತುವ ಕಾಲದಲ್ಲಿ ಬಂದು (ಇದು ಸುಮಾರು ಬೆಳಗ್ಗೆ 4 ಗಂಟೆಯ ಸಮಯವನ್ನು ತಿಳಿಸುತ್ತದೆ)

**ಕಾಲ್ಲೈ** :- ಬೆಳಗ್ಗೆ ಎಂಬುದು ಆರಾಧನೆಯ ಕಾಲ - ಬೆಳಗ್ಗೆ ಸುಮಾರು 6 ರಿಂದ 7 ಗಂಟೆಯ ಸಮಯ ಎನ್ನುತ್ತಾರೆ.

**ಶಿರುಕಾಲ್ಲೈ** :- ಎಂಬುದು ಆರಾಧನೆಗೆ ಅಂದರೆ ಬೆಳಗ್ಗಿನ ಪೂಜೆಗೆ ಅಣಿ (ಸಿದ್ಧತೆ) ಮಾಡಿಕೊಳ್ಳುವಕಾಲ. ಬೆಳಿಗ್ಗೆ ಸುಮಾರು 5 ರಿಂದ 6 ಗಂಟೆಯ ವರೆಗಿನ ಕಾಲ ಎನ್ನುತ್ತಾರೆ.

**ಶಿತ್ತಂಶಿರುಕಾಲ್ಲೈ** :- ಎಂಬುದು ಮುನಿಗಳೂ ಯೋಗಿಗಳೂ ಧ್ಯಾನಮಾಡುವ ಸುಪ್ರಭಾತ ಹೇಳುವ ಉಷಃ ಕಾಲ. ಇದು ನಮ್ಮ ನಿತ್ಯ ಜೀವನದಲ್ಲಿ ಹೃದಯದಲ್ಲಿ ಸತ್ತ್ವಗುಣವು ತಲೆ ಎತ್ತುವ ಕಾಲ, ಇಡೀ ದಿನವೆಲ್ಲವೂ ಅದರಿಂದ ಬೆಳಗುವಂತೆ ಮಾಡುವ ಕಾಲ, ಮತ್ತು ಭಕ್ತಿ ಹುಟ್ಟಿ ಬೆಳೆದು ಪಕ್ವವಾಗುವ ಕಾಲ. ಇಂತಹ ಪುಣ್ಯಕಾಲದಲ್ಲಿ ನಾವು ನಿನ್ನನ್ನು ಸ್ತೋತ್ರಮಾಡಿ ನಿನ್ನ ಪಾದಗಳಿಗೆ ಮಂಗಳ ಹಾಡಲು ಬಂದಿದ್ದೇವೆ ಎನ್ನುತ್ತಾರೆ. ಇದು ಸುಮಾರು ಬೆಳಗ್ಗೆ 4 ಗಂಟೆಯ ಸಮಯ.

ಇಲ್ಲಿ ಗೋಪಿಯರು ಶಾಸ್ತ್ರದಲ್ಲಿ ಹೇಳಿರುವುದನ್ನೇ ಆಚರಿಸಿ ತೋರಿಸಿದ್ದಾರೆ. ಬ್ರಾಹ್ಮೀ ಮುಹೂರ್ತದಲ್ಲಿ ಭಗವಂತನ ಧ್ಯಾನ ಮಾಡುವುದು ಉತ್ತಮವಾದ ಮಾರ್ಗವೆಂದು ಶಾಸ್ತ್ರವು ತಿಳಿಸುತ್ತದೆ. ಅದನ್ನೇ ಇಲ್ಲಿ ಗೋಪಿಯರು 'ಶಿತ್ತಂ ಶಿರುಕಾಲ್ಲೈ ವನ್ದುನ್ನೈ ಸೇವಿತ್ತು' ಎಂದು ಹೇಳಿ ಆಚರಿಸಿತೋರಿಸಿದ್ದಾರೆ.

ಚೇತನನನ್ನು ಭಗವಂತನು ರಕ್ಷಿಸಬೇಕಾದರೆ ಚೇತನನಲ್ಲಿ ಅಪ್ರತಿಷೇದ ಅಂದರೆ ಭಗವಂತನ ರಕ್ಷಣಾಕಾರ್ಯದಲ್ಲಿ ಅಡ್ಡಿಮಾಡದಿರುವಿಕೆ ಇರಬೇಕು. ಇದನ್ನು ದ್ರೌಪದಿ, ಗಜೇಂದ್ರ ಇವರುಗಳ ಶರಣಾಗತಿಯಲ್ಲಿ ಕಾಣಬಹುದು. ಅವರು ತಮ್ಮ ಶಕ್ತಿಯಿಂದ ತಮ್ಮ ರಕ್ಷಣಾಕಾರ್ಯದಲ್ಲಿ ತೊಡಗಿರುವವರೆಗೂ ಭಗವಂತನು ಅವರನ್ನು ರಕ್ಷಿಸಲಿಲ್ಲ. ಅದನ್ನು ಅವರು ತ್ಯಜಿಸಿ ಅವನಲ್ಲಿ ಶರಣಾಗತರಾದ ತಕ್ಷಣ ಭಗವಂತನು ಅವರನ್ನು ರಕ್ಷಿಸಿದನು ಎಂದು ಪುರಾಣದಲ್ಲಿ ತಿಳಿಸಿದೆ.

ಭಗವಂತನೇ ನಿರಪೇಕ್ಷ ಉಪಾಯ ಅಂದರೆ ಏನನ್ನೂ ಅಪೇಕ್ಷಿಸದೆ ರಕ್ಷಿಸುತ್ತಾನೆ ಎಂದು ತಿಳಿಸಿರುವಾಗ ಇವರಾಗಿ ಅವನನ್ನು ಹೊಂದಲು ಹೋಗದೇ ಅವನಾಗಿಯೇ ಬಂದು ಇವರನ್ನು ರಕ್ಷಿಸಬೇಕಾಗಿರುವಾಗ, ಇವರು ಬೆಳ್ಳಂ ಬೆಳಗ್ಗೆ ಅವನ ಬಳಿ ಬಂದಿರುವುದು ಸರಿಯೇ; ಅವನ ನಿರಪೇಕ್ಷ ಉಪಾಯವೆಂಬ ಸ್ವರೂಪಕ್ಕೆ ಕೊರತೆ ಉಂಟಾಗುವುದಿಲ್ಲವೇ ಎಂದರೆ - ಭಗವಂತನ ಹಿರಿಮೆಯನ್ನೆಲ್ಲಾ ಹೃದಯದಲ್ಲಿ ಅರಿತಮೇಲೆ ಇವರಿಗೆ ತಾವು ಹೇಗಾದರೂ ಮಾಡಿ ಅವನನ್ನು ಹೊಂದಬೇಕೆಂಬ ಆತುರವು ಹುಟ್ಟುತ್ತದೆ. ಅದು ಅವನೇ ಬಂದಾಗ ಬಂದು ರಕ್ಷಿಸಲಿ ಎಂದಿರಲಾಗದೇ ಬೆಳ್ಳಂಬೆಳಗಿನ ಜಾವದಲ್ಲೇ ಎದ್ದು ಬರುವಂತೆ ಮಾಡಿದೆ ಮತ್ತು ಶಾಂತವಾಗಿ ಮಲಗಿರುವವರನ್ನೂ ಎಬ್ಬಿಸಿ ಅವರಲ್ಲೂ ತ್ವರೆ ಉಂಟುಮಾಡಿ ಎಲ್ಲರನ್ನೂ ಕರೆದುಕೊಂಡು ಬರುವಂತೆ ಮಾಡಿದೆ ಎಂದು ತಿಳಿಸಿದ್ದಾರೆ.

**ಶಿತ್ತಂಶಿರುಕಾಲ್ಲೈ** :- ಎಂಬುದು ಪರಮ ಪುರುಷಾರ್ಥವನ್ನು ಹೊಂದಬೇಕೆಂಬ ಇವರ ತ್ವರೆಯನ್ನೂ (ಆತುರವನ್ನು) ತೋರಿಸುತ್ತದೆ. ಭಗವಂತನ ಕೈಂಕರ್ಯದ ತ್ವರೆ

ಇವರನ್ನು ನಿದ್ರೆ ಮಾಡಲು ಬಿಡದೆ ಬೆಳ್ಳಂ ಬೆಳಗಿನ ಜಾವದಲ್ಲೇ ಎದ್ದು ಬರುವಂತೆ ಮಾಡಿದೆ. ಪ್ರಪನ್ನನಿಗೆ ಭಗವತ್ ಕೈಂಕರ್ಯವೆಂಬ ಪರಮ ಪುರುಷಾರ್ಥ ಪ್ರಾಪ್ತಿಯಲ್ಲಿ ತ್ವರೆ ಆಸಕ್ತಿ, ಆತುರ ಇರಬೇಕೆಂಬುದನ್ನು ಇದು ಸೂಚಿಸುತ್ತದೆ.

ವನ್ದು-ಬಂದು : ಅನೇಕ ಪಾಶುರಗಳಲ್ಲಿ 'ನಾಂವನ್ದೋಂ' 'ಇನ್ರುನಾಂವನ್ದೋಂ' ಎಂದೆಲ್ಲಾ ಹೇಳಿ ಪ್ರಾಪ್ಯದಲ್ಲಿ ತಮಗಿರುವ ತ್ವರೆಯನ್ನು ತೋರಿಸಿದ್ದಾರೆ. ನಿನ್ನನ್ನು ಬಿಟ್ಟಿರುವುದನ್ನು ಸಹಿಸಿಕೊಂಡಿರುವುದು ಸಾಧ್ಯವಿಲ್ಲದೆ ನಾವೇ ಬಾಗಿಲು ಕಾಯುವವರನ್ನೆಲ್ಲಾ ಬೇಡಿಕೊಂಡು ನೀನಿರುವ ಸ್ಥಳಕ್ಕೆ 'ಶಿತ್ತಂ ಶಿರುಕಾಲೈ' ಅಂದರೆ ಬೆಳ್ಳಂ ಬೆಳಗಿನ ಜಾವದಲ್ಲಿ ಬಂದಿದ್ದೇವೆ ಎನ್ನುತ್ತಾರೆ.

ಉನ್ನೈಶೇವಿತ್ತು :- ನಿನಗೆ ನಮಸ್ಕಾರ ಮಾಡಿ, ನಿನಗೆ ಸ್ತೋತ್ರ ರೂಪದಲ್ಲಿ ಕೈಂಕರ್ಯಮಾಡಿ -

ಉನ್‌ಪೊತ್ತಾಮಾರೈ ಅಡಿಯೇ ಪೋತ್ತುಂ :- ಚಿನ್ನದಂತೆ ಪ್ರಕಾಶಮಾನವಾದ ಮತ್ತು ಕಮಲ ಪುಷ್ಪದಂತೆ ಸುಂದರವಾದ ನಿನ್ನ ಪಾದಗಳಿಗೆ ಮಂಗಳ ಹಾಡುತ್ತೇವೆ, ಮಂಗಳಾಶಾಸನ ಮಾಡುತ್ತೇವೆ ಎನ್ನುತ್ತಾರೆ.

ಶ್ರೀನಮ್ಮಾಳ್ವಾರ್ರವರು ತಿರುವಾಯ್ಮೊಳಿಯಲ್ಲಿ ಮೊಟ್ಟ ಮೊದಲನೆಯ ಪಾಶುರದಲ್ಲೇ 'ತುಯರರು ಶುಡರಡಿ ತೊಳುದೆಳ್' ಅಂದರೆ ದುಃಖಗಳನ್ನು ಹೋಗಲಾಡಿಸುವ ಪ್ರಕಾಶಮಾನವಾದ ಪರಮಾತ್ಮನ ಪಾದಗಳಿಗೆ ನಮಸ್ಕಾರ ಮಾಡಿ ಉಜ್ಜೀವಿಸು ಎಂದೂ, 'ತಿಣ್‌ಕಳಲ್' ಎಂದೂ ಹೇಳಿ ಪರಮಾತ್ಮನ ದಿವ್ಯ ಪಾದಗಳನ್ನು ಕೊಂಡಾಡಿದ್ದಾರೆ. ಪೆರಿಯಾಳ್ವಾರ್ರು ಪಲ್ಲಾಂಡಿನಲ್ಲಿ 'ಉನ್‌ಶೆವ್ವಡಿಶೆವ್ವಿತಿರುಕಾಪ್ಪು' ಎಂದು ಅವನ ಪಾದಗಳಿಗೆ ಮಂಗಳಾಶಾಸನ ಮಾಡಿದ್ದಾರೆ. ಇಲ್ಲಿ ಗೋದಾದೇವಿಯು 'ಉನ್‌ಪೊತ್ತಾಮರೈ ಅಡಿಯೇ ಪೋತ್ತುಂ' ಎಂದು ಹಾಡಿದ್ದಾಳೆ.

**ಪೋತ್ತುಂ ಪೊರುಳ್ ಕೇಳಾಯ್** :- ನಿನ್ನ ಪಾದಗಳಿಗೆ ನಮಸ್ಕರಿಸಿ ಮಂಗಳ ಹಾಡುವುದರ ಪ್ರಯೋಜನವನ್ನು ಕಿವಿಗೊಟ್ಟು ಕೇಳು ಎನ್ನುತ್ತಾರೆ. ನಿನ್ನ ಪಾದ ಕಮಲಗಳಿಗೆ ಮಂಗಳ ಹಾಡುವುದೇ ನಮಗೆ ಉದ್ದೇಶ. ಅದೇ ನಾವು ನಿನ್ನನ್ನು ಪ್ರಾರ್ಥಿಸಿ ನಿನ್ನ ಬಳಿ ಕೇಳುವ ಫಲ ಎಂಬುದನ್ನು ಗಮನಿಸಿ ಕೇಳುವವನಾಗು ಎನ್ನುತ್ತಾರೆ ಎಂದು ಇದರ ಅಭಿಪ್ರಾಯ. ಇದನ್ನು ಮುಂದಿನ ವಾಕ್ಯದಲ್ಲೂ ಸ್ಪಷ್ಟವಾಗಿ ತಿಳಿಸುತ್ತಾರೆ.

**ಪೆತ್ತಂಮೇಯ್‌ತ್ತುಣ್ಣುಂ ಕುಲತ್ತಿಲ್ ಪಿರಂದುನೀ ಕುತ್ತೇವಲ್ ಎಂಗಳೈ ಕೊಳ್ಳಾ ಮಲ್ ಪೋಹಾದು** :- ಹಸುಗಳನ್ನು ಮೇಯಿಸಿ ತಿಂದು ಜೀವಿಸುವ ನಮ್ಮ ಈ ಗೊಲ್ಲರ ಕುಲದಲ್ಲಿ ಹುಟ್ಟಿರುವ ನೀನು ನಮ್ಮಿಂದ ಕೈಂಕರ್ಯವನ್ನು ಮಾಡಿಸಿ ಅಂಗೀಕರಿಸದೇ ಇರಕೂಡದು. ಅಂದರೆ ಅಂಗೀಕರಿಸಲೇ ಬೇಕು ಎಂದು ಒತ್ತಾಯಪಡಿಸುತ್ತಾರೆ.

ನಾವು ಹುಟ್ಟಿಜೀವಿಸುತ್ತಿರುವ ಈ ಭೂಲೋಕದಲ್ಲಿ ಅಂತರ್ಯಾಮಿಯಾಗಿ ವ್ಯಾಪಿಸಿಕೊಂಡು ನೆಲೆಸಿ ಈ ಜಗತ್ತಿಗೂ, ಈ ಜಗತ್ತಿನಲ್ಲಿರುವ ನಮ್ಮೆಲ್ಲರಿಗೂ ಒಡೆಯನೂ, ಅಂತರ್ಯಾಮಿಯೂ, ರಕ್ಷಕನೂ ಸ್ವಾಮಿಯೂ ಆಗಿರುವ ನೀನು

**ಕುತ್ತೇವಲ್ ಎಂಗಳೈ ಕೊಳ್ಳಾಮಲ್ ಪೋಹಾದ್** :- ಕೈಂಕರ್ಯವನ್ನು ನಮ್ಮಿಂದ ಮಾಡಿಸಿ, ಅಂಗೀಕರಿಸದೇ ಇರಕೂಡದು. ನಮ್ಮಿಂದ ನೀನು ಕೈಂಕರ್ಯವನ್ನು ಕೈಗೊಳ್ಳಲೇ ಬೇಕು. ಇಲ್ಲಿ 'ಕೊಳ್ಳಾಮಲ್ ಪೋಹಾದ್' ಎಂದು ಹೇಳಿರುವುದ ರಿಂದ ನೀನು ಅಂಗೀಕರಿಸಲೇಬೇಕು ಎಂದು ಒತ್ತಾಯ ಪಡಿಸಿ ಹೇಳಿದ್ದಾರೆ. ನಾವು ಕೈಂಕರ್ಯ ಮಾಡದೇ ಅಡ್ಡದಾರಿ ಹಿಡಿದಿದ್ದರೂ, ನೀನೇ ನಮ್ಮನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಿ, ನಮ್ಮಿಂದ ಕೈಂಕರ್ಯ ಮಾಡಿಸಿ, ಅದನ್ನು ನೀನು ಅಂಗೀಕರಿಸ ಬೇಕು ಎಂದು ಅವನನ್ನು ಬಲವಂತಪಡಿಸುವ ಪ್ರಾರ್ಥನೆಯಾಗಿದೆ. ಇದು ಅವರಿಗೆ ಕೈಂಕರ್ಯದಲ್ಲಿರುವ ಮಹತ್ತರವಾದ ಅಭಿಲಾಷೆಯನ್ನು ತೋರಿಸುತ್ತದೆ.

ಚೇತನರು ಭಗವಂತನ ಸ್ವತ್ತು :- ಭಗವಂತನು ಸ್ವಾಮಿ. ಸ್ವಾಮಿಯಾದ ಭಗವಂತನಿಗೆ ಕೈಂಕರ್ಯ ಮಾಡುವುದೇ ದಾಸನಾದ ಚೇತನನ ಸ್ವರೂಪ ಮತ್ತು ದಾಸನಿಂದ ಕೈಂಕರ್ಯವನ್ನು ಸ್ವೀಕರಿಸುವುದೇ ಸ್ವಾಮಿಯಾದ ಪರಮಾತ್ಮನ ಸ್ವರೂಪ. ಆದರೆ 'ಕಿಂತೇನ ನಕೃತಂ ಪಾಪಂ ಚೋರೇಣ ಆತ್ಮಾಪಹಾರಿಣಾ' ಎಂದು ಹೇಳಿರುವಂತೆ ಚೇತನನು ಸಂಸಾರ ಸಾಗರದಲ್ಲಿ ಮುಳುಗಿ ಈ ಸ್ವಾಮಿ-ದಾಸರ ಸಂಬಂಧವನ್ನು ಮರೆತು, ತನಗೆ ತಾನೇ ಸ್ವಾಮಿ ಎಂದು ಅಹಂಭಾವ ಹೊಂದಿದವನಾಗಿ, ಎಲ್ಲವೂ ತನ್ನದೆಂಬ ಅಭಿಮಾನದಿಂದ ವರ್ತಿಸುತ್ತಾ ಭಗವಂತನ ಸ್ವತ್ತನ್ನು ಅಪಹರಿಸಿದ್ದಾನೆ.

ಆದರೆ ಜ್ಞಾನಿಗಳಾದ ಭಕ್ತರು ಭಗವಂತನ ಶೇಷತ್ವ (ಸ್ವಾಮಿತ್ವ) ಮತ್ತು ತಮ್ಮ ದಾಸತ್ವವನ್ನು ಅರಿತವರಾಗಿ ದಾಸರಾದ ತಮ್ಮಿಂದ ಕೈಂಕರ್ಯವನ್ನು ಸ್ವೀಕರಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ. ಅವರಿಗೆ ಭಗವತ್ ಕೈಂಕರ್ಯವೇ ಪುರುಷಾರ್ಥ. ಇದು ಕಾಯಿಕ, ವಾಚಿಕ ಅಥವಾ ಮಾನಸಿಕವಾದ ಯಾವ ವಿಧವಾದ ಕೈಂಕರ್ಯವಾಗಿಯಾದರೂ ಇರಬಹುದು. ಅವರು ಯಾವ ಕೈಂಕರ್ಯವನ್ನು ಮಾಡಿದರೂ ಸರಿ, ಅದು ಭಗವಂತನಲ್ಲಿ ನಿಶ್ಚಲವಾದ ಭಕ್ತಿಯಿಂದ ಕೂಡಿದ್ದಾಗಿರುತ್ತದೆ.

ಗೋಪಿಯರು ಜ್ಞಾನಿಗಳಾದ ಭಕ್ತರಾಗಿದ್ದುದರಿಂದ ಅವರು ಭಗವಂತನ ಕೈಂಕರ್ಯವನ್ನೇ ಪುರುಷಾರ್ಥವಾಗಿ ಯಾಚಿಸಿದ್ದಾರೆ. ಭಗವತ್ ದಾಸ್ಯವೇ ಅವರಿಗೆ ಅನ್ನ, ನೀರು ಮುಂತಾದ ಧಾರಕ ಪೋಷಕ ವಸ್ತುವಾಗಿದೆ. ಆದ್ದರಿಂದ ದಾಸರಾದ ತಮ್ಮಿಂದ ಕೈಂಕರ್ಯವನ್ನು ಸ್ವೀಕರಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ. ನೀನು ನಮ್ಮ ಕೈಂಕರ್ಯವನ್ನು, ಸೇವೆಯನ್ನು, ಸ್ವೀಕರಿಸದೇ ಇರಕೂಡದು (ಕೊಳ್ಳಾಮಲ್ ಪೋಹಾದ್) ಎನ್ನುತ್ತಾರೆ.

ಇದನ್ನೇ ನಮ್ಮಾಳ್ವರ್‌ರವರು 'ಒಳಿವಿಲ್ ಕಾಲಮೆಲ್ಲಾಂ' ಎಂಬ ಪಾಶುರದಲ್ಲಿ ತಾವು ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲೂ ಭಗವಂತನಿಗೆ ಕೈಂಕರ್ಯಮಾಡುತ್ತಿರಬೇಕೆಂದು ಪ್ರಾರ್ಥಿಸಿದ್ದಾರೆ.

**ಇತ್ತೈಪ್ಪರೈಕೊಳ್ವಾನ್ ಅನ್ರುಕಾಣ್‌ಗೋವಿಂದ** :- ಅಂದರೆ ಗೋವಿಂದನೇ, ನಾವು ಈ ಪರೈ ಎಂಬ ವಾದ್ಯವನ್ನು ಯಾಚಿಸಿ ಬಂದವರಲ್ಲ ಎಂದು ಅರ್ಥ. ಇಂದಿನವರೆಗೆ ನಾವು ಪರೈ ಎಂಬ ವಾದ್ಯವನ್ನು ಗೋಪರಿಗಾಗಿ ಕೇಳಿದೆವು. ಆದರೆ ನಾವು ಅದನ್ನು ಯಾಚಿಸಿ ಬಂದವರಲ್ಲ ಎಂದು ಹೇಳಿ ಮುಂದೆ ತಮ್ಮ ಅಭಿಮತವನ್ನು ವ್ಯಕ್ತವಾಗಿ ಹೇಳುತ್ತಾರೆ.

**ಎತ್ತೈಕ್ಕುಂ ಏಳೇಳ್ ಪಿರವಿಕ್ಕುಂ ಉನ್‌ತ್ತನ್ನೋಡು ಉತ್ತೋಮೇಯಾವೋಂ, ಉನಕ್ಕೇ ನಾಂ ಆಳ್‌ಚ್ಚೈವೋಂ** : ಎಂದೆಂದಿಗೂ, ಏಳೇಳುತಲೆಮಾರುಗಳಲ್ಲಿಯೂ ಅಂದರೆ ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲಿಯೂ, ಜನ್ಮಪರಂಪರೆಗಳಲ್ಲಿಯೂ ನಿನ್ನೊಂದಿಗೇ ಅನನ್ಯಾರ್ಹ ಅಂದರೆ ಬೇರ್ಪಡಿಸಲಾಗದ ಸಂಬಂಧ ಹೊಂದಿದವರಾಗಿ (ಅಂದರೆ ನಿನಗೂ ನಮಗೂ ಇರುವ ಬೇರ್ಪಡಿಸಲಾಗದ ಸಂಬಂಧ ಜ್ಞಾನವುಳ್ಳವರಾಗಿ) ನಿನಗೆ ದಾಸರಾಗಿ ಕೈಂಕರ್ಯ ಮಾಡುವೆವು ಎನ್ನುತ್ತಾರೆ. ತಾವು ಪರೈ ಎಂಬ ವಾದ್ಯವನ್ನು ಪಡೆಯಲು ಬಂದಿಲ್ಲ; ಭಗವತ್‌ಕೈಂಕರ್ಯ ಪುರುಷಾರ್ಥ ಪ್ರಾಪ್ತಿಗಾಗಿ ಬಂದಿದ್ದೇವೆ ಎಂಬುದನ್ನು ತಿಳಿಸುತ್ತಾರೆ.

ಇದೇ ತಿರುಪ್ಪಾವೈಯ ಸಾರವಾದ ಸಂದೇಶ. ಇಲ್ಲಿಯವರೆಗೂ ಗೋಪಿಗಳು ಗೋಪಾಲಕರಿಗಾಗಿ ತಾವು ವ್ರತವನ್ನು ಅನುಷ್ಠಿಸಿ ಪರೈ ಎಂಬ ವಾದ್ಯವನ್ನು ಯಾಚಿಸಿದರು. ಅದರಲ್ಲಿ ಅಡಗಿದ್ದ ರಹಸ್ಯಾರ್ಥ, ತತ್ತ್ವಾರ್ಥಗಳನ್ನು ಈ ಪಾಶುರದಲ್ಲಿ ಸ್ಪಷ್ಟವಾಗಿ, ವ್ಯಕ್ತವಾಗಿ ವಿವರಿಸಿದ್ದಾರೆ. ತಮಗೆ ಬೇಕಾದುದು ಕೇವಲ ಪರೈ ಎಂಬ ವಾದ್ಯವಲ್ಲ. ಅದು ಭಗವತ್ ಕೈಂಕರ್ಯ ಪುರುಷಾರ್ಥವು, ಅಂದರೆ ಶ್ರೀಕೃಷ್ಣ ಪರಮಾತ್ಮನಿಗೆ ಪ್ರೀತಿಯಿಂದ ಮಾಡುವ ಕೈಂಕರ್ಯ ಪುರುಷಾರ್ಥವು ಎಂಬುದನ್ನು ಇಲ್ಲಿ ವಿಶದವಾಗಿ, ಸ್ಪಷ್ಟವಾಗಿ ವಿವರಿಸಿ ತಿಳಿಸಿದ್ದಾರೆ.

ಒಂದನೇ ಪಾಶುರದಲ್ಲಿ 'ನಾರಾಯಣನೇ ನಮಕ್ಕೇ ಪರೈತರುವಾನ್' ಎಂದು ಪ್ರಾರಂಭಿಸಿ, 'ಪರೈತರುದಿಯಾಹಿಲ್' - 'ಇರೈವಾನಿತಾರಾಯ್‌ಪರೈ' ಎಂದೆಲ್ಲಾ ಪ್ರಾರ್ಥಿಸಿ ಕೊನೆಗೆ ಈಗ ಈ 29ನೆಯ ಪಾಶುರದಲ್ಲಿ ಪರೈ ಎಂಬುದರ ಅರ್ಥವನ್ನು ವಿವರಿಸಿ ತಿಳಿಸಿದ್ದಾರೆ. ಅದು ಭಗವತ್ ಕೈಂಕರ್ಯ ಪುರುಷಾರ್ಥ ಎಂಬುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ತತ್ವಾರ್ಥ ಮತ್ತು ರಹಸ್ಯಾರ್ಥವನ್ನು ಆಧಾರವಾಗಿ ಹೊಂದಿ ತಿರುಪ್ಪಾವೈಯ 30 ಪಾಶುರಗಳ ಅರ್ಥವನ್ನು ಅರಿತು ಅನುಸಂಧಾನ ಮಾಡಬೇಕು.

ಇಂದು ಮಾತ್ರವಲ್ಲ, ಏಳೇಳು ಜನ್ಮಗಳಲ್ಲಿಯೂ ನಾವು ನಿನ್ನೊಂದಿಗೆ ಸೇರಿ ನಿನಗೆ ಸೇವೆ ಸಲ್ಲಿಸುವೆವು ಎಂದು ಹೇಳುತ್ತಾರೆ. ನಮ್ಮ ಮುಂದಿನ ಏಳೇಳು ಜನ್ಮಗಳಲ್ಲೂ ನಾವು ನಿನ್ನೊಂದಿಗೆ ಸೇರಿ ನಿನಗೆ ಸೇವೆಸಲ್ಲಿಸುವವರಾಗಬೇಕು ಎಂದು ಪ್ರಾರ್ಥಿಸುತ್ತಾರೆ. ಇಲ್ಲಿ ಗೋದಾದೇವಿಯು ಆಳ್ವಾರ್ರುಗಳಂತೆ 'ಆದಲಾಲ್ ಪಿರವಿ ವೇಂಡೇನ್' ಅಂದರೆ ನನಗೆ ಜನ್ಮಗಳು ಬೇಡ ಎಂದು ಹೇಳಿಲ್ಲ. ಅನೇಕ ಜನ್ಮಗಳು ಬೇಕು. ಜನ್ಮ ಜನ್ಮಗಳಲ್ಲಿ ನಿನಗೆ ಕೈಂಕರ್ಯ ಮಾಡುತ್ತಿರಬೇಕು ಎಂದು ಪ್ರಾರ್ಥಿಸಿದ್ದಾಳೆ. ಇಲ್ಲಿ ಭಗವತ್‌ಕೈಂಕರ್ಯದಲ್ಲಿ ತಮಗಿರುವ ಉತ್ಕಟವಾದ ಅಭಿಲಾಷೆಯನ್ನು ತಿಳಿಸಿದ್ದಾಳೆ.

ಇಲ್ಲಿ 'ಉತ್ತೋಮೇಯಾವೋಂ ಉನಕ್ಕೇನಾಂ ಆಳ್‌ಚ್ಚೆವೋಂ' ಎಂದು ಎರಡು ಪದಗಳಿಗೆ ಏವಕಾರ ಹೇಳಿರುವುದರಿಂದ ನಿನ್ನೊಂದಿಗೆ ಸಂಬಂಧ ಹೊಂದಿದವರಾಗಿಯೇ ಇರಬೇಕು ಮತ್ತು ನಿನಗೇ ಕೈಂಕರ್ಯ ಮಾಡಬೇಕು ಎಂದು ಒತ್ತಿ ಒತ್ತಿ ಹೇಳಿ ಪ್ರಾರ್ಥಿಸಿದ್ದಾರೆ.

ಆದರೆ ಪರಮಾತ್ಮನೂ ನಿತ್ಯನು; ಚೇತನರೂ ನಿತ್ಯರು; ಅವರಿಬ್ಬರಿಗೂ ಇರುವ ಸಂಬಂಧವೂ ನಿತ್ಯವಾದುದೂ ನಿರಂತರವಾದುದೂ ಆಗಿದೆ. ಹಿಂದೆಯೂ ಇದ್ದಿತು. ಮುಂದೆಯೂ ಎಂದೆಂದಿಗೂ ಇರುವಂತಹುದು. ಕಾಲವೂ ನಿತ್ಯವಾದುದು. ಅಷ್ಟು

ಮಾತ್ರವಲ್ಲದೆ ಪರಮಾತ್ಮನಿಗೂ ಜೀವಾತ್ಮರಿಗೂ ನವವಿಧ ಸಂಬಂಧವು ಉಂಟೆಂದೂ ಹೇಳಿದೆ. ಭರ್ತೃಭಾರ್ಯಾ, ರಕ್ಷಕ ರಕ್ಷ್ಯಾ, ಭೋಕ್ತೃಭೋಗ್ಯ, ಆತ್ಮ ಶರೀರ, ಜ್ಞೇಯ ಜ್ಞಾತಾ, ಪಿತಾ ಪುತ್ರ, ಮುಂತಾದ ನವ ವಿಧ ಸಂಬಂಧವು ನಿತ್ಯವಾದುದಾಗಿರುವಾಗ ಇವರು ನಿನ್ನೊಂದಿಗೆ ಸಂಬಂಧ ಹೊಂದಿದವರಾಗ ಬೇಕೆಂದು ಇಲ್ಲಿ ಹೇಳಿರುವುದೇತಕ್ಕೆ ಎಂದರೆ - ಭಗವಂತನಿಗೂ ಚೇತನರಿಗೂ ಇರುವ ಈ ಅತ್ಯಂತ ನಿಕಟ ಸಂಬಂಧ ಜ್ಞಾನವು ಚೇತನರಲ್ಲಿ ಇಲ್ಲ. ಆದ್ದರಿಂದ ಈ ಸಂಬಂಧಜ್ಞಾನವು ತಮ್ಮ ಹೃದಯದಲ್ಲಿ ಉಂಟಾಗಬೇಕೆಂದು, ಇವರು ಪ್ರಾರ್ಥಿಸುತ್ತಾರೆ. ಅಂದರೆ ದಾಸರಾದ ತಾವು, ಸ್ವಾಮಿಯಾದ ಪರಮಾತ್ಮನಿಗೆ ಕೈಂಕರ್ಯ ಮಾಡುವವರಾಗಬೇಕು ಮತ್ತು ಸ್ವಾಮಿಯಾದ ಪರಮಾತ್ಮನು ತಮ್ಮಿಂದ ಕೈಂಕರ್ಯಮಾಡಿಸಿ ಅದನ್ನು ಅಂಗೀಕರಿಸಬೇಕು ಎಂಬುದೇ ಇಲ್ಲಿ ಇವರ ಪ್ರಾರ್ಥನೆ.

**ಉನಕ್ಕೇ ನಾಂ ಆಳ್‌ಚ್ಚೆಯ್ವೋಂ** :- ಎಂಬಲ್ಲಿ ಏವಕಾರವಿರುವುದರಿಂದ ನಿನಗೇ ನಾವು ಕೈಂಕರ್ಯ ಮಾಡುವವರಾಗಬೇಕು ಎಂದು ಪ್ರಾರ್ಥಿಸುತ್ತಾರೆ. ನಾವು ಮಾಡುವ ಕೈಂಕರ್ಯ ನಿನಗೆ ಬೇಕಾದ ಕೈಂಕರ್ಯವಾಗಿರಬೇಕೇ ವಿನಹ ನಮಗೆ ಇಷ್ಟವೆಂದು ಕೈಂಕರ್ಯವನ್ನು ನಾವು ನಮ್ಮ ಆನಂದಕ್ಕಾಗಿಯೂ, ಜಂಭಕ್ಕಾಗಿಯೂ ಮಾಡುವ ಕೈಂಕರ್ಯವಾಗಿ ಇರಕೂಡದು. ಭಗವಂತನ ಆನಂದಕ್ಕಾಗಿಯೇ, ಭಗವತ್ ಪ್ರೀತ್ಯರ್ಥವಾಗಿಯೇ ನಾವು ಕೈಂಕರ್ಯ ಮಾಡುವವರಾಗಬೇಕೆಂದು ಪ್ರಾರ್ಥಿಸಿದ್ದಾರೆ.

ಲಕ್ಷ್ಮಣನು ಶ್ರೀರಾಮನನ್ನು ಬಿಟ್ಟಿರಲಾರದೆ ಸರ್ವದಾ ಅವನಿಗೆ ಅಂತರಂಗ ಕೈಂಕರ್ಯ ಮಾಡುತ್ತಿದ್ದಂತೆ ತಾವೂ ಭಗವಂತನಿಗೆ ಸರ್ವದಾ ಸರ್ವವಿಧ ಕೈಂಕರ್ಯ ಮಾಡುತ್ತಿರಬೇಕು ಎಂದೂ ಪ್ರಾರ್ಥಿಸುತ್ತಾರೆ. ಇದನ್ನೇ ನಮ್ಮಾಳ್ವಾರ್ರವರು ''ಎಮ್ಮಾವೀಟ್ಟು ತಿರಮಂಶೆಪ್ಪಂ'' ಎಂಬ ಹತ್ತು ಪಾಶುರಗಳಲ್ಲಿ ವಿವರಿಸಿದ್ದಾರೆ.

"ತ್ವನ್ನಕ್ಕೇಯಾಹ ಎನ್ನೈಕೊಳ್ಳುಮೀದೇ ಎನಕ್ಕೇ ಕಣ್ಣನ್ನೈಯಾನ್ ಕೊಳ್ ಶಿರಪ್ಪೇ" - ಅಂದರೆ ನಿನ್ನ ಆನಂದಕ್ಕಾಗಿ ನನ್ನಿಂದ ನಿನ್ನ ಕೈಂಕರ್ಯವನ್ನು ಮಾಡಿಸಿಕೋ ಎಂದು ಪ್ರಾರ್ಥಿಸಿದ್ದಾರೆ. ಇದು ಗೋಪಿಯರ ಪ್ರಾಪ್ಯಾಂತರ ವೈರಾಗ್ಯವನ್ನು ತಿಳಿಸುತ್ತದೆ. ಅಂದರೆ ನಿನ್ನ ಕೈಂಕರ್ಯವಲ್ಲದೇ ಬೇರೆಯಾವ ಪುರುಷಾರ್ಥವೂ ನಮಗೆ ಬೇಕಾಗಿಲ್ಲ. ಬೇರೆ ಯಾವ ಇತರ ಪುರುಷಾರ್ಥವನ್ನೂ ಕೇಳಲು ನಾವು ಬಂದಿಲ್ಲ ಎಂದು ಹೇಳುತ್ತಾರೆ.

ಚೇತನನು ಭಗವಂತನಿಗೆ ಮಾಡುವ ಕೈಂಕರ್ಯವು ಉಪಾಯವೂ ಅಲ್ಲ, ಉಪೇಯವೂ ಅಂದರೆ ಫಲವೂ ಅಲ್ಲ; ಅದು ಅವನ ಸ್ವರೂಪಕ್ಕೆ ಸೇರಿದ್ದಾಗಿದೆ, ಭಗವಂತನಿಗೆ ಅತ್ಯಂತಪರತಂತ್ರರಾದ ಮತ್ತು ಅನನ್ಯಾರ್ಹ ಶೇಷಭೂತರಾದ ಅಂದರೆ ದಾಸರಾದ ಚೇತನರಿಗೆ ತಮಗೆ ಸ್ವಾಮಿಯಾದ ಭಗವಂತನಿಗೆ ಸರ್ವಕಾಲದಲ್ಲೂ ಸರ್ವವಿಧ ಕೈಂಕರ್ಯಗಳನ್ನು ಮಾಡುವುದೇ ಅವರ ಸ್ವರೂಪವಾಗಿದೆ. ಆದರೆ ಈ ಸ್ವರೂಪವು ಸಿದ್ಧಿಸುವುದು ಅವನ ಕೃಪೆಯಿಂದಲೇ. ಅದನ್ನು ಹೊಂದಲು ಅವನ ಕೃಪೆಯೇ ಉಪಾಯ. ತನಗೆ ಶರೀರವಾದ ಚೇತನರ ದೋಷಗಳನ್ನು ಹೋಗಲಾಡಿಸಿ ಅವರಿಗೆ ಇಷ್ಟಾರ್ಥಗಳನ್ನು ಕೊಡುವುದು ಪರಮಾತ್ಮನಿಗೇ ಸೇರಿದೆ. ಅಂದಮೇಲೆ ಅವನ ಕೃಪೆಯೇ ಚೇತನರ ಪಾಪಗಳ ಪರಿಹಾರಕ್ಕೆ ಉಪಾಯ. ಆದ್ದರಿಂದ ತಮ್ಮ ಪಾಪಗಳನ್ನೆಲ್ಲಾ ಹೋಗಲಾಡಿಸಿ, ತಮ್ಮ ಹೃದಯದಲ್ಲಿ ಭಗವದನನ್ಯಾರ್ಹಶೇಷತ್ವಜ್ಞಾನವನ್ನೂ, ಅಂದರೆ ತಾವು ಭಗವಂತನೊಬ್ಬನಿಗೇ ದಾಸರು ಎಂಬ ಜ್ಞಾನವನ್ನೂ, ಭಗವದತ್ಯಂತ ಪಾರತಂತ್ರ್ಯ ಜ್ಞಾನವನ್ನೂ ಅಂದರೆ ತಾವು ಭಗವಂತನಿಗೆ ಸಂಪೂರ್ಣವಾಗಿ ಅಧೀನರಾಗಿ ಅವನ ಆಳ್ವಿಕೆಗೆ ಒಳಪಟ್ಟವರಾಗಿ ಇದ್ದೇವೆ ಎಂಬ ಜ್ಞಾನವನ್ನೂ ಬೆಳೆಸಿ, ಭಗವತ್ಕೈಂಕರ್ಯದಲ್ಲಿ ತಮ್ಮನ್ನು ಪ್ರವರ್ತಿಸುವಂತೆ ಮಾಡಿ, ತಮ್ಮಿಂದ ಕೈಂಕರ್ಯಮಾಡಿಸಿ ಅದನ್ನು ಅಂಗೀಕರಿಸುವಂತೆ ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ.

ಮತ್ತೈ ನಮ್ ಕಾಮಙ್ಗಳ್ ಮಾತ್ತ್:- ಅಂದರೆ ನಮ್ಮ ಇತರ ಕಾಮನೆಗಳನ್ನೆಲ್ಲಾ (ಆಸೆ ಆಕಾಂಕ್ಷೆಗಳನ್ನೆಲ್ಲಾ) ನಿನ್ನ ಅಂದರೆ ಭಗವತ್ ಕಾಮವಾಗಿ ಮಾರ್ಪಡಿಸು ಎಂದು ಪ್ರಾರ್ಥಿಸುತ್ತಾರೆ. ಅಂದರೆ ನಿನಗೆ ಕೈಂಕರ್ಯ ಮಾಡುವಾಗ ನಮ್ಮ ಮನಸ್ಸಿನಲ್ಲಿ ಉಂಟಾಗುವ ಸ್ವಾರ್ಥ ಮನೋಭಾವನೆಗಳನ್ನೆಲ್ಲಾ ನೀನೇ ಮಾರ್ಪಡಿಸು ಎಂದು ಪ್ರಾರ್ಥಿಸುತ್ತಾರೆ. ಅಂದರೆ ನೀನೇ ನಮ್ಮ ಕೈಂಕರ್ಯದಲ್ಲಿರುವ ಅಂದರೆ ನಿನಗೆ ಕೈಂಕರ್ಯ ಮಾಡುವಾಗ ನಮ್ಮಲ್ಲಿ ಉಂಟಾಗುವ, ನಾನು ಮಾಡುತ್ತಿದ್ದೇನೆ ಎಂಬ ಅಹಂಕಾರ ಮಮಕಾರ ಬುದ್ಧಿಯನ್ನೂ ಮತ್ತು ಕೈಂಕರ್ಯದ ಫಲವನ್ನು ನಾನೇ ಅನುಭವಿಸಬೇಕೆಂಬ ಸ್ವಭೋಕ್ತೃತ್ವಬುದ್ಧಿಯನ್ನೂ ನೀನೇ ಮಾರ್ಪಡಿಸಬೇಕು ಎಂದು ಪ್ರಾರ್ಥಿಸುತ್ತಾರೆ. ಚೇತನನು ಜ್ಞಾನವುಳ್ಳವನಾಗಿ ಇರುವುದರಿಂದ ಕೈಂಕರ್ಯಮಾಡುವಾಗ ಅವನಲ್ಲಿ ಅಹಂಕಾರ ಮಮಕಾರಾದಿ ಭಾವನೆಗಳೆಲ್ಲಾ ಉಂಟಾಗುತ್ತವೆ. ಅವುಗಳನ್ನೆಲ್ಲಾ ಪರಮಾತ್ಮನೇ ಮಾರ್ಪಡಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ.

ಇದನ್ನೇ ಶ್ರೀನಮ್ಮಾಳ್ವಾರ್‌ರವರು "ಮರುಂದೇ ನಂಗಳ್ ಭೋಗ ಮಹಿಳ್ಚ್ಚಿಕ್ಕ್" - ಅಂದರೆ ನಮ್ಮಲ್ಲಿರುವ ಭೋಗಬುದ್ಧಿಯನ್ನು ಹೋಗಲಾಡಿಸಲು ಭಗವಂತನೇ ಔಷಧ ಎಂದು ಹೇಳಿದ್ದಾರೆ. ಇದು ಕೈಂಕರ್ಯದಲ್ಲಿರುವ ವಿರೋಧಿ ನಿವೃತ್ತಿ ಪ್ರಾರ್ಥನೆಯಾಗಿದೆ. ಸ್ವಾರ್ಥಕೈಂಕರ್ಯವು ಪುರುಷಾರ್ಥವಲ್ಲ. ಪರಾರ್ಥಕೈಂಕರ್ಯವೇ ಪುರುಷಾರ್ಥವು. ಆದ್ದರಿಂದ ಕೈಂಕರ್ಯವನ್ನು ಫಲಕ್ಕೆ ಉಪಾಯವಾಗಿ ಮಾಡಬಾರದು. ಕೇವಲ ಭಗವಂತನ ಸಂತೋಷಕ್ಕಾಗಿಯೇ ಮಾಡಬೇಕು. ನಾವು ನಿನಗೆ ಕೈಂಕರ್ಯಮಾಡುವುದು ಕೇವಲ ನಿನ್ನ ಆನಂದಕ್ಕಾಗಿಯೇ ವಿನಃ ನಿನಗೆ ಕೈಂಕರ್ಯಮಾಡಿ ನಿನ್ನಿಂದ ಫಲ ಪಡೆಯುವುದಕ್ಕಾಗಿಯಲ್ಲ ಎನ್ನುತ್ತಾರೆ.

ಇಲ್ಲಿ 'ಮತ್ತೈನಮ್ ಕಾಮಂಗಳ್‌ಮಾತ್ತು' ಎಂದು ಹೇಳಿರುವುದರಿಂದ ತಮ್ಮ ಇತರ ಪ್ರಾಪಂಚಿಕ ಆಸೆ ಆಕಾಂಕ್ಷೆಗಳನ್ನೆಲ್ಲಾ ನಿರಸನ ಮಾಡು, ಹೋಗಲಾಡಿಸು ಎಂದು ಪ್ರಾರ್ಥಿಸದೆ, ಅವುಗಳನ್ನೆಲ್ಲಾ ಭಗವತ್ ಕಾಮವಾಗಿ ಮಾರ್ಪಡಿಸು

ಎಂದು ಪ್ರಾರ್ಥಿಸುತ್ತಾರೆ. ಅಂದರೆ ಕಣ್ಣು, ಕಿವಿ, ಮೂಗು, ನಾಲಿಗೆ, ಕೈ, ಕಾಲು ಮುಂತಾದ ಇಂದ್ರಿಯಗಳನ್ನು ಬಾಹ್ಯ ವಿಷಯಗಳಲ್ಲಿ ಪ್ರವರ್ತಿಸದಂತೆ ತಡೆದು ಭಗವದ್ವಿಷಯಗಳ ಕಡೆ ತಿರುಗುವಂತೆ ಮಾರ್ಪಡಿಸು ಎಂದು ಪ್ರಾರ್ಥಿಸುತ್ತಾರೆ ಎಂಬುದು ಇದರ ಅಭಿಪ್ರಾಯ. ಅಂದರೇನು, ಕೆಟ್ಟ ವಿಷಯಗಳನ್ನು ಕೇಳದಂತೆ, ಕೆಟ್ಟ ಮಾತುಗಳನ್ನು ಹೇಳದಂತೆ, ಕೆಟ್ಟ ವಿಷಯಗಳನ್ನು ನೋಡದಂತೆ ಇರಬೇಕು. ಅಂದರೆ ಕಿವಿ, ಬಾಯಿ, ಕಣ್ಣುಗಳನ್ನು ಮುಚ್ಚಿಕೊಂಡು ಇರಬೇಕೆಂದು ಅರ್ಥವಲ್ಲ. ಅವುಗಳನ್ನು ಒಳ್ಳೆಯ ವಿಷಯಗಳಲ್ಲಿ ಅಂದರೆ ಭಗವದ್ ವಿಷಯದಲ್ಲಿ ಪ್ರವರ್ತಿಸುವಂತೆ ಮಾಡಬೇಕು. ಅಂದರೆ ಭಗವಂತನ ನಾಮಗಳನ್ನು ಕೇಳುವುದು, ಹಾಡುವುದು ಮುಂತಾದವುಗಳಲ್ಲಿ ಆಸಕ್ತಿ ಹೊಂದುವಂತೆ ಮಾಡಬೇಕು, ಸರ್ವವಸ್ತುಗಳನ್ನೂ ಭಗವಂತನ ಸ್ವತ್ತಾಗಿ ಕಾಣಬೇಕು ಮತ್ತು ತನಗೆ ಲಭಿಸುವುದನ್ನೆಲ್ಲಾ ಭಗವಂತನ ಪ್ರಸಾದವಾಗಿ ಭಕ್ತಿಯಿಂದ ಸ್ವೀಕರಿಸಬೇಕು; ಮನಸ್ಸಿನಲ್ಲಿ ಕೆಟ್ಟ ಚಿಂತನೆಗಳಿಗೆ ಅವಕಾಶ ಕೊಡದೆ, ಭಗವತ್ ಚಿಂತನೆಯಲ್ಲಿ ಮನಸ್ಸು ಪ್ರವರ್ತಿಸುವಂತೆ ಮಾಡಬೇಕು.

ಆದರೆ ಇಂತಹ ಸಾತ್ತ್ವಿಕ ಪರಿವರ್ತನೆ ಚೇತನನ ಇಂದ್ರಿಯಗಳಲ್ಲೂ, ಮನಸ್ಸಿನಲ್ಲೂ ಉಂಟಾಗುವುದು ಬಹಳ ಕಷ್ಟ. ಅನಾದಿಕಾಲದಿಂದ ಪ್ರಕೃತಿ ಸಂಬಂಧ ಪಡೆದಿರುವ ಈ ಚೇತನನು ಪ್ರಕೃತಿಯ ಮಾಯಾಬಲೆಗೆ ಸಿಕ್ಕಿದ್ದಾನೆ. ಪ್ರಕೃತಿಯು ಅವನನ್ನು ಭಗವಂತನ ಕಡೆಗೆ ತಿರುಗದಂತೆ ತಡೆದು ತನ್ನಲ್ಲೇ ಆಸಕ್ತನಾಗಿರುವಂತೆ ಮಾಡಿದೆ. ಇದೇ ಅದರ ಮಾಯೆ, ಈ ಪ್ರಕೃತಿಯ ಮಾಯಾ ಬಲೆಯನ್ನು ಹೋಗಲಾಡಿಸಿಕೊಳ್ಳಲು ಪರಮಾತ್ಮನಲ್ಲಿ ಶರಣಾಗತಿಯೇ ಉಪಾಯವೆಂದು ಶ್ರೀ ಕೃಷ್ಣಪರಮಾತ್ಮನು ಗೀತೆಯಲ್ಲಿ - ''ದೈವೀಹ್ಯೇಷಾ ಗುಣಮಯೀ ಮಮಮಾಯಾದುರತ್ಯಯಾ । ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂತರಂತಿತೇ'' । ಎಂದು ತಿಳಿಸಿದ್ದಾನೆ. ಅದನ್ನೇ ಇಲ್ಲಿ ಗೋಪಿಯರು 'ನಮ್ಮ ಕ್ಷುದ್ರ ಕಾಮನೆಗಳನ್ನೆಲ್ಲಾ ನೀನೇ ಭಗವತ್ಕಾಮವಾಗಿ ಮಾರ್ಪಡಿಸು' ಎಂದು

ಪರಮಾತ್ಮನನ್ನು ಪ್ರಾರ್ಥಿಸಿದ್ದಾರೆ. ನಮ್ಮ ಸ್ವಾರ್ಥ ಮನೋಭಾವನೆಗಳನ್ನೆಲ್ಲಾ ಹೋಗಲಾಡಿಸಿ, ನಮ್ಮನ್ನು ನಿನ್ನ ಕೈಂಕರ್ಯಕ್ಕೆ ನೀನೇ ಉಪಯೋಗಿಸಿಕೊಂಡು ಅನುಗ್ರಹಿಸಬೇಕು. 'ಮತ್ತೈನನ್ ಕಾಮುಂಗಳ್ ಮಾತ್ತ್' - ಎಂದು ಪ್ರಾರ್ಥಿಸುತ್ತಾರೆ.

'ಮತ್ತೈನನ್ ಕಾಮುಂಗಳ್ ಮಾತ್ತ್' :- ಎಂಬುದು ಈ ಪಾಶುರದ ಅತಿಮುಖ್ಯವಾದ ವಾಕ್ಯ. ದ್ವಯಮಂತ್ರದ ಉತ್ತರ ವಾಕ್ಯದಲ್ಲಿರುವ 'ನಮಃ' ಎಂಬ ಪದದಲ್ಲಿ 'ಮಃನ' - ಎಂದು ಹೇಳಿರುವಂತೆ ಭಗವತ್ ಕೈಂಕರ್ಯದಲ್ಲಿ ಸ್ವಾರ್ಥ ಮನೋಭಾವನೆ ಇರಕೂಡದು ಎಂಬ ಅರ್ಥವನ್ನೇ ಗೋದಾದೇವಿಯು ಇಲ್ಲಿ ತಿಳಿಸಿದ್ದಾಳೆ.

ಇಲ್ಲಿ ಮುಖ್ಯವಾಗಿ ಎರಡು ವಿಷಯಗಳನ್ನು ತಿಳಿಸಿದ್ದಾರೆ. (1) ಭಗವತ್ ಕೈಂಕರ್ಯವನ್ನೇ ಪರಮಪುರುಷಾರ್ಥವಾಗಿ ಹೊಂದಿರುವ ಚೇತನನಿಗೆ ಫಲಾಂತರ ಸಂಸರ್ಗ ಅಂದರೆ ಭಗವಂತನ ಕೈಂಕರ್ಯ ಪುರುಷಾರ್ಥವನ್ನು ಬಿಟ್ಟು ಇತರ ವಿಷಯಗಳಲ್ಲಿ ಆಸೆ ಇರಕೂಡದು. (2) ತಾನು ಮಾಡುವ ಭಗವತ್ ಕೈಂಕರ್ಯದಲ್ಲಿಯೂ ಕೂಡ ಸ್ವಾರ್ಥತೆಯು ಇರಕೂಡದು. ಸ್ವಾರ್ಥ ಕೈಂಕರ್ಯವು ಪುರುಷಾರ್ಥವಲ್ಲ. ಪರಾರ್ಥ ಕೈಂಕರ್ಯವು ಅದರಲ್ಲೂ ಕೇವಲ ಭಗವತ್ಪ್ರೀತ್ಯರ್ಥವಾಗಿ ಮಾಡುವ ಕೈಂಕರ್ಯವೇ ಪರಮ ಪುರುಷಾರ್ಥವು. ಕೈಂಕರ್ಯದಲ್ಲಿ ಉಂಟಾಗುವ ಈ ಎರಡು ವಿಧವಾದ ವಿರೋಧಿಗಳನ್ನು ಹೋಗಲಾಡಿಸೆಂದು ಪರಮಾತ್ಮನನ್ನು ಗೋಪಿಯರು ಈ ಪಾಶುರದಲ್ಲಿ ಪ್ರಾರ್ಥಿಸಿದ್ದಾರೆ. ಸ್ವಾರ್ಥರಹಿತವಾದ ಭಗವತ್ ಕೈಂಕರ್ಯ ಪ್ರಾಪ್ತಿಯನ್ನು ಪ್ರಾರ್ಥಿಸಿದ್ದಾರೆ.

ಇದನ್ನು ಕುಚೇಲನಲ್ಲಿ ಕಾಣಬಹುದು. ಕೃಷ್ಣಪರಮಾತ್ಮನು ಕುಚೇಲನ ಕಾಲನ್ನು ಒತ್ತಿದಾಗ ಕುಚೇಲನು ಅದು ತನ್ನ ಶೇಷತ್ವಕ್ಕೆ ಅಂದರೆ ಪರಮಾತ್ಮನ

ದಾಸನಾಗಿರುವ ಸ್ವರೂಪಕ್ಕೆ ಕುಂದಕವಾಗುತ್ತದೆ ಎಂದು ಕಾಲನ್ನು ಹಿಂದಕ್ಕೆ ತೆಗೆದುಕೊಳ್ಳದೇ ಅವನಿಗೆ ಹೇಗೆ ಇಷ್ಟವೋ ಹಾಗೆ ಮಾಡಲಿ ಎಂದು ಶಾಂತವಾಗಿ ಸುಮ್ಮನೇ ಇದ್ದನು. ಅಷ್ಟು ಮಾತ್ರವಲ್ಲದೇ ಒಂದು ಕಲ್ಲಿನ ಹಾಗೆ ನಿಶ್ಚೇಷ್ಠಿತನಾಗಿ ಇರದೆ, ಪರಮಾತ್ಮನ ಸಂತೋಷವನ್ನು ನೋಡಿ, ಅವನ ಆನಂದಕ್ಕೆ ವೃದ್ಧಿಕರವಾಗಿ ತಾನೂ ಸಂತೋಷಹೊಂದಿದವನಾಗಿ ಇದ್ದನು. ಅಂತಹ ಭಗವದತ್ಯಂತ ಪಾರತಂತ್ರ್ಯ ಜ್ಞಾನ ಅಂದರೆ ಭಗವಂತನ ಇಚ್ಛೆಗೆ ಅನುಗುಣವಾಗಿ ಇರುವ ಜ್ಞಾನ ನಮಗೆ ಉಂಟಾಗುವಂತೆ ನೀನೇ ಮಾಡಬೇಕು. ನಾವಾಗಿ ಮಾಡಿಕೊಳ್ಳಲು ನಮಗೆ ಶಕ್ತಿಯಲ್ಲ. ನೀನೇ ನಮ್ಮ ಕಾಮನೆಗಳನ್ನೆಲ್ಲಾ ಭಗವತ್ ಕಾಮವಾಗಿ ಮಾರ್ಪಡಿಸು ಎಂದು ಕೃಷ್ಣಪರಮಾತ್ಮನನ್ನು ಪ್ರಾರ್ಥಿಸುತ್ತಾರೆ.

ಚೇತನನು ತನಗೂ, ಭಗವಂತನಿಗೂ ಇರುವ ನಿಕಟ ಸಂಬಂಧವನ್ನು ಅರಿತು ಅಹಂಕಾರ ಮಮಕಾರ ರಹಿತನಾಗಿ, ಫಲದಲ್ಲಿ ಆಸಕ್ತಿ ಇಲ್ಲದವನಾಗಿ, ತನ್ನ ಕರ್ತವ್ಯ ಕರ್ಮಗಳನ್ನು ಭಗವಂತನ ಕೈಂಕರ್ಯವಾಗಿ ಸರ್ವದೇಶಕಾಲ ಸರ್ವಾವಸ್ಥೆಗಳಲ್ಲಿಯೂ ಸಂತೋಷವಾಗಿ ಮಾಡಬೇಕು. ಅದೇ ಅವನಿಗೆ ಪರಮ ಪುರುಷಾರ್ಥವು. ಈ ಪುರುಷಾರ್ಥಪ್ರಾಪ್ತಿಗಾಗಿ ಈ ಪಾಶುರದಲ್ಲಿ ಪರಮಾತ್ಮನನ್ನು ಪ್ರಾರ್ಥಿಸಿದ್ದಾರೆ.

ಈ ಪಾಶುರದ ಸಾರಾರ್ಥವೇನೆಂದರೆ - ನಾವು ಊರಿನವರಿಗಾಗಿ ಈ ವ್ರತಾನುಷ್ಠಾನದ ವ್ಯಾಜ ಹೊಂದಿ ಈ ಪರೈ ಎಂಬ ವಾದ್ಯವನ್ನು ಪ್ರಾರ್ಥಿಸಿದ್ದೇವೆಯೇ ವಿನಃ ನಮಗೆ ಬೇಕಾದುದು ಈ ಪರೈ ಎಂಬ ವಾದ್ಯವಲ್ಲ. ನಿನ್ನ ಮುಖೋಲ್ಲಾಸಕ್ಕಾಗಿಯೇ, ನಿನಗೇ ಸರ್ವವಿಧ ಕೈಂಕರ್ಯಗಳನ್ನು ಮಾಡುವ ಪರಮ ಪುರುಷಾರ್ಥವೇ ನಮಗೇ ಬೇಕಾಗಿರುವುದು. ಇಂದಿಗೂ ಇನ್ನೂ ಏಳೇಳು ಜನ್ಮಗಳಲ್ಲೂ ನಿನ್ನ ಆನಂದಕ್ಕಾಗಿಯೇ ನಾವು ಕೈಂಕರ್ಯ ಮಾಡುವವರಾಗಬೇಕು. ನಮ್ಮ ಇತರ ಆಸೆಗಳನ್ನೆಲ್ಲಾ ನೀನೇ ಮಾರ್ಪಡಿಸಿ, ನಿನಗೆ

ಕೈಂಕರ್ಯ ಮಾಡುವ ಮತ್ತು ನಿನ್ನ ಕೈಂಕರ್ಯವಾಗಿ ಕರ್ತವ್ಯ ಕರ್ಮಗಳನ್ನು ಮಾಡುವ ಮನೋಭಾವವನ್ನು ನೀನೇ ನಮಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಾರೆ.

ಇದನ್ನೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಸ್ಪಷ್ಟವಾಗಿ ವಿವರಿಸಿ ತಿಳಿಸಿದ್ದಾನೆ. 'ಮತ್‌ಕರ್ಮಕೃತ್' 'ಮಯಿಸರ್ವಾಣಿ ಕರ್ಮಾಣಿ ಸನ್ಯಸ್ಯ' - 'ಮನ್ಮನಾಭವ' 'ಯತ್ಕರೋಷಿ ಯದಶ್ನಾಸಿ ಯಜ್ಜುಹೋಸಿ ದದಾಸಿಯತ್। ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ॥' ಮುಂತಾದ ಶ್ಲೋಕಗಳಲ್ಲಿ - 'ನೀನು ಮಾಡುವ ಸಮಸ್ತ ಕರ್ತವ್ಯಕರ್ಮಗಳನ್ನೆಲ್ಲಾ ನನ್ನ ಆರಾಧನೆ ಎಂದು ಭಾವಿಸಿ ಭಕ್ತಿಯಿಂದ ಮಾಡು ಎಂದು ಪರಮಾತ್ಮನು ಉಪದೇಶ ಮಾಡಿದ್ದಾನೆ. ಇಂತಹ ಪರಮ ಪುರುಷಾರ್ಥವಾದ ಭಗವತ್ ಕೈಂಕರ್ಯವಾಗಿ ಕರ್ತವ್ಯಕರ್ಮಗಳನ್ನು ಮಾಡುವ ಮನೋಭಾವನೆಯು ತಮಗೆ ಉಂಟಾಗಬೇಕೆಂದೂ, ತಮಗೆ ಭಗವತ್ ಕೈಂಕರ್ಯ ಪುರುಷಾರ್ಥವನ್ನು ಕರುಣಿಸಿ ಕೃಪೆ ಮಾಡಬೇಕೆಂದೂ, ಈ ಪಾಶುರದಲ್ಲಿ ಗೋಪಿಯರು ಭಗವಂತನಲ್ಲಿ ಶರಣಾಗತಿ ಮಾಡಿ ಪ್ರಾರ್ಥಿಸಿದ್ದಾರೆ.

**ಈ ಪಾಶುರವು ದ್ವಯಮಂತ್ರದ ವಿವರಣೆಯಾಗಿದೆ.**

ಶಿತ್ತಂಶಿರುಕಾಲೈವನ್ದುನ್ನೈ ಸೇವಿತ್ತು - ಉನ್ ಪೊತ್ತಾಮರೈ ಅಡಿಯೇ ಪೋತ್ತುಂ :- ಎಂಬುದು 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೆ' ಎಂಬ ದ್ವಯಮಂತ್ರದ ಪೂರ್ವ ವಾಕ್ಯಕ್ಕೆ ವಿವರಣೆಯಾಗಿದೆ.

(1) 'ಶ್ರೀಮತ್' - ನಪ್ಪಿನ್ನೈಯೊಂದಿಗೆ ಶ್ರೀಕೃಷ್ಣನನ್ನು ಪ್ರಾರ್ಥಿಸುವುದರಿಂದ ಇಲ್ಲಿ ಶ್ರೀಮತ್ ಎಂಬ ಪದಕ್ಕೆ ವಿವರಣೆಯಿದೆ.

(2) 'ನಾರಾಯಣ' - ಎಂಬುದಕ್ಕೆ 'ಪೆತ್ತುಂ ಮೇಯ್ತ್ತುಣ್ಣುಂ ಕುಲತ್ತಿಲ್ ಪಿರಂದನೀ' - 'ಗೋವಿಂದ' ಎಂಬುದು ವಿವರಣೆಯಾಗಿದೆ.

(3) ಚರಣೌ ಶರಣಂ ಪ್ರಪದ್ಯೆ - ಎಂಬುದಕ್ಕೆ 'ಶಿತ್ತಂ ಶಿರುಕಾಲ್ಲೆವನ್ನುದ್ನ್ನೆಸೇವಿತ್ತು ಉನ್‌ಪೊತ್ತಾಮರೈ ಅಡಿಯೇ ಪೋತ್ತುಂ ಪೊರುಳ್ ಕೇಳಾಯ್'' - ''ಕುತ್ತೇವಲ್ ಎಂಗಳ್ಳೆ ಕೊಳ್ಳಾಮಲ್ ಪೋಹಾದು'' - ಎಂಬುದು ವಿವರಣೆಯಾಗಿದೆ.

(4) 'ಶ್ರೀಮತೇ ನಾರಾಯಣಾಯ' : ಎಂಬುದಕ್ಕೆ 'ಇತ್ತೈಪರೈಕೊಳ್ವಾನ್ ಅನ್ರುಕಾಣ್ ಗೋವಿಂದ ಎತ್ತೈಕ್ಕುಂ ಏಳೇಳ್‌ಪಿರವಿಕ್ಕುಂ ಉನ್‌ತನ್ನೋಡು ಉತ್ತೋಮೇಯಾವೋಂ - ಉನಕ್ಕೇ ನಾಂ ಆಳ್‌ಚ್ಚೈವೋಂ'' - ಎಂಬುದು ವಿವರಣೆಯಾಗಿದೆ.

(5) 'ನಮಃ' - ಎಂಬುದಕ್ಕೆ 'ಮತ್ತೈನಂ ಕಾಮಂಗಳ್ ಮಾತ್ತ್' ಎಂಬುದು ವಿವರಣೆಯಾದೆ.

ಈ ಪಾಶುರದ ಸಾರಾರ್ಥವನ್ನೇ ಶ್ರೀ ರಾಮಾನುಜಾಚಾರ್ಯರು ಶರಣಾಗತಿ ಗದ್ಯದಲ್ಲಿ ಪ್ರಾರ್ಥಿಸಿದ್ದಾರೆ.

ತಿರುಪ್ಪಾವೈಯ 28 ಮತ್ತು 29ನೆಯ ಪಾಶುರಗಳು ಬಹಳ ಮುಖ್ಯವಾದ ಪಾಶುರಗಳಾಗಿವೆ. ಈ ಪಾಶುರಗಳಲ್ಲಿ ಭಗವತ್ ಕೈಂಕರ್ಯಪುರುಷಾರ್ಥವನ್ನು ತಮಗೆ ಅನುಗ್ರಹಿಸಬೇಕೆಂದು ಪರಮಾತ್ಮನಲ್ಲಿ ಶರಣಾಗತಿ ಮಾಡಿ ಪ್ರಾರ್ಥಿಸಿದ್ದಾರೆ. 28ನೆಯ ಪಾಶುರದಲ್ಲಿ ಗೋಪಿಗಳು ತಮ್ಮ ಪ್ರಾಪಕಾಂತರ ಪರಿತ್ಯಾಗವನ್ನು ತಿಳಿಸಿದ್ದಾರೆ. ಅಂದರೆ ಇತರ ಯಾವ ಉಪಾಯಗಳನ್ನೂ ಕರ್ಮಜ್ಞಾನ ಭಕ್ತಿಯೋಗಗಳನ್ನೂ ಮತ್ತು ಶರಣಾಗತಿಯನ್ನೂ ಫಲಪ್ರಾಪ್ತಿಗೆ ಉಪಾಯವಾಗಿ ನೆನೆಸದೆ, ಪರಮಾತ್ಮನೇ ಉಪಾಯವೆಂದರಿತು 'ಇರೈವಾನೀ ತಾರಾಯ್ ಪರೈ' - ಅಂದರೆ ಪರಮಾತ್ಮನೇ ನೀನೇ ನಮ್ಮ ಇಷ್ಟಾರ್ಥಗಳನ್ನು ಅನುಗ್ರಹಿಸು ಎಂದು ಅವನಲ್ಲಿ ಶರಣಾಗತಿ ಮಾಡಿದ್ದಾರೆ.

29ನೆಯ ಪಾಶುರದಲ್ಲಿ ತಮ್ಮ ಪ್ರಾಪ್ಯಾಂತರ ಪರಿತ್ಯಾಗವನ್ನು ತಿಳಿಸಿದ್ದಾರೆ. ಅಂದರೆ ಇತರ ಯಾವ ಆಸೆ ಆಕಾಂಕ್ಷೆಗಳನ್ನೂ ಪುರುಷಾರ್ಥವಾಗಿ ನನಸದೆ

ಸ್ವಾರ್ಥರಹಿತವಾದ ಭಗವತ್ ಕೈಂಕರ್ಯವೇ ಪರಮಪುರುಷಾರ್ಥವೆಂದೂ 'ಉನಕ್ಕೇನಾಮ್ ಆಳ್ಸೈವೋಂ' - ಎಂದು ಪರಮಾತ್ಮನಿಗೆ ಕೈಂಕರ್ಯಮಾಡುವುದೇ ಚೇತನನು ಹೊಂದಬೇಕಾದ ಪರಮಪುರುಷಾರ್ಥವೆಂದು ತಿಳಿಸಿದ್ದಾರೆ ಮತ್ತು

'ಮತ್ತೈನನ್‌ಕಾಮಂಗಳ್ ಮಾತ್ತ್' - ಎಂದು ಭಗವತ್ ಕೈಂಕರ್ಯದಲ್ಲಿರುವ ತಮ್ಮ ಸ್ವಾರ್ಥ ಮನೋಭಾವನೆಯನ್ನು ಮಾರ್ಪಡಿಸಿ ಸ್ವಾರ್ಥರಹಿತವಾಗಿ ಭಗವತ್ ಕೈಂಕರ್ಯವನ್ನೂ ಮತ್ತು ಭಗವತ್ ಕೈಂಕರ್ಯವಾಗಿ ತಮ್ಮ ಕರ್ತವ್ಯ ಕರ್ಮಗಳನ್ನೂ ಸಂತೋಷದಿಂದ ಮಾಡುವ ಮನೋಭಾವವು ತಮಗೆ ಉಂಟಾಗುವಂತೆ ನೀನೇ ಮಾಡಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿದ್ದಾರೆ.

ಒಟ್ಟಿನಲ್ಲಿ 'ಕರವೈ' ಎಂಬ 28ನೆಯ ಪಾಶುರದಲ್ಲಿ ದ್ವಯ ಮಂತ್ರದ ಮೊದಲನೆಯ ವಾಕ್ಯವಾದ 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೆ' - ಎಂಬುದರ ಅರ್ಥವೂ ಮತ್ತು 'ಶಿತ್ತಂಶಿರುಕಾಲ್ಲೆ' ಎಂಬ 29ನೆಯ ಪಾಶುರದಲ್ಲಿ ದ್ವಯ ಮಂತ್ರದ ಎರಡನೆಯ ವಾಕ್ಯವಾದ 'ಶ್ರೀಮತೇ ನಾರಾಯಣಾಯನಮಃ' ಎಂಬುದರ ಅರ್ಥವೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ.

ತಿರುಪ್ಪಾವೈಯ 28 ಮತ್ತು 29ನೇ ಪಾಶರುಗಳನ್ನು (ಕರವೈ ಮತ್ತು ಶಿತ್ತಂಶಿರುಕಾಲ್ಲೆ ಎಂಬ ಪಾಶುರಗಳನ್ನು) ಅನುಸಂಧಾನ ಮಾಡಿದರೆ ದ್ವಯ ಮಂತ್ರಾನುಸಂಧಾನ ಮಾಡಿದಂತೆ ಆಗುತ್ತದೆ. ಆದ್ದರಿಂದ ಈ ಎರಡು ಪಾಶುರಗಳನ್ನೂ ಸರ್ವದಾ ಅನುಸಂಧಾನ ಮಾಡುತ್ತಾ ಪರಮಾತ್ಮನಲ್ಲಿ ಶರಣಾಗತಿ ಮಾಡಬೇಕೆಂದು ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.

# ಫಲಶ್ರುತಿ

## ಪಾಶುರ - 30

ಇದೇ ತಿರುಪ್ಪಾವೈಯ ಕೊನೆಯ ಪಾಶುರ. ಹಿಂದಿನ 29 ಪಾಶುರಗಳನ್ನು ಗೋದಾ ದೇವಿಯು ಗೋಪಿಯರ ಭಾವನೆಯಲ್ಲಿ ಹಾಡಿದ್ದಾಳೆ. ಆಂಡಾಳ್ ಆಂಡಾಳಾಗಿ ಹಾಡಿರುವ ಪಾಶುರ ಇದು ಒಂದೇ ಆಗಿದೆ. ಈ ವ್ರತವನ್ನು ಆಚರಿಸಿದ ಗೋಪಿಯರಿಗೆ ಶ್ರೀಕೃಷ್ಣಪರಮಾತ್ಮನು ಲಭಿಸಿದನು ಮತ್ತು ಇದನ್ನು ಅನುಕರಣೆ ಮಾಡಿದ ಗೋದಾದೇವಿಗೂ ಪರಮಾತ್ಮ ಲಭಿಸಿದ್ದಾನೆ. ಈ ಪಾಶುರಗಳನ್ನು ಶ್ರದ್ಧೆಯಿಂದ ಅನುಸಂಧಾನ ಮಾಡಿ ಭಗವಂತನಲ್ಲಿ ಶರಣಾಗತಿ ಮಾಡುವವರಿಗೂ ಅವನ ಅನುಗ್ರಹವು ಲಭಿಸುತ್ತದೆ ಎಂದು ಈ ಪಾಶುರದಲ್ಲಿ ಫಲಶ್ರುತಿ ಹೇಳಿದೆ. ಒಂದು ಪ್ರಬಂಧಕ್ಕೆ ಫಲಶ್ರುತಿ ಹೇಳುವಾಗ ಆ ದಿವ್ಯ ಪ್ರಬಂಧದಲ್ಲಿ ಹೇಳಿರುವ ವಿಷಯಗಳ ಹಿರಿಮೆಯನ್ನೂ, ಆ ಪ್ರಬಂಧವನ್ನು ರಚಿಸಿದವರು ಯಾರು, ಅವರ ಹಿರಿಮೆ ಏನು ಎಂಬುದನ್ನೂ, ಅದನ್ನು ಕಲಿತವರಿಗೆ ಲಭಿಸುವ ಫಲದ ಮಹತ್ವವನ್ನೂ ತಿಳಿಸಬೇಕು. ಅದೆಲ್ಲಾ ಈ 30ನೆಯ ಪಾಶುರದಲ್ಲಿ ತಿಳಿಸಲ್ಪಟ್ಟಿದೆ.

**ವಂಗಕ್ಕಡಲ್ ಕಡೈನ್ದ ಮಾದವನ್ನೈ ಕೇಶವನ್ನೈ**
**ತಿಂಗಳ್ ತಿರುಮುಹತ್ತು ಚ್ಚೇಯಿಳೈಯಾರ್ ಶೆನ್ನಿರೈಂಜಿ**
**ಅಂಗಪ್ಪರೈಕೊಣ್ಡವಾತ್ತೈ ಅಣಿಪುದುವೈ**
**ಪೈಙ್ಗಮಲತ್ತಣ್ತ್ತೆರಿಯಲ್ ಪಟ್ಟರ್‌ಪಿರಾನ್ ಕೋದೈಶೊನ್ನ**
**ಶಂಗತ್ತಮಿಳ್‌ಮಾಲೈ ಮುಪ್ಪದುಮ್ ತಪ್ಪಾಮೇ**
**ಇಂಗಿಪ್ಪರಿಶುರೈಪ್ಪಾರೀರಿರಂಡು ಮಾಲ್ ವರೈ ತ್ತೋಳ್**
**ಶೆಂಗಣ್‌ತಿರುಮುಹತ್ತು ಚ್ಚೆಲ್ವತ್ತಿರುಮಾಲಾಲ್**
**ಎಂಗುಂ ತಿರುವರುಳ್ ಪೆತ್ತು ಇನ್ಬುರುವರೆಮ್ಬಾವಾಯ**

''ಹಡಗುಗಳುಳ್ಳ ಸಮುದ್ರವನ್ನು ಕಡೆದ ಸರ್ವೇಶ್ವರನಾದ ಮಾಧವನೂ, ಕೇಶವನೂ ಆದ ಶ್ರೀಕೃಷ್ಣನನ್ನು, ಪೂರ್ಣಚಂದ್ರನಂತೆ ಮುಖವುಳ್ಳ, ದಿವ್ಯ ಆಭರಣಗಳನ್ನು ಧರಿಸಿರುವ ಗೋಪಿಯರು, ಅವನ ಬಳಿ ಬಂದು, ಅವನನ್ನು ನಮಸ್ಕರಿಸಿ, ಸ್ತುತಿಸಿ, ಆ ಗೋಕುಲದಲ್ಲಿ ತಮಗೆ ಇಷ್ಟವಾದ ಪರೈ ಎಂಬ ವಾದ್ಯವನ್ನು (ಪುರುಷಾರ್ಥವನ್ನು) ಆ ಗೋಕುಲದಲ್ಲಿ ಪಡೆದ ಪ್ರಕಾರವನ್ನು, ಸುಂದರವಾದ ಶ್ರೀವಿಲ್ಲಿಪುತ್ತೂರಿನಲ್ಲಿ, ಶೀತಳವಾದ ತಾವರೈ ಪುಷ್ಪದ ಜಪ ಮಣಿಹಾರವನ್ನು ಧರಿಸಿರುವ ಬ್ರಾಹ್ಮಣೋತ್ತಮರಾದ ಶ್ರೀವಿಷ್ಣುಚಿತ್ತರ ಮಗಳಾದ ಗೋದಾದೇವಿಯು ಹೇಳಿದ, ಉತ್ತಮ ತಮಿಳು ಭಾಷೆಯಲ್ಲಿರುವ, ಮಾಲೆಯಂತಿರುವ ಈ ಮೂವತ್ತು ಪಾಶುರಗಳನ್ನು, ಒಂದು ಪಾಶುರವನ್ನೂ ಬಿಡದೆ ಈ ಭೂಲೋಕದಲ್ಲಿ ಈ ರೀತಿ ಹೇಳುತ್ತಾ ಅನುಸಂಧಾನ ಮಾಡುವವರು - ನಾಲ್ಕು ದೊಡ್ಡ ಬೆಟ್ಟಗಳಂತೆ ಉನ್ನತವಾಗಿರುವ ಚತುರ್ಭುಜಗಳಿಂದ ಶೋಭಿಸುವ, ಕೆಂಪಾದ ದಿವ್ಯನೇತ್ರಗಳುಳ್ಳ, ಸುಂದರವಾದ ಮುಖಾರವಿಂದವನ್ನು ಪಡೆದಿರುವ, ಸಂಪತ್ತುಳ್ಳವನಾಗಿರುವ ಶ್ರಿಯಃ ಪತಿಯಾದ ಪರಮಾತ್ಮನಿಂದ ಇಹಪರಗಳೆರಡರಲ್ಲೂ ಎಲ್ಲೆಲ್ಲೂ ಶ್ರೀ ಸಹಿತನಾದ ಪರಮಾತ್ಮನ ಪರಮಾನುಗ್ರಹವನ್ನು ಪಡೆದು ಪರಮಾನಂದವನ್ನು ಹೊಂದುವರು - ನಮ್ಮ ಅದ್ವಿತೀಯವಾದ ವ್ರತವು ಶುಭವಾಗಿ ನೆರವೇರುವುದು'' - ಇದು ಈ ಪಾಶುರದ ವಾಕ್ಯಾರ್ಥ.

ಗೋದಾದೇವಿಯು ಆತ್ಮ ಶ್ರೇಯಸ್ಸನ್ನು ಹೊಂದಲು ಭಗವಂತನ ಕೃಪೆಯೇ ಉಪಾಯ (ಮಾರ್ಗ) ಎಂದು 28ನೆಯ ಪಾಶುರದಲ್ಲಿ ತಿಳಿಸಿ; ಭಗವಂತನ ಮುಖೋಲ್ಲಾಸಕ್ಕಾಗಿಯೇ ಮಾಡುವ ಕೈಂಕರ್ಯವೇ ಉಪೇಯ ಅಂದರೆ ಫಲ ಎಂದು 29ನೆಯ ಪಾಶುರದಲ್ಲಿ ಹೇಳಿ; ಈಗ ಈ 30ನೆಯ ಪಾಶುರದಲ್ಲಿ - ''ಈ 30 ಪಾಶುರಗಳನ್ನೂ ಬಿಡದೇ ಅನುಸಂಧಾನ ಮಾಡುವವರು ಭಗವಂತನ ಕೃಪೆಗೆ ಪಾತ್ರರಾಗಿ ಶ್ರೇಯಸ್ಸನ್ನು ಪಡೆಯುವರು, 'ತಿರುಮಾಲಾಲ್ ಎಂಗುಂ ತಿರುವರುಳ್ ಪೆರುವರ್' ಎಂದು ಫಲಶ್ರುತಿಯನ್ನು ಹೇಳಿದ್ದಾಳೆ.

ಅಂದರೆ ಈ ತಿರುಪ್ಪಾವೈ ಪ್ರಬಂಧದ ಮೂವತ್ತು ಪಾಶುರಗಳನ್ನೂ ತಪ್ಪದೆ ಅನುಸಂಧಾನ ಮಾಡುವವರಿಗೆ ಭಗವತ್ ಕೃಪೆಯಿಂದ ಇಹಪರಗಳೆರಡರಲ್ಲೂ ಸನ್ಮಂಗಳವುಂಟಾಗುತ್ತದೆ ಎಂದು ತಿಳಿಸಿ ಗೋದಾದೇವಿಯು ಈ ಪ್ರಬಂಧವನ್ನು ಮುಗಿಸಿದ್ದಾಳೆ.

**ವಂಗಕ್ಕಡಲ್ ಕಡೈನ್ದ ಮಾದವನೈ ಕೇಶವನೈ** :- ಹಡಗುಗಳುಳ್ಳ ಸಮುದ್ರವನ್ನು ಕಡೆದ ಮಾಧವನನ್ನೂ ಕೇಶವನನ್ನೂ ಅಂದರೆ ಶ್ರಿಯಃಪತಿಯಾದ ಸರ್ವೇಶ್ವರನನ್ನು - ಅಂದರೆ ದೇವತೆಗಳಿಗೆ ಸಹಾಯ ಮಾಡಲು ಶ್ರಮವಹಿಸಿ ಸಮುದ್ರ ಮಥನ ಮಾಡಿ ಕೊನೆಗೆ ದೇವತೆಗಳ ಕಾರ್ಯವೆಂಬ ವ್ಯಾಜದಲ್ಲಿ ಮಹಾಲಕ್ಷ್ಮಿಯನ್ನು ಪಡೆದು ಶ್ರೀಯಃ ಪತಿಯಾದ ಪರಮಾತ್ಮನನ್ನು -

**ಮಾದವನೈ** :- ಅಮೃತ ಮಥನ ಮಾಡುವಾಗ ಕ್ಷೀರಸಾಗರದಲ್ಲಿ ಉದ್ಭವಿಸಿದ ಮಹಾಲಕ್ಷ್ಮಿಯು ಪರಮಾತ್ಮನ ವಕ್ಷಸ್ಥಳವನ್ನು ಸೇರಲು ಅವನು 'ಮಾದವನ್' ಎನ್ನಿಸಿಕೊಂಡನು, ಶ್ರಿಯಃ ಪತಿಯಾದನು. ಇಲ್ಲಿ ಶ್ರಿಯಃಪತಿಯಾದ ಪರಮಾತ್ಮನಲ್ಲಿ ಶರಣಾಗತಿ ಮಾಡಿದ್ದಾರೆ ಎಂಬ ಅಭಿಪ್ರಾಯವೂ ಸೂಚಿಸಲ್ಪಟ್ಟಿದೆ. ಆದ್ದರಿಂದ ಇದು ದ್ವಯಮಂತ್ರಾನುಸಂಧಾನವಾಗಿದೆ.

**ಕೇಶವನೈ** :- ಪರಮಾತ್ಮನಿಗೆ ಕೇಶವನೆಂಬ ಹೆಸರುಂಟು. ಇದಕ್ಕೆ ಮೂರುವಿಧವಾಗಿ ಅರ್ಥ ಹೇಳಿದ್ದಾರೆ.

ಸುಂದರವಾದ ಕೇಶರಾಶಿ ಉಳ್ಳವನು ಎಂದೂ; ಕೇಶಿ ಎಂಬ ರಾಕ್ಷಸನನ್ನು ಸಂಹರಿಸಿದವನು ಮತ್ತು ವಿರೋಧಿಗಳನ್ನು ನಾಶಮಾಡುವ ಸಾಮರ್ಥ್ಯವುಳ್ಳವನಾಗಿ ರಾಕ್ಷಸರನ್ನು ಸಂಹರಿಸಿದವನು ಎಂದೂ; ಎಲ್ಲರಿಗೂ ಸ್ವಾಮಿಯಾಗಿರುವವನು ಕೇಶವ ಎಂದೂ ಮೂರುವಿಧವಾಗಿ ಅರ್ಥವನ್ನು ತಿಳಿಸಿದ್ದಾರೆ.

ಆರಂಭದ ಪಾಶುರಗಳಲ್ಲಿ 'ಅಡಿಪಾಡಿ' ಎಂದು ಪರಮಾತ್ಮನ ಪಾದಗಳನ್ನು ಹಾಡಿ, ಈಗ ಈ ಕೊನೆಯ 30ನೇ ಪಾಶುರದಲ್ಲಿ ಕೇಶವನ್ನೆ ಎಂದು ಅವನ ಕೇಶರಾಶಿಗಳ ಸೌಂದರ್ಯವನ್ನು ಹಾಡಿರುವುದರಿಂದ ಪಾದಾದಿ ಕೇಶಾಂತ ಅವನ ಸೌಂದರ್ಯವನ್ನು ಹಾಡಿ ಗೋದಾದೇವಿಯು ಮಂಗಳಾಶಾಸನ ಮಾಡಿದ್ದಾಳೆ.

**ತಿಂಗಳ್ ತಿರುಮುಹತ್ತು ಚ್ಚೇಯಿಳಯಾರ್‌ಶೆನ್ರು ಇರಂಗಿ** :- ಪೂರ್ಣಚಂದ್ರನಂತೆ ಮುಖವುಳ್ಳ, ದಿವ್ಯ ಆಭರಣಗಳನ್ನು ಧರಿಸಿರುವ ಗೋಪಿಯರು ಪರಮಾತ್ಮನ ಬಳಿಗೆ ಬಂದು ಅವನನ್ನು ನಮಸ್ಕರಿಸಿ - ಸ್ತುತಿಸಿ -

ಅಂದರೆ ಯಾವ ದೋಷವೂ ಇಲ್ಲದ ಆತ್ಮಗುಣವುಳ್ಳ ಅಂದರೆ ಜ್ಞಾನ ಭಕ್ತಿ ವೈರಾಗ್ಯ ಭೂಷಿತರಾದ ಅನನ್ಯಾರ್ಹರಾದ ಭಾಗವತರುಗಳು ಭಗವಂತನ ಬಳಿಗೆ ಹೋಗಿ ಸೇರಿ, ಅವನನ್ನು ನಮಸ್ಕರಿಸಿ ಸ್ತುತಿಸಿ ಎಂಬುದು ವಿಶೇಷಾರ್ಥ.

**ಅಂಗಪ್ಪರೈಕೊಂಡ ಆತ್ತೈ** :- ಆ ಗೋಕುಲದಲ್ಲಿ ತಮಗೆ ಇಷ್ಟವಾದ ಪರೈ ಎಂಬ ವಾದ್ಯವನ್ನು ಪಡೆದ ಪ್ರಕಾರವನ್ನು -

ಅಂದರೆ ಭಾಗವತರು ತಮಗೆ ಇಷ್ಟವಾದ ಕೈಂಕರ್ಯ ಪುರುಷಾರ್ಥವನ್ನು ಪಡೆದ ಪ್ರಕಾರವನ್ನು - ಎಂಬುದು ವಿಶೇಷಾರ್ಥ.

**ಅಣಿಪುದುವೈ ಪೈಂಗಮಲ ತಣ್ತೆರಿಯಲ್ ಪಟ್ಟರ್‌ಪಿರಾನ್ ಕೋದೈಶೊನ್ನ** : ಸುಂದರವಾದ ಶ್ರೀವಿಲ್ಲಿಪುತ್ತೂರಿನಲ್ಲಿ ಶೀತಳವಾದ ತಾವರೆ ಪುಷ್ಪದ ಮಣಿಹಾರವನ್ನು ಧರಿಸಿರುವ ಬ್ರಾಹ್ಮಣೋತ್ತಮರಾದ ಶ್ರೀವಿಷ್ಣುಚಿತ್ತರ ಮಗಳಾದ ಗೋದಾದೇವಿಯು ಹೇಳಿದ -

ಇಲ್ಲಿಗೋದಾದೇವಿಯು ತನಗೆ ಪಿತೃಸಮಾನರೂ, ಆಚಾರ್ಯರೂ ಆಗಿದ್ದ ಪೆರಿಯಾಳ್ವಾರ್ರ ಹೆಸರನ್ನುಮೊದಲುಹೇಳಿದ್ದಾಳೆ. ಅನಂತರ ಅವರಿಗೆ ಪುತ್ರಿಯಾಗಿ ಸ್ವೀಕರಿಸಲ್ಪಟ್ಟವಳಾದ ತಾನು ಈ ತಿರುಪ್ಪಾವೈ ಎಂಬ ಪ್ರಬಂಧವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾಳೆ. ವಿಷ್ಣುಚಿತ್ತರಂತಹ ಮಹಾಭಕ್ತರು ಇದ್ದ ಶ್ರೀವಿಲ್ಲಿಪುತ್ತೂರಿನ ವೈಭವವನ್ನು ಇಲ್ಲಿ ತಿಳಿಸಿ ಕೊಂಡಾಡಿದ್ದಾಳೆ.

**ಶಂಗತಮಿಳ್ ಮಾಲೈ ಮುಪ್ಪದುಮ್** :- ಉತ್ತಮವಾದ ತಮಿಳು ಭಾಷೆಯಲ್ಲಿರುವ, ಮಾಲೆಯಂತಿರುವ ಈ ಮೂವತ್ತು ಪಾಶುರಗಳನ್ನು - ಇಲ್ಲಿ ಈ ತಿರುಪ್ಪಾವೈ ಎಂಬ ಪ್ರಬಂಧವು ಭಕ್ತರ ಗೋಷ್ಠಿಯಲ್ಲಿ (ಸಮೂಹದಲ್ಲಿ) ಹಾಡಿ ಅನುಭವಿಸತಕ್ಕ ಪಾಶುರವಾಗಿದೆ ಎಂದೂ, ಸುಲಭವಾದ ತಮಿಳು ಭಾಷೆಯಲ್ಲಿದೆ ಎಂದೂ, ಪುಷ್ಪಮಾಲೆಯಂತೆ ಪದ್ಯ ಮಾಲಾರೂಪವಾಗಿದೆ ಎಂದೂ ತಿಳಿಸಿದ್ದಾಳೆ. ಪುಷ್ಪಮಾಲೆಯನ್ನು ಪರಮಾತ್ಮನಿಗೆ ಸಮರ್ಪಿಸಿದ ಗೋದಾದೇವಿಯು, ಈ ಪದ್ಯ ಮಾಲೆಯನ್ನು ಪರಮಾತ್ಮನಿಗೆ ಸಮರ್ಪಿಸಿರುವುದು ಮಾತ್ರವಲ್ಲದೆ ಇಂದಿಗೂ ನಮ್ಮೆಲ್ಲರಿಗೂ ಪರಮಾತ್ಮನಿಗೆ ಸಮರ್ಪಿಸಲು ಈ ತಿರುಪ್ಪಾವೈ ಎಂಬ ಪದ್ಯಮಾಲೆಯನ್ನು ಅನುಗ್ರಹಿಸಿದ್ದಾಳೆ.

**ಮುಪ್ಪದುಮ್ ತಪ್ಪಾಮೆ ಇಂಗು ಇಪ್ಪರಿಶುರೈಪ್ಪಾರ್** :- ಈ ತಿರುಪ್ಪಾವೈಯ ಮೂವತ್ತು ಪಾಶುರಗಳನ್ನು ತಪ್ಪದೆ, ಅಂದರೆ ಒಂದು ಪಾಶುರವನ್ನೂ ಬಿಡದೆ, ಈ ಭೂಲೋಕದಲ್ಲಿ ಈ ರೀತಿ ಅನುಸಂಧಾನ ಮಾಡುವವರು - ಒಂದು ಮಣಿ ಹಾರದಲ್ಲಿ ಒಂದು ಮಣಿ ಬಿದ್ದುಹೋದರೂ ಹಾರವು ಅಂದವಾಗಿರುವುದಿಲ್ಲ; ಎಲ್ಲಾ ಮಣಿಗಳೂ ಇದ್ದರೆ ಹಾರವು ಅಂದವಾಗಿ ಶೋಭಿಸುತ್ತದೆ. ಅದೇ ರೀತಿ ತಿರುಪ್ಪಾವೈಯ ಮೂವತ್ತು ಪಾಶುರಗಳನ್ನೂ ಹಾಡುವುದು ಅತ್ಯುತ್ತಮವೆಂದು ತಿಳಿಸಿದ್ದಾಳೆ.

**ಈರಿರಂಡ್‌ಮಾಲ್ವರೈತೋಳ್‌ಶೆಂಗಣ್ ತಿರುಮುಹತ್ತ್‌ಶೆಲ್ವತ್ತಿರುಮಾಲಾಲ್** :- ನಾಲ್ಕು ದೊಡ್ಡಬೆಟ್ಟಗಳಂತೆ ಉನ್ನತವಾಗಿರುವ ಚತುರ್ಭುಜಗಳಿಂದ ಶೋಭಿಸುವವನಾಗಿಯೂ, ಕೆಂಪಾದ ದಿವ್ಯ ನೇತ್ರಗಳನ್ನೂ, ಸುಂದರವಾದ ದಿವ್ಯಮುಖಾರವಿಂದವನ್ನೂ ಹೊಂದಿರುವವನಾಗಿಯೂ, ನಿತ್ಯ ವಿಭೂತಿ ಲೀಲಾವಿಭೂತಿ ಎಂಬ ಐಶ್ವರ್ಯ ಹೊಂದಿರುವವನಾಗಿ ಉಭಯ ವಿಭೂತಿ ನಾಯಕನಾಗಿ ಇರುವ ಶ್ರಿಯಃಪತಿಯಾದ ಪರಮಾತ್ಮನಿಂದ -

**ಎಂಗುಂ ತಿರುವರುಳ್ ಪೆತ್ತು ಇನ್ಬುರುವರ್ :-** ಎಲ್ಲೆಲ್ಲೂ ಅಂದರೆ ಇಹಪರಗಳೆರಡರಲ್ಲೂ ಶ್ರೀದೇವಿ ಮತ್ತು ಶ್ರೀಮನ್ನಾರಾಯಣರ ಶ್ರೇಷ್ಠವಾದ ಮಹಾಕೃಪೆಯನ್ನು ಪಡೆದು, ಪರಮಾನಂದವನ್ನು ಹೊಂದುವರು.

ಎಂಗುಂ ಎಂಬುದಕ್ಕೆ ಈ ಲೋಕದಲ್ಲಿ ಎಲ್ಲಾ ಸುಖಸಂಪತ್ತನ್ನು ಹೊಂದಿ ಆನಂದಿಸುವರು; ಪರಲೋಕದಲ್ಲಿ ಭಗವತ್‌ಕೈಂಕರ್ಯಪುರುಷಾರ್ಥವನ್ನು ಪಡೆದು ಆನಂದಿಸುವರು ಎಂದು ಅರ್ಥ ಹೇಳಿದ್ದಾರೆ.

**ಎಂಪಾವಾಯ್ :-** ನಮ್ಮ ವ್ರತವು ಸಾಂಗವಾಗಿ ಶುಭವಾಗಿ ನೆರವೇರುವುದು.

ಈ ಪಾಶುರಕ್ಕೆ ತತ್ವಾರ್ಥದ ಪ್ರಕಾರ ತನ್ನಲ್ಲಿ ಶರಣಾಗತರಾದ ಚೇತನರ ಶರೀರಗಳೆಂಬ ನಾವೆಗಳಿಂದ ಕೂಡಿರುವ ಸಂಸಾರವೆಂಬ ಸಾಗರವನ್ನು ಪರಮಾತ್ಮನು ತನ್ನ ಸಂಕಲ್ಪವೆಂಬ ಮಂದರಪರ್ವತವನ್ನು ನಾಟಿ, ಕೃಪೆಯೆಂಬ ಹಗ್ಗದಿಂದ ಅದನ್ನು ಸುತ್ತಿ, ಕಟಾಕ್ಷವೆಂಬ ಹಗ್ಗದಿಂದ ಅದನ್ನು ಕಡೆದು, ಜೀವರುಗಳಲ್ಲಿರುವ ಕೆಟ್ಟ ಪ್ರವೃತ್ತಿಗಳನ್ನು ನಾಶಮಾಡಿ, ಅವರನ್ನು ತನಗೆ ಶೇಷಭೂತರನ್ನಾಗಿ ಮಾಡಿಕೊಳ್ಳುತ್ತಾನೆ ಎಂಬ ಅರ್ಥವನ್ನೂ ತಿಳಿಸಿದ್ದಾರೆ.

ಈ ಪಾಶುರದಲ್ಲಿ ಆರಂಭದಲ್ಲಿ 'ಮಾದವನ್ನೈ' ಎಂದೂ ಕೊನೆಯಲ್ಲಿ 'ತಿರುಮಾಲ್' ಎಂದೂ ಶ್ರೀದೇವಿ ಸಹಿತನಾದ ಪರಮಾತ್ಮನನ್ನು ಹೇಳಿರುವುದರಿಂದ ಇದು ದ್ವಯಮಂತ್ರಾನುಸಂಧಾನವಾಗಿದೆ ಎಂದೂ ಹೇಳಿದ್ದಾರೆ.

ಗೋಪಿಯರು ಈ ವ್ರತವನ್ನು ಆಚರಿಸಿ ಶ್ರೀಕೃಷ್ಣಪರಮಾತ್ಮನನ್ನು ಪಡೆದರು. ಗೋದಾದೇವಿಯು ಈ ವ್ರತವನ್ನು ಅನುಕರಿಸಿ ಆಚರಿಸಿ ಪರಮಾತ್ಮನನ್ನು ಪಡೆದಳು. ಅವಳು ರಚಿಸಿರುವ ಈ ತಿರುಪ್ಪಾವೈಯನ್ನು ಅನುಸಂಧಾನ ಮಾಡುವವರೂ, ಪರಮಾತ್ಮನ ಕೃಪೆಗೆ ಪಾತ್ರರಾಗಿ ಆನಂದ ಹೊಂದುವರು ಎಂದು ಈ ಪಾಶುರದಲ್ಲಿ ಶ್ರೀ ಗೋದಾದೇವಿಯು ಸ್ಪಷ್ಟವಾಗಿ ತಿಳಿಸಿದ್ದಾಳೆ.

# ಉಪಸಂಹಾರ

ಒಟ್ಟಿನಲ್ಲಿ ತಿರುಪ್ಪಾವೈಯು ಒಂದು ಶರಣಾಗತಿ ಶಾಸ್ತ್ರವಾಗಿದೆ. ಶರಣಾಗತಿ ಮಾಡುವ ವಿಚಾರವನ್ನೆಲ್ಲಾ ಗೋದಾದೇವಿಯು ಇದರಲ್ಲಿ ವಿವರಿಸಿ ತಿಳಿಸಿದ್ದಾಳೆ. ಇದು ತಿರುಮಂತ್ರ, ದ್ವಯ, ಚರಮ ಶ್ಲೋಕಗಳಿಗೆಲ್ಲಾ ವಿವರಣೆಯಾಗಿದೆ. ಇದರಲ್ಲಿ ತತ್ತ್ವ ಹಿತ ಪುರುಷಾರ್ಥಗಳೆಲ್ಲವೂ ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿವೆ. ಉಪನಿಷತ್ತಿನಲ್ಲಿರುವ ತತ್ತ್ವಾರ್ಥಗಳೆಲ್ಲವೂ ಇದರಲ್ಲಿ ಅಡಗಿರುವುದರಿಂದ ಇದನ್ನು ಉಪನಿಷತ್ ಸಾರವೆಂದು ಕರೆದಿದ್ದಾರೆ. ಶ್ರೀಗೋದಾದೇವಿಯು ಪರಮಾತ್ಮನ ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾರೂಪಗಳಿಗೆಲ್ಲಾ ಇದರಲ್ಲಿ ಮಂಗಳಾಶಾಸನ ಮಾಡಿದ್ದಾಳೆ ಮತ್ತು ಕೃಷ್ಣಾವತಾರದಲ್ಲಿ ಪರಮಾತ್ಮನ ದಿವ್ಯ ಗುಣಚೇಷ್ಟಿತಾದಿಗಳನ್ನೆಲ್ಲಾ ಇದರಲ್ಲಿ ಅಲ್ಲಲ್ಲಿ ವರ್ಣಿಸಿದ್ದಾಳೆ. ಇದನ್ನೆಲ್ಲಾ ನಮ್ಮ ಪೂರ್ವಾಚಾರ್ಯರುಗಳ ವ್ಯಾಖ್ಯಾನದಲ್ಲಿ ವಿವರವಾಗಿ ಕಾಣಬಹುದು.

ಗೋದಾದೇವಿಗೆ ಪರಮಾತ್ಮನಲ್ಲಿ ಅತಿಶಯವಾದ ಭಕ್ತಿ ಇದ್ದಿತು. ಅವಳಿಗೆ ಆಳ್ವಾರ್ರುಗಳಂತೆ ಸಹಜಭಕ್ತಿಯಿದ್ದಿತು. ಭಕ್ತಿಯಲ್ಲಿ 3 ವಿಧಗಳಿವೆ ಎಂದು ತಿಳಿಸಿದ್ದಾರೆ.

(1) ಸಾಧನ ಭಕ್ತಿ:- ಸಾಮಾನ್ಯವಾಗಿ ಭಕ್ತರಲ್ಲಿರುವ ಭಕ್ತಿ, ಭಕ್ತಿಯೋಗವನ್ನು ಐಹಿಕ ಆಮುಷ್ಮಿಕ ಫಲಗಳನ್ನು ಹೊಂದಲು ಆಚರಿಸುವುದು ಸಾಧನ ಭಕ್ತಿಯು. ಇದು ಇತರ ಫಲಗಳನ್ನು ಹೊಂದಲು ಅದಕ್ಕೆ ಸಾಧನವಾಗಿ ಅಥವಾ ಉಪಾಯವಾಗಿ ಆಚರಿಸುವ ಭಕ್ತಿ.

(2) ಸಾಧ್ಯಭಕ್ತಿ:- ಭೋಜನಕ್ಕೆ ರುಚಿಬೇಕಾಗಿರುವಂತೆ ಭಗವದನುಭವ ಹೊಂದಲು ಭಕ್ತಿ ಬೇಕಾಗಿರುತ್ತದೆ. ಅದು ಸಾಧ್ಯ ಭಕ್ತಿ. "ಭವತು ಮಮಪರಸ್ಮಿ

ಶೇಮುಷೀ ಭಕ್ತಿರೂಪ'' - ಅಂದರೆ ನನಗೆ ಭಕ್ತಿರೂಪಾಪನ್ನ ಜ್ಞಾನಕೊಡು ಎಂದು ಶ್ರೀ ರಾಮಾನುಜರು ಪರಮಾತ್ಮನನ್ನು ಪ್ರಾರ್ಥಿಸಿದ್ದಾರೆ. ''ನಮ್ಮ ಜ್ಞಾನವು ಭಕ್ತಿ ರೂಪವಾಗಿ ಮಾರ್ಪಡಲಿ'' ಎಂದು ಪ್ರಾರ್ಥಿಸುವುದು ಸಾಧ್ಯ ಭಕ್ತಿ.

(3) ಸಹಜಭಕ್ತಿ : ಇದು ಆಳ್ವಾರುಗಳಿಗೆಲ್ಲಾ ಸ್ವಾಭಾವಿಕವಾಗಿಯೇ ಇರುವ ಭಕ್ತಿ, ಇದರಲ್ಲಿ ಫಲಾಪೇಕ್ಷೆ ಯಾವುದೂ ಇರುವುದಿಲ್ಲ. ಇದು ಹುಟ್ಟುವಾಗಲೇ ಹೃದಯದಲ್ಲಿ ತಾನಾಗಿಯೇ ಸ್ವಾಭಾವಿಕವಾಗಿ ತುಂಬಿರುವ ಭಗವದ್ಭಕ್ತಿಯಾಗಿದೆ. ಗೋದಾದೇವಿಗೂ ಪರಮಾತ್ಮನಲ್ಲಿ ಸ್ವಾಭಾವಿಕವಾಗಿ ಸರ್ವದಾ ಇರುವ ಈ ಸಹಜಭಕ್ತಿಯಿದ್ದಿತು. ಆದ್ದರಿಂದ ಅವಳು ರಚಿಸಿರುವ ಈ ತಿರುಪ್ಪಾವೈ ಭಕ್ತಿರಸದಿಂದ ಕೂಡಿರುವ ಪಾಶುರವಾಗಿದೆ. ನಮ್ಮಾಳ್ವಾರ್ರವರು ಪಾಶುರಗಳನ್ನು ಹಾಡಿ ಕೇವಲ ವಾಚಿಕ ಕೈಂಕರ್ಯ ಮಾಡಿದ್ದಾರೆ. ಆದರೆ ಗೋದಾದೇವಿಯು ಪೂಮಾಲೈ ಪಾಮಾಲೈ ಎರಡನ್ನೂ ಪರಮಾತ್ಮನಿಗೆ ಸಮರ್ಪಿಸಿ ಕಾಯಕವಾಚಿಕ ಕೈಂಕರ್ಯಗಳನ್ನು ಮಾಡಿದ್ದಾಳೆ. ಅವಳು ರಚಿಸಿ ಹಾಡಿರುವ ಈ ಪಾಮಾಲೆಯನ್ನು ಇಂದೂ ನಾವೂ ಭಕ್ತಿಯಿಂದ ಹಾಡಿ ಭಗವದನುಭವ ಪಡೆಯಬಹುದು.

ಭಗವದ್ರಾಮಾನುಜಾಚಾರ್ಯರು ತಿರುಪ್ಪಾವೈಯನ್ನು ಶ್ರದ್ಧೆಯಿಂದ ಅನುಸಂಧಾನ ಮಾಡುತ್ತಿದ್ದುದರಿಂದ ಅವರು 'ತಿರುಪ್ಪಾವೈಜೀಯರ್' - ಎಂಬ ಹೆಸರನ್ನು ಪಡೆದಿದ್ದರು. ಅವರು ಇದನ್ನು ಪ್ರತಿದಿನವೂ ದೇವಸ್ಥಾನಗಳಲ್ಲಿ ಹೇಳಬೇಕೆಂಬ ನಿಯಮವನ್ನು ಜಾರಿಗೆ ತಂದರು. ಇಂದಿಗೂ ಶ್ರೀವೈಷ್ಣವ ದೇವಸ್ಥಾನಗಳಲ್ಲೆಲ್ಲಾ ತಿರುಪ್ಪಾವೈ ಪಾಶುರಗಳನ್ನು ಪ್ರತಿದಿನವೂ ಅನುಸಂಧಾನ ಮಾಡುತ್ತಾರೆ. ಮಾರ್ಗಶೀರ್ಷ ಮಾಸದಲ್ಲಂತೂ ದೇವಸ್ಥಾನ ಮಠಗಳು ಮುಂತಾಗಿ ಅನೇಕ ಕಡೆಗಳಲ್ಲಿ ದಿನಕ್ಕೆ ಒಂದು ಪಾಶುರದಂತೆ 30 ದಿನಗಳೂ ತಿರುಪ್ಪಾವೈ ಪಾಶುರಗಳ ಅನುಸಂಧಾನ ಮತ್ತು ಉಪನ್ಯಾಸಗಳು ಪ್ರತಿವರ್ಷವೂ ತಪ್ಪದೇ ನಡೆಯುತ್ತಿವೆ.

ಗೃಹಾದಿಗಳಲ್ಲೂ ಕೂಡ ಭಗವಂತನ ದಿವ್ಯ ಅರ್ಚಾಮೂರ್ತಿಗೆ ಪೂಜೆ ಮಾಡುವ ಕಾಲದಲ್ಲಿ ತಿರುಪ್ಪಾವೈ ಪಾಶುರಗಳನ್ನು ಅನುಸಂಧಾನ ಮಾಡುವ ಕೆಲವು ಕ್ರಮಗಳೂ ಉಂಟು. ಅವರವರು ತಮ್ಮ ತಮ್ಮ ಮನಸ್ಸಿನಲ್ಲಿ ಭಕ್ತಿ ಉಂಟಾಗುವ ರೀತಿಯಲ್ಲಿ ಪಾಶುರಗಳನ್ನು ಅನುಸಂಧಾನ ಮಾಡಿ ಪೂಜೆ ಮಾಡಬಹುದು. ಅದರಲ್ಲಿ ಒಂದು ಪೂಜಾಕ್ರಮವನ್ನು ಈ ರೀತಿಯಾಗಿ ತಿಳಿಸಿದ್ದಾರೆ.

ಮೊದಲು 'ಮಾರ್ಗಳಿ ತಿಂಗಳ್' (ಪಾಶುರ 1) ಮತ್ತು 'ಮಾಯನೈಮನ್ನು' (ಪಾಶುರ 5) ಎಂಬ ಎರಡು ಪಾಶುರಗಳನ್ನು ಹೇಳಿ ಭಗವದಾರಾಧನೆಗಾಗಿ ತಮ್ಮ ಮನಸ್ಸನ್ನು ತಮಗೆ ಇಷ್ಟವಾದ ಭಗವನ್ನಾಮ ಸ್ಮರಣೆಯೊಂದಿಗೆ ಪವಿತ್ರಗೊಳಿಸಿಕೊಳ್ಳಬೇಕು.

ಅನಂತರ 'ಆಳಿಮಳೈಕಣ್ಣಾ' (ಪಾಶುರ 4) ಮತ್ತು 'ನಾಯಹನಾಯ್‌ನಿನ್ರ' (ಪಾಶುರ 16) ಎಂಬ ಪಾಶುರಗಳನ್ನು ಹೇಳಿ ತಮ್ಮ ಹೃದಯದಲ್ಲಿ ಭಕ್ತಿಭಾವ ಉಂಟಾಗುವಂತೆ ಮಾಡಬೇಕೆಂದು ಭಗವದ್ಭಕ್ತರನ್ನೂ ಆಚಾರ್ಯರುಗಳನ್ನೂ ಪ್ರಾರ್ಥಿಸಬೇಕು.

ಅನಂತರ ಮೊದಲು 'ಉಂದು ಮದಹಳಿತ್ತನ್' (ಪಾಶುರ 17) ಮತ್ತು 'ಮುಪ್ಪತ್ತುಮೂವರ್' (ಪಾಶುರ 20) ಎಂಬ ಪಾಶುರಗಳನ್ನು ಹೇಳಿ ಪುರುಷಕಾರ ಮಾಡುವಂತೆ ಶ್ರೀದೇವಿಯನ್ನು ಪ್ರಾರ್ಥಿಸಿ, ತಮಗೆ ಭಕ್ತಿಯನ್ನು ಅನುಗ್ರಹಿಸುವಂತೆ ಪರಮಾತ್ಮನನ್ನು ಪ್ರಾರ್ಥಿಸಬೇಕು.

ಅನಂತರ ಪೂಜೆಗೆ ಪ್ರಾರಂಭ ಮಾಡಬೇಕು. ಮೊದಲು 'ಅಂಗಣ್ ಮಾಜ್ಞಾಲತ್ತ್' ಎಂಬ 22ನೇ ಪಾಶುರವನ್ನು ಹೇಳಿ ಅಹಂಕಾರ ಮಮಕಾರ ರಹಿತರಾಗಿ ಭಗವಂತನ ಕೃಪಾಕಟಾಕ್ಷವನ್ನು ಕೋರಿ ದೇವರಿಗೆ ತುಳಸೀ ಪುಷ್ಪಾದಿಗಳನ್ನು ಸಮರ್ಪಿಸಿ - 'ಮಾರಿಮಲೈ' ಎಂಬ 23ನೆಯ ಪಾಶುರ ಹೇಳಿ

ತುಳಸೀ ಪುಷ್ಪಾದಿಗಳ ಪೀಠದಲ್ಲಿ ಬಂದು ನೆಲೆಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಬೇಕು. ಅನಂತರ 'ಅನ್ರಿವ್ವುಲಹಂ' ಎಂಬ 24ನೆಯ ಪಾಶುರ ಹೇಳಿ ದೇವರಿಗೆ ಮಂಗಳಾಶಾಸನ ಮಾಡಿ 'ಕೂಡಾರೈವೆಲ್ಲುಂ' ಎಂಬ 27ನೇ ಪಾಶುರ ಹೇಳಿ ದೇವರಿಗೆ ನೈವೇದ್ಯವನ್ನು ಸಮರ್ಪಿಸಬೇಕು. ಅನಂತರ 'ಕರವೈಹಳ್ ಪಿನ್‌ಶೆನ್ರುಂ' ಎಂಬ 28ನೆಯ ಪಾಶುರ ಹೇಳಿ ತಮ್ಮ ಆಕಿಂಚನ್ಯವನ್ನು ಅರಿಕೆ ಮಾಡಿಕೊಂಡು ಅಪರಾಧಕ್ಷಮಾಪಣೆಯನ್ನೂ, ಅವನ ಕೃಪಾಪೂರಿತ ಅನುಗ್ರಹವನ್ನೂ, ಅವನ ನಿಕಟ ಸಂಬಂಧಜ್ಞಾನ ಪ್ರಾಪ್ತಿಯನ್ನೂ ಪ್ರಾರ್ಥಿಸ ಬೇಕು, ಅನಂತರ 'ಶಿತ್ತಂಶಿರುಕಾಲ್ಲೈ' ಎಂಬ 29ನೆಯ ಪಾಶುರವನ್ನು ಹೇಳಿ, ಪರಮಾತ್ಮನಿಗೆ ತಾವು ಕೈಂಕರ್ಯ ಮಾಡುವವರಾಗಬೇಕೆಂದೂ, ತಮ್ಮ ಇತರ ಆಸೆ ಆಕಾಂಕ್ಷೆಗಳನ್ನೆಲ್ಲಾ ಪರಮಾತ್ಮನೇ ಮಾರ್ಪಡಿಸಿ, ಭಗವತ್ ಕೈಂಕರ್ಯ ಪುರುಷಾರ್ಥವನ್ನು ತಮಗೆ ಅನುಗ್ರಹಿಸಬೇಕೆಂದೂ ಪರಮಾತ್ಮನನ್ನು ಪ್ರಾರ್ಥಿಸಿ ಅವನಲ್ಲಿ ಶರಣಾಗತಿ ಮಾಡಬೇಕು. ಕೊನೆಯಲ್ಲಿ ''ವಂಗಕ್ಕಡಲ್'' ಎಂಬ 30ನೆಯ ಪಾಶುರವನ್ನು ಹೇಳಿ ಪರಮಾತ್ಮನಿಗೆ ಮಂಗಳ ಹಾಡಿ ಭಗವದಾರಾಧನವನ್ನು (ಪೂಜೆಯನ್ನು) ಮುಗಿಸುವುದು ಒಂದು ಕ್ರಮವೆಂದು ತಿಳಿಸಿದ್ದಾರೆ.

ಒಟ್ಟಿನಲ್ಲಿ ತಿರುಪ್ಪಾವೈ ಭಗವಂತನ ಪ್ರಾರ್ಥನಾಪರವಾದ ಪಾಶುರವಾಗಿರುವುದರಿಂದ ಇದನ್ನು ಎಲ್ಲರೂ ಪ್ರತಿದಿನವೂ ಸ್ತೋತ್ರರೂಪದಲ್ಲಿ ಅನುಸಂಧಾನ ಮಾಡಿ ಭಗವದನುಗ್ರಹಕ್ಕೆ ಪಾತ್ರರಾಗಬಹುದು. ಕೊನೆಯ ಪಕ್ಷ ಕರವೈ, ಶಿತ್ತಂಶಿರುಕಾಲ್ಲೈ ಮತ್ತು ವಂಗಕ್ಕಡಲ್ ಎಂಬ 28, 29 ಮತ್ತು 30 ಈ ಮೂರು ಪಾಶುರಗಳನ್ನಾದರೂ ಅನುಸಂಧಾನ ಮಾಡುವುದು ಒಳ್ಳೆಯದು ಎಂದು ಪೂರ್ವಾಚಾರ್ಯರುಗಳು ತಿಳಿಸಿದ್ದಾರೆ.

ಎಲ್ಲಕ್ಕಿಂತಲೂ ಮುಖ್ಯವಾಗಿ ಶ್ರೀಕೃಷ್ಣಪರಮಾತ್ಮನು ಅರ್ಜುನನನ್ನು ವ್ಯಾಜವಾಗಿ ಇಟ್ಟುಕೊಂಡು ಸರ್ವದೇಶ, ಸರ್ವಕಾಲದ ಸರ್ವಮಾನವರಿಗೂ

ಭಗವದ್ಗೀತೆಯನ್ನು ಉಪದೇಶಿಸಿರುವಂತೆ, ಗೋದಾದೇವಿಯು ಗೋಪಿಯರ ವ್ರತವನ್ನು ಅನುಕಾರ ಮಾಡುವ ವ್ಯಾಜದಲ್ಲಿ ಸರ್ವದೇಶ ಸರ್ವಕಾಲ ಸರ್ವಾವಸ್ಥೆಯಲ್ಲಿರುವ ಸಕಲ ಮಾನವರಿಗೂ ತಿರುಪ್ಪಾವೈಯ ಮೂಲಕ ಉತ್ತಮವಾದ ಉಪದೇಶ ನೀಡಿದ್ದಾಳೆ. ಭೂದೇವಿಯೇ ಗೋದಾದೇವಿಯಾಗಿ ಅವತರಿಸಿ, ಲೋಕದಮಾನವರೆಲ್ಲರೂ ಉಜ್ಜೀವಿಸಲಿ ಎಂದು ''ಎಲ್ಲರೂ ಭಗವನ್ನಾಮ ಸಂಕೀರ್ತನೆ ಮಾಡಿ ಭಗವದನುಭವ ಪಡೆದು ಉಜ್ಜೀವಿಸಿರಿ'' ಎಂದು ಎಲ್ಲರಿಗೂ ಉಪದೇಶ ನೀಡಿದ್ದಾಳೆ. ತನ್ನ ಕರುವನ್ನು ಕಳೆದುಕೊಂಡ ಹಸುವು ತನ್ನ ಕರುವಿನ ಚಕ್ಕಳದಿಂದ ಮಾಡಿದ, ನಿರ್ಜೀವವಾದ ತನ್ನ ಕರುವಿನ ಪ್ರತಿಮೆಯನ್ನು ಕಂಡಾಗಲೂ ಹಾಲು ಕರೆಯುವಂತೆ, ಪರಮಾತ್ಮನು ಗೋದಾದೇವಿಯು ರಚಿಸಿರುವ ತಿರುಪ್ಪಾವೈಯ ಪಾಶುರಗಳನ್ನು ಅನುಸಂಧಾನ ಮಾಡುವವರಿಗೂ ಕೃಪೆ ತೋರಿಸಿ ರಕ್ಷಿಸುತ್ತಾನೆ; ಆದ್ದರಿಂದ ತಿರುಪ್ಪಾವೈಯನ್ನು ಹಾಡುವುದರ ಮೂಲಕ, ಅದರ ಹೊದಿಕೆ ಹೊಂದಿದವರಾಗಿ, ಭಗವತ್ ಕೃಪಾಕ್ಷೀರವನ್ನು ಪಡೆಯಿರಿ ಎಂದು ಪೂರ್ವಾಚಾರ್ಯರುಗಳು ಉಪದೇಶ ಮಾಡಿದ್ದಾರೆ.

ತಿರುಪ್ಪಾವೈಯು, ಗೋದಾದೇವಿಯು ಕೇವಲ ಶ್ರೀವಿಲ್ಲಿಪುತ್ತೂರಿನಲ್ಲಿದ್ದ ಅಂದಿನ ಕಾಲದ ಹೆಣ್ಣುಮಕ್ಕಳಿಗೆ ಮಾತ್ರ ಉಪದೇಶ ಮಾಡಿ ತಿಳಿಸಿದ ಪಾಶುರವಲ್ಲ. ಇದರಲ್ಲಿ 'ವೈಯ್ಯತ್ತುವಾಳ್ವೀರ್‌ಹಾಳ್' ಎಂದು ಹೇಳಿ ಇಂದಿನ ಜಗತ್ತಿನಲ್ಲಿ ಬಾಳುತ್ತಿರುವ ಸರ್ವಮಾನವರಿಗೂ ಗೋದಾದೇವಿಯು ಉಪದೇಶ ನೀಡಿದ್ದಾಳೆ. ಆದ್ದರಿಂದ ಇದು ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಯಲ್ಲಿರುವ, ಸರ್ವಮಾನವರಿಗೂ ಗೋದಾದೇವಿಯು ತಿಳಿಸಿರುವ ಸರ್ವೋದಯ ಸಂದೇಶವಾಗಿಯೂ, ಸರ್ವರೂ ಕಲಿತು ಅನುಸಂಧಾನ ಮಾಡುವ ಭಗವಂತನ ಪ್ರಾರ್ಥನೆಯಾಗಿಯೂ ಇದೆ. ಎಲ್ಲರೂ ಸರ್ವದಾ ಭಗವನ್ನಾಮಗಳನ್ನೂ, ಭಗವಂತನ ಕಲ್ಯಾಣ ಗುಣ ಚೇಷ್ಟಿತಾದಿಗಳನ್ನೂ ಹಾಡುತ್ತಾ, ತಮ್ಮ ತಮ್ಮ ಕರ್ತವ್ಯ

ಕರ್ಮಗಳನ್ನು ಭಗವತ್ ಕೈಂಕರ್ಯವಾಗಿ ಭಕ್ತಿಯಿಂದ ಆಚರಿಸುತ್ತಾ, ಭಗವದನುಭವವನ್ನೂ, ಭಗವದನುಗ್ರಹವನ್ನೂ ಪಡೆಯಿರಿ ಎಂಬುದೇ ಇಂದಿನ ಮಾನವ ಜನಾಂಗಕ್ಕೆ ಗೋದಾದೇವಿಯು ತಿರುಪ್ಪಾವೈಯಲ್ಲಿ ನೀಡಿರುವ ಮುಖ್ಯವಾದ ಸಂದೇಶ.

ಕೊನೆಯದಾಗಿ ತಿರುಪ್ಪಾವೈಯ ಮೂವತ್ತು ಪಾಶುರಗಳನ್ನೂ ತಪ್ಪದೆ ಭಕ್ತಿಯಿಂದ ಪಠಿಸುವವರು ''ತಿರುಮಾಲಾಲ್ ಎಂಗುಂ ತಿರುವರುಳ್ ಪೆತ್ತು ಇನ್ಬುರುವರ್' - ಅಂದರೆ ಶ್ರಿಯಃ ಪತಿಯಾದ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಿ ಆನಂದ ಹೊಂದುವರು ಎಂದು ಗೋದಾದೇವಿಯು ಎಲ್ಲರಿಗೂ ಭರವಸೆ ನೀಡಿದ್ದಾಳೆ.

**ಆಂಡಾಳ್ ತಿರುವಡಿಹಳೇ ಶರಣಂ**

**ಶ್ರಿಯೈನಮಃ ಶ್ರೀನಿವಾಸಾಯ ನಮಃ**

# ತಿರುಪ್ಪಾವೈ ಪಾಶುರಗಳು

ಮಾರ್ಗಳಿ ತ್ತಿಂಗಳ್ ಮದಿನಿರ್ಯೆನ್ದ ನನ್ನಾಳಾಲ್
ನೀರಾಡ ಪ್ಪೋದುವೀರ್ ಪೋದುಮಿನೋ ನೇರಿಳ್ಯೆಯೀರ್ !
ಶೀರ್ಮಲ್ಹು ಮಾಯ್ಪ್ಪಾಡಿ ಶೆಲ್ವಚ್ಚಿರುಮೀರ್ಹಾಳ್ !
ಕೂರ್ವೇಲ್ ಕೊಡುನ್ದೊಳಿಲನ್ ನನ್ದಗೋಪನ್ ಕುಮರನ್
ಏರಾರ್ನ್ದ ಕಣ್ಣಿ ಯಶೋದೈ ಯಿಳಂಶಿಂಗಮ್
ಕಾರ್ಮೇನಿ ಚ್ಚೆಙ್ಗಣ್ ಕದಿರ್ ಮದಿಯಂಪೋಲ್ ಮುಗತ್ತಾನ್
ನಾರಾಯಣನೇ ನಮಕ್ಕೇ ಪರೈತರುವಾನ್
ಪಾರೋರ್ ಪುಗಳ ಪ್ಪಡಿನ್ದೇಲೋರೆಮ್ಬಾವಾಯ್ . ॥ 1 ॥

ವೈಯತ್ತು ವಾಳ್ವೀರ್ಹಾಳ್! ನಾಮುಮ್ ನಮ್ ಪಾವೈಕ್ಕು
ಶೆಯ್ಯುಂ ಕಿರಿಶೈಹಳ್ ಕೇಳೀರೋ, ಪಾರ್ಕಡಲುಳ್
ಪೈಯ ತ್ತುಯಿನ್ರ ಪರಮನಡಿ ಪಾಡಿ
ನೆಯ್ಯುಣ್ಣೋಂ ಪಾಲುಣ್ಣೋಂ ನಾಟ್ಕಾಲೇ ನೀರಾಡಿ
ಮೈಯಿಟ್ಟೆಳುದೋಂ ಮಲರಿಟ್ಟು ನಾಮುಡಿಯೋಂ
ಶೆಯ್ಯಾದನ ಶೆಯ್ಯೋಂ ತೀಕ್ಕುರಳೈ ಶೆನ್ರೋದೋಂ
ಐಯ್ಯಮುಂ ಪಿಚ್ಚೈಯುಂ ಆನ್ದನೈಯುಮ್ ಕೈಕಾಟ್ಟಿ
ಉಯ್ಯುಮಾರೆಣ್ಣಿ ಉಹನ್ದೇಲೋ ರೆಮ್ಬಾವಾಯ್ . ॥ 2 ॥

ಓಂಗಿ ಉಲಹಳನ್ದ ಉತ್ತಮನ್ ಪೇರ್ಪಾಡಿ
ನಾಂಗಳ್ ನಂ ಪಾವೈಕ್ಕು ಶಾತ್ತಿ ನೀರಾಡಿನಾಲ್
ತೀಂಗಿನ್ರಿ ನಾಡೆಲ್ಲಾಂ ತಿಂಗಳ್ ಮುಮ್ಮಾರಿ ಪೆಯ್ದು
ಓಂಗು ಪೆರುಂಶೆನ್ನೆಲೂಡುಕಯಲುಗಳ
ಪೂಂಗುವಳೈಪ್ಪೋದಿಲ್ ಪೊರಿವಂಡು ಕಣ್ಪಡುಪ್ಪ
ತೇಂಗಾದೇ ಪುಕ್ಕಿರುಂದು ಶೀರ್ತ್ತ ಮುಲೈ ಪತ್ತಿ
ವಾಂಗ ಕುಡಂನಿರೈಕ್ಕುಂ ವಳ್ಳಲ್ಪೆರುಂಪಶುಕ್ಕಳ್
ನೀಂಗಾದ ಶೆಲ್ವಮ್ ನಿರೈಂದೇಲೋರೆಮ್ಬಾವಾಯ್. ॥ 3 ॥

ಅಳಿಮಳೈಕ್ಕಣ್ಣಾ ಒನ್ರುನೀ ಕೈಕರವೇಲ್
ಅಳಿಯುಳ್‌ಪುಕ್ಕು ಮುಕನ್ದು ಕೊಡಾರ್‌ತ್ತೇರಿ
ಊಳಿಮುದಲ್ವನುರುವಂಪೋಲ್ ಮೆಯ್‌ಕರುತ್ತು
ಪಾಳಿಯನ್ತೋಳುಡ್ಯೆ ಪರ್ಪನಾಬನ್ ಕೈಯಿಲ್
ಆಳಿ ಪೋಲ್ ಮಿನ್ನಿ ವಲುಮ್ಬುರಿಪೋಲ್ ನಿನ್ರುದಿರ್‌ನ್ದು
ತಾಳಾದೇ ಶಾರ್ಙ್ಗಮುದೈತ್ತ ಶರಮಳೈಪೋಲ್
ವಾಳ ಉಲಹಿನಿಲ್ ಪೆಯ್‌ದಿಡಾಯ್ ನಾಙ್ಗಳುಮ್
ಮಾರ್ಗಳಿ ನೀರಾಡ ಮಹಿಳ್‌ನ್ದೇಲೋ ರೆಮ್ಬಾವಾಯ್ 4 ॥

"ಮಾಯನ್ನೈಮನ್ನು ವಡ ಮಧುರೈ ಮೈನ್ದನ್ನೈ
ತೂಯಪೆರುನೀರ್‌ಯಮುನೈತ್ತುರ್ರೈವನ್ನೈ
ಆಯರ್‌ಕುಲತ್ತಿನಿಲ್ ತೋನ್ರುಮಣಿವಿಳಕ್ಕೈ
ತಾಯ್ಯೆಕ್ಕುಡಲ್ ವಿಳಕ್ಕಮ್‌ಶೆಯ್‌ದ ದಾಮೋದರನ್ನೈ
ತೂಯೋಮಾಯ್ ವನ್ದು ನಾಮ್ ತೂಮಲರ್ ತೂವಿತ್ತೊಳುದು
ವಾಯಿನಾಲ್‌ಪಾಡಿ ಮುನತ್ತಿನಾಲ್ ಶಿನ್ದಿಕ್ಕ
ಪೋಯಪಿಳೈಯುಮ್ ಪುಹುದರುವಾನ್ನಿನ್ರನವುಮ್
ತೀಯಿನಿಲ್ ತೂಶಾಹುಮ್ ಶೆಪ್ಪೇಲೋರೆಮ್ಬಾವಾಯ್". ॥ 5 ॥

ಪುಳ್ಳುಮ್ ಶಿಲಮ್ಬಿನಕಾಣ್ ಪುಳ್ಳರೈಯನ್ ಕೋಯಿಲಿಲ್
ವೆಳ್ಳೈವಿಳಿಶಙ್ಗಿನ್ ಪೇರರವಂ ಕೇಟ್ಟಿಲೈಯೋ
ಪಿಳ್ಳಾಯೆಳುಂದಿರಾಯ್ ಪೇಯ್‌ಮುಲೈ ನಂಜುಂಡು
ಕಳ್ಳಚ್ಚಕಡಂ ಕಲಕ್ಕಳಿಯ ಕ್ಕಾಲೋಚ್ಚಿ
ವೆಳ್ಳತ್ತರವಿಲ್ ತುಯಿಲಮರ್‌ನ್ದ ವಿತ್ತಿನ್ನೈ
ಉಳ್ಳತ್ತುಕ್ಕೊಣ್ಡು ಮುನಿವರ್‌ಕಳುಮ್ ಯೋಗಿಕಳುಮ್
ಮೆಳ್ಳವೆಳುನ್ದರಿಯೆನ್ರ ಪೇರರವಮ್ ।
ಉಳ್ಳಮ್‌ಪುಹುಂದು ಕುಳಿರ್‌ನ್ದೇಲೋರೆಮ್ಬಾವಾಯ್ ॥ 6 ॥

ಕೀಶುಕೀಶೆನ್ರೆಙ್ಗುಂ ಆನೈಚ್ಚಾತ್ತಮ್ ಕಲನ್ದು
ಪೇಶಿನಪೇಚ್ಚರವಮ್ ಕೇಟ್ಟಿಲೈಯೋ ಪೇಯ್‌ಪೆಣ್ಣೇ
ಕಾಶುಮ್ ಪಿರಪ್ಪುಮ್ ಕಲಕಲಪ್ಪಕ್ಕೈಪ್ಪೇರ್ತ್ತು
ವಾಶನರುಙ್ಗುಳಲ್ ಆಯ್‌ಚ್ಚಿಯರ್ ಮತ್ತಿನಾಲ್
ಓಶೈಪಡುತ್ತತಯಿರರವಮ್ ಕೇಟ್ಟಿಲೈಯೋ
ನಾಯಕಪೆಣ್ಬಿಳ್ಳಾಯ್ ನಾರಾಯಣನ್‌ಮೂರ್ತಿ
ಕೇಶವನೈ ಪ್ಪಾಡವುಮ್ ನೀ ಕೇಟ್ಟೇಕಿಡತ್ತಿಯೋ
ತೇಶಮುಡೈಯಾಯ್ ! ತಿರವೇಲೋರೆಮ್ಬಾವಾಯ್ ॥ 7 ॥

ಕೀಳ್‌ವಾನಮ್ ವೆಳ್ಳೆನ್ರು ಎರುಮೈ ಶಿರು ವೀಡು
ಮೇಯ್‌ವಾನ್ ಪರನ್ದನಕಾಣ್ ಮಿಕ್ಕುಳ್ಳಪಿಳ್ಳೈಕಳುಮ್
ಪೋವಾನ್ ಪೋಹಿನ್ರಾರೈ ಪೋಹಾಮಲ್ ಕಾತ್ತು ಉನ್ನೈ
ಕ್ಕೂವುವಾನ್‌ವನ್ದು ನಿನ್ರೋಮ್ ಕೋತುಕಲಮುಡೈಯ
ಪಾವಾಯ್ ಎಳುನ್ದಿರಾಯ್ ಪಾಡಿಪ್ಪರೈಗೊಣ್ಡು
ಮಾವಾಯ್ ಪಿಳನ್ದಾನೈ ಮಲ್ಲರೈ ಮಾಟ್ಟಿಯ
ದೇವಾದಿ ದೇವನೈಚ್ಚೆನ್ರುನಾಂ ಸೇವಿತ್ತಾಲ್
ಆವಾವೆನ್ರಾರಾಯ್‌ನ್ದರುಳೇಲೋರೆಮ್ಬಾವಾಯ್ ॥ 8 ॥

ತೂಮಣಿ ಮಾಡತ್ತುಚ್ಚುತ್ತುಂ ವಿಳಕ್ಕೆರಿಯ
ದೂಪಮ್ ಕಮಳ ತುಯಿಲಣೈ ಮೇಲ್ ಕಣ್ವಳರುಮ್
ಮಾಮಾನ್ ಮಗಳೇ ಮಣಿಕ್ಕದವಂ ತಾಳ್‌ತಿರವಾಯ್
ಮಾಮೀರ್ ಅವಳೈಯೆಳುಪ್ಪೀರೋ ಉನ್‌ಮಗಳ್ ತಾನ್
ಊಮೈಯೋ ಅನ್ರಿಚ್ಚೆವಿಡೋ ಅನನ್ದಲೋ
ಏಮಪ್ಪೆರುನ್ತುಯಿಲ್ ಮನ್ತಿರಪ್ಪಟ್ಟಾಳೋ
ಮಾಮಾಯನ್ ಮಾದವನ್ ವೈಕುನ್ದನೆನ್ರೆನ್ರು
ನಾಮಮ್ ಪಲವುಮ್ ನವಿನ್ರೇಲೋರೆಮ್ಬಾವಾಯ್ ॥ 9 ॥

ನೋತ್ತುಚ್ಚುವರ್‌ಗಂ ಪುಹುಹಿನ್ರವಮ್ಮನಾಯ್
ಮಾತ್ತಮುಮ್ ತಾರಾರೋ ವಾಶಲ್ ತಿರವಾದಾರ್
ನಾತ್ತತ್ತುಳಾಯ್ ಮುಡಿ ನಾರಾಯಣನ್ ನಮ್ಮಾಲ್
ಪೋತ್ತಪ್ಪರೈತರುಂ ಪುಣ್ಣಿಯನಾಲ್ ಪಣ್ಡೊರುನಾಳ್
ಕೂತ್ತತ್ತಿನ್ ವಾಯ್‌ವೀಳ್‌ನ್ದ ಕುಂಬಕರಣನುಮ್
ತೋತ್ತುಮುನಕ್ಕೇ ಪೆರುನ್ತುಯಿಲ್‌ತಾನ್ ತನ್ದಾನೋ
ಆತ್ತವನನ್ದಲುಡೈಯಾಯ್ ಅರುಙ್ಗಲಮೇ
ತೇತ್ತಮಾಯ್ ವನ್ದು ತಿರವೇಲೋರೆಮ್ಬಾವಾಯ್ . || 10 ||

ಕತ್ತುಕ್ಕರವೈಕ್ಕಣಙ್ಗಳ್ ಪಲಕರನ್ದು
ಶೆತ್ತಾರ್ ತಿರಲಳಿಯ ಚ್ಚೆನ್ರು ಶೆರುಚ್ಚೆಯ್ಯುಮ್
ಕುತ್ತಮೊನ್ರಿಲ್ಲಾದ ಕೋವಲರ್‌ತಮ್ ಪೊರ್ಕ್ಕೊಡಿಯೆ
ಪುತ್ತರವಲ್‌ಕುಲ್ ಪುನಮಯಿಲೇ ಪೋದರಾಯ್
ಶುತ್ತತ್ತುತ್ತೋಳಿಮಾರೆಲ್ಲಾರುಮ್‌ವನ್ದು ನಿನ್
ಮುತ್ತಂ ಪುಕುನ್ದು ಮುಕಿಲ್‌ವಣ್ಣನ್ ಪೇರ್‌ಪಾಡ
ಶಿತ್ತಾದೇ ಪೇಶಾದೇ ಶೆಲ್ವಪೆಣ್ಡಾಟ್ಟಿನೀ
ಎತ್ತುಕ್ಕುರಙ್ಗುಮ್ ಪೊರುಳೇಲೋರೆಮ್ಬಾವಾಯ್ || 11 ||

ಕನೈತ್ತಿಳಮ್ ಕತ್ತೆರುಮೈ ಕನ್ರುಕ್ಕಿರಙ್ಗಿ
ನಿನೈತ್ತುಮುಲೈವಳಿಯೇ ನಿನ್ರು ಪಾಲ್‌ಶೋರ
ನನೈತ್ತಿಲ್ಲಮ್ ಶೇರಾಕ್ಕುಮ್ ನರ್ಚ್ಚೆಲ್ವನ್ ತಙ್ಗಾಯ್
ಪನಿತ್ತಲೈವೀಳ ನಿನ್ ವಾಶಲ್ ಕಡೈಪತ್ತಿ
ಶಿನತ್ತಿನಾಲ್ ತೆನ್ನಿಲಙ್ಗೈಕ್ಕೋಮಾನೈಚ್ಚೆತ್ತ
ಮನತ್ತುಕ್ಕನಿ ಯಾನೈ ಪ್ಪಾಡವುಮ್ ನೀ ವಾಯ್‌ತಿರವಾಯ್
ಇನಿತ್ತಾನೆಳುನ್ದಿರಾಯ್ ಈದೆನ್ನ ಪೇರುರಕ್ಕಮ್
ಅನೈತ್ತಿಲ್ಲತ್ತಾರುಂ ಅರಿಂದೇಲೋರೆಮ್ಬಾವಾಯ್ || 12 ||

ಪುಳ್ಳಿನ್‌ವಾಯ್ ಕೀಣ್ಡಾನೈ ಪೊಲ್ಲಾವರಕ್ಕನೈ
ಕಿಳ್ಳಿಕ್ಕಳೈನ್ದಾನೈ ಕೀರ್ತ್ತಿಮೈಪಾಡಿಪ್ಪೋಯ್
ಪಿಳ್ಳೈಗಳೆಲ್ಲಾರುಂ ಪಾವೈಕ್ಕಳಂ ಪುಕ್ಕಾರ್
ವೆಳ್ಳಿಯೆಳುನ್ದು ವಿಯಾಳಮುರಙ್ಗಿತ್ತು
ಪುಳ್ಳುಮ್ ಶಿಲಮ್ಬಿನಕಾಣ್ ಪೋದರಿಕ್ಕಣ್ಣಿನಾಯ್
ಕುಳ್ಳಕ್ಕುಳಿರ ಕ್ಕುಡೈನ್ದು ನೀರಾಡಾದೇ
ಪಳ್ಳಿಕ್ಕಿಡತ್ತಿಯೋ ಪಾವಾಯ್ ನೀ ನನ್ನಾಳಾಲ್
ಕಳ್ಳನ್ದವಿರ್‌ನ್ದು ಕಲನ್ದೇಲೋರೆಮ್ಬಾವಾಯ್ . ॥ 13 ॥

ಉಙ್ಗಳ್‌ಪುಳೈಕ್ಕಡೈತೋಟ್ಟತ್ತು ವಾವಿಯುಳ್
ಶೆಙ್ಗಳುನೀರ್‌ವಾಯ್‌ನೆಹಿಳ್‌ನ್ದು ಆಮ್ಬಲ್‌ವಾಯ್‌ಕೂಮ್ಬಿನ ಕಾಣ್
ಶೆಙ್ಗಲ್‌ಪೊಡಿಕ್ಕೂರೈ ವೆಣ್‌ಪಲ್ ತವತ್ತವರ್
ತಙ್ಗಳ್ ತಿರುಕ್ಕೋಯಿಲ್ ಶಙ್ಗಿಡುವಾನ್‌ಪೋತನ್ದಾರ್
ಎಙ್ಗಳೈ ಮುನ್ನ ಮೆಳುಪ್ಪುವಾನ್ ವಾಯ್‌ಪೇಶುಮ್
ನಙ್ಗಾಯೆಳುಂದಿರಾಯ್ ನಾಣಾದಾಯ್ ನಾವುಡೈಯಾಯ್
ಶಙ್ಗೊಡು ಶಕ್ಕರಮೇನ್ದುನ್ದಡಕ್ಕೈಯನ್
ಪಙ್ಗಯ ಕಣ್ಣಾನೈಪ್ಪಾಡೇಲೋರೆಮ್ಬಾವಾಯ್ ॥ 14 ॥

ಎಲ್ಲೇ ! ಇಳಙ್ಕಿಳಿಯೇ ! ಇನ್ನಮುರಂಗುದಿಯೋ
ಶಿಲ್ಲೆನ್ರಳೈಯೇನ್ಮಿನ್ ನಂಗೈಮೀರ್ ಪೋದರುಹಿನ್ರೇನ್
ವಲ್ಲೈಯುನ್ ಕಟ್ಟುರೈಕಳ್ ಪಣ್ಡೇ ಉಣವಾಯರಿದುಮ್
ವಲ್ಲೀರ್‌ಕಳ್ ನೀಙ್ಗಳೇ ನಾನೇತಾನಾಯಿಡುಕ
ಒಲ್ಲೈ ನೀಪೋದಾಯ್ ! ಉನಕ್ಕೆನ್ನವೇರುಡೈಯೈ
ಎಲ್ಲಾರುಮ್ ಪೋನ್ದಾರೋ ? ಪೋನ್ದಾರ್ ಪೋನ್ದೆಣ್ಣಿಕ್ಕೊಳ್
ವಲ್ಲಾನೈ ಕೊನ್ರಾನೈ ಮಾತ್ತಾರೈ ಮಾತ್ತಳಿಕ್ಕ
ವಲ್ಲಾನೈ ಮಾಯನೈ ಪಾಡೇ ಲೋರೆಮ್ಬಾವಾಯ್. ॥ 15 ॥

ನಾಯಕನಾಯ್ ನಿನ್ರನನ್ದಗೋಪನುಡ್ಯೆಯ
ಕೋಯಿಲ್ ಕಾಪ್ಪಾನೇ ಕೊಡಿತ್ತೋನ್ರುಂ ತೋರಣ
ವಾಶಲ್ ಕಾಪ್ಪಾನೇ ಮಣಿಕ್ಕದವಂ ತಾಳ್ ತಿರವಾಯ್
ಆಯರ್ ಶಿರುಮಿಯರೋಮುಕ್ಕು ಅರೈ ಪರೈ
ಮಾಯನ್ ಮಣಿವಣ್ಣನ್ ನೆನ್ನೆಲೇ ವಾಯ್‌ನೇರ್‌ನ್ದಾನ್
ತೂಯೋಮಾಯ್ ವನ್ದೋಂ ತುಯಿಲೆಳಪ್ಪಾಡುವಾನ್
ವಾಯಾಲ್ ಮುನ್ನ ಮುನ್ನಂ ಮಾತ್ತಾದೆಯಮ್ಮಾನೀ
ನೇಶ ನಿಲೈಕ್ಕದುವುಂ ನೀಕ್ಕೇಲೋ ರೆಮ್ಬಾವಾಯ್. ॥ 16 ॥

ಅಂಬರಮೇ ತಣ್ಣೀರೇ ಶೋರೇಯರಂ ಶೆಯ್ಯುಂ
ಎಂಪೆರುಮಾನ್ ನಂದಗೋಪಾಲಾ ಎಳುಂದಿರಾಯ್
ಕೊಂಬನಾರ್ಕೆಲ್ಲಾಂ ಕೊಳುಂದೇ ಕುಲವಿಳಕ್ಕೇ
ಎಂಪೆರುಮಾಟ್ಟಿ ಯಶೋದಾಯರಿವುರಾಯ್
ಅಂಬರ ಮೂಡರುತ್ತು ಓಂಗಿಯುಲಹಳನ್ದ
ಉಂಬರ್‌ಕೋಮಾನೇ ಉರಂಗಾದೆಳುಂದಿರಾಯ್
ಶೆಂಪೊರ್ಕಳಲಡಿ ಚ್ಚೆಲ್ವಾ ಬಲದೇವಾ
ಉಂಬಿಯುಂ ನೀಯುಂ ಉರಂಗೇಲೋರೆಮ್ಬಾವಾಯ್. ॥ 17 ॥

ಉನ್ದುಮದಗಳಿತ್ತನ್ ಓಡಾದ ತೋಳ್ವಲಿಯನ್
ನನ್ದಗೋಪಾಲನ್ ಮರುಮಹಳೇ ನಪ್ಪಿನ್ನಾಯ್
ಕನ್ದಂಕಮಳುಂಕುಳಲೀ ಕಡೈತಿರವಾಯ್
ವನ್ದೆಂಗುಂ ಕೋಳಿಯಳೈತ್ತನಕಾಣ್, ಮಾದವಿ
ಪನ್ದಲ್ ಮೇಲ್ ಪಲ್‌ಕಾಲ್ ಕುಯಿಲಿನಂಗಳ್ ಕೂವಿನಕಾಣ್
ಪನ್ದಾರ್ ವಿರಲಿ ಉನ್‌ಮೈತ್ತುನನ್ ಪೇರ್ ಪಾಡ
ಶೆನ್ದಾಮರೈ ಕ್ಕೈಯಾಲ್ ಶೀರಾರ್ ವಳೈಯೊಲಿಪ್ಪ
ವನ್ದುತಿರವಾಯ್ ಮಹಿಳ್‌ನ್ದೇಲೋರೆಮ್ಬಾವಾಯ್ . ॥ 18 ॥

ಕುತ್ತು ವಿಳಕ್ಕೆರಿಯ ಕೋಟ್ಟುಕ್ಕಾಲ್ ಕಟ್ಟಿಲ್‌ಮೇಲ್
ಮೆತ್ತೆನ್ರ ಪಂಚಶಯನತ್ತಿನ್ ಮೇಲೇರಿ
ಕೊತ್ತಲರ್ ಪೂಙ್ಕುಳಲ್ ನಪ್ಪಿನ್ನೈಕೊಂಙ್ಙೈಮೇಲ್
ವೈತ್‌ಕ್ಕಿಡನ್ದ ಮಲರ್‌ಮಾರ್‌ಬಾ ವಾಯ್ ತಿರವಾಯ್
ಮೈತ್ತಡಂ ಕಣ್ಣಿನಾಯ್ ನೀ ಉನ್‌ಮಣಾಳನ್ನೈ
ಎತ್ತನೈಪೋದುಂ ತುಯಿಲೆಳವೊಟ್ಟಾಯ್‌ಕಾಣ್
ಎತ್ತನ್ನೈಯೇಲುಂ ಪಿರಿವಾತ್ತಕಿಲ್ಲಾಯಾಲ್
ತತ್ತುವಮನ್ನು ತಕವೇಲೋರೆಮ್ಬಾವಾಯ್. ॥ 19 ॥

ಮುಪ್ಪತ್ತು ಮೂವರ್ ಅಮರರ್‌ಕ್ಕು ಮುನ್‌ಶೆನ್ರು
ಕಪ್ಪಮ್ ತವಿರ್ಕುಂ ಕಲಿಯೇ ತುಯಿಲೆಳಾಯ್
ಶೆಪ್ಪಮುಡೈಯಾಯ್ ತಿರುಲುಡೈಯಾಯ್ ಶೆತ್ತಾರ್ಕ್ಕು
ವೆಪ್ಪಮ್ ಕೊಡುಕ್ಕುಂ ವಿಮಲಾ ತುಯಿಲೆಳಾಯ್
ಶೆಪ್ಪನ್ನ ಮೆನ್‌ಮುಲೈ ಚೆವ್ವಾಯ್ ಚ್ಚಿರುಮರುಙ್ಗುಲ್
ನಪ್ಪಿನ್ನೈನಂಗಾಯ್ ತಿರುವೇ ತುಯಿಲೆಳಾಯ್
ಉಕ್ಕಮುಮ್ ತಟ್ಟೊಳಿಯುಮ್ ತನ್ದುನ್‌ಮಣಾಳನ್ನೈ
ಇಪ್ಪೋದೇ ಎಮ್ಮೈ ನೀರಾಟ್ಟೇಲೋರೆಮ್ಬಾವಾಯ್. ॥ 20 ॥

ಏತ್ತ ಕಲಂಗಳ್ ಎದಿರ್ ಪೊಂಗಿ ಮೀದಳಿಪ್ಪ
ಮಾತ್ತಾದೇ ಪಾಲ್ ಶೊರಿಯುಂ ವಳ್ಳಲ್ ಪೆರುಂಪಶುಕ್ಕಳ್
ಆತ್ತಪ್ಪಡೈತ್ತಾನ್ ಮಗನೇ ! ಅರಿವುರಾಯ್
ಊತ್ತಮುಡೈಯಾಯ್ ! ಪೆರಿಯಾಯ್ ! ಉಲಹಿನಿಲ್
ತೋತ್ತಮಾಯ್ ನಿನ್ರ ಶುಡರೇ ತುಯಿಲೆಳಾಯ್
ಮಾತ್ತಾರ್ ಉನಕ್ಕು ವಲಿತೊಲೈನ್ದುನ್‌ವಾಶಲ್‌ಕಣ್
ಆತ್ತಾದುವನ್ದುನ್ನಡಿ ಪಣಿಯುಮಾ ಪೋಲೇ
ಪೋತ್ತಿಯಾಂ ವನ್ದೋಂ ಪುಹಳ್‌ನ್ದೇಲೋ ರೆಮ್ಬಾವಾಯ್. ॥ 21 ॥

ಅಙ್ಗಣ್‌ಮಾಞ್ಞಾಲತ್ತರಶರ್ ಅಭಿಮಾನ
ಭಙ್ಗಮಾಯ್ ವನ್ದು ನಿನ್ ಪಳ್ಳಿಕ್ಕಟ್ಟ್ಕೀೞೇ
ಶಙ್ಗಮಿರುಪ್ಪಾರ್‌ಪೋಲ್ ವನ್ದು ತಲೈಪ್ಪೆಯ್‌ದೋಮ್
ಕಿಙ್ಕಿಣಿ ವಾಯ್ ಚ್ಚೆಯ್‌ದ ತಾಮರೈಪ್ಪೂಪ್ಪೋಲೇ
ಶೆಙ್ಗಣ್ ಶಿರುಚ್ಚಿರಿದೇ ಯೆಮ್ಮೇಲ್ ವಿೞಿಯಾವೋ
ತಿಙ್ಗಳುಂ ಆದಿತ್ತಿಯನುಂ ಎೞುನ್ದಾಪ್ಪೋಲ್
ಅಙ್ಗಣಿರಣ್ಡುಂಕೊಂಡು ಎಙ್ಗಳ್‌ಮೇಲ್ ನೋಕ್ಕುದಿಯೇಲ್
ಎಙ್ಗಳ್ ಮೇಲ್ ಶಾಪಂ ಇೞಿನ್ದೇಲೋ ರೆಮ್ಬಾವಾಯ್ || 22 ||

ಮಾರಿಮಲೈ ಮುೞೈಂಜಿಲ್ ಮನ್ನಿಕ್ಕಿಡನ್ದುರಂಗುಮ್
ಶೀರಿಯಶಿಂಗಂ ಅರಿವುತ್ತು ತೀವಿೞಿತ್ತು
ವೇರಿಮಯಿರ್ ಪೊಂಗ ಎಪ್ಪಾಡುಂ ಪೇರ್‌ನ್ದುದರಿ
ಮೂರಿನಿಮಿರ್‌ನ್ದು ಮುೞಂಗಿ ಪುರಪ್ಪಟ್ಟು
ಪೋದರು ಮಾಪೋಲೆ ನೀ ಪೂವೈ ಪ್ಪೂವಣ್ಣಾ ಉನ್
ಕೋಯಿಲ್ ನಿನ್ರಿಂಗನೇ ಪೋನ್ದರುೞಿಕೋಪ್ಪುಡೈಯ
ಶೀರಿಯ ಶಿಂಗಾಸನತ್ತಿರುಂದು ಯಾಮ್‌ವನ್ದ
ಕಾರಿಯಮಾರಾಯ್‌ನ್ದರುಳೇಲೋರೆಂಬಾವಾಯ್ . || 23 ||

ಅನ್ರಿವ್ವುಲಹಮಳನ್ದಾಯಡಿ ಪೋತ್ತಿ
ಶೆನ್ರಂಗು ತ್ತೆನ್ನಿಲಂಗೈ ಶೆತ್ತಾಯ್ ತಿರಲ್‌ಪೋತ್ತಿ
ಪೊನ್ರಚ್ಚಕಡ ಮುದೈತ್ತಾಯ್ ! ಪುಹಳ್ ಪೋತ್ತಿ
ಕನ್ರು ಕುಣಿಲಾವೆರಿನ್ದಾಯ್ ! ಕೞಲ್ ಪೋತ್ತಿ
ಕುನ್ರು ಕುಡೈಯಾ ವೆಡುತ್ತಾಯ್ ! ಗುಣಂ ಪೋತ್ತಿ
ವೆನ್ರು ಪಹೈ ಕೆಡುಕ್ಕುಂ ನಿನ್ ಕೈಯಿಲ್‌ವೇಲ್ ಪೋತ್ತಿ
ಎನ್ರೆನ್ರುನ್ ಶೇವಹಮೇ ಯೇತ್ತಿಪ್ಪರೈಕೊಳ್ವಾನ್
ಇನ್ರು ಯಾಂ ವನ್ದೋಮಿರಂಗೇಲೋ ರೆಂಮ್ಬಾವಾಯ್. || 24 ||

ಒರುತ್ತಿ ಮಗನಾಯ್ ಪ್ಪಿರಂದ್ ಓರಿರವಿಲ್
ಒರುತ್ತಿ ಮಗನಾಯೊಳಿತ್ತ್ ವಳರ
ಧರಿಕ್ಕಿ ಲಾನಾಹಿತ್ತಾನ್ ತೀಂಗು ನಿನೈಂದ
ಕರುತ್ತೈ ಪಿಳೈಪಿತ್ತ್ ಕಂಜನ್ ವಯಿತ್ತಿಲ್
ನೆರುಪ್ಪೆನ್ನ ನಿನ್ರ ನೆಡುಮಾಲೇ ಉನ್ನೈ
ಅರುತ್ತಿತ್ತುವನ್ದೋಂ ಪರೈತರುದಿಯಾಹಿಲ್
ತಿರುತ್ತಕ್ಕ ಶೆಲ್ವಮುಂ ಶೇವಹಮುಂ ಯಾಂಪಾಡಿ
ವರುತ್ತಮುಂ ತೀರ್‌ನ್ದ್ ಮಹಿಳ್‌ನ್ದೇಲೋ ರೆಮ್ಬಾವಾಯ್ || 25 ||

ಮಾಲೇ ! ಮಣಿವಣ್ಣಾ ! ಮಾರ್ಗಳಿ ನೀರಾಡುವಾನ್
ಮೇಲ್ಲೈಯಾರ್ ಶೆಯ್‌ವನಹಳ್ ವೇಣ್ಣುವನಕೇಟ್ಟಿಯೇಲ್
ಞಾಲತ್ತೈಯೆಲ್ಲಾಂ ನಡುಂಗ ಮುರಲ್ವನ
ಪಾಲನ್ನ ವಣ್ಣತ್ತುನ್ ಪಾಂಚಜನ್ನಿಯಮೇ
ಪೋಲ್ವನ ಶಂಗಂಗಳ್ ಪೋಯ್‌ಪ್ಪಾಡುಡೈಯನವೇ
ಶಾಲಪ್ಪೆರುಂಪರೈಯೇ ಪಲ್ಲಾಂಡಿ ಶೈಪ್ಪಾರೇ
ಕೋಲವಿಳಕ್ಕೇ ಕೊಡಿಯೇ ವಿತಾನಮೇ
ಆಲಿನಿಲೈಯಾಯ್ ! ಅರುಳೇಲೋ ರೆಂಬಾವಾಯ್. || 26 ||

ಕೂಡಾರೈ ವೆಲ್ಲುಮ್ ಶೀರ್ ಗೋವಿಂದಾ ಉನ್‌ತನ್ನೈ
ಪ್ಪಾಡಿಪ್ಪರೈಕೊಣ್ಡುಯಾಮ್ ಪೆರುಶಮ್ಮಾನಮ್
ನಾಡುಪುಹಳುಮ್ ಪರಿಶಿನಾಲ್ ನನ್ರಾಹ
ಶೂಡಹಮೇ ತೋಳ್‌ವಳೈಯೇ ತೋಡೇಶೆವಿಪ್ಪೂವೇ
ಪಾಡಹಮೇ ಎನ್‌ರನ್ನೈಯ ಪಲ್‌ಕಲನುಮ್ ಯಾಮಣಿವೋಮ್
ಆಡೈಯುಡುಪ್ಪೋಮ್ ಅತನ್‌ಪಿನ್ನೇಪಾಲ್‌ಶೋರು
ಮೂಡ ನೆಯ್ ಪೆಯ್‌ದು ಮುಳಂಗೈವಳಿವಾರ
ಕೂಡಿಯಿರುನ್ದು ಕುಳಿರ್‌ನ್ದೇಲೋರೆಮ್ಬಾವಾಯ್ . || 27 ||

ಕರವೈಹಳ್ ಪಿನ್ ಶೆನ್ರು ಕಾನಮ್ ಶೇರ್‌ನ್ದುಣ್ಬೋಂ
ಅರಿವೊನ್ರುಮಿಲ್ಲಾದ ಆಯ್‌ಕುಲತ್ತು ಉನ್‌ತನ್ನೈ
ಪ್ಪಿರವಿ ಪೆರುನ್ದನೈ ಪುಣ್ಣಿಯಮ್ ಯಾಮುಡೈಯೋಮ್
ಕುರೈವೊನ್ರುಮಿಲ್ಲಾದ ಗೋವಿಂದಾ ! ಉನ್ ತನ್ನೋಡು
ಉರವೇಲ್ ನಮಕ್ಕಿಙ್ಗೊಳಿಕ್ಕ ವೊಳಿಯಾದು
ಅರಿಯಾದ ಪಿಳ್ಳೈಹಳೋಮನ್ಬಿನಾಲ್ ಉನ್ ತನ್ನೈ
ಚ್ಚಿರುಪೇರಳೈತ್ತನವುಮ್ ಶೀರಿಯರುಳಾದೇ
ಇರೈವಾ ನೀತಾರಾಯ್ ಪರೆಯೇಲೋರೆಮ್ಬಾವಾಯ್. ॥ 28 ॥

ಶಿತ್ತಂ ಶಿರುಕಾಲೈ ವನ್ದುನ್ನೈ ಚ್ಚೇವಿತ್ತು ಉನ್
ಪೊತ್ತಾಮರೈಯಡಿಯೇ ಪೋತ್ತುಂ ಪೊರುಳ್ ಕೇಳಾಯ್
ಪೆತ್ತಂ ಮೇಯ್‌ತ್ತುಣ್ಣುಂ ಕುಲತ್ತಿಲ್‌ಪಿರನ್ದುನೀ
ಕುತ್ತೇವಲೆಙ್ಗಳೈ ಕೊಳ್ಳಾಮಲ್ ಪೋಹಾದು
ಇತ್ತೈ ಪ್ಪರೈ ಕೊಳ್ವಾನನ್ರು ಕಾಣ್ ಗೋವಿಂದಾ !
ಎತ್ತೈಕ್ಕುಮೇಳೇಳ್ ಪಿರವಿಕ್ಕುಂ ಉನ್‌ತನ್ನೋಡು
ಉತ್ತೋ ಮೇ ಯಾವೋಮ್ ಉನಕ್ಕೇನಾಮಾಳ್‌ಚ್ಚೆಯ್‌ವೋಮ್
ಮತ್ತೈನಮ್‌ಕಾಮಙ್ಗಳ್ ಮಾತ್ತೇಲೋರೆಂಮ್ಬಾವಾಯ್ ॥ 29 ॥

ವಂಗಕ್ಕಡಲ್ ಕಡೈನ್ದ ಮಾದವನೈ ಕೇಶವನೈ
ತಿಂಗಳ್ ತಿರುಮುಹತ್ತು ಚ್ಚೇಯಿಳೈಯಾರ್ ಶೆನ್ರಿರೈಂಜಿ
ಅಂಗಪ್ಪರೈಕೊಣ್ಡವಾತ್ತೈ ಅಣಿಪುದುವೈ
ಪೈಙ್ಗಮಲತ್ತಣ್ತೆರಿಯಲ್ ಪಟ್ಟರ್‌ಪಿರಾನ್ ಕೋದೈಶೊನ್ನ
ಶಂಗತ್ತಮಿಳ್‌ಮಾಲೈ ಮುಪ್ಪದುಮ್ ತಪ್ಪಾಮೇ
ಇಂಗಿಪ್ಪರಿಶುರೈಪ್ಪಾರೀರಿರಂಡು ಮಾಲ್ ವರೈ ತ್ತೋಳ್
ಶೆಂಗಣ್‌ತಿರುಮುಹತ್ತು ಚ್ಚೆಲ್ವತ್ತಿರುಮಾಲಾಲ್
ಎಂಗುಂ ತಿರುವರುಳ್ ಪೆತ್ತು ಇನ್ಬುರುವರೆಮ್ಬಾವಾಯ್ . ॥ 30 ॥

ಆಂಡಾಳ್ ತಿರುವಡಿಹಳೇ ಶರಣಂ

ಶ್ರೀಮತ್ಯೈ ವಿಷ್ಣುಚಿತ್ತಾರ್ಯ
ಮನೋನಂದನ ಹೇತವೇ ।
ನಂದ ನಂದನ ಸುಂದರ್ಯೈ
ಗೋದಾಯೈ ನಿತ್ಯ ಮಂಗಳಂ ॥

ತಿರುವಾಡಿಪ್ಪೂರತ್ತಿಲ್ ಶೆಗತ್ತುದಿತ್ತಾಳ್ ವಾಳಿಯೇ
ತಿರುಪ್ಪಾವೈಮುಪ್ಪದುಂಶೆಪ್ಪಿನಾಳ್ವಾಳಿಯೇ
ಪೆರಿಯಾಳ್ವಾರ್ ಪೆತ್ರೆಡುತ್ತಪೆಣ್ಪಿಳ್ಳೈ ವಾಳಿಯೇ
ಪೆರುಂಬೂದೂರ್ ಮಾಮುನಿಕ್ಕು ಪಿನ್ನಾನಾಳ್ ವಾಳಿಯೇ
ಒರುನೂತ್ತುನಾರ್ಪತ್ತುಮೂನ್ರುರೈತ್ತಾಳ್ ವಾಳಿಯೇ
ಉಯರರಂಗರ್ಕ್ಕೇ ಕಣ್ಣಿ ಉಹಂದಳಿತ್ತಾಳ್ ವಾಳಿಯೇ
ಮರುವಾರುಂ ತಿರುಮಲ್ಲಿ ವಲನಾಡಿ ವಾಳಿಯೇ
ವಣ್ಪುದು ವೈನಗರ್ಕೋದೈಮಲರ್ ಪದಂಗಳ್ ವಾಳಿಯೇ ॥
ಆಳ್ವಾರ್ ಎಂಬೆರುಮಾನಾರ್ಜೀಯರ್ ತಿರುವಡಿಹಳೇಶರಣಂ

॥ ಶ್ರೀಕೃಷ್ಣಾರ್ಪಣಮಸ್ತು ॥

# ಗ್ರಂಥ ಸೂಚಿ

47135

1. ಶ್ರೀ ಪೆರಿಯವಾಚ್ಚಾನ್ ಪಿಳ್ಳೈರವರ - 'ಮೂವಾಯಿರಪ್ಪಡಿ' ವ್ಯಾಖ್ಯಾನ

2. ಶ್ರೀ ಅಳಹಿಯ ಪೆರುಮಾಳ್ ನಾಯನಾರ್ರವರ 'ಆರಾಯಿರಪ್ಪಡಿ' ವ್ಯಾಖ್ಯಾನ

3. ಶ್ರೀ ಕಾರ್ಪಂಕಾಡು ವೆಂಕಟಾಚಾರ್ ಸ್ವಾಮಿಗಳ - 'ತಿರುಪ್ಪಾವೈ ವ್ಯಾಖ್ಯಾನಂ' (ತಮಿಳು ಪುಸ್ತಕ) (ಶ್ರೀ ವಾಣೀವಿಲಾಸ್ ಪ್ರೆಸ್ - ಶ್ರೀರಂಗ - 1975)

4. ಶ್ರೀ ಕಂಚಿ ಪ್ರತಿವಾದಿಭಯಂಕರಂ ಅಣ್ಣಂಗರಾಚಾರ್ಯರ್ ಸ್ವಾಮಿಗಳ - 'ಆಂಡಾಳ್ ಅರುಳಿಚ್ಚೈದ ತಿರುಪ್ಪಾವೈ' (ತಮಿಳು ಪುಸ್ತಕ) (ಚೆನ್ನೈ - 1969)

5. ಶ್ರೀ ಡಾ|| ಎಂ.ಎ. ವೇಂಕಟಕೃಷ್ಣನ್‌ರವರ - 'ಆಂಡಾಳ್ ಅರುಳಿಚ್ಚೈದತಿರುಪ್ಪಾವೈ' (ತಮಿಳು ಪುಸ್ತಕ ) (ಗೀತಾಚಾರ್ಯನ್ - ಚೆನ್ನೈ 1988)

6. ಶ್ರೀ ಕಲ್ಕಿಸಿಂಹ ಭಗವದ್ವಿರಚಿತ - 'ಲಘುನಿತ್ಯಾನು ಸಂಧಾನ' (ಪ್ರಥಮ ಭಾಗ - ಕನ್ನಡ ಪುಸ್ತಕ ) (ವೆ.ಬಿ. ಸುಬ್ಬಯ್ಯ ಆಂಡ್ ಸನ್ಸ್) (ಬೆಂಗಳೂರು - 1934)

7. ಎಸ್. ಸಂಪತ್ತೈಯ್ಯಂಗಾರ್, ಎಂ.ಎ. ರವರ 'ತಿರುಪ್ಪಾವೈ ಹೃದಯಂ' (ಕನ್ನಡ ಪುಸ್ತಕ) (ನವಭಾರತ ಪ್ರೆಸ್, ಬೆಂಗಳೂರು - 1967)

8. ಶ್ರೀ ಎಂ.ಬಿ. ಶ್ರೀನಿವಾಸಐಯ್ಯಂಗಾರ್ರವರ - 'ತಿರುಪ್ಪಾವೈ' (ನಿತ್ಯಾನುಸಂಧಾನ - 1899)

9. "**Tiruppavai** - Textual Literary and Critical Study" by Sri C. Jagannathachar, (Sri Parthasarathy Swamy Devasthanam, Tiruvallikkeni - Chennai - 600 005)